ಬುಧವಾರ, ಅಕ್ಟೋಬರ್ 26, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 296 | ಪುಟ 16

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಬಿಡುವು

ಪ್ರಿಯ ಓದುಗರು, ಜಾಹೀರಾತುದಾರರು, ಪತ್ರಿಕಾ ವಿತರಕರಿಗೆ **ದೀಪಾವಳಿಯ ಶುಭಾಶಯಗಳು**

ದೀಪಾವಳಿ ಪ್ರಯುಕ್ತ ಬುಧವಾರ 26-10-2022 ಕಚೇರಿಗೆ ಬಿಡುವು, ಹೀಗಾಗಿ ಗುರುವಾರದ ಸಂಚಿಕೆ ಪ್ರಕಟವಾಗುವುದಿಲ್ಲ.

-ಸಂ

ದಿನದ ಬೆಳವಣಿಗೆಗಳ ಅಪ್‌ಡೇಟ್‌ಗಾಗಿ www.prajavani.net ನೋಡಿ.

ವಿವಿಧ ದೇಶಗಳ ಪ್ರಮುಖ ನಗರಗಳಲ್ಲಿ ಕಂಡುಬಂದ ಪಾರ್ಶ್ವ ಸೂರ್ಯಗ್ರಹಣದ ದೃಶ್ಯ ವೈಭವ

ಭಾರತ ಸೇರಿ ಜಗತ್ತಿನ ವಿವಿಧೆಡೆಗಳಲ್ಲಿ ಮಂಗಳವಾರ ಸಂಜೆ ಕ್ಯಾಮೆರಾಗಳ ಕಣ್ಣಿಗೆ ಸೆರೆ ಸಿಕ್ಕ ವರ್ಷದ ಕೊನೆಯ ಸೂರ್ಯಗ್ರಹಣದ ಮನೋಹರ ದೃಶ್ಯಗಳು ಖಗೋಳ ಆಸಕ್ತರ ಗಮನ ಸೆಳೆದವು ಚಿತ್ರಗಳು: ಪಿಟಿಐ, ಎಎಫ್‌ಪಿ, ಪ್ರಜಾವಾಣಿ ಚಿತ್ರ

ನದಿಗಳ ಮಾಲಿನ್ಯಕ್ಕಿಲ್ಲ ಕಡಿವಾಣ

ಜಲಮೂಲಕ್ಕೆ 56 ಕೋಟಿ ಲೀಟರ್ ಕೊಳಚೆ ಸೇರ್ಪಡೆ • ಜಲಶಕ್ತಿ ಸಚಿವಾಲಯ ಅಸಮಾಧಾನ

• ಮಂಜುನಾಥ ಹೆಬ್ಬಾರ್

ನವದೆಹಲಿ: ರಾಷ್ಟ್ರೀಯ ಹಸಿರು ನ್ಯಾಯಮಂಡಳಿ (ಎನ್‌ಜಿಟಿ) ನಿರ್ದೇಶನ ನೀಡಿದ ಬಳಿಕವೂ ಕರ್ನಾಟಕದಲ್ಲಿ ನದಿಗಳಿಗೆ ದೊಡ್ಡ ಪ್ರಮಾಣದಲ್ಲಿ ಕೊಳಚೆ ನೀರು ಸೇರುತ್ತಿರುವ ಬಗ್ಗೆ ಕೇಂದ್ರ ಜಲ ಶಕ್ತಿ ಸಚಿವಾಲಯ ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ. ಜಲ ಮಾಲಿನ್ಯ ನಿಯಂತ್ರಣಕ್ಕೆ ಕರ್ನಾಟಕ ಸರ್ಕಾರ ಕೈಗೊಂಡ ಕ್ರಮಗಳು ತೃಪ್ತಿಕರ-ವಾಗಿಲ್ಲ ಎಂದೂ ಹೇಳಿದೆ.

ದೇಶದ 351 ಪ್ರಮುಖ ನದಿಗಳಿಗೆ ಕೊಳಚೆ ನೀರು ಸೇರುತ್ತಿದ್ದು, ಅವುಗಳ ಮಾಲಿನ್ಯ ನಿಯಂತ್ರಣಕ್ಕೆ ತುರ್ತಾಗಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದು ಎನ್‌ಜಿಟಿ ಸೂಚಿಸಿತ್ತು. ನದಿಗಳ ಮಾಲಿನ್ಯ ನಿಯಂತ್ರಣಕ್ಕೆ ಕೈಗೊಂಡ ಕ್ರಮಗಳ ಬಗ್ಗೆ ಜಲ ಶಕ್ತಿ ಸಚಿವಾಲಯದ ಕೇಂದ್ರ ಮೇಲ್ವಿಚಾರಣಾ ಸಮಿತಿಯು ರಾಜ್ಯ ಸರ್ಕಾರಗಳ ಜತೆಗೆ ಇತ್ತೀಚೆಗೆ ಸಭೆ ನಡೆಸಿದೆ.

ರಾಜ್ಯಗಳು ಕೈಗೊಂಡ ಕ್ರಮಗಳ ಬಗ್ಗೆ ಅತೃಪ್ತಿ ವ್ಯಕ್ತಪಡಿಸಿದ ಸಚಿವಾಲಯದ ಕಾರ್ಯದರ್ಶಿ, 'ತ್ಯಾಜ್ಯ ನೀರು ಸಂಸ್ಕರಣಾ ಘಟಕಗಳ (ಎಸ್‌ಟಿಪಿ) ನಿರ್ಮಾಣಕ್ಕೆ ಎನ್‌ಜಿಟಿ ಗಡುವು ವಿಧಿಸಿತ್ತು. ಆದರೆ, ಅನೇಕ ರಾಜ್ಯಗಳು ಗಡುವಿನೊಳಗೆ ಎಸ್‌ಟಿಪಿಗಳನ್ನು ನಿರ್ಮಿಸಿಲ್ಲ. ಅಮೃತ್, ಎನ್‌ಆರ್‌ಸಿಡಿ ಅನುದಾನದ ನೆರವಿನಿಂದ ಈ ಯೋಜನೆಗಳನ್ನು ತುರ್ತಾಗಿ ಪೂರ್ಣಗೊಳಿಸಬೇಕು' ಎಂದು ನಿರ್ದೇಶನ ನೀಡಿದರು.



ಪ್ರಜಾವಾಣಿ ವಿಶೇಷ

17 ನದಿಗಳಿಗೆ ಕೊಳಚೆ ನೀರು: ಕರ್ನಾಟಕದಲ್ಲಿ ನದಿಗಳ ತಟದಲ್ಲಿ 38 ನಗರಗಳು/ಪಟ್ಟಣಗಳಿವೆ. ಈ ನದಿಗಳ ಮೀಸಲು ಪ್ರದೇಶದಲ್ಲಿ ಕಸ ಎಸೆಯದಂತೆ ಈ ಹಿಂದೆಯೇ ನಿರ್ದೇಶನ ನೀಡಲಾಗಿತ್ತು. ಆದರೆ, ಹಲವು ನಗರಗಳು ಹಾಗೂ ಪಟ್ಟಣಗಳಲ್ಲಿ ಕಸ ವಿಲೇವಾರಿ ಸಮರ್ಪಕವಾಗಿ ನಡೆಯುತ್ತಿಲ್ಲ. ಈಗಷ್ಟೇ 26 ನಗರಗಳು/ಪಟ್ಟಣಗಳು ಘನತ್ಯಾಜ್ಯ ವಿಲೇವಾರಿಯ ವಿಸ್ತೃತ ಯೋಜನಾ ವರದಿಗಳನ್ನು ಅಂತಿಮಗೊಳಿಸಿವೆ. ಜತೆಗೆ, 146 ಚರಂಡಿಗಳು/ರಾಜ ಕಾಲುವೆಗಳ ಮೂಲಕ ಕೊಳಚೆ ನೀರು 17 ನದಿಗಳಿಗೆ ಸೇರುತ್ತಿದೆ. ರಾಜ್ಯದಲ್ಲಿ ಉತ್ಪಾದನೆಯಾಗುವ ಕೊಳಚೆ ನೀರಿನ ಪೈಕಿ ಶೇ 69ರಷ್ಟು ಮಾತ್ರ ಸಂಸ್ಕರಣೆ ಆಗುತ್ತಿದೆ. ಪ್ರತಿನಿತ್ಯ 569 ದಶಲಕ್ಷ ಲೀಟರ್‌ನಷ್ಟು ಕೊಳಚೆ ನೀರು ಜಲಕಾಯಗಳಿಗೆ ಸೇರುತ್ತಿದೆ ಎಂಬುದನ್ನು ಸಭೆಯಲ್ಲಿ ಬೊಟ್ಟು ಮಾಡಿ ತೋರಿಸಲಾಗಿದೆ.

ಕಾರ್ಯನಿರ್ವಹಿಸದ ಘಟಕಗಳು: ರಾಜ್ಯದ 10 ತ್ಯಾಜ್ಯ ನೀರು ಸಂಸ್ಕರಣಾ ಘಟಕಗಳು (ಎಸ್‌ಟಿಪಿಗಳು) ಕಾರ್ಯನಿರ್ವಹಿಸುತ್ತಿಲ್ಲ. ಈ ಘಟಕಗಳನ್ನು ತುರ್ತಾಗಿ ಸರಿಪಡಿಸುವಂತೆ ಜಲ ಶಕ್ತಿ ಸಚಿವಾಲಯದ ಅಧಿಕಾರಿಗಳು ಸೂಚಿಸಿದ್ದರು. 2022ರ ಜುಲೈ ತಿಂಗಳೊಳಗೆ ಇವುಗಳನ್ನು ದುರಸ್ತಿ ಮಾಡುವುದಾಗಿ ಕರ್ನಾಟಕ ಸರ್ಕಾರದ ಅಧಿಕಾರಿಗಳು ಭರವಸೆ ನೀಡಿದ್ದರು. ಆದರೆ, ಈಗಲೂ ಈ ಘಟಕಗಳು ದುರಸ್ತಿಯಾಗಿಲ್ಲ ಎಂದು ಜಲ ಶಕ್ತಿ ಸಚಿವಾಲಯದ ಅಧಿಕಾರಿಗಳು ಬೇಸರ ವ್ಯಕ್ತಪಡಿಸಿದರು.

9ನೇ | ಪುಟ ನೋಡಿ

ಸಮಸ್ಯೆ ಪರಿಹರಿಸುವುದೇ ಗುರಿ: ನೂತನ ಪ್ರಧಾನಿ

ರಿಷಿ ಅಧಿಕಾರ ಸ್ವೀಕಾರ

ಲಂಡನ್ (ಎಎಫ್‌ಪಿ): 'ದೇಶದ ಮುಂದೆ ಇರುವ ಸಮಸ್ಯೆಗಳನ್ನು ಪರಿಹರಿಸುವುದಕ್ಕಾಗಿಯೇ ನನ್ನನ್ನು ಪ್ರಧಾನಿಯಾಗಿ ಆಯ್ಕೆ ಮಾಡಲಾಗಿದೆ' ಎಂದು ಬ್ರಿಟನ್‌ನ ಹೊಸ ಪ್ರಧಾನಿ ರಿಷಿ ಸುನಕ್ ಮಂಗಳವಾರ ಹೇಳಿದರು.

ವಸಾಹತುಶಾಹಿ ದೇಶವಾಗಿದ್ದ ಬ್ರಿಟನ್‌ನ ಪ್ರಧಾನಿಯಾಗಿ ರಿಷಿ ಅವರು ಮಂಗಳವಾರ ಅಧಿಕಾರ ವಹಿಸಿಕೊಂಡಿದ್ದಾರೆ. ಭಾರತವನ್ನು ವಸಾಹತು ಮಾಡಿಕೊಂಡಿದ್ದ ಬ್ರಿಟನ್‌ನ ಪ್ರಧಾನಿಯಾಗಿ ಭಾರತ ಮೂಲದ ವ್ಯ-ಕ್ತಿಯೊಬ್ಬರು ಆಯ್ಕೆಯಾಗಿ ಇತಿಹಾಸ ನಿರ್ಮಾಣವಾಗಿದೆ.

ಅಧಿಕಾರ ವಹಿಸಿಕೊಂಡ ಬಳಿಕ ರಿಷಿ ಅವರು ಪ್ರಧಾನಿಯ ಅಧಿಕೃತ ನಿವಾಸದ ಹೊರಗೆ ದೇಶವನ್ನು ಉದ್ದೇಶಿಸಿ ಮಾತನಾಡಿದರು. ಲಿಜ್ ಟ್ರಸ್ ಅವರು 49 ದಿನ ನಡೆಸಿದ ಸಂಕಷ್ಟಮಯ ಆಳ್ವಿಕೆಯ ಹಲವು ತಪ್ಪುಗಳು ಗಂಭೀರವಾದ ಆರ್ಥಿಕ ಬಿಕ್ಕಟ್ಟಿಗೆ ಕಾರಣವಾಗಿವೆ ಎಂದು ರಿಷಿ ದೂಷಿಸಿದ್ದಾರೆ.

'ನಾನು ದೇಶದಲ್ಲಿ ಒಗ್ಗಟ್ಟು ಮೂಡಿಸುತ್ತೇನೆ, ಅದು ಪದಗಳ ಮೂಲಕ ಅಲ್ಲ, ಕ್ರಿಯೆಯ ಮೂಲಕ' ಎಂದು ಅವರು ಹೇಳಿದರು.

10ನೇ | ಪುಟ ನೋಡಿ

ಬ್ರಿಟನ್‌ನ ಹೊಸ ಪ್ರಧಾನಿ ರಿಷಿ ಸುನಕ್ ಅವರು ಬಕಿಂಗ್‌ಹ್ಯಾಮ್ ಅರಮನೆಗೆ ತೆರಳಿ ರಾಜ ಮೂರನೇ ಚಾರ್ಲ್ಸ್ ಅವರನ್ನು ಭೇಟಿಯಾದರು –ಪಿಟಿಐ ಚಿತ್ರ

ರಿಷಿ ಕುರಿತು ಹೆಮ್ಮೆ: ನಾರಾಯಣಮೂರ್ತಿ

'ರಿಷಿಗೆ ಅಭಿನಂದನೆಗಳು. ಅವರ ಬಗ್ಗೆ ನಮಗೆ ಹೆಮ್ಮೆ ಇದೆ ಮತ್ತು ಅವರು ಯಶಸ್ವಿಯಾಗಲಿ ಎಂದು ಹಾರೈಸುತ್ತೇವೆ. ಬ್ರಿಟನ್‌ನ ಜನರಿಗಾಗಿ ಅವರು ತಮ್ಮ ಶಕ್ತಿ ಮೀರಿ ಕೆಲಸ ಮಾಡಲಿದ್ದಾರೆ ಎಂಬ ವಿಶ್ವಾಸ ಇದೆ' ಎಂದು ಇನ್ಫೊಸಿಸ್ ಸಂಸ್ಥಾಪಕ ನಾರಾಯಣಮೂರ್ತಿ ಅವರು ಪ್ರತಿಕ್ರಿಯೆ ನೀಡಿದ್ದಾರೆ. ರಿಷಿ ಅವರು ನಾರಾಯಣಮೂರ್ತಿ ಅವರ ಮಗಳು ಅಕ್ಷತಾ ಅವರನ್ನು ಮದುವೆ ಆಗಿದ್ದಾರೆ.

ಉಪಪ್ರಧಾನಿ ರಾಬ್

ಡೊಮಿನಿಕ್ ರಾಬ್ ಅವರನ್ನು ಉಪಪ್ರಧಾನಿಯಾಗಿ ರಿಷಿ ಅವರು ನೇಮಿಸಿದ್ದಾರೆ. ಟ್ರಸ್ ಸಂಪುಟದಲ್ಲಿ ಹಣಕಾಸು ಸಚಿವರಾಗಿದ್ದ ಜೆರೆಮಿ ಹಂಟ್ ಅವರನ್ನು ಉಳಿಸಿಕೊಳ್ಳ-ಲಾಗಿದೆ. ಟ್ರಸ್ ಸಂಪುಟದಲ್ಲಿದ್ದ ನಾಲ್ವರಿಗೆ ರಾಜೀನಾಮೆ ನೀಡಲು ಸೂಚಿಸಲಾಗಿದೆ.

ವೈವಿಧ್ಯ

'ಚೇಸಿಂಗ್ ಕಿಂಗ್' ಕೊಹ್ಲಿ

ಓಮೈಕ್ರಾನ್: ಮುನ್ನೆಚ್ಚರಿಕೆಗೆ ಸೂಚನೆ 9

ಚಿನಕುರಳಿ

ಪ್ರಕಾಶ್ ಶೆಟ್ಟಿ

ಗೂಗಲ್‌ಗೆ ಮತ್ತೆ ದಂಡ ವಿಧಿಸಿದ ಸಿಸಿಐ

ನವದೆಹಲಿ (ಪಿಟಿಐ): ಕೇಂದ್ರ ಸ್ಪರ್ಧಾ ಆಯೋಗವು (ಸಿಸಿಐ) ಗೂಗಲ್ ಕಂಪನಿಗೆ ಮಂಗಳವಾರ ₹ 936 ಕೋಟಿ ದಂಡ ವಿಧಿಸಿದೆ. ಪ್ಲೇಸ್ಟೋರ್‌ಗೆ ಸಂಬಂಧಿಸಿದ ನೀತಿಗಳಲ್ಲಿ ತನ್ನ ಪ್ರಬಲ ಸ್ಥಾನವನ್ನು ದುರ್ಬಳಕೆ ಮಾಡಿಕೊಂಡ ಕಾರಣಕ್ಕೆ ಸಿಸಿಐ ಈ ಕ್ರಮ ಕೈಗೊಂಡಿದೆ.

ನ್ಯಾಯಸಮ್ಮತವಲ್ಲದ ವಾಣಿಜ್ಯ ನಡೆಗಳನ್ನು ನಿಲ್ಲಿಸುವಂತೆಯೂ ಸಿಸಿಐ, ಗೂಗಲ್‌ಗೆ ಸೂಚಿಸಿದೆ. ಸಿಸಿಐ ಅಕ್ಟೋಬರ್ 20ರಂದು ಗೂಗಲ್‌ಗೆ ಇನ್ನೊಂದು ಪ್ರಕರಣದಲ್ಲಿ ₹ 1337 ಕೋಟಿ ದಂಡ ವಿಧಿಸಿದೆ.

ಆ್ಯಪ್ ಅಭಿವೃದ್ಧಿಪಡಿಸುವವರು ಆ್ಯಂಡ್ರಾಯ್ಡ್ ಕಾರ್ಯಾಚರಣೆ ವ್ಯವಸ್ಥೆಯ ಸ್ಮಾರ್ಟ್‌ಫೋನ್ ಬಳಸುವವರಿಗೆ ತಮ್ಮ ಆ್ಯಪ್ ತಲುಪಿಸಲು ಇರುವ ಪ್ರಮುಖ ವ್ಯವಸ್ಥೆ ಗೂಗಲ್‌ನ ಪ್ಲೇಸ್ಟೋರ್. ಡೆವಲಪರ್‌ಗಳು ಸಿದ್ಧಪಡಿಸಿದ ಆ್ಯಪ್‌ಗಳನ್ನು ಮಾರಾಟ ಮಾಡಿ ಹಣ ಸಂಪಾದಿಸಲು ಕೂಡ ಇರುವ ಮಾರ್ಗ ಇದು.

ಆದರೆ, ಹಣ ಕೊಟ್ಟು ಖರೀದಿಸಬೇಕಿರುವ ಆ್ಯಪ್‌ಗಳನ್ನು ಆ್ಯಪ್ ಸ್ಟೋರ್‌ನಲ್ಲಿ ಲಭ್ಯವಾಗಿಸಬೇಕು ಎಂದಾದರೆ ಆ್ಯಪ್ ಡೆವಲರ್‌ಗಳು ಗೂಗಲ್ ಪ್ಲೇ ಬಿಲ್ಲಿಂಗ್ ವ್ಯವಸ್ಥೆಯ ಭಾಗವಾಗಿರಲೇಬೇಕು ಎಂಬ ನಿಯಮವು ನ್ಯಾಯಸಮ್ಮತವಲ್ಲದ್ದು ಎಂದು ಸಿಸಿಐ ಹೇಳಿದೆ.

ಆ್ಯಪ್ ಡೆವಲಪರ್‌ಗಳಿಗೆ, ಆ್ಯಪ್ ಖರೀದಿ ಪ್ರಕ್ರಿಯೆಗೆ ಬೇರೆ ಬಿಲ್ಲಿಂಗ್ ಸೇವೆಗಳನ್ನು ಬಳಸುವುದಕ್ಕೆ ಕೂಡ ಅವಕಾಶ ನೀಡಬೇಕು ಎಂದು ಸಿಸಿಐ, ಗೂಗಲ್‌ಗೆ ತಾಕೀತು ಮಾಡಿದೆ. ಸಿಸಿಐ ಆದೇಶದ ವಿಚಾರವಾಗಿ ಗೂಗಲ್‌ನಿಂದ ತಕ್ಷಣಕ್ಕೆ ಪ್ರತಿಕ್ರಿಯೆ ಲಭ್ಯವಾಗಿಲ್ಲ.

10ನೇ | ಪುಟ ನೋಡಿ

ಖರ್ಗೆ ಅಧಿಕಾರ ಸ್ವೀಕಾರ ಇಂದು

ನವದೆಹಲಿ (ಪಿಟಿಐ): ಕಾಂಗ್ರೆಸ್ ಪಕ್ಷದ ನೂತನ ಅಧ್ಯಕ್ಷರಾಗಿ ಚುನಾಯಿತರಾಗಿರುವ ಮಲ್ಲಿಕಾರ್ಜುನ ಖರ್ಗೆ ಅವರು ಬುಧವಾರ ಅಧಿಕಾರ ವಹಿಸಿಕೊಳ್ಳಲಿದ್ದು, ನವದೆಹಲಿಯಲ್ಲಿ-ರುವ ಪಕ್ಷದ ಮುಖ್ಯ ಕಚೇರಿಯಲ್ಲಿ ಇದಕ್ಕಾಗಿ ಭರದ ಸಿದ್ಧತೆಗಳು ನಡೆದಿವೆ.

ಪಕ್ಷದ ನಿರ್ಗಮಿತ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ಖರ್ಗೆ ಅವರಿಗೆ ಅಧಿಕಾರ ಹಸ್ತಾಂತರಿಸಲಿದ್ದಾರೆ. ಈ ಮೂಲಕ ನೆಹರೂ–ಗಾಂಧಿ ಕುಟುಂಬದ ಹೊರಗಿನವರೊಬ್ಬರು 24 ವರ್ಷಗಳ ಬಳಿಕ ಪಕ್ಷದ ಅತ್ಯುನ್ನತ ಹುದ್ದೆಯನ್ನು ನಿರ್ವಹಿಸಲಿದ್ದಾರೆ.

ಕಾರ್ಯಕ್ರಮದಲ್ಲಿ ಕಾಂಗ್ರೆಸ್‌ನ ಚುನಾವಣಾ ಪ್ರಾಧಿಕಾರದ ಅಧ್ಯಕ್ಷ ಮಧುಸೂದನ ಮಿಸ್ತ್ರಿ ಅವರು ಚುನಾವಣೆಯಲ್ಲಿ ಆಯ್ಕೆಯಾಗಿರುವ ಪ್ರಮಾಣಪತ್ರವನ್ನು ಖರ್ಗೆ ಅವರಿಗೆ ಹಸ್ತಾಂ-ತರಿಸಲಿದ್ದಾರೆ. ಈ ವೇಳೆ ಪಕ್ಷದ ನಾಯಕ ರಾಹುಲ್ ಗಾಂಧಿ ಉಪಸ್ಥಿತರಿರಲಿದ್ದಾರೆ.

ಪಕ್ಷದ ಅತ್ಯುನ್ನತ ಹುದ್ದೆಗೆ ನಡೆದ ಚುನಾವಣೆಯಲ್ಲಿ ಖರ್ಗೆ ಅವರು ಸಂಸದ ಶಶಿ ತರೂರ್ ಅವರನ್ನು ಮಣಿಸಿದ್ದರು.

ಖರ್ಗೆ ಎದುರಿನ ಸವಾಲು: ಕಾಂಗ್ರೆಸ್ ಪಕ್ಷವು ಚುನಾವಣೆಗಳಲ್ಲಿ ಒಂದಾದ ನಂತರ ಒಂದರಂತೆ ಸೋಲು ಕಾಣುತ್ತ ತನ್ನ ರಾಜಕೀಯ ಇತಿಹಾಸದಲ್ಲಿಯೇ ಅತ್ಯಂತ ಸಂಕಷ್ಟದ ಸ್ಥಿತಿಯಲ್ಲಿರುವಾಗ 80 ವರ್ಷ ವಯಸ್ಸಿನ ಖರ್ಗೆ ಅವರು ಪಕ್ಷದ ಸಾರಥ್ಯ ವಹಿಸಿಕೊಳ್ಳುತ್ತಿದ್ದಾರೆ.

ಅತ್ಯಂತ ಹಳೆಯ ಪಕ್ಷವಾಗಿರುವ ಕಾಂಗ್ರೆಸ್ ಸದ್ಯ ರಾಜಸ್ಥಾನ ಮತ್ತು ಛತ್ತೀಸಗಡದಲ್ಲಿ ಮಾತ್ರ ಅಧಿಕಾರದಲ್ಲಿದೆ. ಈ ಮಧ್ಯೆ ಹಿಮಾಚಲ ಪ್ರದೇಶ ಮತ್ತು ಗುಜರಾತ್‌ನಲ್ಲಿ ವಿಧಾನಸಭೆ ಚುನಾವಣೆ ಸಮೀಪಿಸುತ್ತಿದ್ದು, ಇಲ್ಲಿ ಪಕ್ಷವನ್ನು ಅಧಿಕಾರಕ್ಕೆ ತರುವುದು ಖರ್ಗೆ ಎದುರಿಗಿರುವ ಮೊದಲ ಸವಾಲಾಗಿದೆ. ಆ ನಂತರ 2023ರಲ್ಲಿ ಕರ್ನಾಟಕ ಸೇರಿ 9 ರಾಜ್ಯಗಳ ವಿಧಾನಸಭೆಗ-ಳಿಗೆ ಚುನಾವಣೆ ನಡೆಯಲಿದ್ದು, ಇದಕ್ಕಾಗಿ ಪಕ್ಷವನ್ನು ಸಜ್ಜುಗೊಳಿ-ಸಬೇಕಿದೆ. ಜೊತೆಗೆ ಆಂತರಿಕ ಭಿನ್ನಾಭಿಪ್ರಾಯಗಳನ್ನು ಬಗೆಹರಿಸಿ ಪಕ್ಷಕ್ಕೆ ಶಕ್ತಿ, ಉತ್ಸಾಹ ತುಂಬಬೇಕಿದೆ.

ಹಲ್ಲೆ, ಬೆದರಿಕೆ ಪ್ರಕರಣ: ಮೂವರ ಬಂಧನ

ಶಿವಮೊಗ್ಗ: ಹಳೆಯ ದ್ವೇಷದ ಹಿನ್ನೆಲೆಯಲ್ಲಿ ಇಲ್ಲಿನ ಭರಮಪ್ಪ ನಗರದಲ್ಲಿ ಗುಂಪೊಂದು ಸೋಮವಾರ ತಡರಾತ್ರಿ ಪ್ರಕಾಶ್ ಎಂಬ ಯುವಕನ ಮೇಲೆ ಹಲ್ಲೆ ನಡೆಸಿದೆ. ಇದರಿಂದ ಶಿವಮೊಗ್ಗ ನಗರದಲ್ಲಿ ಬಿಗುವಿನ ವಾತಾವರಣ ನಿರ್ಮಾಣವಾಗಿದೆ.

ಪ್ರಕರಣದ ಸಂಬಂಧ ಮಾರ್ಕೆಟ್ ಫೌಜಾನ್, ಅಜರ್ ಹಾಗೂ ಫರಾಜ್ ಎಂಬುವವರನ್ನು ಮಂಗಳವಾರ ಬಂಧಿಸಲಾಗಿದೆ' ಎಂದು ಎಸ್‌ಪಿ ಜಿ.ಕೆ.ಮಿಥುನ್‌ಕುಮಾರ್ ತಿಳಿಸಿದ್ದಾರೆ.

ಬಿಗಿ ಭದ್ರತೆ: ಹಲ್ಲೆ ಘಟನೆ ಹಿನ್ನೆಲೆಯಲ್ಲಿ ಮುಂಜಾಗ್ರತೆಯಾಗಿ ಹಳೆಯ ಶಿವಮೊಗ್ಗ ಭಾಗದಲ್ಲಿ ಹೆಚ್ಚಿನ ಪೊಲೀಸರನ್ನು ನಿಯೋಜಿಸಲಾಗಿದೆ.

ಹರ್ಷನ ಕುಟುಂಬಕ್ಕೆ ಬೆದರಿಕೆ?: ಹತ್ಯೆಯಾಗಿದ್ದ ಬಜರಂಗದಳದ ಕಾರ್ಯಕರ್ತ ಹರ್ಷನ ಕುಟುಂಬದವರಿಗೆ ಗುಂಪೊಂದು ಜೀವಬೆದರಿಕೆ ಹಾಕಿದೆ ಎಂದು ತಿಳಿದುಬಂದಿದೆ.

ಈ ಬಗ್ಗೆ ಮಾಧ್ಯಮದವರ ಎದುರು ಅಳಲು ತೋಡಿಕೊಂಡಿದ್ದ ಹರ್ಷನ ಸಹೋದರಿ ಅಶ್ವಿನಿ, 'ಕೇಂದ್ರ ಹಾಗೂ ರಾಜ್ಯ ಎರಡೂ ಕಡೆ ಬಿಜೆಪಿ ಸರ್ಕಾರವಿದ್ದರೂ ನಮ್ಮ ಜೀವಕ್ಕೆ ಬೆಲೆ ಇಲ್ಲವಾಗಿದೆ' ಎಂದಿದ್ದರು. ಆದರೆ ಈ ಬಗ್ಗೆ ಯಾವುದೇ ದೂರು ದಾಖಲಿಸಿಲ್ಲ.

ಚಂಡಮಾರುತಕ್ಕೆ ಬಾಂಗ್ಲಾದಲ್ಲಿ 35 ಮಂದಿ ಸಾವು

ಢಾಕಾ (ಪಿಟಿಐ): ಬಾಂಗ್ಲಾದೇಶದ ವಿವಿಧ ಭಾಗಗಳಲ್ಲಿ ಅಪ್ಪಳಿಸಿದ ಸಿತ್ರಾಂಗ್ ಚಂಡಮಾರುತದ ಅಬ್ಬರಕ್ಕೆ ಮೂವರು ಮಕ್ಕಳು ಸೇರಿ 35 ಮಂದಿ ಮೃತಪಟ್ಟಿದ್ದಾರೆ ಎಂದು ಮಂಗಳವಾರ ಅಧಿಕಾರಿಗಳು ತಿಳಿಸಿದ್ದಾರೆ.

'ರಾಮಮಂದಿರ: ಶೇ 50ಷ್ಟು ಕಾಮಗಾರಿ ಪೂರ್ಣ'

ಲಖನೌ: ರಾಮಮಂದಿರ ನಿರ್ಮಾಣದ ಪ್ರಗತಿ ಪರಿಶೀಲನೆಗೆ ಪ್ರಧಾನಿ ನರೇಂದ್ರ ಮೋದಿ ಅವರು ಅಯೋಧ್ಯೆಗೆ ಭೇಟಿ ನೀಡಿದ್ದ ಬೆನ್ನಲ್ಲೇ, ನಿರ್ಮಾಣ ಕಾಮಗಾರಿ ಇನ್ನಷ್ಟು ಚುರುಕುಗೊಂಡಿದ್ದು, ಶೇ 50ರಷ್ಟು ಕಾಮಗಾರಿ ಈಗಾಗಲೇ ಪೂರ್ಣಗೊಂಡಿದೆ. 8

ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ: ಕೆ.ನಾಗಣ್ಣಗೌಡ ಅಧ್ಯಕ್ಷ

ಮಂಡ್ಯ: ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ನೂತನ ಅಧ್ಯಕ್ಷರನ್ನಾಗಿ ಕೆ.ನಾಗಣ್ಣಗೌಡ ಅವರನ್ನು ನೇಮಕ ಮಾಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ಇವರ ಅಧಿಕಾರದ ಅವಧಿ ಮೂರು ವರ್ಷಗಳು. 9

ಕೃತಕ ಬುದ್ಧಿಮತ್ತೆ ತರಬೇತಿ ಯೋಜನೆ ವಿಫಲ; ಸಿಎಜಿ ಆಕ್ಷೇಪ

ರೊಬೊಟಿಕ್ಸ್ ತರಬೇತಿ: ₹74 ಕೋಟಿ ವ್ಯರ್ಥ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರ ಐಐಐಟಿ ಜತೆ ಸೇರಿ ಸ್ಥಾಪಿಸಿದ ಶ್ರೇಷ್ಠತಾ ಕೇಂದ್ರವು (ಸಿಒಇ) ಕೃತಕ ಬುದ್ಧಿಮತ್ತೆ ಮತ್ತು ರೊಬೊಟಿಕ್ಸ್ ವಿಷಯದಲ್ಲಿ ಪ್ರತಿ ವರ್ಷ 1,000 ಪದವಿಪೂರ್ವ ವಿದ್ಯಾರ್ಥಿಗಳಿಗೆ ತರಬೇತಿ ನೀಡಿ, ಉದ್ಯೋಗಕ್ಕೆ ಅಣಿಗೊಳಿಸುವ ಮಹತ್ವದ ಉದ್ದೇಶವೇನೊ ಹೊಂದಿತ್ತು. ಆದರೆ ಈಡೇರಿಸುವಲ್ಲಿ ಮಾತ್ರ ಯಶಸ್ಸು ಸಾಧಿಸಿಲ್ಲ.

ಅಲ್ಲದೆ, ಉದಯೋನ್ಮುಖ ತಂತ್ರಜ್ಞಾನಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಎಂಎಸ್‌ಎಂಇಗಳಿಗೆ (ಸಣ್ಣ ಮತ್ತು ಮಧ್ಯಮ ಉದ್ಯಮಗಳು) ತರಬೇತಿ ಪಡೆದ ಸಿಬ್ಬಂದಿ ಪೂರೈಸದ ಕಾರಣ ಶ್ರೇಷ್ಠತಾ ಕೇಂದ್ರದ ಮೂಲಕ ಕೌಶಲೀಕ-ರಣಕ್ಕಾಗಿ ಮಾಡಿರುವ ₹74.04 ಕೋಟಿ ವೆಚ್ಚ ವ್ಯರ್ಥವಾಗಿದೆ ಎಂದು ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರ (ಸಿಎಜಿ) ವರದಿ ಹೇಳಿದೆ.

ವರದಿಯ ಪ್ರಕಾರ, 2018-19, 2019-20 ರ ಅವಧಿಯಲ್ಲಿ ಪದವಿಪೂರ್ವ ವಿದ್ಯಾರ್ಥಿಗಳಿಗೆ ತರಬೇತಿ ನೀಡಲಿಲ್ಲ ಮತ್ತು ಆ ಕುರಿತ ಯಾವುದೇ ಮಾಹಿತಿಯನ್ನು ಸಿಎಜಿಗೆ ನೀಡಿಲ್ಲ. 2018 ರ ಫೆಬ್ರುವರಿಯಲ್ಲಿ ಬೆಂಗಳೂರಿನ ಐಐಐಟಿ ಸಹಯೋಗದಲ್ಲಿ ₹34.35 ಕೋಟಿ ವೆಚ್ಚದಲ್ಲಿ ಶ್ರೇಷ್ಠತಾ ಕೇಂದ್ರ ಸ್ಥಾಪಿಸಲು ಅನುಮೋದನೆ ನೀಡಲಾಗಿತ್ತು. ಆದರೆ, ಒಪ್ಪಂದಕ್ಕೆ ಸುಮಾರು 18 ತಿಂಗಳಷ್ಟು ತಡವಾಗಿ ಸಹಿ ಮಾಡಲಾಯಿತು.

ರಾಜ್ಯದಲ್ಲಿ ಕೃತಕ ಬುದ್ಧಿಮತ್ತೆ ಮತ್ತು ರೊಬೊಟಿಕ್ಸ್ ಕ್ಷೇತ್ರಗಳಲ್ಲಿ ವಿಶ್ವ ದರ್ಜೆಯ ಸಂಶೋಧನಾ ಸಾಮರ್ಥ್ಯವ-ನ್ನು ಸ್ಥಾಪಿಸುವುದು ಶ್ರೇಷ್ಠತಾ ಕೇಂದ್ರದ ಪ್ರಾಥಮಿಕ ಕರ್ತವ್ಯ. ಐಐಐಟಿಯ ಮೆಷಿನ್ ಇಂಟೆಲಿಜೆನ್ಸ್ ರೊಬೊಟಿಕ್ಸ್ ಸಂಶೋಧನೆ ಸಂಸ್ಥೆ ನೆರವಿನಿಂದ ಒಟ್ಟು 92 ಸಂಶೋಧನಾ ವಿದ್ಯಾರ್ಥಿಗಳು ಪ್ರಯೋಜನ ಪಡೆದಿದ್ದಾರೆ. 624 ಫಲಾನುಭವಿಗಳು ಜ್ಞಾನ ಪ್ರಸರಣ ಕಾರ್ಯಕ್ರಮಗಳಿಂದ ಪ್ರಯೋಜನ ಪಡೆದಿದ್ದಾರೆ ಎಂದು ಸಿಎಜಿ ಹೇಳಿದೆ.

ತಿಂಗಳಿಗೊಮ್ಮೆ ಎಲ್ಲ ಶ್ರೇಷ್ಠತಾ ಕೇಂದ್ರಗಳ ಮೇಲ್ವಿಚಾರಣೆ ನಡೆಸಬೇಕು ಎಂದು ಐಟಿ–ಬಿಟಿ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರು ಕರ್ನಾಟಕ ನಾವಿನ್ಯ ಮತ್ತು ತಂತ್ರಜ್ಞಾನ ಸೊಸೈಟಿಗೆ (ಕಿಟ್ಸ್) ನಿರ್ದೇಶನ ನೀಡಿದ್ದರೂ, ಮೇಲ್ವಿಚಾರಣೆ ನಡೆಸಲಿಲ್ಲ. ಇದರಿಂದ ಇಲಾಖೆಯು ಕೌಶಲೀಕರಣದ ಅನುಷ್ಠಾನವನ್ನು ನಿರ್ಲಕ್ಷಿಸಿದೆ ಮತ್ತು ಉದ್ದೇಶವನ್ನು ಈಡೇರಿಸುವಲ್ಲಿ ವಿಫಲವಾಗಿದೆ ಎಂದು ಸಿಎಜಿ ಅಭಿಪ್ರಾಯಪಟ್ಟಿದೆ.

ಸರ್ಕಾರದ ಉತ್ತರವೇನು?

'ಎಂಎಸ್‌ಎಂಇ ವಲಯದ ಅಗತ್ಯವನ್ನು ಪೂರೈಸಲು ಶ್ರೇಷ್ಠತಾ ಕೇಂದ್ರಗಳನ್ನು ಕ್ರಿಯಾತ್ಮಕಗೊಳಿಸಿಲ್ಲ ಎಂಬ ವಾದ ಸರಿಯಲ್ಲ. ಎಂಎಸ್‌ಎಂಇ ವಲಯದ ಅಗತ್ಯವನ್ನು ಪೂರೈಸಲು ಶ್ರೇಷ್ಠತಾ ಕೇಂದ್ರಗಳನ್ನು ಕ್ರಿಯಾತ್ಮಕಗೊಳಿಸಲಾಗಿದೆ. ಹೀಗಾಗಿ ಕೌಶಲೀಕರಣಕ್ಕೆ ಮಾಡಿದ ₹74.04 ಕೋಟಿ ವೆಚ್ಚ ವ್ಯರ್ಥವಾಗಿಲ್ಲ, ಡ್ಯಾಶ್ ಬೋರ್ಡ್ ಅಭಿವೃದ್ಧಿಪಡಿಸುತ್ತಿದ್ದು, ಶ್ರೇಷ್ಠತಾ ಕೇಂದ್ರಗಳನ್ನು ನಿಯಮಿತವಾಗಿ ಮೇಲ್ವಿಚಾರಣೆಗೆ ಒಳಪಡಿಸಲಾಗುತ್ತಿದೆ' ಎಂದು ಐಟಿ–ಬಿಟಿ ಇಲಾಖೆ ಸಿಎಜಿಗೆ ಉತ್ತರ ನೀಡಿದೆ.

ಉತ್ತರದ ಬಗ್ಗೆ ತೃಪ್ತಿ ವ್ಯಕ್ತಪಡಿಸದ ಸಿಎಜಿ, 'ಶ್ರೇಷ್ಠತಾ ಕೇಂದ್ರಗಳು ವೃತ್ತಿಪರರು, ಉದ್ಯೋಗ ಸಿದ್ಧ ವಿದ್ಯಾರ್ಥಿಗಳನ್ನು ಉದಯೋನ್ಮುಖ ತಂತ್ರಜ್ಞಾನ-ಗಳಿಗೆ ಒದಗಿಸಲಿದೆ ಎಂದು ಹೇಳಿತ್ತು. ಆ ನಿರೀಕ್ಷೆ ಹುಸಿಯಾಗಿದೆ. ಡ್ಯಾಶ್‌ಬೋರ್ಡ್ ಅನ್ನು ಇನ್ನಷ್ಟೇ ಅಭಿವೃದ್ಧಿಪಡಿಸಬೇಕಿದೆ' ಎಂದು ಹೇಳಿದೆ.

'ವೆಬಿನಾರ್‌ಗಳು, ಕಾರ್ಯಾಗಾರಗಳು, ಒರಿಯೆಂಟೇಷನ್, ಪ್ರಾಥಮಿಕ ಹಂತ ಕೋರ್ಸ್‌ಗಳಂತಹ ಒಂದು ದಿನದ ಅಥವಾ ಅಲ್ಪಾವಧಿಯ ತರಬೇತಿಗಳಿಂದ ಉದ್ದೇಶ ಈಡೇರುವುದಿಲ್ಲ' ಎಂದೂ ಅಭಿಪ್ರಾಯ ವ್ಯಕ್ತಪಡಿಸಿದೆ.

ಮುಖ್ಯಾಂಶಗಳು

- ನಿಗದಿತ ಸಮಯಕ್ಕೆ ಆರಂಭಗೊಳ್ಳದ ಯೋಜನೆ
- ಐಐಐಟಿ ಸಹಯೋಗದಲ್ಲಿ ಶ್ರೇಷ್ಠತಾ ಕೇಂದ್ರ

ಒಳ ಪುಟಗಳು

ಇರಾನ್‌ನಲ್ಲಿ 'ವಿಶ್ವದ ಅತಿ ಕೊಳಕು ಮನುಷ್ಯ' ಸಾವು 10

ಇಟಾನಗರ: ಬೆಂಕಿ ಅನಾಹುತಕ್ಕೆ 700 ಅಂಗಡಿಗಳು ಭಸ್ಮ 8

ಅಕ್ಷತಾ ಡಿವಿಡೆಂಡ್ ಆದಾಯ ₹ 126 ಕೋಟಿ 10

ಸಂಭ್ರಮ ಕಸಿದ ಪಟಾಕಿ ಅವಘಡ

70ಕ್ಕೂ ಅಧಿಕ ಪ್ರಕರಣಗಳು ವರದಿ • ಪಾದಚಾರಿಗಳಿಗೆ ಕಿಡಿ ಸಿಡಿದು ಗಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಟಾಕಿ ಅವಘಡದಿಂದ ಗಾಯ ಮಾಡಿಕೊಂಡ 70ಕ್ಕೂ ಅಧಿಕ ಪ್ರಕರಣಗಳು ನಗರದ ಆಸ್ಪತ್ರೆಗಳಲ್ಲಿ ವರದಿಯಾಗಿದೆ. ಹಲವು ಕುಟುಂಬಗಳ ದೀಪಾವಳಿ ಸಂಭ್ರಮವನ್ನು ಪಟಾಕಿ ಕಸಿದಿದೆ. ಪಾದಚಾರಿಗಳೂ ಪಟಾಕಿ ಕಿಡಿಯಿಂದ ಗಾಯ ಮಾಡಿಕೊಂಡ ಪ್ರಕರಣಗಳು ವರದಿಯಾಗಿವೆ.

ಪಟಾಕಿಯ ಬಗ್ಗೆ ವೈದ್ಯರು ಜಾಗೃತಿ ಮೂಡಿಸಿದರೂ ಈ ಬಾರಿ ಸಹ ಹೆಚ್ಚಿನ ಸಂಖ್ಯೆಯಲ್ಲಿ ಪ್ರಕರಣಗಳು ವರದಿಯಾಗುತ್ತಿವೆ. ಮಿಂಟೊ ಕಣ್ಣಿನ ಆಸ್ಪತ್ರೆಯಲ್ಲಿ ಮಂಗಳವಾರ 10ಕ್ಕೂ ಅಧಿಕ ಮಂದಿ ಪಟಾಕಿ ಗಾಯಕ್ಕೆ ಚಿಕಿತ್ಸೆ ಪಡೆದುಕೊಂಡಿದ್ದಾರೆ. ಇದರಿಂದಾಗಿ 3 ದಿನಗಳಲ್ಲಿ ಅಲ್ಲಿ 15ಕ್ಕೂ ಅಧಿಕ ಪ್ರಕರಣಗಳು ವರದಿಯಾಗಿವೆ. ಬಾಲಕನ ಕಣ್ಣಿಗೆ ಗಂಭೀರ ಹಾನಿಯಾಗಿದ್ದು, ದೃಷ್ಟಿ ಕಳೆದುಕೊಳ್ಳುವ ಬಗ್ಗೆ ವೈದ್ಯರು ಕಳವಳ ವ್ಯಕ್ತಪಡಿಸಿದ್ದಾರೆ.

ಕೈಯಲ್ಲಿ ಸಿಡಿದ ಹೂವಿನ ಕುಂಡ

ಹೂವಿನ ಕುಂಡವನ್ನು ಕೈಯಲ್ಲಿ ಹಿಡಿದು ಹಚ್ಚಲು ಹೋಗಿ, ಇಬ್ಬರು ಯುವಕರು ಕೈ ಸುಟ್ಟುಕೊಂಡಿದ್ದಾರೆ. ಪಟಾಕಿ ಸಿಡಿತವನ್ನು ವೀಕ್ಷಿಸುತ್ತಿದ್ದ 4 ವರ್ಷದ ಮಗುವಿಗೂ ಗಾಯವಾಗಿದೆ. ಇವರಿಗೆ ಆಸ್ಟರ್ ಸಿಎಂಐ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. 'ಪಟಾಕಿ ಹಚ್ಚುವಾಗ ಸುರಕ್ಷತಾ ಕ್ರಮಗಳನ್ನು ಅನುಸರಿಸಬೇಕು. ಕಣ್ಣು ಸೇರಿ ವಿವಿಧ ಸೂಕ್ಷ್ಮ ಅಂಗಗಳಿಗೆ ಪಟಾಕಿ ಕಿಡಿ ತಾಕದಂತೆ ಎಚ್ಚರ ವಹಿಸಬೇಕು. ಗಾಯಗೊಂಡಲ್ಲಿ ತಕ್ಷಣ ಹತ್ತಿರದ ಆಸ್ಪತ್ರೆಗೆ ತೆರಳಿ, ಚಿಕಿತ್ಸೆ ಪಡೆದುಕೊಳ್ಳಬೇಕು' ಎಂದು ಆಸ್ಟರ್ ಸಿಎಂಐ ಆಸ್ಪತ್ರೆಯ ಎಮರ್ಜೆನ್ಸಿ ಮೆಡಿಸಿನ್ ವಿಭಾಗದ ಡಾ.ಎಸ್. ಶೈಲೇಶ್ ಶೆಟ್ಟಿ ತಿಳಿಸಿದ್ದಾರೆ.

ವಿಕ್ಟೋರಿಯಾದ ಮಹಾಬೋಧಿ ಸುಟ್ಟಗಾಯಗಳ ಕೇಂದ್ರದಲ್ಲಿ ಒಬ್ಬರಿಗೆ ಚಿಕಿತ್ಸೆ ನೀಡಲಾಗುತ್ತಿದೆ. ನಾರಾಯಣ ನೇತ್ರಾಲಯದಲ್ಲಿ 18 ಪ್ರಕರಣಗಳು ವರದಿಯಾಗಿದ್ದು, ನಾಲ್ವರಿಗೆ ಗಂಭೀರವಾಗಿ ಗಾಯಗಳಾಗಿವೆ. ನೇತ್ರಧಾಮ ಕಣ್ಣಿನ ಆಸ್ಪತ್ರೆಯಲ್ಲಿ 20, ಶಂಕರ ಕಣ್ಣಿನ ಆಸ್ಪತ್ರೆಯಲ್ಲಿ 13, ಆಸ್ಟರ್ ಸಿಎಂಐ ಆಸ್ಪತ್ರೆಯಲ್ಲಿ 3 ಹಾಗೂ ಮೋದಿ ಕಣ್ಣಿನ ಆಸ್ಪತ್ರೆಯಲ್ಲಿ ಒಂದು ಪ್ರಕರಣ ವರದಿಯಾಗಿದೆ. ಇವರಲ್ಲಿ ಹೆಚ್ಚಿನವರು ಲಕ್ಷ್ಮೀ ಬಾಂಬ್, ಬಿಜ್ಲಿ ಪಟಾಕಿ ಹಾಗೂ ಫ್ಲವರ್ ಪಾಟ್ ಸಿಡಿಸಿದವರಾಗಿದ್ದಾರೆ.

ಪಟಾಕಿ ಸಿಡಿಸದಿದ್ದರೂ ಗಾಯ: ಅನ್ನಪೂರ್ಣೇಶ್ವರಿ ನಗರದ 39 ವರ್ಷದ ಮಹಿಳೆ, ಸರ್ಜಾಪುರದ 49 ವರ್ಷದ ಮಹಿಳೆ ಹಾಗೂ ಅವೆನ್ಯೂ ರಸ್ತೆಯ 22 ವರ್ಷದ ಯುವಕ ಪಟಾಕಿ ಸಿಡಿತ ವೀಕ್ಷಿಸುವಾಗ ಕಿಡಿ ತಾಕಿ, ಗಾಯಗೊಂಡಿದ್ದಾರೆ. ಇವರಿಗೆ ಮಿಂಟೊ ಕಣ್ಣಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಅದೇ ರೀತಿ, ಕುಟುಂಬದ ಸದಸ್ಯರೆಲ್ಲ ಒಟ್ಟಾಗಿ ಪಟಾಕಿ ಸಿಡಿಸುವಾಗ ಗಾಯಗೊಂಡ ಪ್ರಕರಣಗಳೂ ವರದಿಯಾಗಿವೆ.

ಮೈಸೂರು ರಸ್ತೆಯ 19 ವರ್ಷದ ಯುವಕನ ಬಲಗಣ್ಣಿಗೆ ಗಂಭೀರ ಗಾಯವಾಗಿದೆ. ಪಟಾಕಿ ಸ್ಫೋಟಗೊಂಡಾಗ ನೆಲದಲ್ಲಿನ ಕಲ್ಲುಗಳು ಸಿಡಿದು, ಯುವಕನ ಕನ್ನಡಕಕ್ಕೆ ಬಡಿದಿವೆ. ಇದರಿಂದಾಗಿ ಕನ್ನಡಕದ ಗಾಜು ಒಡೆದು, ಕಣ್ಣಿನೊಳಗೆ ಹೊಕ್ಕಿವೆ. ಮಿಂಟೊ ಆಸ್ಪತ್ರೆ ವೈದ್ಯರು ಯುವಕನಿಗೆ ಶಸ್ತ್ರಚಿಕಿತ್ಸೆ ನಡೆಸಿ, ಗಾಜು ಹೊರತೆಗೆದಿದ್ದಾರೆ.

'ಪಟಾಕಿಯಿಂದ ಗಾಯಗೊಂಡವರಲ್ಲಿ ಒಬ್ಬರಿಗೆ ದೃಷ್ಟಿ ಬರುವ ಭರವಸೆ ಉಳಿದಿಲ್ಲ. ಐವರಿಗೆ ಅಲ್ಪ ಪ್ರಮಾಣದಲ್ಲಿ ದೃಷ್ಟಿ ನಷ್ಟವಾಗಿದೆ. ಹಸಿರು ಪಟಾಕಿಗಳಿಂದಲೂ ಕಣ್ಣಿಗೆ ಅಪಾಯವಿದೆ. ಪಟಾಕಿಯ ಕಿಡಿಗಳು ಕಣ್ಣಿನ ಮೇಲೆ ಬಿದ್ದಲ್ಲಿ ದೃಷ್ಟಿ ಕಳೆದುಕೊಳ್ಳುವ ಸಾಧ್ಯತೆ ಇರುತ್ತದೆ. ದೀಪಾವಳಿಯ ಸಂದರ್ಭದಲ್ಲಿ ಬೆಳಕಿನಿಂದ ಕತ್ತಲೆಗೆ ಹೋಗಬಾರದು' ಎಂದು ಮಿಂಟೊ ಕಣ್ಣಿನ ಆಸ್ಪತ್ರೆ ನಿರ್ದೇಶಕಿ ಡಾ. ಸುಜಾತಾ ರಾಥೋಡ್ ತಿಳಿಸಿದರು.

ಜವಾಹರಲಾಲ್ ನೆಹರೂ ತಾರಾಲಯದಲ್ಲಿ ಸೂರ್ಯಗ್ರಹಣ ವೀಕ್ಷಣೆ ಮಾಡಿದ ಕ್ಷಣ (1) ಬೆಂಗಳೂರಿನ ಗವಿಪುರದಲ್ಲಿರುವ 'ಗವಿಗಂಗಾಧರೇಶ್ವರ ಸ್ವಾಮಿ ದೇವಸ್ಥಾನ'ದಲ್ಲಿ ಮಂಗಳವಾರ ಗ್ರಹಣದ ಪ್ರಯುಕ್ತ 'ಗ್ರಹಣ ಶಾಂತಿ ಹೋಮ' ನೆರವೇರಿಸಲಾಯಿತು —ಪ್ರಜಾವಾಣಿ ಚಿತ್ರ

ಗ್ರಹಣದ ವೇಳೆ ಹಣ್ಣು, ಉಪಾಹಾರ ಸೇವಿಸಿ ಜಾಗೃತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಮಾಜದಲ್ಲಿ ಬೇರು ಬಿಟ್ಟಿರುವ ಮೂಢನಂಬಿಕೆಗಳನ್ನು ಹೋಗಲಾಡಿಸಲು ಜನರಲ್ಲಿ ವೈಜ್ಞಾನಿಕ ತಿಳಿವಳಿಕೆ ಮೂಡಿಸುವುದೇ ಸೂಕ್ತ ಪರಿಹಾರ ಎಂದು ನಿವೃತ್ತ ಐಪಿಎಸ್ ಅಧಿಕಾರಿ ಸುಭಾಷ್ ಭರಣಿ ಹೇಳಿದರು.

ಮೂಢನಂಬಿಕೆ ವಿರೋಧಿ ಒಕ್ಕೂಟ ಇಲ್ಲಿನ ಟೌನ್‌ಹಾಲ್ ಎದುರು ಮಂಗಳವಾರ ಹಮ್ಮಿಕೊಂಡಿದ್ದ 'ವೈಜ್ಞಾನಿಕ ಮನೋಧರ್ಮದೊಂದಿಗೆ ಪಾರ್ಶ್ವಸೂರ್ಯಗ್ರಹಣ ಕಾರ್ಯಕ್ರಮ'ದಲ್ಲಿ ಅವರು ಮಾತನಾಡಿದರು.

ಸೂರ್ಯನ ಹುಟ್ಟು, ಭೂಮಿಯ ಪರಿಭ್ರಮಣೆ, ತಾರಾ ಪುಂಜ, ಹುಣ್ಣಿಮೆ, ಅಮಾವಾಸ್ಯೆ, ಗ್ರಹಣಗಳ ಕುರಿತು ಜನರಲ್ಲಿ ಮೂಢ ನಂಬಿಕೆಗಳೇ ತುಂಬಿದ್ದವು. ಖಗೋಳ ವಿಜ್ಞಾನಿಗಳು ಕಾಲಕಾಲಕ್ಕೆ ವೈಜ್ಞಾನಿಕ ಸತ್ಯಗಳನ್ನು ಅನಾವರಣ ಮಾಡುತ್ತಾ ಬಂದರು. ಇಂದು ಸಾಕಷ್ಟು ಜನರು ವೈಜ್ಞಾನಿಕ ಮನೋಭಾವ ಹೊಂದಿದ್ದಾರೆ. ಆದರೂ ಈ ಆಧುನಿಕ ಕಾಲಘಟ್ಟದಲ್ಲಿ ಮೌಢ್ಯ ನೆಲೆಸಿರುವುದು ವಿಪರ್ಯಾಸ. ಶಿಕ್ಷಣ, ಸೂಕ್ತ ಅರಿವಿನ ಮೂಲಕ ಜನರಲ್ಲಿ ನಂಬಿಕೆ ಮೂಡಿಸಬೇಕಿದೆ ಎಂದು ಕಿವಿಮಾತು ಹೇಳಿದರು.

ದಲಿತ ಸಂಘರ್ಷ ಸಮಿತಿ ಮುಖಂಡ ಬಿ.ಗೋಪಾಲ್, ಸಮಾಜದಲ್ಲಿ ಮೌಢ್ಯ ಬಿತ್ತುವ ಜೋತಿಷಿಗಳಿಗೆ ಮಾಧ್ಯಮಗಳು ಅವಕಾಶ ನೀಡಬಾರದು. ಅಂತಹ ಕಾರ್ಯಕ್ರಮಗಳ ಪ್ರಸಾರ ನಿಷೇಧಿಸಬೇಕು ಎಂದು ಆಗ್ರಹಿಸಿದರು.

ಸಾವಿರಾರು ವರ್ಷಗಳಿಂದ ದೇವಸ್ಥಾನಗಳಿವೆ. ದಲಿತರಿಗೆ, ಹಿಂದುಳಿದವರಿಗೆ ಅವುಗಳ ಗರ್ಭಗುಡಿಗೆ ಬಿಟ್ಟುಕೊಂಡಿಲ್ಲ. ಜ್ಯೋತಿಬಾ ಫುಲೆ ಅವರು ಮೊದಲ ಬಾರಿಗೆ ದಲಿತರಲ್ಲಿ ಮೂಢ ನಂಬಿಕೆ ವಿರುದ್ಧ ಜಾಗೃತಿ ಮೂಡಿಸಿದರು. ವೈಜ್ಞಾನಿಕ ಚಿಂತನೆಗೆ ಜನರನ್ನು ತೆರೆದುಕೊಳ್ಳುವಂತೆ ಮಾಡಲು ಶಿಕ್ಷಣಕ್ಕೆ ಒತ್ತು ನೀಡಿದರು. ಅಂಬೇಡ್ಕರ್ ಅಂತಹ ಜಾಗೃತಿಯನ್ನು ವಿಸ್ತರಿಸಿದರು ಎಂದು ಸ್ಮರಿಸಿದರು.

ಗ್ರಹಣದ ಸಮಯದಲ್ಲಿ ಜನರಿಗೆ ಹಣ್ಣು, ಆಹಾರ ಹಂಚುವ ಮೂಲಕ ಮೂಢನಂಬಿಕೆ ವಿರುದ್ಧ ಜಾಗೃತಿ ಮೂಡಿಸಿದರು. ಮುಖಂಡರಾದ ಮಾವಳ್ಳಿ ಶಂಕರ್, ನಾಡಗೌಡ, ಪುರುಷೋತ್ತಮದಾಸ್, ನರಸಿಂಹಮೂರ್ತಿ ಮತ್ತಿತರರು ಉಪಸ್ಥಿತರಿದ್ದರು.

ನಗರದಲ್ಲಿ ಮೂಢನಂಬಿಕೆ ವಿರೋಧಿ ಒಕ್ಕೂಟ ಮಂಗಳವಾರ ಹಮ್ಮಿಕೊಂಡಿದ್ದ 'ವೈಜ್ಞಾನಿಕ ಮನೋಧರ್ಮದೊಂದಿಗೆ ಸೂರ್ಯಗ್ರಹಣ' ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದವರು ಆಹಾರ ಸೇವಿಸಿದರು —ಪ್ರಜಾವಾಣಿ ಚಿತ್ರ.

ಸಚಿವರು ಕೆನ್ನೆಗೆ ಹೊಡೆದ ಪ್ರಕರಣ; ದೂರು ದಾಖಲಿಸಿದ ಕೆಂಪಮ್ಮ

ಸಂಘಟನೆಗಳಿಂದ ಮಾನಸಿಕ ಹಿಂಸೆ

ಪ್ರಜಾವಾಣಿ ವಾರ್ತೆ

ಗುಂಡ್ಲುಪೇಟೆ (ಚಾಮರಾಜನಗರ ಜಿಲ್ಲೆ): 'ತಾಲ್ಲೂಕಿನ ಹಂಗಳ ಗ್ರಾಮದಲ್ಲಿ ನಡೆದ ನಿವೇಶನ ಹಂಚಿಕೆ ಕಾರ್ಯಕ್ರಮದಲ್ಲಿ ಸಚಿವ ವಿ.ಸೋಮಣ್ಣ ನನಗೆ ಕೆನ್ನೆಗೆ ಹೊಡೆದಿದ್ದಾರೆ ಎಂಬ ವಿಚಾರವನ್ನಿರಿಸಿಕೊಂಡು ವಿವಿಧ ಸಂಘಟನೆ ಮುಖಂಡರು, ರಾಜಕೀಯ ನಾಯಕರು ಮಾನಸಿಕವಾಗಿ ಹಿಂಸೆ ನೀಡುತ್ತಿದ್ದಾರೆ' ಎಂದು ಸಂತ್ರಸ್ತೆ ಕೆಂಪಮ್ಮ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

'ನಾನು ಕೂಲಿ ಮಾಡಿ ಬದುಕು ನಡೆಸುತ್ತಿದ್ದೇನೆ. ನನ್ನನ್ನು ಮಕ್ಕಳೊಡನೆ ಬದುಕಲು ಬಿಡಿ' ಎಂದು ಹಂಗಳ ಗ್ರಾಮದ ಕೆಂಪಮ್ಮ ಕೋರಿದ್ದು, ರಕ್ಷಣೆ ನೀಡುವಂತೆಯೂ ಮನವಿ ಮಾಡಿದ್ದಾರೆ.

'ಸಚಿವರು ನನಗೆ ಹೊಡೆದಿದ್ದಾರೆ ಎನ್ನುವುದು ಸತ್ಯಕ್ಕೆ ದೂರವಾದುದು. ನನ್ನ ಸಮಸ್ಯೆ ಆಲಿಸಿ ನಿವೇಶನ ನೀಡುತ್ತೇನೆ, ಕಾಲಿಗೆ ಬೀಳಬೇಡ ಸುಮ್ಮನಿರು ಎಂದು ನನ್ನ ಕೈಹಿಡಿದು ಮೇಲೆತ್ತಿದ್ದರು. ಇದನ್ನು ಕೆಲವರು ತಪ್ಪಾಗಿ ಅರ್ಥೈಸಿಕೊಂಡು ಹಿಂಸೆ ನೀಡುತ್ತಿದ್ದಾರೆ. ಮನೆ ಬಳಿ ಬಂದು ನಿನಗೆ ₹ 15 ಲಕ್ಷ ಕೊಡುತ್ತೇವೆ, ಸೋಮಣ್ಣ ಕಪಾಳಕ್ಕೆ ಹೊಡೆದರು ಎಂದು ಪೊಲೀಸ್ ಠಾಣೆಗೆ ದೂರು ನೀಡು ಎಂದು ಕೆಲವರು ಒತ್ತಾಯಿಸುತ್ತಿದ್ದಾರೆ. ಕೆಲ ಸಂಘಟನೆ ಮತ್ತು ರಾಜಕೀಯ ನಾಯಕರಿಂದ ಹಿಂಸೆಯಾಗಿದೆ' ಎಂದು ಕೆಂಪಮ್ಮ ತಿಳಿಸಿದರು.

ಹಂಗಳ ಗ್ರಾಮದ ಕೆಂಪಮ್ಮ ಪೊಲೀಸ್ ಠಾಣೆಗೆ ದೂರು ನೀಡಿದ ಪ್ರತಿಯನ್ನು ಪ್ರದರ್ಶಿಸಿದರು

'ಹಣದ ಆಮಿಷವೊಡ್ಡಿ ಹೇಳಿಕೆ ಕೊಡುವಂತೆ ಪೀಡಿಸಲಾಗುತ್ತಿದೆ. ಈ ಬಗ್ಗೆ ಗುಂಡ್ಲುಪೇಟೆ ಪೊಲೀಸ್ ಠಾಣೆಗೆ ದೂರು ನೀಡಿದ್ದೇನೆ. ಸೂಕ್ತ ರಕ್ಷಣೆ ನೀಡಬೇಕು. ಮಾನಸಿಕವಾಗಿ ಹಿಂಸೆ ನೀಡಿದರೆ ನಾನು ಮತ್ತು ನನ್ನ ಮಕ್ಕಳ ಸಾವಿಗೆ ಸಂಘ–ಸಂಸ್ಥೆಯವರೇ ನೇರ ಹೊಣೆ ಹೊರಬೇಕಾಗುತ್ತದೆ' ಎಂದು ಎಚ್ಚರಿಸಿದರು.

ಪುರಸಭೆ ಅಧ್ಯಕ್ಷ ಪಿ.ಗಿರೀಶ್ ಮಾತನಾಡಿ 'ಹಕ್ಕುಪತ್ರ ವಿತರಣೆ ವೇಳೆ ಅಹಿತಕರ ಘಟನೆ ನಡೆದಿಲ್ಲ. ಆದರೂ ಮಾಧ್ಯಮದಲ್ಲಿ ಸಚಿವರ ವಿರುದ್ಧ ಆರೋಪ ಮಾಡುವ ರೀತಿಯಲ್ಲಿ ಬಿಂಬಿಸಲಾಗಿದೆ. ನಮ್ಮ ಸಮುದಾಯದ ಜನರ ಮೇಲೆ ಹಲ್ಲೆ ನಡೆಸಿದ್ದರೆ ನಾವು ಸುಮ್ಮನಿರುತ್ತಿದ್ದೇವಾ? ನಮಗೆ ನಮ್ಮ ಜನಾಂಗದ ಶ್ರೇಯ ಬಹಳ ಮುಖ್ಯ. ಸೋಮಣ್ಣ ಅವರನ್ನ ರಾಜಕೀಯವಾಗಿ ಮುಗಿಸಲು ರೂಪಿಸಿರುವ ವ್ಯವಸ್ಥಿತ ಪಿತೂರಿಯಾಗಿದೆ' ಎಂದರು.

'ಕೋಟಿ ಕಂಠ ಗಾಯನ– ರಕ್ಷಣೆ ಕೊಡಿ'

ಬೆಂಗಳೂರು: 'ಕನ್ನಡ ರಾಜ್ಯೋತ್ಸವದ ಅಂಗವಾಗಿ ಇದೇ 28ರಂದು ರಾಜ್ಯದಾದ್ಯಂತ ಕೋಟಿ ಕಂಠ ಗಾಯನ ಕಾರ್ಯಕ್ರಮ ನಡೆಯಲಿದ್ದು, ಅಂದು ಬನ್ನೇರುಘಟ್ಟ ಜೈವಿಕ ಉದ್ಯಾನದಲ್ಲಿ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಇದನ್ನು ಹಮ್ಮಿಕೊಳ್ಳ ಲಾಗಿದೆ. 2 ಸಾವಿರ ಮಕ್ಕಳು ಭಾಗ ವಹಿಸುವ ನಿರೀಕ್ಷೆ ಇದೆ. ಭದ್ರತೆ ಮತ್ತು ಇತರ ಅಗತ್ಯ ವ್ಯವಸ್ಥೆಗಳನ್ನು ಮಾಡಬೇಕು' ಎಂದು ಪ್ರಾಧಿಕಾರದ ಅಧ್ಯಕ್ಷ ಸಿ. ಸೋಮಶೇಖರ್ ತಿಳಿಸಿದ್ದಾರೆ.

ನಗರದಲ್ಲಿ ಇಂದು

ಎಲಿಮೆಂಟ್ ಆ್ಯಪ್ ಬಿಡುಗಡೆ: ಬಸವರಾಜ ಬೊಮ್ಮಾಯಿ, ಶ್ರೀ ಶ್ರೀ ರವಿಶಂಕರ ಗುರೂಜಿ, ಆಯೋಜನೆ: ದಿ ಆರ್ಟ್ ಆಫ್ ಲಿವಿಂಗ್, ಸ್ಥಳ: ಆರ್ಟ್ ಆಫ್ ಲಿವಿಂಗ್, ಕನಕಪುರ ರಸ್ತೆ, ಸಂಜೆ 5

ಪರಂಪರಾ ಫೌಂಡೇಷನ್, ಸ್ಥಳ: ಸೇವಾ ಸದನ ಸಭಾಂಗಣ, ಮಲ್ಲೇಶ್ವರ, ಸಂಜೆ 5

ಬೇಂದ್ರೆ ಮತ್ತು ಮಧುರಚೆನ್ನರ ಕಾವ್ಯದ ಕುರಿತು ಉಪನ್ಯಾಸ: ಉಪನ್ಯಾಸಕರು: ಸತ್ಯಮಂಗಲ ಮಹಾದೇವ, ಅತಿಥಿಗಳು: ಎಂ.ಸಿ. ನರೇಂದ್ರ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಆಯೋಜನೆ ಮತ್ತು ಸ್ಥಳ: ಕನ್ನಡ ಯುವಜನ ಸಂಘದ, ಸಭಾಂಗಣ, ಹೊಂಬೇಗೌಡನಗರ, ಸಂಜೆ 6.30

ನಗರದಲ್ಲಿ ನಾಳೆ

'ಫ್ರೋಜನ್ ಮೆಮೊರೀಸ್' ಛಾಯಾಚಿತ್ರ ಪ್ರದರ್ಶನ: ಉದ್ಘಾಟನೆ: ಬಸವರಾಜ ಬೊಮ್ಮಾಯಿ, ಆಯೋಜನೆ: ಫೋಟೊ ಜರ್ನಲಿಸ್ಟ್ಸ್ ಅಸೋಸಿಯೇಷನ್ ಆಫ್ ಬೆಂಗಳೂರು, ಸ್ಥಳ: ಚಿತ್ರಕಲಾ ಪರಿಷತ್ತು, ಬೆಳಿಗ್ಗೆ 11

ಪಿ. ರಾಮಯ್ಯ ಬರೆದಿರುವ 'ನಾನು ಹಿಂದೂ ರಾಮಯ್ಯ' ಕೃತಿ ಬಿಡುಗಡೆ: ಬಸವರಾಜ ಬೊಮ್ಮಾಯಿ, ಅಧ್ಯಕ್ಷತೆ: ವೂಡೇ.ಪಿ ಕೃಷ್ಣ, ಉಪಸ್ಥಿತಿ: ಪಿ. ರಾಮಯ್ಯ, ಕೃತಿ ಕುರಿತು: ಹುಣಸವಾಡಿ ರಾಜನ್, ಪ್ರಾಸ್ತಾವಿಕ ನುಡಿ: ಟಿ. ವೆಂಕಟೇಶ್, ಅತಿಥಿಗಳು: ಸದಾಶಿವ ಶೆಣೈ, ಶಿವಾನಂದ ತಗಡೂರು, ಶ್ರೀಧರ್ ಆರ್., ಆಯೋಜನೆ: ಅಭಿಮಾನಿ ಪ್ರಕಾಶನ, ಸ್ಥಳ: ಮಹಾದೇವ ದೇಸಾಯಿ ಸಭಾಂಗಣ, ಗಾಂಧಿಭವನ, ಬೆಳಿಗ್ಗೆ 10.30

ನಾಟ್ಯ ಪರಂಪರಾ ಉತ್ಸವ–2022: ಭರತನಾಟ್ಯ ಪ್ರಸ್ತುತಿ: ಸಂಧ್ಯಾ ರಾವ್, ಒಡಿಸ್ಸಿ: ಅಖಿಮತಾ ಕುಲಭಿ, ಯುಗಳ ನೃತ್ಯ: ಚೇತನ್ ಮತ್ತು ಚಂದ್ರಪ್ರಭಾ ಗಂಗಟ್ಕಾರ್, ಆಯೋಜನೆ: ಕೂಚಿಪುಡಿ

'ಚಿತ್ರಪಟ' ನಾಟಕ

ಎಚ್.ಎಸ್. ವೆಂಕಟೇಶಮೂರ್ತಿ ಅವರ 'ಚಿತ್ರಪಟ' ನಾಟಕ ಪ್ರದರ್ಶನ: ನಿರ್ದೇಶನ: ಮಂಜುನಾಥ್ ಎಲ್. ಬಡಿಗೇರ್, ಆಯೋಜನೆ: ಸಮಷ್ಟಿ, ಸ್ಥಳ: ರಂಗಶಂಕರ, ಸಂಜೆ 7.30

ಹರಿದಾಸವಾಣಿ: ಪ್ರಸ್ತುತಿ: ಶುಭಮಂಗಳ, ಕೀ–ಬೋರ್ಡ್: ಭುವನ್ ಮತ್ತು ನಂದನ್, ತಬಲಾ: ಶೌರಿ ಶ್ಯಾನುಭಾಗ್, ಆಯೋಜನೆ: ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠ, ಜಯನಗರ 5ನೇ ಬಡಾವಣೆ, ಸಂಜೆ 7.30

ಶುಭಮಂಗಳ

ರೈಲು ಗಾಲಿ ಕಾರ್ಖಾನೆ
ಯಲಹಂಕ, ಬೆಂಗಳೂರು–560064
ವೆಬ್‌ಸೈಟ್: www.rwf.indianrailways.gov.in
ಆಜಾದೀ ಕಾ ಅಮೃತ ಮಹೋತ್ಸವ

ಟೆಂಡರ್ ಸೂಚನೆ ಸಂಖ್ಯೆ. ಆರ್‌ಡಬ್ಲ್ಯೂಎಫ್/ಡಬ್ಲ್ಯೂ/22–23/12 ದಿನಾಂಕ: 21/10/2022

ಇ–ಟೆಂಡರ್: ಭಾರತದ ರಾಷ್ಟ್ರಪತಿಗಳ ಪರವಾಗಿ, ಉಪ ಮುಖ್ಯ ಇಂಜಿನಿಯರ್ ಅವರು ಈ ಕೆಳಗಿನ ಕಾಮಗಾರಿಳಿಗೆ ಎಲೆಕ್ಟ್ರಾನಿಕ್ ಟೆಂಡರ್ ಅನ್ನು ಭಾರತೀಯ ರೈಲ್ವೇ ಇ–ಪೋರ್ಟಲ್ http://www.ireps.gov.in (ಕೆಲಸ) ಮೂಲಕ ಆಹ್ವಾನಿಸಿದ್ದಾರೆ

ಕ್ರ.ಸಂ.	ಟೆಂಡರ್ ನಂಬರ್	ವಿವರ	ಅಂದಾಜು ಮೌಲ್ಯ ರೂ.
1	ಡಬ್ಲ್ಯೂ.496/ಆರ್‌ಡಬ್ಲ್ಯೂಎಫ್/ವೈಎನ್‌ಕೆ/1003	**ಉಪಕಾಮಗಾರಿ–1:** ಎರಡು ವರ್ಷಗಳ ಕಾಲ ಆರ್‌ಡಬ್ಲ್ಯೂಎಫ್ ನ ಪೂರ್ವ ಮತ್ತು ಪಶ್ಚಿಮ ಕಾಲೋನಿಗಳು ಮತ್ತು ಆಡಳಿತಾತ್ಮಕ ಕಟ್ಟಡ ಪ್ರದೇಶಗಳ ಒಳಗೆ ಡ್ರೆಸ್ಸಿಂಗ್, ಡೀವೀಡಿಂಗ್ ಮತ್ತು ಅವಶೇಷಗಳಗಳನ್ನು ತೆರವುಗೊಳಿಸುವುದು **ಉಪಕಾಮಗಾರಿ–2:** ಎರಡು ವರ್ಷಗಳ ಕಾಲ ಆರ್‌ಡಬ್ಲ್ಯೂಎಫ್ ನ ಫ್ಯಾಕ್ಟರಿ ಪ್ರದೇಶದೊಳಗೆ ಡ್ರೆಸ್ಸಿಂಗ್, ಡೀವೀಡಿಂಗ್ ಮತ್ತು ಅವಶೇಷಗಳಗಳನ್ನು ತೆರವುಗೊಳಿಸುವುದು.	55,88,400.00
2	ಡಬ್ಲ್ಯೂ.496/ಆರ್‌ಡಬ್ಲ್ಯೂಎಫ್/ವೈಎನ್‌ಕೆ/1004	ಒಂದು ವರ್ಷದ ಅವಧಿಗೆ ಆರ್‌ಡಬ್ಲ್ಯೂಎಫ್ ನ ಫ್ಯಾಕ್ಟರಿ ಆವರಣದೊಳಗೆ ವಿಶೇಷ ವಲಯ ಕಾಮಗಾರಿಗಳು.	55,45,785.80

ಕೊನೆಯ ದಿನಾಂಕ: & ಸಮಯ 21/11/2022 11:00 ಗಂಟೆ
ಟೆಂಡರ್ ವಿವರಗಳನ್ನು ನಮ್ಮ ವೆಬ್‌ಸೈಟ್ www.rwf.indianrailways.gov.in ನಲ್ಲಿ ನೋಡಬಹುದು.
ಉಪ ಮುಖ್ಯ ಇಂಜಿನಿಯರ್

(ಲೋಕೋಪಯೋಗಿ ಇಲಾಖೆ)
ಕಾರ್ಯಪಾಲಕ ಇಂಜಿನಿಯರ್,
ಚಿಕ್ಕಬಳ್ಳಾಪುರ ವಿಭಾಗ, ಚಿಕ್ಕಬಳ್ಳಾಪುರ

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐ.ಎಫ್.ಟಿ)
ಸಂಖ್ಯೆ: 19/2022–23 ದಿನಾಂಕ: 21.10.2022

(ರಸ್ತೆ ಕಾಮಗಾರಿಗಾಗಿ–ಸ್ಟ್ಯಾಂಡರ್ಡ್ ಬಿಡ್ಡಿಂಗ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ–4ರಂತೆ ದ್ವಿ–ಲಕೋಟೆ ಪದ್ಧತಿಯಲ್ಲಿ)

ಲೊಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ **ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ದ್ವಿ–ಲಕೋಟೆ ಪದ್ಧತಿಯಲ್ಲಿ** ಟೆಂಡರ್‌ಗಳನ್ನು ಕರ್ನಾಟಕ ರಾಜ್ಯಪಾಲರ ಹೆಸರಿನಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 2000ರ ಅನ್ವಯ ಈ ಕೆಳಗೆ ಸಹಿ ಮಾಡಿದವರು ಆಹ್ವಾನಿಸಿರುತ್ತಾರೆ. ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವವರು **ದಿನಾಂಕ: 21.10.2022 ರಿಂದ 22.11.2022ರ ಸಂಜೆ 4.00 ಘಂಟೆಯವರೆಗೆ** ಟೆಂಡರ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ.

(1) ಆಕ್ಷೇಪಣೆ–ಸಂದೇಹ ಮತ್ತು ವಿವರಣೆಗಳಿಗೆ ಕಡೆಯ ದಿನಾಂಕ: **07.11.2022 (ಸಂಜೆ 3.00 ಘಂಟೆಗೆ ಕಛೇರಿ ವೇಳೆಯಲ್ಲಿ)** (2) ಭರ್ತಿಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ಕಡೆಯ **ದಿನಾಂಕ: 22.11.2022 (ಸಂಜೆ 4.00 ಘಂಟೆಯವರೆಗೆ)** (3) ತಾಂತ್ರಿಕ ಬಿಡ್‌ನ್ನು ತೆರೆಯುವ **ದಿನಾಂಕ : 24.11.2022 ಬೆಳಿಗ್ಗೆ 11.00 ಘಂಟೆಗೆ.** (4) ಆರ್ಥಿಕ ಬಿಡ್‌ನ್ನು ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ ನಂತರ ತೆರೆಯಲಾಗುವುದು.. ಹೆಚ್ಚಿನ ಮಾಹಿತಿಗಾಗಿ **www.kpwd.gov.in** ವೆಬ್‌ಸೈಟ್‌ನ್ನು ಸಂಪರ್ಕಿಸಬಹುದು ಅಥವಾ ಕಛೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಲೋ.ಇ. ಚಿಕ್ಕಬಳ್ಳಾಪುರ ವಿಭಾಗ, ಚಿಕ್ಕಬಳ್ಳಾಪುರ

ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ 319/ಎಂ.ಸಿ.ಎ/2022–23

ಕೋವಿಡ್–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ. ಮಾಸ್ಕ್ ಧರಿಸಿ | 6 ಅಡಿ ವ್ಯಕ್ತಿಗಳ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Accounts & Finance

REQUIRED B.COM graduate 5 years experience with drafting knowledge. Contact: pgiriraju@yahoo.com Mob:9448083424

Engg/ Production Technical

REQUIRE: ENGINEERS with Electrical, Mechanical Or equivalent with minimum experience for a Special pumps manufacturing unit. Openings are in Quality, Marketing, Projects, etc. Email- flowoilpumps@hotmail.com

REQUIRED B.E. Civil/ Diploma Civil with 5 years experience. Contact: pgiriraju@yahoo.com Mob:9448083424

Marketing & Sales

WANTED MARKETING EXECUTIVES for Fast Moving Consumer Products all over Karnataka. Contact: 9448041257.

Wanted

SKATING COACH is needed for CHITRAKOOTA SCHOOL at Nagadevanahalli, Kengeri, Bengaluru. CONTACT: 9620650098

Multiple Vacancy

Bangalore Club — the most prestigious club in the city is looking for the following candidates to fill the vacant positions:
Waiters/Bearers — For Food & Beverages service.
Room Boys — For upkeep & cleaning of rooms in the club.
Banquets Co-ordinator — Banquet Office Management
Front Office Executive — Male / Female
Accountant — Knowledge of GST, TDS & Tally
Billiards Marker - Male
INTERESTED CANDIDATES can apply within 15 days, with their updated resume to: hr@bangaloreclub.com or Call: 080 66060000

Part-Time Jobs

MNC CO, Great Opportunity Work from Home, Earn Unlimited, Part/ Full. Time Job: 7019215243/ 9886641282

Teachers/ Professors

Sri Rakum High School
421/I, Sri Krishna Temple Road, Indiranagar 1st stage, Bengaluru-560038
Tel: 080 - 25215705
Email: rakumrakum@yahoo.com
Wanted Science, Maths, English and Social science Teacher, for Primary & High School Students. Female Teacher - Rs.15000- 20000

WANTED ENGLISH & Social Teachers for Primary School Sagar Convent Kanakapura Main Bangalore 82 Near APS Engineering College Good Salary: 9342552428

yes We are hiring Teachers For Primary • High School
Calling dynamic and passionate teachers to the Prarthana Kutumba.
High School teachers for **English and Social Sciences** will be given first preference.
Walk in Interview for English Medium Teachers on **November 5th, Saturday from 1pm - 5pm**
Email your resume pesschool@gmail.com
Call Us: 080 26790625 080 26693416 080 26393321
prarthana SCHOOL
No. 17/17A, Near Kadarenahalli Petrol Bunk, BSK II Stage Padmanabhanagar, Bangalore 560070.

Dr. Sri. Sri. Sri. Shivakumara Mahaswamy College of Engineering & Polytechnic
(Affiliated to VTU, Belgaum & Approved by AICTE, New Delhi)
Byranayakanahalli, Nelamangala Taluk, Bangalore Rural District - 562 132
Website: www.drsmce.org Email: recruitdrsmce2211@gmail.com
Faculty Positions For Engineering & Polytechnic
Applications are invited for the posts of Professors, Associate Professors and Asst. Professors in the following Disciplines..
- Computer Science & Engineering.
- Information Science & Engineering
- Civil Engineering.
- Electronics & Communication Engineering
- Mechanical engineering.
- Electrical & Electronics Engineering
- Basic Science department: Physics, Chemistry and Mathematics.
- MBA (Marketing , Finance, HR)
- Physical Education Director
- Librarian and Asst. Librarian

Non Teaching Posts
- FDA , SDA, Accountant
- Typists (Kannada &English)
- Wardens : Boys Hostel & Girls Hostel
- Receptionist, Drivers
- Foremen, Instructors and Attenders in the above Departments

Qualification and Pay Scale: As per AICTE norms
Note : For the posts of Professor & Associate Professor, candidates having Ph.D are only eligible. Apply Via email and hard copy so as to reach before 7days from the date of advertisement along with your detailed CV & supporting documents.
Dr. H.D. Ramesh, Principal 98806 58861 — Sri D.C. Venugopal Chairman

Change of Name

I, DANY @ OLLAKANGAL DANIE JOSEPH S/o. Joseph Thomas Ollakangal, R/at near Hanuman Temple M.G. Road, Upper Khopoli Khopoli Power House, Raigarh, Maharashtra- 410204, declare that both the names pertain to me and henceforth I shall be known as OLLAKANGAL DANIE JOSEPH vide affidavit dated 25/10/2022, before notary B.M. Chandrashekar, Bengaluru.

I, SANSKRITI D/o Sanjoy Chakraborty residing at #C-1, 3803, Brigade Meadows, Opp. Anjeneya Temple, Udayapura post, Kanakapura road, Bangalore-560082 have changed my name from SANSKRITI CHAKRABORTY to SANSKRITI vide affidavit dated 21/10/2022 before notary Neha Baddi, Bengaluru

I, MAMTA KATARI W/o J.Vicky Kumar residing at No.5-6, 1st Cross, Ramakka Block, Mudamma Garden, Benson Town Post, Bangalore-560046 have changed my name to MAMTA KATARIA affidavit dated 25.10.2022 before notary, K.P Ramesh, Bangalore.

I, NEELAVVA M/o No.15516174Y Rank: Swr.Manjunath Hamminni residing at Nabapur, Khanagaon, Tehsil Gokak, District Belgaum, Karnataka have changed my name from NEELAVVA to NEELAVVA HAMMINNI vide affidavit dated 25.10.2022 before notary B.A.Chachadi, Bangalore.

I, USHA DEVI BHASKAR PILLAI aged about 70 years D/o. Late. Kurunthotathil Gopal Pillai, and Spouse of Mulamootil Krishna Bhaskaran Pillai aged about 82 years, Permanent resident at Flat No. SF 6, Saikuteera Apts, No.1348, Chikkalasandra Subramanyapura P.O., Bengaluru- 560061 Karnataka hereby declare that I have changed my name to KURUNTHOTATHIL GOPAL USHADEVI as per my name in Aadhaar & PAN card vide affidavit dated 19/10/2022 before advocate & notary B.K.R. Krishnamurthy Bangalore.

I, ABILASH B NAIK @ ABHILASH B NAIK Residing at Bidarahalli Hobli, Hirandahalli, Virgonagar (P) Bengaluru- 560049, declare that both the names pertain to me and henceforth I shall be known as ABHILASH B NAIK vide affidavit dated 25/10/2022, before notary Rajanna. S.M., Bengaluru.

REAL ESTATE SELLING

Sites

Anjanapura

SITE AT Anjanapura 2nd Block, BDA Site 20x30 East facing Opposite Park Rate 46,00,000/- Contact: 7975986215, 9036679431.

Jayanagar

OWNER LISTED 45x90 premium plot with house Jayanagar 4th T block for sale 9845154982

NRI'S INVESTMENT And Finance Available On Low Interest Against Properties,Land& Building,Sites,Flats, Converted & Agriculture Lands Call:7411265189

BUSINESS

Business Offers

Finance

WE ARRANGE Finance from Financial institutions such as Term, Project loan Working capital Housing and Mortgage loan. Contact S Narayan Retd Banker. 8971377299/ 8971132289.

PERSONAL

Lost

LOST OF DOCUMENTS
I, Meenakshi, R/at. #116, Doddanekkundi Post Office Road, Marathahalli, Blr- 37. Have lost my Original Sale Deed of Document No: 11736/ 2001- 2006. Finders pls. contact: 9740939663 or inform nearby the Police Station.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

DH ಪ್ರಜಾವಾಣಿ
Wishes you all Readers & Advertisers a very Happy & Deepavali Festival

For Advertisement Booking contact
Ph: 98862 13331 / 98451 14560

‘ಈ ಹೊತ್ತಿಗೆ ಪ್ರಶಸ್ತಿ’ಗಾಗಿ ಸಂಕಲನಗಳ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 2023ರ ಸಾಲಿನ ‘ಈ ಹೊತ್ತಿಗೆ ಪ್ರಶಸ್ತಿ’ಗಾಗಿ ಕನ್ನಡದ ಅಪ್ರಕಟಿತ ಕಥಾ ಸಂಕಲನಗಳನ್ನು ಮತ್ತು ಅಪ್ರಕಟಿತ ಕವನ ಸಂಕಲನಗಳನ್ನು ಆಹ್ವಾನಿಸಲಾಗಿದೆ.

ವಿಜೇತ ಕಥಾ ಸಂಕಲನ ಮತ್ತು ಕವನ ಸಂಕಲನಕ್ಕೆ ತಲಾ ₹10,000 (ಹತ್ತು ಸಾವಿರ) ನಗದು ಬಹುಮಾನ ಮತ್ತು ಪ್ರಶಸ್ತಿ ಫಲಕ ನೀಡಲಾಗುವುದು ಎಂದು ‘ಈ ಹೊತ್ತಿಗೆ’ ಟ್ರಸ್ಟ್‌ನ ಸಂಚಾಲಕಿ ಜಯಲಕ್ಷ್ಮಿ ಪಾಟೀಲ್ ತಿಳಿಸಿದ್ದಾರೆ.

ಕಥೆಗಳು/ಕವನಗಳು ಸ್ವತಂತ್ರವಾಗಿರಬೇಕು. ಅನುವಾದ ಆಗಿರಬಾರದು. ಕಥಾ ಸಂಕಲನವು 8ರಿಂದ 10 ಕಥೆಗಳನ್ನು ಒಳಗೊಂಡಿರಬೇಕು. ಕವನ ಸಂಕಲನವು 35-40 ಕವನಗಳನ್ನು ಒಳಗೊಂಡಿರಬೇಕು. ಕಂಪ್ಯೂಟರಿನಲ್ಲಿ ಟೈಪ್ ಮಾಡಿ, ಪ್ರಿಂಟ್ ತೆಗೆಸಿ ಬೈಂಡ್ ಮಾಡಿದ ಸಂಕಲನದ ಮೂರು ಪ್ರತಿಗಳನ್ನು ಕಳುಹಿಸಿಕೊಡಬೇಕು. ಕವಿಗಳು / ಕಥೆಗಾರರು ಪ್ರತ್ಯೇಕ ಹಾಳೆಯಲ್ಲಿ ತಮ್ಮ ಹೆಸರು, ಸಂಕಲನದ ಹೆಸರು, ಸಂಪೂರ್ಣ ವಿಳಾಸ, ಮೊಬೈಲ್ ಸಂಖ್ಯೆಯನ್ನು ಬರೆದಿರಬೇಕು. ಸಂಕಲನದ ಯಾವುದೇ ಪುಟಗಳಲ್ಲಿ ಲೇಖಕರ ಹೆಸರು ಇರಕೂಡದು.

ಪ್ರಶಸ್ತಿ ಘೋಷಣೆಯಾದ 30 ದಿನಗಳಲ್ಲಿ ಪ್ರಶಸ್ತಿ ಪಡೆದ ಸಂಕಲನವು ಮುದ್ರಣಗೊಳ್ಳಬೇಕು. ಕೃತಿ ಮುದ್ರಣಗೊಂಡರೆ ಮಾತ್ರ ಬಹುಮಾನದ ಮೊತ್ತ ಹಾಗೂ ಪ್ರಶಸ್ತಿ ಫಲಕವು ‘ಈ ಹೊತ್ತಿಗೆ’ಯ ಹೊನಲು ಸಮಾರಂಭದಲ್ಲಿ ಸಲ್ಲುತ್ತದೆ. ಕಥಾ ಸಂಕಲನ, ಕವನ ಸಂಕಲನ ತಲುಪಿಸಲು ಕೊನೆಯ ದಿನಾಂಕ : 25 ನವೆಂಬರ್ 2022.

ವಿಳಾಸ: ಈ ಹೊತ್ತಿಗೆ, #65, ಮುಗುಳ್ನಗೆ, 3ನೇಯ ಅಡ್ಡರಸ್ತೆ, ಪಿ.ಎನ್.ಬಿ. ನಗರ, ಕೋಣನಕುಂಟೆ, ಬೆಂಗಳೂರು – 560062, ಸಂಪರ್ಕ ಸಂಖ್ಯೆ: 9611782621

ಸಂಕ್ಷಿಪ್ತ ಸುದ್ದಿ

ಎನ್‌ಇಪಿ ಪ್ರಶ್ನೆಪತ್ರಿಕೆ ಸೋರಿಕೆ

ಕೋಲಾರ: ಬೆಂಗಳೂರು ಉತ್ತರ ವಿಶ್ವವಿದ್ಯಾಲಯ ವ್ಯಾಪ್ತಿಯ ಪದವಿ ಕಾಲೇಜುಗಳಲ್ಲಿ ನಡೆಯುತ್ತಿರುವ ಎನ್‌ಇಪಿ ಎರಡನೇ ಸೆಮಿಸ್ಟರ್ ಪರೀಕ್ಷೆಯ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿರುವ ಬಗ್ಗೆ ವಿದ್ಯಾರ್ಥಿಗಳು, ಅಧ್ಯಾಪಕರು ದೂರಿದ್ದಾರೆ.

ಮಂಗಳವಾರ ಮಧ್ಯಾಹ್ನ ಬಿ.ಕಾಂ ಪದವಿಯ ಪರಿಸರ ಅಧ್ಯಯನ (ಎನ್ವಿರಾನ್ಮೆಂಟಲ್ ಸ್ಟಡೀಸ್) ಪರೀಕ್ಷೆ ನಡೆದಿದೆ. ಆದರೆ, ಈ ಪತ್ರಿಕೆ ಬೆಳಿಗ್ಗೆಯೇ ಸೋರಿಕೆ ಆಗಿದೆ. ವಾಟ್ಸ್‌ಆ್ಯಪ್‌ನಲ್ಲಿ ಹರಿದಾಡುತ್ತಿತ್ತು ಎಂದು ವಿದ್ಯಾರ್ಥಿಗಳು ಹಾಗೂ ಅಧ್ಯಾಪಕರು ಹೇಳಿದರು.

ಮಲಬಾರ್ ಗೋಲ್ಡ್ ಮಳಿಗೆ ಉದ್ಘಾಟನೆ

ಬೆಂಗಳೂರು: ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್ ಕಂಪನಿಯು ನಗರದ ಯಲಹಂಕದಲ್ಲಿ ಹೊಸ ಮಳಿಗೆಯನ್ನು ಆರಂಭಿಸಿದೆ. ಇದು ಕಂಪನಿಯು ಬೆಂಗಳೂರಿನಲ್ಲಿ ಆರಂಭಿಸಿರುವ 13ನೆಯ ಮಳಿಗೆ, ರಾಜ್ಯದಲ್ಲಿನ 29ನೆಯ ಮಳಿಗೆ.

ಯಲಹಂಕ ಶಾಸಕ ಎಸ್. ಆರ್. ವಿಶ್ವನಾಥ್ ಅವರು ಮಳಿಗೆ ಉದ್ಘಾಟಿಸಿದರು. ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಅಶರ್ ಒ. ಮತ್ತು ಕಂಪನಿಯ ಪ್ರಮುಖರು ಈ ಸಂದರ್ಭದಲ್ಲಿ ಹಾಜರಿದ್ದರು ಎಂದು ಪ್ರಕಟಣೆ ತಿಳಿಸಿದೆ.

‘ಯಲಹಂಕ ಭಾಗದ ಗ್ರಾಹಕರಿಗೆ ಹೊಸ ಮಳಿಗೆಯ ಸೇವೆಯನ್ನು ಒದಗಿಸಲು ಸಂತಸವಾಗುತ್ತಿದೆ. ಗ್ರಾಹಕರ ಬೆಂಬಲವು ನಮಗೆ ಬೆಳೆಯಲು ಮತ್ತು ಸೇವೆಗಳನ್ನು ಸುಧಾರಿಸಿಕೊಳ್ಳಲು ನೆರವಾಗಿದೆ’ ಎಂದು ಕಂಪನಿಯ ಅಧ್ಯಕ್ಷ ಎಂ.ಪಿ. ಅಹಮದ್ ಹೇಳಿದ್ದಾರೆ.

‘ಜನಸಂಪರ್ಕ ಯಾತ್ರೆಯಲ್ಲ, ಆಂದೋಲನ’

ಬೆಂಗಳೂರು: ‘ರಾಹುಲ್ ಗಾಂಧಿ ನೇತೃತ್ವದಲ್ಲಿ ನಡೆಯುತ್ತಿರುವ ಭಾರತ್ ಜೋಡೊ ಕೇವಲ ಜನ ಸಂಪರ್ಕ ಯಾತ್ರೆಯಲ್ಲ; ಆಂದೋಲನ. ಬೆಲೆ ಏರಿಕೆ, ರೈತರ ಸಮಸ್ಯೆ, ಭ್ರಷ್ಟಾಚಾರ, ನಿರುದ್ಯೋಗ, ಕೋಮು ದ್ವೇಷದ ವಿರುದ್ಧದ ಈ ನಡಿಗೆ ಹಳ್ಳಿ, ಹಳ್ಳಿಯಲ್ಲೂ ಜನರ ಮನ ಮುಟ್ಟಿದೆ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅವರು, ‘ಜನಸಾಮಾನ್ಯರ ಬಳಿಗೆ ಹೋಗಿ ಅವರ ನೋವು ನೇರವಾಗಿ ಆಲಿಸಿರುವ ಏಕೈಕ ನಾಯಕ ರಾಹುಲ್ ಗಾಂಧಿ’ ಎಂದು ಬಣ್ಣಿಸಿದರು.

ಯಾತ್ರೆಯ ಅನುಭವ ಹಂಚಿಕೊಂಡ ಅವರು, ‘ಇಂದಿರಾ ಗಾಂಧಿ ಅವರನ್ನು ನೋಡಲು ಜನ ಹೇಗೆ ನೂಕುನುಗ್ಗಲು ಮಾಡಿಕೊಂಡು ಬರುತ್ತಿದ್ದರೊ, ಅದೇ ರೀತಿ ರಾಹುಲ್ ಗಾಂಧಿ ಅವರನ್ನು ನೋಡಲು ನೂರಾರು ಕಿ. ಮೀ ದೂರದಿಂದ ಮಕ್ಕಳು ತಮ್ಮ ಪೋಷಕರ ಜತೆ ಬಂದಿದ್ದರು’ ಎಂದರು.

ಇಂಡಿಯಾ ಲೇಬರ್ ಲೈನ್ ಸಹಾಯವಾಣಿಗೆ 1,250 ದೂರು • ಕೋವಿಡ್ ಬಳಿಕ ಸಮಸ್ಯೆ ಹೆಚ್ಚಳ

ಕಾರ್ಮಿಕರಿಗೆ ವೇತನ, ಕೂಲಿ ವಂಚನೆ

• ವರುಣ ಹೆಗಡೆ

ಸಾಂದರ್ಭಿಕ ಚಿತ್ರ

ಬೆಂಗಳೂರು: ಕೋವಿಡ್ ಕಾಣಿಸಿಕೊಂಡ ಬಳಿಕ ನಗರದಲ್ಲಿ ಕಾರ್ಮಿಕರಿಗೆ ವೇತನ, ಕೂಲಿ ವಂಚನೆ ಪ್ರಕರಣಗಳು ಹೆಚ್ಚಾಗಿದ್ದು, ಕಳೆದ 15 ತಿಂಗಳಲ್ಲಿ 1,250 ಪ್ರಕರಣಗಳು ‘ಇಂಡಿಯಾ ಲೇಬರ್ ಲೈನ್’ ಸಹಾಯವಾಣಿ ಮೂಲಕ ದಾಖಲಾಗಿದೆ.

ಕಾರ್ಮಿಕರ ಸಮಸ್ಯೆಗಳಿಗೆ ಪರಿಹಾರ ಒದಗಿಸಲು ವರ್ಕಿಂಗ್ ಪೀಪಲ್ಸ್ ಚಾರ್ಟರ್ (ಡಬ್ಲ್ಯುಪಿಸಿ) ಮತ್ತು ಆಜೀವಿಕ ಬ್ಯೂರೊ ಸಂಸ್ಥೆ ಜಂಟಿಯಾಗಿ ಸಹಾಯವಾಣಿ ಪ್ರಾರಂಭಿಸಿವೆ. ಈ ಸಹಾಯವಾಣಿಗೆ ಕರೆ ಮಾಡಿದವರಲ್ಲಿ ಹೆಚ್ಚಿನವರು ಮಾಲೀಕರ ವರ್ತನೆ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿ, ವೇತನ ಕೊಡಿಸುವಂತೆ ಮನವಿ ಮಾಡಿಕೊಂಡಿದ್ದಾರೆ. 2020ರ ಮಾರ್ಚ್‌ನಲ್ಲಿ ಕೋವಿಡ್ ಕಾಣಿಸಿಕೊಂಡ ಬಳಿಕ ತಮ್ಮ ಊರುಗಳಿಗೆ ಮರಳಿದ್ದ ಕಾರ್ಮಿಕರು, ಕೋವಿಡ್ ಪ್ರಕರಣಗಳ ಸಂಖ್ಯೆ ಇಳಿಕೆ ಹಾಗೂ ನಿರ್ಬಂಧಗಳ ತೆರವಿನಿಂದಾಗಿ ಪುನಃ ಕೆಲಸವನ್ನು ಅರಸಿ ಬೆಂಗಳೂರಿಗೆ ಬರುತ್ತಿದ್ದಾರೆ.

ಡಬ್ಲ್ಯುಪಿಸಿ 2021ರ ಜುಲೈನಲ್ಲಿ ಈ ಸಹಾಯವಾಣಿ ಪ್ರಾರಂಭಿಸಿದೆ. ಇದನ್ನು ಸಂಸ್ಥೆಯು ಪ್ರಾಜೆಕ್ಟ್ ರೂಪದಲ್ಲಿ ಕಾರ್ಯಗತ ಮಾಡಿದ್ದು, ಮುಂದಿನ ದಿನಗಳಲ್ಲಿ ಮಹಾನಗರಗಳಿಗೂ ವಿಸ್ತರಿಸಲು ಕಾರ್ಯಯೋಜನೆ ರೂಪಿಸಿದೆ.

‘ಚಾಮರಾಜನಗರದ 32 ವರ್ಷದ ಕಾರ್ಮಿಕರೊಬ್ಬರು ಕಳೆದ ಮಾರ್ಚ್‌ನಲ್ಲಿ ನಿರ್ಮಾಣ ಹಂತದ ಮೂರು ಅಂತಸ್ತಿನ ಕಟ್ಟಡದ ಮೇಲಿಂದ ಬಿದ್ದು, ಮೃತಪಟ್ಟಿದ್ದರು. ಕಟ್ಟಡವು ರಾಜಕಾರಣಿಯ ಮೊಮ್ಮಗನಿಗೆ ಸೇರಿತ್ತು. ಇದರಿಂದಾಗಿ ಪ್ರಕರಣ ಮುಚ್ಚಿಹಾಕುವ ಪ್ರಯತ್ನಗಳು ನಡೆದಿದ್ದವು. ಸಹ ಕಾರ್ಮಿಕರೊಬ್ಬರು ಇಂಡಿಯಾ ಲೇಬರ್ ಲೈನ್ ಸಹಾಯವಾಣಿಗೆ ದೂರು ನೀಡಿದ್ದರಿಂದ ಸ್ಥಳಕ್ಕೆ ತೆರಳಿ ವಿಚಾರಣೆ ನಡೆಸಲಾಯಿತು. ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿ, ಕುಟುಂಬಕ್ಕೆ ಪರಿಹಾರ ಒದಗಿಸಲು ಆಗ್ರಹಿಸಲಾಯಿತು. ಅಂತಿಮವಾಗಿ ₹ 14.50 ಲಕ್ಷ ಪರಿಹಾರ ಅವರ ಕುಟುಂಬಕ್ಕೆ ದೊರೆಯಿತು. ಇದೇ ರೀತಿ ಹಲವು ಪ್ರಕರಣಗಳಲ್ಲಿ ನ್ಯಾಯ ಒದಗಿಸಿದ್ದೇವೆ’ ಎಂದು ಸಹಾಯವಾಣಿಯ ರಾಜ್ಯ ಸಂಯೋಜಕ ಮುನಿರಾಜು ಟಿ. ತಿಳಿಸಿದರು.

ಪ್ರಕರಣ ಹೆಚ್ಚಳ: ಭವಿಷ್ಯ ನಿಧಿ (ಪಿಎಫ್) ಮತ್ತು ಗ್ರಾಚ್ಯುಟಿ ಸಮಸ್ಯೆ, ವೇತನ ತಾರತಮ್ಯ, ಕೆಲಸದ ಸ್ಥಳದಲ್ಲಿ ಹಿಂಸೆ, ಅಧಿಕ ಅವಧಿ ದುಡಿಮೆ, ಅಪಘಾತ ಪರಿಹಾರ ನಿರಾಕರಣೆ ಹಾಗೂ ವೇತನ ವಿಳಂಬದ ಬಗ್ಗೆ ಹೆಚ್ಚಿನ ಕಾರ್ಮಿಕರು ಸಹಾಯವಾಣಿ ಸಂಪರ್ಕಿಸಿದ್ದಾರೆ. ಪ್ರತಿನಿತ್ಯ 15ರಿಂದ 20 ಮಂದಿ ಸಹಾಯವಾಣಿಗೆ ದೂರು ಸಲ್ಲಿಸುತ್ತಿದ್ದಾರೆ.

‘ಸಹಾಯವಾಣಿಗೆ ಬರುವ ಕರೆಗಳ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಳವಾಗುತ್ತಿದೆ. ಕಾನೂನು ನೆರವು ಸೇರಿ ಎಲ್ಲ ರೀತಿಯ ನೆರವನ್ನು ಒದಗಿಸಿ, ಕಾರ್ಮಿಕರಿಗೆ ನ್ಯಾಯ ಒದಗಿಸಲು ನಾವು ಶ್ರಮಿಸುತ್ತಿದ್ದೇವೆ. ಸರ್ಕಾರಿ ಯೋಜನೆಗಳ ಬಗ್ಗೆ ಮಾಹಿತಿಯನ್ನೂ ಒದಗಿಸಲಾಗುತ್ತದೆ’ ಎಂದು ಮುನಿರಾಜು ಹೇಳಿದರು.

ಯಾರೆಲ್ಲ ಕರೆ ಮಾಡಬಹುದು?

‘ಅಸಂಘಟಿತ ವಲಯಗಳಾದ ಕಟ್ಟಡ ಮತ್ತು ಇತರೆ ನಿರ್ಮಾಣ ಕ್ಷೇತ್ರ, ಮನೆ ಕೆಲಸ, ಸ್ವಚ್ಛತೆ, ಗಾರ್ಮೆಂಟ್ಸ್, ಸಣ್ಣ ಕೈಗಾರಿಕೆಗಳು, ಕಾರ್ಖಾನೆಗಳು, ಭದ್ರತೆ, ಸೇವಾ ವಲಯಗಳಾದ ನರ್ಸಿಂಗ್, ಹೋಮ್ ನರ್ಸಿಂಗ್ ಹಾಗೂ ಇನ್ನಿತರೆ ಅಸಂಘಟಿತ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವವರು ಈ ಸಹಾಯವಾಣಿಗೆ ಕರೆ ಮಾಡಬಹುದು. ಸೋಮವಾರದಿಂದ ಶನಿವಾರದವರೆಗೆ ಬೆಳಿಗ್ಗೆ 10ರಿಂದ ಸಂಜೆ 6ರವರೆಗೆ ಸಹಾಯವಾಣಿ ಸಕ್ರಿಯವಾಗಿ ಇರಲಿದೆ. ಬೇರೆ ಅವಧಿಯಲ್ಲಿ ಕರೆ ಮಾಡಿದರೂ, ಕಾರ್ಯಾವಧಿಯಲ್ಲಿ ಸಂಪರ್ಕಿಸಲಾಗುತ್ತದೆ’ ಎಂದು ಮುನಿರಾಜು ಟಿ. ತಿಳಿಸಿದರು.

ಉಚಿತ ಸಹಾಯವಾಣಿ ಸಂಖ್ಯೆ: 18008339020

400 ಪ್ರಕರಣಗಳು ಇತ್ಯರ್ಥ

ನಗರದಲ್ಲಿ ನೆಲೆಸಿರುವ ಕಾರ್ಮಿಕರಲ್ಲಿ ಉತ್ತರ ಭಾರತ ಹಾಗೂ ಉತ್ತರ ಕರ್ನಾಟಕ ಭಾಗದ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ಸಹಾಯವಾಣಿಗೆ ಕರೆ ಮಾಡಿ, ಸಮಸ್ಯೆ ಹೇಳಿಕೊಂಡಿದ್ದಾರೆ. ದಾಖಲಾಗಿದ್ದ ದೂರುಗಳಲ್ಲಿ 400 ಪ್ರಕರಣಗಳನ್ನು ಈಗಾಗಲೇ ಇತ್ಯರ್ಥಗೊಳಿಸಲಾಗಿದೆ. ಇದರಿಂದಾಗಿ ಸುಮಾರು ₹ 92 ಲಕ್ಷದಷ್ಟು ವಂಚನೆ ಮೊತ್ತವನ್ನು ಕಾರ್ಮಿಕರಿಗೆ ಹಿಂದಿರುಗಿಸಲಾಗಿದೆ.

ಸುದ್ದಿ 2 ನಿಮಿಷ

ಕೃಷಿ ಮೇಳ: ಪ್ರೋಮೊ ಬಿಡುಗಡೆ

ಬೆಂಗಳೂರು: ಬೆಂಗಳೂರು ಕೃಷಿ ವಿಶ್ವವಿದ್ಯಾಲಯ (ಜಿಕೆವಿಕೆ) ನ.3 ರಿಂದ ನ.6ರ ವರೆಗೆ ತನ್ನ ಕೇಂದ್ರದಲ್ಲಿ ಹಮ್ಮಿಕೊಂಡಿರುವ ಕೃಷಿ ಮೇಳದ ಪ್ರೋಮೊ ಬಿಡುಗಡೆಯಾಗಿದ್ದು, ಚಲನಚಿತ್ರ ನಟ ವಿಜಯ್ ರಾಘವೇಂದ್ರ ಹಾಗೂ ನಟಿ ಹರ್ಷಿಕಾ ಪೂಣಚ್ಚ ಪ್ರೋಮೊದಲ್ಲಿ ಕಾಣಿಸಿಕೊಂಡಿದ್ದಾರೆ.

ವಿವಿಯ ಕುಲಪತಿ ಡಾ.ಕೆ.ಸಿ. ನಾರಾಯಣಸ್ವಾಮಿ ಅವರು ನಗರದಲ್ಲಿ ಮಂಗಳವಾರ ಪ್ರೋಮೊ ಬಿಡುಗಡೆ ಮಾಡಿದರು. 1.11 ನಿಮಿಷದ ಪ್ರೋಮೊದಲ್ಲಿ, ಮೇಳಕ್ಕೆ ಆಹ್ವಾನ ನೀಡಲಾಗಿದೆ.

‘ಕೃಷಿ ಮತ್ತು ಕೃಷಿಕರ ಬಗ್ಗೆ ವಿಜಯ್ ರಾಘವೇಂದ್ರ ಹಾಗೂ ಹರ್ಷಿಕಾ ಪೂಣಚ್ಚ ವಿಶೇಷ ಆಸಕ್ತಿ ಹೊಂದಿದ್ದಾರೆ. ಅವರ ಮನವಿಯಿಂದಾಗಿ ಈ ಬಾರಿ ಕೃಷಿ ಮೇಳಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಜನರು ಭಾಗವಹಿಸುವ ನಿರೀಕ್ಷೆಯಿದೆ’ ಎಂದು ಡಾ.ಕೆ.ಸಿ. ನಾರಾಯಣಸ್ವಾಮಿ ಹೇಳಿದರು.

‘ಸಮಾಜದ ಗಣ್ಯವ್ಯಕ್ತಿಗಳು ಕೃಷಿ ಮತ್ತು ಕೃಷಿಕರ ಬಗ್ಗೆ ಮೆಚ್ಚುಗೆಯ ಮಾತನಾಡಿ, ಕೃಷಿಪರ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದರೆ ಹೆಚ್ಚಿನ ಸಂಖ್ಯೆಯಲ್ಲಿ ಯುವಕರು ಕೃಷಿಯತ್ತ ಒಲವು ತೋರುತ್ತಾರೆ’ ಎಂದು ತಿಳಿಸಿದರು.

ರಸ್ತೆ ದುರಸ್ತಿಗೆ ಆಗ್ರಹಿಸಿ ಪ್ರತಿಭಟನೆ

ಕೆ.ಆರ್.ಪುರ: ಮಹದೇವಪುರ ಕ್ಷೇತ್ರದ ಬಿ.ನಾಗಸಂದ್ರ ಮತ್ತು ಚಲ್ಲಗಟ್ಟದ ಮುಖ್ಯರಸ್ತೆ ಹದಗೆಟ್ಟಿದ್ದು, ದುರಸ್ತಿಪಡಿಸುವಂತೆ ಒತ್ತಾಯಿಸಿ ಗ್ರಾಮಸ್ಥರು ಗುದ್ದಲಿ, ಸನಿಕೆ, ಬುಟ್ಟಿ ಹಿಡಿದು ಪ್ರತಿಭಟನೆ ನಡೆಸಿದರು.

ಜೆಡಿಎಸ್ ಮುಖಂಡ ರವಿಪ್ರಕಾಶ್ ಮಾತನಾಡಿ, ‘ಆರು ತಿಂಗಳಿಂದ ಬಿ.ನಾಗಸಂದ್ರ ಮತ್ತು ಚಲ್ಲಗಟ್ಟ ಮುಖ್ಯರಸ್ತೆ ಸಂಪೂರ್ಣ ಹಾಳಾಗಿದೆ. ಅಗೆದ ರಸ್ತೆಗಳನ್ನು ಹಾಗೆಯೇ ಬಿಟ್ಟಿದ್ದರಿಂದ ಮತ್ತು ರಸ್ತೆ ತುಂಬೆಲ್ಲ ಗುಂಡಿಗಳು ನಿರ್ಮಾಣವಾಗಿರುವುದರಿಂದ ಸಂಚರಿಸಲು ಹರಸಾಹಸಪಡಬೇಕಾಗಿದೆ. ಹಲವು ಬಾರಿ ಅಧಿಕಾರಿಗಳ ಗಮನಕ್ಕೆ ತರಲಾಗಿದೆ. ಆದರೂ ಯಾವೊಬ್ಬ ಅಧಿಕಾರಿಯೂ ತಲೆಕೆಡಿಸಿಕೊಂಡಿಲ್ಲ’ ಎಂದು ದೂರಿದರು.

‘ಬಿ.ನಾಗಸಂದ್ರ ಮತ್ತು ಚಲ್ಲಗಟ್ಟ ಮಾತ್ರವಲ್ಲದೆ ಮಹದೇವಪುರ ಕ್ಷೇತ್ರದ ಎಲ್ಲಾ ಕಡೆ ಇದೇ ಅವ್ಯವಸ್ಥೆಯಾಗಿದೆ. ಊರಿನ ಜನರ ಸಹಕಾರದೊಂದಿಗೆ ಸ್ವಂತ ಹಣದಿಂದ ಅರ್ಧ ಕಿಮೀ ರಸ್ತೆ ದುರಸ್ತಿಪಡಿಸಲು ನಿರ್ಧಾರ ಕೈಗೊಳ್ಳಲಾಗಿದೆ. 200 ಜನರ ತಂಡ ಕಟ್ಟಿಕೊಂಡು ಎಲ್ಲೆಲ್ಲಿ ಸಮಸ್ಯೆ ಹೆಚ್ಚಾಗಿದೆ ಅಲ್ಲಿ ಜಲ್ಲಿ ಸುರಿದು ಹದಗೆಟ್ಟ ರಸ್ತೆಯನ್ನು ದುರಸ್ತಿ ಕಾರ್ಯ ಹಾಗೂ ರಸ್ತೆಯಲ್ಲಿ ಬಿದ್ದ ಗುಂಡಿಗಳನ್ನು ಮುಚ್ಚುವ ಕಾರ್ಯ ಮಾಡುತ್ತೇವೆ’ ಎಂದರು.

ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಅರಳಿ ನಾಗರಾಜ್, ಕಸಾಪ ಗೌರವ ಕಾರ್ಯದರ್ಶಿ ನೇ.ಭ. ರಾಮಲಿಂಗಶೆಟ್ಟಿ, ಅಧ್ಯಕ್ಷ ಮಹೇಶ ಜೋಶಿ, ಪ್ರೊ. ಚಂದ್ರಶೇಖರ ಉಷಾಲ, ಪ್ರೊ. ಅಬ್ದುಲ್ ಬಷೀರ್ ಮತ್ತು ಪರಿಷತ್ತಿನ ಗೌರವ ಕೋಶಾಧ್ಯಕ್ಷ ಬಿ.ಎಂ. ಪಟೇಲ್‌ಪಾಂಡು ಅವರು ಸರ್ ಮಿರ್ಜಾ ಇಸ್ಮಾಯಿಲ್ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು. – ಪ್ರಜಾವಾಣಿ ಚಿತ್ರ

‘ಸಿಎಂ ಅವಕಾಶ ತಿರಸ್ಕರಿಸಿದ್ದ ಮಿರ್ಜಾ ಇಸ್ಮಾಯಿಲ್’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸರ್ ಮಿರ್ಜಾ ಇಸ್ಮಾಯಿಲ್ ಅವರಿಗೆ ಕಾಶ್ಮೀರದ ಮುಖ್ಯಮಂತ್ರಿಯಾಗುವ ಅವಕಾಶ ಒದಗಿಬಂದಿತ್ತು. ಈ ಅವಕಾಶವನ್ನು ಅವರು ಗೌರವಪೂರ್ವಕವಾಗಿ ತಿರಸ್ಕರಿಸಿದ್ದರು’ ಎಂದು ಸಾಹಿತಿ ಅಬ್ದುಲ್ ಬಷೀರ್ ತಿಳಿಸಿದರು.

ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ನಗರದಲ್ಲಿ ಮಂಗಳವಾರ ಹಮ್ಮಿಕೊಂಡ ಸರ್ ಮಿರ್ಜಾ ಇಸ್ಮಾಯಿಲ್ ಅವರ 137ನೇ ಜನ್ಮದಿನಾಚರಣೆ ಸಮಾರಂಭದಲ್ಲಿ ಭಾಗವಹಿಸಿ, ಮಾತನಾಡಿದರು. ‘ಕೈಗಾರಿಕೆಗಳ ವಿಕೇಂದ್ರಿಕರಣಕ್ಕೆ ಮಿರ್ಜಾ ಇಸ್ಮಾಯಿಲ್ ಒಲವು ಹೊಂದಿದ್ದರು’ ಎಂದು ಹೇಳಿದರು.

ಕಸಾಪ ಅಧ್ಯಕ್ಷ ಮಹೇಶ ಜೋಶಿ, ‘ಮೈಸೂರು ನಗರ ಅತ್ಯಂತ ಸುಂದರ ನಗರವಾಗಿ ಹೊರಹೊಮ್ಮಲು ಮಿರ್ಜಾ ಇಸ್ಮಾಯಿಲ್ ಅವರೇ ಮುಖ್ಯ ಕಾರಣ. ಅವರು ಪರ್ಷಿಯಾ ಮೂಲದವರಾದರೂ ಕನ್ನಡದ ಮೇಲೆ ಅಪಾರ ಗೌರವ ಹೊಂದಿದ್ದರು. ಕಸಾಪ ಕಟ್ಟಡ ನಿರ್ಮಾಣಕ್ಕೆ ಉಚಿತವಾಗಿ ಜಾಗ ನೀಡಿ, ‘ಕನ್ನಡ ತಾಯಿಯ ದೇಗುಲ ಇಲ್ಲಿ ಸಿದ್ಧವಾಗಲಿ’ ಎಂಬ ಮಾತನ್ನು ಹೇಳಿದ್ದರು’ ಎಂದು ಸ್ಮರಿಸಿಕೊಂಡರು.

ಜೆ.ಎಸ್.ಎಸ್. ಮಹಾವಿದ್ಯಾಲಯದ ನಿವೃತ್ತ ಪ್ರಾಂಶುಪಾಲ ಪ್ರೊ. ಚಂದ್ರಶೇಖರ ಉಷಾಲ, ‘ಮಿರ್ಜಾ ಇಸ್ಮಾಯಿಲ್ ಅವರ ದೂರದೃಷ್ಟಿಯ ಪ್ರತೀಕ ಮೈಸೂರು ಸಂಸ್ಥಾನ. ನೀರಾವರಿ, ಕೃಷಿ, ಕೈಗಾರಿಕೆಯ ಯೋಜನೆಗಳನ್ನು ಮೈಸೂರಿನಲ್ಲಿ ಅಳವಡಿಸಿಕೊಳ್ಳುವ ಮೂಲಕ ನಾಡನ್ನು ಮಾದರಿ ಮಾಡಿದ್ದರು. ಸೌಂದರ್ಯದ ಕುರಿತು ಅತಿಯಾದ ಆಸಕ್ತಿ ಹೊಂದಿದ್ದ ಅವರ ದೂರದೃಷ್ಟಿಯ ಪರಿಣಾಮವೇ ಬೃಂದಾವನ ಗಾರ್ಡನ್’ ಎಂದು ಹೇಳಿದರು.

ನಿಧನ ವಾರ್ತೆ

ರಾಮಲಿಂಗಯ್ಯ

ಮೈಸೂರು: ಬೆಂಗಳೂರಿನ ನಾಗರಬಾವಿ ಬಡಾವಣೆಯ ನಿವಾಸಿ, ನಿವೃತ್ತ ಎಎಸ್‌ಐ ರಾಮಲಿಂಗಯ್ಯ (68) ಅನಾರೋಗ್ಯದಿಂದ ಮಂಗಳವಾರ ನಿಧನರಾದರು.

ಅವರಿಗೆ ಪತ್ನಿ, ಪುತ್ರ, ಇಬ್ಬರು ಪುತ್ರಿಯರು ಇದ್ದಾರೆ. ನೆಲಮಂಗಲ ಠಾಣೆಯಲ್ಲಿ ಎಎಸ್‌ಐ ಆಗಿ ನಿವೃತ್ತರಾಗಿದ್ದರು. ಬುಧವಾರ ಬೆಳಿಗ್ಗೆ ನಾಗರಬಾವಿಯಲ್ಲಿ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಗುತ್ತಿಗೆ ಜಮೀನು ವಾಪಸ್‌ಗೆ ಆದೇಶ

ಲಾಲ್‌ಬಾಗ್: ಮೈಸೂರು ಉದ್ಯಾನ ಸಂಘ, ನರ್ಸರಿಮೆನ್ ಪ್ರಸ್ತಾವಕ್ಕೆ ನಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಸೂರು ಉದ್ಯಾನ ಕಲಾಸಂಘ ಮತ್ತು ದಿ ನರ್ಸರಿಮೆನ್ ಕೋ–ಆಪರೇಟಿವ್ ಸೊಸೈಟಿಗೆ ಲಾಲ್‌ಬಾಗ್‌ನಲ್ಲಿ ನೀಡಲಾಗಿದ್ದ ಜಮೀನಿನ ಗುತ್ತಿಗೆ ಮುಂದುವರಿಸದಂತೆ ಸರ್ಕಾರ ಆದೇಶಿಸಿದೆ.

ಮೈಸೂರು ಉದ್ಯಾನ ಕಲಾಸಂಘ 28 ಗುಂಟೆ ಹಾಗೂ ನರ್ಸರಿಮೆನ್ ಕೋ–ಆಪ್‌ರೇಟಿವ್ ಸೊಸೈಟಿ 1 ಎಕರೆ 65 ಸೆಂಟ್ಸ್ ಜಮೀನನ್ನು ಗುತ್ತಿಗೆ ಆಧಾರದಲ್ಲಿ ಪಡೆದುಕೊಂಡಿದ್ದವು. ಈ ಗುತ್ತಿಗೆಯನ್ನು ನವೀಕರಿಸಲು ಅರ್ಜಿ ಸಲ್ಲಿಸಲಾಗಿತ್ತು.

ಸರ್ಕಾರ ಅ.18ರಂದು ಹೊರಡಿಸಿರುವ ಆದೇಶದಲ್ಲಿ, ‘ಈ ನರ್ಸರಿಗಳಲ್ಲಿ ಕಸಿ, ಸಸಿಗಳನ್ನು ಉತ್ಪಾದಿಸುವುದು, ತಾರಸಿ ತೋಟ, ಇಕೆಬಾನ, ಕೈತೋಟಗಳು ಹಾಗೂ ಫಲಪುಷ್ಪ ಪ್ರದರ್ಶನ ಮತ್ತು ರೈತರಿಗೆ ಅನುಕೂಲವಾಗುವ ಕಾರ್ಯಗಳನ್ನು ಕೈಗೊಳ್ಳಲು ಜಮೀನನ್ನು ಗುತ್ತಿಗೆಗೆ ನೀಡಲಾಗಿತ್ತು. ಈ ಸಂಸ್ಥೆಗಳಿಗೆ ಸರ್ಕಾರ ಯಾವ ಉದ್ದೇಶಕ್ಕಾಗಿ ಜಮೀನು ನೀಡಿತ್ತೋ ಆ ಉದ್ದೇಶ ನಿರೀಕ್ಷಿತ ಮಟ್ಟದಲ್ಲಿ ಗುರಿ ತಲುಪಿಲ್ಲ. ಆದ್ದರಿಂದ ಪ್ರಸ್ತಾವಿತ ಜಮೀನಿನ ಗುತ್ತಿಗೆಯನ್ನು ರದ್ದುಗೊಳಿಸಿದೆ’ ಎಂದು ತಿಳಿಸಲಾಗಿದೆ.

2016ರಲ್ಲೇ ಗುತ್ತಿಗೆ ಮುಕ್ತಾಯ

ನರ್ಸರಿಮೆನ್ ಕೋ–ಆಪರೇಟಿವ್ ಸೊಸೈಟಿಗೆ ಗುತ್ತಿಗೆ ಆಧಾರದಲ್ಲಿ ನೀಡಿಲಾಗಿದ್ದ 1 ಎಕರೆ 65 ಸೆಂಟ್ಸ್ ಜಾಗದ ಗುತ್ತಿಗೆ 2016ರ ಏಪ್ರಿಲ್‌ಗೆ ಮುಕ್ತಾಯವಾಗಿದೆ. ಸೊಸೈಟಿಯು ಈ ಗುತ್ತಿಗೆ ಅವಧಿ ಮುಂದುವರಿಸುವಂತೆ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಿತ್ತು.

ಮೈಸೂರು ಉದ್ಯಾನ ಕಲಾಸಂಘದ ಕಾರ್ಯ ಚಟುವಟಿಕೆಗಳಿಗೆ ನೀಡಲಾಗಿದ್ದ 28 ಗುಂಟೆ ಜಮೀನಿನ ಗುತ್ತಿಗೆ 2016ರ ಮಾರ್ಚ್ 3ಕ್ಕೆ ಅಂತ್ಯಗೊಂಡಿತ್ತು. ಏಪ್ರಿಲ್ 2016ರಿಂದ 5 ವರ್ಷದ ಅವಧಿಗೆ ಪ್ರತಿ ವರ್ಷ ₹25 ಸಾವಿರ ತೋಟಗಾರಿಕೆ ಇಲಾಖೆಗೆ ಪಾವತಿಸುವಂತೆ ಒಪ್ಪಂದ ಮಾಡಿಕೊಳ್ಳಲಾಗಿತ್ತು. ಆ ಗುತ್ತಿಗೆ ಕಳೆದ ವರ್ಷವೇ ಮುಗಿದಿದೆ.

ಇವೆರಡೂ ಸೊಸೈಟೀಸ್ ಕಾಯ್ದೆ ಅಡಿಯಲ್ಲಿ ನೋಂದಣಿ ಮಾಡಿಕೊಂಡಿರುವ ಖಾಸಗಿ ಘಟಕಗಳಾಗಿವೆ. ಒಂದಿಬ್ಬರು ಅಧಿಕಾರಿಗಳನ್ನು ಹೊರತುಪಡಿಸಿ, ಸೊಸೈಟಿಗಳಲ್ಲಿನ ಬಹುಪಾಲು ಸದಸ್ಯರು ಖಾಸಗಿ ವ್ಯಕ್ತಿಗಳು ಅಥವಾ ನಿವೃತ್ತ ಸರ್ಕಾರಿ ನೌಕರರಾಗಿದ್ದಾರೆ.

ಈ ಎರಡು ಸಂಸ್ಥೆಗಳು ಬಳಸುತ್ತಿರುವ ಕಟ್ಟಡಗಳಲ್ಲಿ ತೋಟಗಾರಿಕೆ ಇಲಾಖೆಯ ಕಚೇರಿಯನ್ನು ಪ್ರಾರಂಭಿಸಬೇಕು. ಈ ಸೊಸೈಟಿಗಳಲ್ಲಿ ನಿಯೋಜನೆಗೊಂಡಿರುವ ತೋಟಗಾರಿಕೆ ಇಲಾಖೆ ಅಧಿಕಾರಿಗಳನ್ನು ತಕ್ಷಣವೇ ವಾಪಸ್ ಪಡೆದುಕೊಳ್ಳಬೇಕು. ವಿಶ್ವವಿಖ್ಯಾತ ಫಲಪುಷ್ಪ ಪ್ರದರ್ಶನದಲ್ಲಿ ಶೇಕಡ 95ರಷ್ಟು ಭಾಗವನ್ನು ಇಲಾಖೆಯ ಅಧಿಕಾರಿಗಳೇ ನಡೆಸಿಕೊಂಡು ಬರುತ್ತಿದ್ದಾರೆ. ಇನ್ನು ಮುಂದೆ, ಮೈಸೂರು ಉದ್ಯಾನ ಕಲಾಸಂಘದ ಹಸ್ತಕ್ಷೇಪವಿಲ್ಲದೆ ಫಲಪುಷ್ಪ ಪ್ರದರ್ಶನವನ್ನು ಆಯೋಜಿಸಲಾಗುವುದು ಎಂದು ಆದೇಶದಲ್ಲಿ ವಿವರಿಸಲಾಗಿದೆ.

ತೋಟಗಾರಿಕೆ ಇಲಾಖೆ ಪ್ರಧಾನ ಕಾರ್ಯದರ್ಶಿ ಅವರು ಇಲಾಖೆ ನಿರ್ದೇಶಕರಿಗೆ ಅ.19ರಂದು ಪತ್ರ ಬರೆದು, ‘ಸರ್ಕಾರದ ಆದೇಶವನ್ನು ಕೂಡಲೇ ಪಾಲಿಸಬೇಕು. ಅಲ್ಲದೆ, ಬಾಡಿಗೆ ಮೊತ್ತ ಹಾಗೂ ಇನ್ನಿತರೆ ಬಾಕಿ ಮೊತ್ತ ಪಾವತಿಸುವವರೆಗೆ ಈ ಎರಡೂ ಸಂಘ–ಸಂಸ್ಥೆಗಳ ಬ್ಯಾಂಕ್ ಖಾತೆಗಳ ವಹಿವಾಟು ತಡೆಹಿಡಿಯಬೇಕು. ಅವರು ಯಾವುದೇ ವಾಣಿಜ್ಯ ಚಟುವಟಿಕೆ ನಡೆಸದಂತೆ ಕ್ರಮ ಕೈಗೊಳ್ಳಬೇಕು’ ಎಂದು ಸೂಚಿಸಿದ್ದಾರೆ.

ನರ್ಸರಿಮೆನ್ ಕೋ–ಆಪರೇಟಿವ್ ಸೊಸೈಟಿಯು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ಕೆಟಿಪಿಪಿ) ಕಾಯ್ದೆ ಸೆಕ್ಷನ್ 4(ಜಿ) ಅಡಿಯಲ್ಲಿ ಹಲವಾರು ಟೆಂಡರ್‌ಗಳನ್ನು ಪಡೆದುಕೊಂಡಿದೆ. ಟೆಂಡರ್ ಪ್ರಕ್ರಿಯೆಯಿಲ್ಲದೆ ನೇರವಾಗಿ ಬಿಬಿಎಂಪಿಯ ಹಲವಾರು ಕೋಟಿಗಳ ಟೆಂಡರ್‌ಗಳ ಫಲಾನುಭವಿಯಾಗಿದೆ. 4ಜಿ ವಿನಾಯಿತಿಯನ್ನೂ ಅ.20ರಂದು ರದ್ದುಗೊಳಿಸಲಾಗಿದೆ.

ಮೈಸೂರು ಉದ್ಯಾನ ಕಲಾಸಂಘ, ದಿ ನರ್ಸರಿಮೆನ್ ಕೋ–ಆಪರೇಟಿವ್ ಸೊಸೈಟಿ ಎರಡೂ ಸರ್ಕಾರಿ ಸಂಸ್ಥೆಗಳೆಂದು ಭಾವಿಸಲಾಗುತ್ತಿತ್ತು. ಅದರಂತೆಯೇ ಹಲವು ಗುತ್ತಿಗೆಗಳನ್ನು ಪಡೆದು ಲಾಭ ಮಾಡಿಕೊಂಡಿವೆ ಎನ್ನಲಾಗಿದೆ.

‘ನಗರದಲ್ಲಿ ಸಾವಿರಾರು ನರ್ಸರಿಗಳಿವೆ. ಇಂತಹದ್ದೇ ನರ್ಸರಿಗಳಿಗೆ ಲಾಲ್‌ಬಾಗ್‌ನಲ್ಲಿ ಜಮೀನು ನೀಡಿ, ಗುತ್ತಿಗೆ ಮುಂದುವರಿಸುವಲ್ಲಿ ಯಾವುದೇ ಪ್ರಯೋಜನವಿಲ್ಲ’ ಎಂದು ತೋಟಗಾರಿಕೆ ಇಲಾಖೆ ಪ್ರಧಾನ ಕಾರ್ಯದರ್ಶಿ ರಾಜೇಂದ್ರ ಕುಮಾರ್ ಕಟಾರಿಯಾ ತಿಳಿಸಿದರು.

ಚಿಕ್ಕಜಾಲ ರೇಷ್ಮೆ ಬೆಳೆಗಾರರ ಸಹಕಾರ ಸಂಘಕ್ಕೆ ನಂಜುಂಡೇಗೌಡ ಅಧ್ಯಕ್ಷ

ನಂಜುಂಡೇಗೌಡ

ಯಲಹಂಕ: ಚಿಕ್ಕಜಾಲ ರೇಷ್ಮೆ ಬೆಳೆಗಾರರ ಮತ್ತು ರೈತರ ಸೇವಾ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ನಂಜುಂಡೇಗೌಡ ಆಯ್ಕೆಯಾಗಿದ್ದಾರೆ.

ಈ ಹಿಂದಿನ ಅಧ್ಯಕ್ಷರಾಗಿದ್ದ ದೊಡ್ಡಬಸವರಾಜು ಅವರಿಂದ ತೆರವಾಗಿದ್ದ ಸ್ಥಾನಕ್ಕಾಗಿ ನಡೆದ ಚುನಾವಣೆಯಲ್ಲಿ ಬಿಜೆಪಿ ಬೆಂಬಲಿತ ಅಭ್ಯರ್ಥಿ ಗೋಪಾಲಗೌಡ ಮತ್ತು ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ನಂಜುಂಡೇಗೌಡ ನಾಮಪತ್ರ ಸಲ್ಲಿಸಿದ್ದರು. ಒಟ್ಟು 13 ಸದಸ್ಯಬಲ ಹೊಂದಿರುವ ಸಂಘದಲ್ಲಿ ನಂಜುಂಡೇಗೌಡ 7 ಮತ್ತು ಗೋಪಾಲಗೌಡ 6 ಮತಗಳನ್ನು ಪಡೆದರು. ಈ ಮೂಲಕ ಬಿಜೆಪಿ ಹಿಡಿತದಲ್ಲಿದ್ದ ಸಂಘವು ಮರಳಿ ಕಾಂಗ್ರೆಸ್ ತೆಕ್ಕೆಗೆ ಜಾರಿದೆ.

ನಿರ್ದೇಶಕರಾದ ಶಿವಕುಮಾರ್, ಜಯಕುಮಾರ್, ನರಸಿಂಹಮೂರ್ತಿ, ಮುನಿಯಪ್ಪ, ಸೌಮ್ಯ, ಹರೀಶ್ ಹಾಗೂ ಕಾಂಗ್ರೆಸ್ ಮುಖಂಡರಾದ ಎನ್.ಕೆ.ಮಹೇಶ್ ಕುಮಾರ್, ಉದಯಶಂಕರ್, ಲಕ್ಷ್ಮೀಪತಿ, ಎಸ್.ಕೆ.ಆಂಜಿನಪ್ಪ, ರಾಜಕುಮಾರ್, ರವಿಕುಮಾರ್, ಉಮೇಶ್, ಗೋವಿಂದರಾಜು, ಚಂದ್ರಣ್ಣ, ರಾಮಣ್ಣ, ಕಿಟ್ಟಿ ಮತ್ತಿತರರು ನೂತನ ಅಧ್ಯಕ್ಷರನ್ನು ಅಭಿನಂದಿಸಿದರು.

‘ಅರ್ಥವಾಗದ ಮಾಹಿತಿ ರವಾನೆಯೂ ಅಶ್ಲೀಲತೆಯೇ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಾಮಾಜಿಕ ಜಾಲತಾಣಗಳಲ್ಲಿ ಲಭ್ಯವಾಗುತ್ತಿರುವ ಮಾಹಿತಿಯನ್ನು ಅರ್ಥ ಮಾಡಿಕೊಳ್ಳದೇ ಬೇರೆಯವರಿಗೆ ಯಥಾವತ್ತಾಗಿ ರವಾನಿಸುವುದು ಈ ಕಾಲದ ಬಹುದೊಡ್ಡ ಅಶ್ಲೀಲತೆ’ ಎಂದು ಚಿಂತಕ ಜಿ.ಬಿ.ಹರೀಶ್ ಅಭಿಪ್ರಾಯಪಟ್ಟರು.

ಲೇಖಕ ಬಿ.ಎಸ್.ಜಯಪ್ರಕಾಶ ನಾರಾಯಣ ಅವರ ‘ಜೀವ ಜೀವದ ನಂಟು’(ಸಂಪುಟ–2) ಮತ್ತು ಮಾನವಿ ಬಂದೋಪಾಧ್ಯಾಯ ಅವರ ಆತ್ಮಕತೆಯ ಅನುವಾದಿತ ಕೃತಿ ‘ಗಂಡು ಜೀವ, ಹೆಣ್ಣು ಭಾವ’ ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಮಾಹಿತಿ ಗೋದಾಮನ್ನು ಹೆಚ್ಚು ಮಾಡಿಕೊಂಡು ಅನುಭವ ಕಡಿಮೆ ಮಾಡಿಕೊಳ್ಳುತ್ತಿದ್ದೇವೆ. ಸಾಮಾಜಿಕ ಜಾಲತಾಣವು ಜಗತ್ತಿನ ಎಲ್ಲಾ ಮಾಹಿತಿಯನ್ನು ನಮ್ಮ ಮೇಲೆ ಹೇರುತ್ತಿದೆ. ಈ ಮಾಹಿತಿಯನ್ನು ಯಥಾವತ್ತಾಗಿ ಮತ್ತೊಬ್ಬರಿಗೆ ಕಳುಹಿಸುವುದು ಸಮಾಜದಲ್ಲಿ ಕ್ಷೋಭೆಯುಂಟು ಮಾಡುವ ಸಾಧ್ಯತೆ ಇರುತ್ತದೆ. ನಗ್ನತೆ ಅಥವಾ ಅರೆನಗ್ನತೆಯು ಅಶ್ಲೀಲತೆ ಅಲ್ಲ. ಹೀಗೆ ಮಾಹಿತಿಯನ್ನು ಹಂಚುವುದು ಅಶ್ಲೀಲತೆ’ ಎಂದರು.

ಕುವೆಂಪು, ಬೇಂದ್ರೆ, ಮಾಸ್ತಿ ಅವರ ಸಾಹಿತ್ಯದಲ್ಲಿ ಕಾಣುವ ಸ್ಥಳೀಯತೆಯ ಅಂಶ ಮತ್ತು ಅನುಭವದ ಬರವಣಿಗೆ ಈಗ ಇಲ್ಲವಾಗಿದೆ. ವಾಲ್ಮೀಕಿ ಮತ್ತು ವ್ಯಾಸರು ಕಾಡನ್ನು ನೋಡಿ ಅನುಭವಿಸಿದ್ದರಿಂದ ಅರಣ್ಯ ಪರ್ವ ಬರೆಯಲು ಸಾಧ್ಯವಾಯಿತು. ಅನುಭವಕ್ಕೆ ಸಾರ್ವತ್ರಿಕ ಮೌಲ್ಯ ಇದ್ದೇ ಇರುತ್ತದೆ’ ಎಂದು ಹೇಳಿದರು.

ಚಿಂತಕ ಕಾರ್ತಿಕ್ ಕಾಮಣ್ಣ ಮಾತನಾಡಿ, ‘ಜಾತಿ ವ್ಯವಸ್ಥೆ ಬಗ್ಗೆ ಕಣ್ಮುಚ್ಚಿ ಟೀಕಿಸಲಾಗುತ್ತಿದೆ. ಒಂದೊಂದು ಜಾತಿಗೂ ಒಂದೊಂದು ವೈಶಿಷ್ಟ್ಯ ಇದೆ. ಇವುಗಳನ್ನೂ ಗುರುತಿಸುವ ಅಗತ್ಯವಿದೆ. ದಬ್ಬಾಳಿಕೆ ಮಾಡಲು ಅಥವಾ ಅಸ್ಪೃಶ್ಯತೆಯನ್ನು ಟೀಕಿಸಲಷ್ಟೆ ಜಾತಿ ಬಳಕೆಯಾಬಾರದು’ ಎಂದು ಪ್ರತಿಪಾದಿಸಿದರು.

ಲೈಂಗಿಕ ಅಲ್ಪಸಂಖ್ಯಾತ ಸಮುದಾಯದ ಹಕ್ಕುಗಳ ಹೋರಾಟಗಾರ್ತಿ ಚಾಂದಿನಿ, ಲೇಖಕ ಬಿ.ಎಸ್. ಜಯಪ್ರಕಾಶ ನಾರಾಯಣ ಮಾತನಾಡಿದರು.

ಬಿಡುಗಡೆಯಾದ ಕೃತಿಗಳು

ಪುಸ್ತಕ: ಜೀವ ಜೀವದ ನಂಟು(ಸಂಪುಟ–2)
ಲೇಖಕರು: ಬಿ.ಎಸ್. ಜಯಪ್ರಕಾಶ ನಾರಾಯಣ
ಪ್ರಕಾಶಕರು: ವಂಶಿ ಪ್ರಕಾಶನ
ಪುಟಗಳು: 200
ದರ: ₹200

ಪುಸ್ತಕ: ಗಂಡು ಜೀವ, ಹೆಣ್ಣು ಭಾವ
ಲೇಖಕ: ಮಾನವಿ ಬಂದೋಪಾಧ್ಯಾಯ
ಕನ್ನಡಕ್ಕೆ ಅನುವಾದ: ಬಿ.ಎಸ್. ಜಯಪ್ರಕಾಶ ನಾರಾಯಣ
ಪ್ರಕಾಶಕರು: ವಂಶಿ ಪ್ರಕಾಶನ
ಪುಟಗಳು: 300
ದರ: ₹250

ಮೃತ್ತಿಕೆ ಸಂಗ್ರಹ: ತ್ವರಿತ ಕ್ರಮಕ್ಕೆ ಸೂಚನೆ

ಬೆಂಗಳೂರು: ‘ಕೆಂಪೇಗೌಡರ 108 ಅಡಿ ಎತ್ತರದ ಕಂಚಿನ ಪ್ರತಿಮೆ ಉದ್ಘಾಟನೆಗೆ ಪೂರಕವಾಗಿ ರಾಜ್ಯಮಟ್ಟದಲ್ಲಿ ನಡೆಯುತ್ತಿರುವ ಮೃತ್ತಿಕೆ ಸಂಗ್ರಹ ಅಭಿಯಾನದ ಮೇಲೆ ನಿಗಾ ವಹಿಸಬೇಕು’ ಎಂದು ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ (ಸಿಇಒ) ಕೆಂಪೇಗೌಡ ಪಾರಂಪರಿಕ ತಾಣಗಳ ಅಭಿವೃದ್ಧಿ ಪ್ರಾಧಿಕಾರದ ಉಪಾಧ್ಯಕ್ಷರೂ ಆಗಿರುವ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಸೂಚಿಸಿದರು.

ದೊಡ್ಡಕಲ್ಲಸಂದ್ರ ಸ್ಥಳೀಯರ ಆಕ್ರೋಶ; ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿಗಳ ವೈಫಲ್ಯ

ಕೆರೆಗೆ ಕಲ್ಮಶ: ದೂರು ಕೊಟ್ಟರೂ ನಿರ್ಲಕ್ಷ್ಯ

• ಆರ್. ಮಂಜುನಾಥ್

ಬೆಂಗಳೂರು: ಐದೂವರೆ ಕೋಟಿ ರೂಪಾಯಿ ವೆಚ್ಚದಲ್ಲಿ ಅಭಿವೃದ್ಧಿ ಮಾಡಿರುವ ದೊಡ್ಡಕಲ್ಲಸಂದ್ರ ಕೆರೆಗೆ ಕಲ್ಮಶಯುಕ್ತ ನೀರು ಆಗಾಗ್ಗೆ ಹರಿಯುತ್ತಿದೆ. ಈ ಒಳಚರಂಡಿ ನೀರು, ಕಲ್ಮಶದ ಹರಿವನ್ನು ನಿಲ್ಲಿಸಿ ಕ್ರಮ ಕೈಗೊಳ್ಳುವಲ್ಲಿ ಬಿಬಿಎಂಪಿ ಕೆರೆಗಳ ವಿಭಾಗ, ಬಿಡಬ್ಲ್ಯೂಎಸ್‌ಎಸ್‌ಬಿ ಎಂಜಿನಿಯರ್‌ಗಳು ಹಾಗೂ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿಗಳು ವಿಫಲರಾಗಿದ್ದಾರೆ.

ದೊಡ್ಡಕಲ್ಲಸಂದ್ರ ಕೆರೆಗೆ ಒಳಚರಂಡಿ ನೀರು ಹಾಗೂ ಕಲ್ಮಶ ಹರಿಯುತ್ತಿದೆ ಎಂದು ಚಿತ್ರ ಸಹಿತ ಕನಕಪುರ ರಸ್ತೆಯಲ್ಲಿರುವ ವಸಂತಪುರ ನಿವಾಸಿಗಳು 2020ರಿಂದ ದೂರು ನೀಡುತ್ತಲೇ ಬಂದಿದ್ದಾರೆ. ಬಿಬಿಎಂಪಿ, ಬಿಡ್ಲ್ಯೂಎಸ್‌ಎಸ್‌ಬಿ ಎಂಜಿನಿಯರ್‌ಗಳು ಹಾಗೂ ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿಗಳು ದೂರು ನೀಡಿದ ಹತ್ತಾರು ದಿನ ನಂತರ ಸ್ಥಳಕ್ಕೆ ಬಂದು, ‘ಎಲ್ಲವೂ ಸರಿಯಾಗಿದೆ, ಏನೂ ಸಮಸ್ಯೆ ಇಲ್ಲ’ ಎಂದು ಷರಾ ಬರೆದು ಹೋಗುತ್ತಿದ್ದಾರೆ. ‘ಈ ಕಲ್ಮಶ ನಿತ್ಯವೂ ಹರಿಯುವುದಿಲ್ಲ, ಆಗಾಗ್ಗೆ ಹರಿಯುತ್ತದೆ’ ಎಂದು ಸ್ಥಳೀಯರು ಮನವರಿಕೆ ಮಾಡಲು ಪ್ರಯತ್ನಿಸಿದರೂ ಎಂಜಿನಿಯರ್‌ಗಳು, ಅಧಿಕಾರಿಗಳು ಕೇಳುತ್ತಿಲ್ಲ. ಹೀಗಾಗಿ, ಸುಂದರವಾಗಿ ಅಭಿವೃದ್ಧಿಗೊಂಡಿದ್ದ ಕೆರೆ ಮತ್ತೆ ಕಲ್ಮಶದ ತಾಣವಾಗುತ್ತಿದೆ.

ಅಭಿವೃದ್ಧಿಗೊಂಡೂ ಕಲ್ಮಶದ ತಾಣವಾಗಿರುವ ದೊಡ್ಡಕಲ್ಲಸಂದ್ರ ಕೆರೆಗೆ ಇನ್ನೂ ಒಂದು ಕೋಟಿ ವೆಚ್ಚ ಮಾಡಲು ಟೆಂಡರ್ ಕರೆಯಲಾಗಿದೆ. ಕಲ್ಮಶವನ್ನು ತಡೆಯದೆ ಇನ್ನಿತರೆ ಯಾವುದೇ ಅಭಿವೃದ್ಧಿ ಕೆಲಸ ಬೇಡ ಎಂಬುದು ಸ್ಥಳೀಯರ ಆಗ್ರಹ.

‘ದೊಡ್ಡಕಲ್ಲಸಂದ್ರ ಕೆರೆಗೆ ಹಲವು ಹರಿವುಗಳಿವೆ. ಮಳೆಯಾದ ಸಂದರ್ಭದಲ್ಲಿ ಕೆರೆಯ ಪಕ್ಕದಲ್ಲಿರುವ ಬಡಾವಣೆಯಿಂದ ಒಳಚರಂಡಿ ನೀರು ನೇರವಾಗಿ ಕೆರೆಗೆ ಹರಿಯುತ್ತಿದೆ. ಇದನ್ನು ಬಿಬಿಎಂಪಿ ಅಧಿಕಾರಿಗಳ ಗಮನಕ್ಕೆ ತಂದರೂ ಕೆರೆ ಅಭಿವೃದ್ಧಿ ಸಮಯದಲ್ಲಿ ಇದನ್ನು ಅವರು ಪರಿಗಣಿಸಲಿಲ್ಲ. ಸ್ಥಳೀಯರು ಕೆರೆ ರಕ್ಷಣೆಗೆ ಸಾಕಷ್ಟು ಪ್ರಯತ್ನಪಡುತ್ತಿದ್ದರೂ, ಕೆರೆ ಅಭಿವೃದ್ಧಿಪಡಿಸಿರುವ ಬಿಬಿಎಂಪಿ ಈ ಬಗ್ಗೆ ನಿರ್ಲಕ್ಷ್ಯ ವಹಿಸಿದೆ. ಮಾಲಿನ್ಯ ಸೇರುತ್ತಿರುವ ಬಗ್ಗೆ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ದೂರು ನೀಡಿದರೂ ಅಧಿಕಾರಿಗಳು ಬಂದು ಬೇಜವಾಬ್ದಾರಿಯಿಂದ ವರ್ತಿಸುತ್ತಾರೆ. ಬಿಬಿಎಂಪಿ ಹಾಗೂ ಜಲಮಂಡಳಿ ಅಧಿಕಾರಿಗಳ ನಡುವಿನ ತಿಕ್ಕಾಟದಿಂದ ಕೆರೆ ಹಾಳಾಗುತ್ತಿದೆ’ ಎಂದು ಸ್ಥಳೀಯ ನಿವಾಸಿ ಸೌಂದರ್‌ರಾಜನ್ ಆರೋಪಿಸಿದರು.

‘ದೊಡ್ಡಕಲ್ಲಸಂದ್ರ ಕೆರೆಗೆ ಕಲ್ಮಶ ಹರಿಯುತ್ತಿರುವ ಬಗ್ಗೆ ಸ್ಥಳೀಯರು ಆತಂಕಗೊಂಡಿದ್ದಾರೆ. ಕೆರೆಯಲ್ಲಿರುವ ನೀರಿನ ಗುಣಮಟ್ಟ ಕ್ಲಾಸ್–ಡಿಗಿಂತ ಕಡಿಮೆ ಇರುವಂತೆ ನೋಡಿಕೊಳ್ಳುವಲ್ಲಿ ನಿವಾಸಿಗಳು ಯಶಸ್ಸು ಸಾಧಿಸಿದ್ದಾರೆ. ಆದರೆ ಇಂತಹ ಮಾಲಿನ್ಯ, ಕಲ್ಮಶಯುಕ್ತ ನೀರು ಇಲ್ಲಿರುವ ವಸತಿ ಪ್ರದೇಶಗಳಿಂದ ಕೆರೆಗೆ ಆಗಾಗ್ಗೆ ಹರಿಯುತ್ತಿದೆ. ಇದು ಕೆರೆಯ ನೈರ್ಮಲ್ಯವನ್ನು ಹಾಳು ಮಾಡುತ್ತಿದೆ. ಬಿಬಿಎಂಪಿ ಹಾಗೂ ಕೆಎಸ್‌ಪಿಸಿಬಿ ಅಧಿಕಾರಿಗಳು ಈ ಮಾಲಿನ್ಯದಿಂದ ಕೆರೆಯನ್ನು ಶಾಶ್ವತವಾಗಿ ದೂರ ಮಾಡಬೇಕು ಎಂದು ಮನವಿ ಮಾಡಿಕೊಳ್ಳುತ್ತೇವೆ’ ಎಂದು ಆ್ಯಕ್ಷನ್ ಏಡ್‌ನ ಕಾರ್ಯಕ್ರಮ ವ್ಯವಸ್ಥಾಪಕ ರಾಘವೇಂದ್ರ ಬಿ. ಪಚ್ಚಾಪುರ್ ಹೇಳಿದರು.

‘ಬಿಬಿಎಂಪಿ ಸಹಾಯ 2.0ನಲ್ಲಿ ದೊಡ್ಡಕಲ್ಲಸಂದ್ರ ಕೆರೆಗೆ ಮಾಲಿನ್ಯ ಹರಿಯುತ್ತಿರುವ ಬಗ್ಗೆ ಎರಡು ವರ್ಷದಿಂದ ದೂರು ನೀಡಲಾಗುತ್ತಿದೆ. ಆದರೆ, ಈ ಬಗ್ಗೆ ಯಾವುದೇ ಪ್ರತಿಕ್ರಿಯೆ ಬಂದಿಲ್ಲ. ಆದರೆ, ‘ಪರಿಹರಿಸಲಾಗಿದೆ’ ಎಂಬ ಷರಾ ಮಾತ್ರ ಕಾಣುತ್ತಿದೆ. ವಾಸ್ತವದಲ್ಲಿ ಯಾವ ಅಧಿಕಾರಿಯೂ ಸ್ಥಳಕ್ಕೆ ಬಂದು ಪರಿಶೀಲನೆ ನಡೆಸಿಲ್ಲ. ಕೆರೆಯ ಕಲ್ಮಶದ ಬಗ್ಗೆ ನಾಲ್ಕಾರು ದೂರುಗಳನ್ನು ನೀಡಿದ್ದೇವೆ. ಪ್ರಯೋಜನವಾಗಿಲ್ಲ. ದೂರು ನೀಡಿದ ಎರಡು ವಾರದ ನಂತರ ಬರುವ ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿಗಳು, ‘ಮಾಲಿನ್ಯವೇ ಇಲ್ಲವಲ್ಲ, ಸುಮ್ಮನೆ ಹೇಳುತ್ತೀರಿ’ ಎಂದು ಹೇಳುತ್ತಾರೆ’ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ದೊಡ್ಡಕಲ್ಲಸಂದ್ರ ಕೆರೆಗೆ ನೇರವಾಗಿ ಹರಿಯುತ್ತಿರುವ ಒಳಚರಂಡಿ ನೀರು (ಎಡಚಿತ್ರ) ದೊಡ್ಡಕಲ್ಲಸಂದ್ರ ಕೆರೆ

ನೆರವಿಗೆ ಬಾರದ ‘ಸಹಾಯ 2.0’!

‘ನಾಗರಿಕರು ದೂರು ನೀಡಿದಾಗ ಬಿಬಿಎಂಪಿ ಹಾಗೂ ಮಾಲಿನ್ಯ ನಿಯಂತ್ರಣ ಮಂಡಳಿತ (ಕೆಎಸ್‌ಪಿಸಿಬಿ) ಕ್ಷಿಪ್ರವಾಗಿ ಪ್ರತಿಕ್ರಿಯಿಸಬೇಕು. ಆಗ ಸಮಸ್ಯೆಯ ಪರಿಣಾಮವನ್ನು ಅರಿಯಬಹುದು. ಆದರೆ, ಕೆರೆಯ ಮಾಲಿನ್ಯಕ್ಕೆ ಸಂಬಂಧಿಸಿದಂತೆ ಬಿಬಿಎಂಪಿ ಮತ್ತು ಕೆಎಸ್‌ಪಿಸಿಬಿ ಎರಡಕ್ಕೂ ಪ್ರತ್ಯೇಕವಾಗಿ ದೂರು ನೀಡಬೇಕಾಗಿದೆ. ಇದಕ್ಕೆಲ್ಲ ಒಂದೇ ಸಹಾಯವಾಣಿಯ ಅಗತ್ಯವಿದೆ’ ಎಂದು ಆ್ಯಕ್ಷನ್ ಏಡ್‌ನ ಕಾರ್ಯಕ್ರಮ ವ್ಯವಸ್ಥಾಪಕ ರಾಘವೇಂದ್ರ ಬಿ. ಪಚ್ಚಾಪುರ್ ಹೇಳಿದರು.

‘ಕೆಎಸ್‌ಪಿಸಿಬಿ ಸಹಾಯ ಕೇಂದ್ರ ಸರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲ. ಬಿಬಿಎಂಪಿಯ ಸಹಾಯ ಆ್ಯಪ್‌ಗೆ ಕೆಎಸ್‌ಪಿಸಿಬಿ, ಜಲಮಂಡಳಿಯನ್ನೂ ಸೇರಿಸಿಕೊಳ್ಳಬೇಕು. ಸಹಾಯ 2.0 ಅನ್ನು ಕಳೆದ ವರ್ಷ ಅಪ್‌ಡೇಟ್ ಮಾಡಲಾಗಿದೆ. ಆದರೆ ಸಹಾಯ 1.0ನಲ್ಲಿ ದಾಖಲಿಸಿದ್ದ ದೂರುಗಳ ಮಾಹಿತಿ ಇದರಲ್ಲಿ ಇಲ್ಲ. ಸಹಾಯ 1.0ದಲ್ಲಿ ದೂರು ನಿರ್ವಹಣೆ ಅಥವಾ ಸಮಸ್ಯೆಗೆ ಪರಿಹಾರ ಸಿಗದಿದ್ದರೆ ಮತ್ತೆ ದೂರು ನೀಡುವ ಅವಕಾಶವಿತ್ತು. ಆದರೆ, ಸಹಾಯ 2.0ನಲ್ಲಿ ಮೇಲ್ಮನವಿ ಸಲ್ಲಿಸಲು ಅವಕಾಶ ಇಲ್ಲ. ನಿರ್ವಹಣೆಗಾರರು ದೂರನ್ನು ‘ಪರಿಹರಿಸಲಾಗಿದೆ’ ಎಂದು ಮುಗಿಸಿಬಿಡುತ್ತಾರೆ’ ಎಂದು ದೂರಿದರು.

‘ಜಲಮಂಡಳಿ ದೂರು ನೀಡಲು ಯಾವುದೇ ರೀತಿಯ ಆ್ಯಪ್ ಇಲ್ಲ. ಹೀಗಾಗಿ ಬಿಬಿಎಂಪಿಯ ಸಹಾಯ 2.0 ನಲ್ಲಿ ಬಿಡಬ್ಲ್ಯೂಎಸ್‌ಎಸ್‌ಬಿ ಸಮಸ್ಯೆಗಳನ್ನೂ ಸೇರಿಸಬೇಕು. ಏಕೆಂದರೆ ಹಲವು ಸಮಸ್ಯೆಗಳು ಈ ಮೂರೂ ಇಲಾಖೆಗಳಿಗೆ ಸಂಬಂಧಿಸಿದ್ದಾಗಿರುತ್ತದೆ. ನಾಗರಿಕರಿಗೆ ಸಹಾಯವಾಗುತ್ತದೆ’ ಎಂದು ಮನವಿ ಮಾಡಿದರು.

‘ಪರಿಶೀಲನೆ, ಶಾಶ್ವತ ಕ್ರಮಕ್ಕೆ ಆದ್ಯತೆ’

‘ದೊಡ್ಡಕಲ್ಲಸಂದ್ರ ಕೆರೆಗೆ ಕಲ್ಮಶ ಹರಿಯುತ್ತಿರುವ ಬಗ್ಗೆ ದೂರು ಬಂದಾಗ ನಮ್ಮ ಎಂಜಿನಿಯರ್‌ಗಳು ಹೋಗಿ ನೋಡಿದ್ದಾರೆ. ಅಲ್ಲಿ ಒಳಚರಂಡಿ ನೀರು ಬರುತ್ತಿರಲಿಲ್ಲ. ಇಷ್ಟಾದರೂ ಖುದ್ದಾಗಿ ಹೋಗಿ ಪರಿಶೀಲನೆ ನಡೆಸಲಾಗುವುದು. ಒಳಚರಂಡಿ ನೀರು ಹರಿಯುತ್ತಿದ್ದರೆ ಅದನ್ನು ತಡೆಯಲು ಕ್ರಮ ಕೈಗೊಳ್ಳಲಾಗುತ್ತದೆ. ಬಿಡಬ್ಲ್ಯೂಎಸ್‌ಎಸ್‌ಬಿ ಅಧಿಕಾರಿಗಳಿಗೂ ಈ ಬಗ್ಗೆ ಮಾಹಿತಿ ನೀಡಿ, ಒಳಚರಂಡಿ ನೀರು ಕೆರೆಗೆ ಹರಿಯುವುದನ್ನು ಶಾಶ್ವತವಾಗಿ ತಡೆಗಟ್ಟಲಾಗುತ್ತದೆ’ ಎಂದು ಬಿಬಿಎಂಪಿ ಕೆರೆಗಳ ವಿಭಾಗದ ಮುಖ್ಯ ಎಂಜಿನಿಯರ್ ಶಶಿಕುಮಾರ್ ತಿಳಿಸಿದರು.

ಪ್ರಯಾಣಿಕರಿಂದ ದುಪ್ಪಟ್ಟು ದರ ವಸೂಲಿ • 312 ಆಟೊ ಜಪ್ತಿ • ಮಫ್ತಿಯಲ್ಲಿ ವಿಶೇಷ ಕಾರ್ಯಾಚರಣೆ

ಆಟೊ ಚಾಲಕರಿಗೆ ಬಿಸಿ ಮುಟ್ಟಿಸಿದ ಪೊಲೀಸರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಲು ಸಾಲು ರಜೆ ಹಾಗೂ ದೀಪಾವಳಿ ಹಬ್ಬದ ಕಾರಣಕ್ಕೆ ಓಡಾಟ ನಡೆಸುತ್ತಿದ್ದ ಪ್ರಯಾಣಿಕರಿಂದ ದುಪ್ಪಟ್ಟು ದರ ಪಡೆದು ಸುಲಿಗೆ ಮಾಡುತ್ತಿದ್ದ ಆಟೊ ಚಾಲಕರಿಗೆ ನಗರ ಪೊಲೀಸರು ಬಿಸಿ ಮುಟ್ಟಿಸಿದ್ದಾರೆ. ದುಬಾರಿ ಹಣ ವಸೂಲಿ ದೂರು ಬಂದದ್ದರಿಂದ ಮಫ್ತಿಯಲ್ಲಿ ವಿಶೇಷ ಕಾರ್ಯಾಚರಣೆಗೆ ಇಳಿದ ಟ್ರಾಫಿಕ್ ಪೊಲೀಸರು, ಒಟ್ಟು 312 ಆಟೊ ಜಪ್ತಿ ಮಾಡಿದ್ದಾರೆ.

'ಮೀಟರ್ ಮೇಲೆ ₹ 50 ಕೊಡಿ', 'ದರಕ್ಕಿಂತ ಒಂದೂವರೆ ಪಟ್ಟು ಹೆಚ್ಚು ಕೊಡಿ', 'ಕತ್ರಿಗುಪ್ಪೆಗೆ ಬರೋಲ್ಲಾ ಕಣ್ರಿ...' ಈ ರೀತಿ ಹೇಳಿ ನಿಯಮ ಉಲ್ಲಂಘನೆ ಮಾಡುತ್ತಿದ್ದ ಆಟೊ ಚಾಲಕರ ವಿರುದ್ಧ ಪೊಲೀಸರು ಕ್ರಮ ಕೈಗೊಂಡಿದ್ದಾರೆ.

ಜಪ್ತಿ ಮಾಡಿದ ಆಟೊಗಳ ಪೈಕಿ 307 ಆಟೊಗಳನ್ನು ಬಿಡುಗಡೆ ಮಾಡಿದ್ದಾರೆ. 5 ಆಟೊಗಳು ಠಾಣೆ ಆವರಣದಲ್ಲಿಯೇ ಇವೆ.

ಆಟೊ ಜಪ್ತಿ ಮಾಡಿದ ಪೊಲೀಸರು

ಮೆಟ್ರೊ ರೈಲಿನ ಸೌಲಭ್ಯವಿಲ್ಲದ ಕಡೆಗಳಲ್ಲಿ ಆಟೊದಲ್ಲಿ ತೆರಳುವುದು ಪ್ರಯಾಣಿಕರಿಗೆ ಅನಿವಾರ್ಯ. ಸ್ವಂತ ವಾಹನವಿಲ್ಲದವರು ದೀಪಾವಳಿ ಹಬ್ಬದ ಶಾಪಿಂಗ್ ಹಾಗೂ ಅಗತ್ಯ ವಸ್ತುಗಳ ಖರೀದಿಗೆ ಆಟೊ ಅವಲಂಬಿಸಿದ್ದರು. ಇದನ್ನೇ ಬಂಡವಾಳ ಮಾಡಿಕೊಂಡಿದ್ದ ಚಾಲಕರು ದುಬಾರಿ ದರ ವಸೂಲಿ ಮಾಡಿದ್ದಾರೆ. ದೂರದ ಊರುಗಳಿಂದ ಬರುವ ಪ್ರಯಾಣಿಕರಿಗೆ ನೆಪ ಹೇಳಿ ಹೆಚ್ಚಿನ ಹಣ ವಸೂಲಿ ಮಾಡುತ್ತಿದ್ದರು. ಅಂತಹ ಚಾಲಕರನ್ನು ಪತ್ತೆಹಚ್ಚಿ ಆಟೊ ಜಪ್ತಿ ಮಾಡಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ನಿಗದಿಯಾದದ್ದಕ್ಕಿಂತ ದುಬಾರಿ ದರ ಪಡೆಯುತ್ತಿದ್ದ ಕಾರಣಕ್ಕೆ ಕಬ್ಬನ್‌ಪಾರ್ಕ್ ಭಾಗದಲ್ಲಿ 7, ಹೈಗ್ರೌಂಡ್ಸ್‌ನಲ್ಲಿ 15, ಸದಾಶಿವನಗರದಲ್ಲಿ 18, ಹಲಸೂರು ಗೇಟ್‌ನಲ್ಲಿ 11, ಚಿಕ್ಕಪೇಟೆಯಲ್ಲಿ 12, ಕೆಂಗೇರಿಯಲ್ಲಿ 12, ಮಲ್ಲೇಶ್ವರದಲ್ಲಿ 15, ರಾಜಾಜಿನಗರದಲ್ಲಿ 12, ಚಾಮರಾಜಪೇಟೆಯಲ್ಲಿ 28 ಆಟೊಗಳನ್ನು ಜಪ್ತಿ ಮಾಡಲಾಗಿದೆ. 'ಚಾಮರಾಜಪೇಟೆ ಭಾಗದಲ್ಲಿ ಹೆಚ್ಚಿನ ದರ ಪಡೆಯುವುದು ಮಾಮೂಲಿ ಆಗಿದೆ' ಎಂದು ಪ್ರಯಾಣಿಕರು ದೂರಿದ್ದಾರೆ.

ನಿಯಮ ಉಲ್ಲಂಘನೆ ಪ್ರಕರಣಗಳು (ಕಳೆದ ಮೂರು ದಿನಗಳಲ್ಲಿ)	
ಬಾಡಿಗೆಗೆ ಬರಲು ಹಿಂದೇಟು	270
ದುಪ್ಪಟ್ಟು ದರ ವಸೂಲಿ	312
ಇತರೆ ಪ್ರಕರಣಗಳು	532
ಒಟ್ಟು	1,114

ರಾತ್ರಿ ವೇಳೆ ವಸೂಲಿ: ಹೊರ ರಾಜ್ಯ ಹಾಗೂ ಹೊರ ಜಿಲ್ಲೆಗಳಿಂದ ಮೆಜೆಸ್ಟಿಕ್‌ಗೆ ಮಧ್ಯರಾತ್ರಿ ಬರುವ ಪ್ರಯಾಣಿಕರಿಂದ ನಿಗದಿತ ದರಕ್ಕಿಂತ ನಾಲ್ಕುಪಟ್ಟು ಹೆಚ್ಚು ದರ ಪಡೆಯುತ್ತಿದ್ದಾರೆ. ಇದಕ್ಕೆ ಕಡಿವಾಣ ಹಾಕಬೇಕು ಎಂದು ಪ್ರಯಾಣಿಕರು ಆಗ್ರಹಿಸಿದ್ದಾರೆ.

ಬಾಡಿಗೆಗೆ ಬರಲು ಹಿಂದೇಟು: ತಾವು ಕೇಳಿದಷ್ಟು ಹಣ ನೀಡಿಲ್ಲ ಎಂಬ ಕಾರಣಕ್ಕೆ ಕೆಲವು ಸ್ಥಳಗಳಲ್ಲಿ ಬಾಡಿಗೆಗೆ ಬರಲು ಆಟೊ ಚಾಲಕರು ಹಿಂದೇಟು ಹಾಕುತ್ತಿದ್ದರು. ಅಂತಹ 270 ಆಟೊಗಳನ್ನು ಪತ್ತೆ ಮಾಡಿ ಚಾಲಕರಿಗೆ ಎಚ್ಚರಿಕೆ ನೀಡಲಾಗಿದೆ.

ಕಬ್ಬನ್ ಪಾರ್ಕ್ ಬಳಿ 11, ಹೈಗ್ರೌಂಡ್ಸ್ ಭಾಗದಲ್ಲಿ 10, ಬಾಣಸವಾಡಿ 12, ಚಿಕ್ಕಪೇಟೆ 11, ರಾಜಾಜಿನಗರ 12, ಚಾಮರಾಜಪೇಟೆಯಲ್ಲಿ 17 ಆಟೊ ಚಾಲಕರಿಗೆ ಎಚ್ಚರಿಕೆ ನೀಡಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಬಿಎಂಟಿಸಿ, ಕೆಎಸ್‌ಆರ್‌ಟಿಸಿ ಬಸ್‌ಗಳು, ಟರ್ಮಿನಲ್ ಬಳಿಗೆ ಬರುವುದನ್ನೇ ಆಟೊ ಚಾಲಕರು ಕಾಯುತ್ತಿರುತ್ತಾರೆ. ಬಸ್ ಬಂದ ತಕ್ಷಣವೇ ಪ್ರಯಾಣಿಕರು ಬಸ್ಸಿನಿಂದ ಇಳಿಯುವುದಕ್ಕೂ ಸ್ಥಳಾವಕಾಶ ನೀಡುವುದಿಲ್ಲ. ಇದರಿಂದ ಪ್ರಯಾಣಿಕರಿಗೆ ಕಿರಿಕಿರಿ ಉಂಟಾಗುತ್ತಿದೆ. ಸುಗಮ ಸಂಚಾರಕ್ಕೂ ತೊಂದರೆ ಆಗುತ್ತಿದೆ' ಎಂದು ಪ್ರಯಾಣಿಕರು ದೂರಿದ್ದಾರೆ.

ದೊರೆಯದ ಬೀಗದ ಕೈ: ನಡೆಯದ ಸ್ಥಳ ಮಹಜರು

ಚಿತ್ರದುರ್ಗ: ಇಲ್ಲಿನ ಮುರುಘಾ ಮಠದ ಶಿವಮೂರ್ತಿ ಮುರುಘಾಶರಣರ ವಿರುದ್ಧದ ಎರಡನೇ ಪೋಕ್ಸೊ ಪ್ರಕರಣದ ಸಂಬಂಧ ಮಹಜರು ನಡೆಸಲು ಸಂತ್ರಸ್ತ ಬಾಲಕಿಯರ ಜತೆ ಮಂಗಳವಾರ ಮಠಕ್ಕೆ ತೆರಳಿದ್ದ ತನಿಖಾ ತಂಡದವರು, ಕೊಠಡಿಗಳ ಬೀಗದ ಕೀ ಸಿಗದೇ ವಾಪಸಾಗಿದ್ದಾರೆ.

ತನಿಖಾಧಿಕಾರಿಗಳು ಮೈಸೂರಿನಿಂದ ಚಿತ್ರದುರ್ಗಕ್ಕೆ ಬಾಲಕಿಯರನ್ನು ಕರೆದು ಕೊಂಡು ಬಂದಿದ್ದರು. ಮಠದಲ್ಲಿನ ಮುರುಘಾ ಶರಣರ ಕಚೇರಿ, ವಿಶ್ರಾಂತಿ ಕೊಠಡಿಗಳಿಗೆ ತೆರಳಿ ಮಹಜರು ನಡೆಸಲು ಸಿದ್ಧತೆ ನಡೆಸಲಾಗಿತ್ತು ಎಂದು ಪೊಲೀಸರು ತಿಳಿಸಿದ್ದಾರೆ.

ಆದರೆ, ಕೊಠಡಿಗಳಿಗೆ ಹಾಕಲಾಗಿದ್ದ ಬೀಗದ ಕೀ ಸಿಗದ ಕಾರಣ ಸಂತ್ರಸ್ತೆಯರನ್ನು ನ್ಯಾಯಾಲಯಕ್ಕೆ ಕರೆದೊಯ್ಯಲಾಯಿತು. ಬಾಲಕಿಯರು ಹಾಗೂ ದೂರು ನೀಡಿರುವ ಅವರ ತಾಯಿಯನ್ನು ಜಿಲ್ಲಾ ನ್ಯಾಯಾಧೀಶರ ಎದುರು ಹಾಜರುಪಡಿಸಿ ಹೇಳಿಕೆ ದಾಖಲಿಸಿಕೊಳ್ಳಲಾಯಿತು.

28ಕ್ಕೆ ವಿಚಾರಣೆ: ಪ್ರಕರಣದ 6ನೇ ಆರೋಪಿ ಮಹಾಲಿಂಗ ಹಾಗೂ 7ನೇ ಆರೋಪಿ ಅಡುಗೆ ಮಾಡುವ ಕರಿಬಸಪ್ಪ ಅವರ ನಿರೀಕ್ಷಣಾ ಜಾಮೀನು ಅರ್ಜಿ ವಿಚಾರಣೆಯನ್ನು ಕೋರ್ಟ್ ಅ.28ಕ್ಕೆ ಮುಂದೂಡಿದೆ.

ವಾಕಿಂಗ್ ವೇಳೆ ಕುಸಿದು ಬಿದ್ದು ಯುವಕ ಸಾವು

ಬೆಂಗಳೂರು: ಜಾಲಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ಬಿಇಎಲ್ ಮೈದಾನದಲ್ಲಿ ಮಂಗಳವಾರ ಬೆಳಿಗ್ಗೆ ವಾಕಿಂಗ್ ವೇಳೆ ಯುವಕನೊಬ್ಬ ಕುಸಿದು ಬಿದ್ದು ಮೃತಪಟ್ಟಿದ್ದಾರೆ. ಯುವಕನ ಗುರುತು ಪತ್ತೆಯಾಗಿಲ್ಲ. ಹೃದಯಾಘಾತದಿಂದ ಮೃತಪಟ್ಟಿರಬಹುದು ಎಂದು ಶಂಕಿಸಲಾಗಿದೆ.

'ಬೆಳಿಗ್ಗೆ ಯುವಕ ವಾಕಿಂಗ್‌ಗೆ ತೆರಳಿದ್ದರು. ಓಡುವಾಗ ಕುಸಿದುಬಿದ್ದರು. ಅದೇ ಮೈದಾನದಲ್ಲಿ ವಾಕಿಂಗ್ ಬಂದವರು ಅವರನ್ನು ಆಸ್ಪತ್ರೆಗೆ ಕರೆದೊಯ್ದರು. ಮಾರ್ಗ ಮಧ್ಯದಲ್ಲಿ ಯುವಕ ಮೃತಪಟ್ಟಿದ್ದರು' ಎಂದು ಮೂಲಗಳು ತಿಳಿಸಿವೆ.

₹ 1 ಕೋಟಿ ನಗದು, 15 ಕೆ.ಜಿ ಚಿನ್ನಕ್ಕೆ ಬೇಡಿಕೆ

ಉದ್ಯಮಿ ಪುತ್ರನ ಅಪಹರಣ ಪ್ರಕರಣ • ವಿಕಾಸ್ ಬೋರಾ ರಕ್ಷಿಸಿದ ವಿಜಯನಗರ ಪೊಲೀಸರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಅಕ್ಕಿಪೇಟೆಯ ಉದ್ಯಮಿ ಮಹೇಂದ್ರ ಕುಮಾರ್ (65) ಅವರ ಪುತ್ರ ವಿಕಾಸ್ ಬೋರಾನನ್ನು ಅಪಹರಿಸಿ ಹಣ ಹಾಗೂ ಚಿನ್ನಾಭರಣಕ್ಕೆ ಬೇಡಿಕೆಯಿಟ್ಟಿದ್ದ ಇಬ್ಬರು ಆರೋಪಿಗಳನ್ನು ವಿಜಯನಗರ ಪೊಲೀಸರು ಮಂಗಳವಾರ ಬಂಧಿಸಿದ್ದಾರೆ.

ಆನಂದ್‌ಕುಮಾರ್ ಹಾಗೂ ಅಜರ್ ಪಾಷಾ ಬಂಧಿತರು. ಪ್ರಮುಖ ಸೂತ್ರಧಾರ ಅಸ್ಗರ್ ಹಾಗೂ ತನ್ವೀರ್ ತಲೆಮರೆಸಿಕೊಂಡಿದ್ದಾರೆ. ಅಪಹರಣಕ್ಕೆ ಒಳಗಾಗಿದ್ದ ವಿಕಾಸ್ ಬೋರಾನನ್ನು ಪೊಲೀಸರು ರಕ್ಷಿಸಿದ್ದಾರೆ.

'ಆರೋಪಿಗಳ ಸುಳಿವು ಹಾಗೂ ಸಿಸಿಟಿವಿ ಕ್ಯಾಮೆರಾದ ದೃಶ್ಯಾವಳಿ ಆಧರಿಸಿ, ಅಪಹರಣ ನಡೆದ 12 ಗಂಟೆಯ ಒಳಗೆ ಆರೋಪಿಗಳನ್ನು ಬಂಧಿಸಲಾಯಿತು' ಎಂದು ಪಶ್ಚಿಮ ವಿಭಾಗದ ಡಿಸಿಪಿ ಲಕ್ಷ್ಮಣ ನಿಂಬರಗಿ ಮಾಹಿತಿ ನೀಡಿದರು.

'ಮಹೇಂದ್ರಕುಮಾರ್ ಅವರು ಅಕ್ಕಿಪೇಟೆಯಲ್ಲಿ ಫರ್ನಿಚರ್ ವ್ಯಾಪಾರ ನಡೆಸುತ್ತಿದ್ದರು. ಅ.23ರಂದು (ಭಾನುವಾರ) ಅಂಗಡಿಗೆ ರಜೆಯಿತ್ತು. ಎಲ್ಲರೂ ಮನೆಯಲ್ಲಿದ್ದರು. ಆಗ ವಿಕಾಸ್ ಅವರ ಮೊಬೈಲ್‌ಗೆ ಅಪರಿಚಿತ ಸಂಖ್ಯೆಯಿಂದ ಕರೆ ಬಂದಿತ್ತು. ಫರ್ನಿಚರ್‌ಗೆ ಆರ್ಡರ್ ಕೊಡುವುದಾಗಿ ಆರೋಪಿಗಳು ಹೇಳಿದ್ದರು. ಅದನ್ನೇ ನಂಬಿದ ವಿಕಾಸ್ ಕಾರಿನಲ್ಲಿ ಉತ್ತರಹಳ್ಳಿಗೆ ತೆರಳಿದ್ದರು. ಅಲ್ಲಿಂದ ಆರೋಪಿಗಳು ವಿಕಾಸ್ ಅವರನ್ನು ಅಪಹರಿಸಿದ್ದರು' ಎಂದು ಅವರು ವಿವರಿಸಿದರು.

ಆನಂದ್

ಅಜರ್ ಪಾಷಾ

ಅಪರಾಧ ಸುದ್ದಿ

'ಆರೋಪಿಗಳು ತಮ್ಮದೇ ಕಾರಿನಲ್ಲಿ ಅಪಹರಿಸಿ ಮಹೇಂದ್ರಕುಮಾರ್‌ಗೆ ಕರೆ ಮಾಡಿ ₹ 1 ಕೋಟಿ ನಗದು ಹಾಗೂ 15 ಕೆ.ಜಿ ಚಿನ್ನಕ್ಕೆ ಬೇಡಿಕೆ ಇಟ್ಟಿದ್ದರು. ತಾವು ಹೇಳಿದ ಜಾಗಕ್ಕೆ ಹಣ, ಚಿನ್ನಾಭರಣ ತಲುಪಿಸಿದರೆ ಮಾತ್ರ ಮಗನನ್ನು ಬಿಡುಗಡೆ ಮಾಡಲಾಗುವುದೆಂದು ಬೆದರಿಕೆ ಒಡ್ಡಿದ್ದರು' ಎಂದು ತಿಳಿಸಿದರು.

'ವಿಜಯನಗರ ಠಾಣೆಯ ಇನ್‌ಸ್ಪೆಕ್ಟರ್ ಡಿ.ಸಂತೋಷ್‌ಕುಮಾರ್ ಅವರ ನೇತೃತ್ವದಲ್ಲಿ ತಂಡ ರಚನೆ ಮಾಡಲಾಗಿತ್ತು. ಬಂಧಿತರಿಂದ ಒಂದು ಕಾರು ಹಾಗೂ ಮೊಬೈಲ್ ವಶಕ್ಕೆ ಪಡೆಯಲಾಗಿದೆ' ಎಂದು ಹೇಳಿದರು.

ವ್ಯವಹಾರ ತಿಳಿದಿದ್ದ ಆರೋಪಿಗಳು: 'ಅಸ್ಗರ್ ಹಾಗೂ ಮಹೇಂದ್ರಕುಮಾರ್‌ಗೆ ಮೊದಲೇ ಪರಿಚಯವಿತ್ತು. ಮಹೇಂದ್ರ ಅವರ ವಹಿವಾಟು ತಿಳಿದಿತ್ತು. ತನ್ವೀರ್ ಸಹಾಯದಿಂದ ಮೂವರೂ ಸೇರಿಕೊಂಡು ವಿಕಾಸ್‌ನನ್ನು ಅಪಹರಿಸಿ, ಕೊಳ್ಳೇಗಾಲ ರಸ್ತೆಯ ತೋಟದಲ್ಲಿ ಮನೆಯಲ್ಲಿ ಬಂಧಿಸಿಟ್ಟಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

ಮದ್ಯದ ಅಮಲಿನಲ್ಲಿ ಗೆಳೆಯನ ಕೊಲೆ

ಬೆಂಗಳೂರು: ಪುಲಿಕೇಶಿ ನಗರ ಪೊಲೀಸ್ ಠಾಣಾ ವ್ಯಾಪ್ತಿಯ ಪಿಎಸ್‌ಕೆ ಮೈದಾನದಲ್ಲಿ ಮದ್ಯದ ಅಮಲಿನಲ್ಲಿ ಸ್ನೇಹಿತನ ಕೊಲೆ ಮಾಡಲಾಗಿದೆ.

ಪ್ರಭು (27) ಕೊಲೆಯಾದ ಯುವಕ.

ಪಿಎಸ್‌ಕೆ ಮೈದಾನದಲ್ಲಿ ಪ್ರಭು ಹಾಗೂ ಗೆಳೆಯರು ಈಚೆಗೆ ಮದ್ಯ ಸೇವಿಸುತ್ತಿದ್ದರು. ಇದೇ ಮಾರ್ಗದಲ್ಲಿ ಆರೋಪಿ ಚೌಕನ ಅಕ್ಕ ಮನೆಗೆ ತೆರಳುತ್ತಿದ್ದರು. ಮದ್ಯ ಸೇವನೆಯ ದೃಶ್ಯ ಕಂಡು ಅವರು ಪ್ರಶ್ನಿಸಿದ್ದರು. ಅದಕ್ಕೆ ಕೋಪಗೊಂಡ ಪ್ರಭು, ಅವರ ಕೆನ್ನೆಗೆ ಹೊಡೆದಿದ್ದ. ಇದರಿಂದ ಕೋಪಗೊಂಡ ಚೌಕ ಹಾಗೂ ಸ್ನೇಹಿತರು ಪ್ರಭು ಜತೆಗೆ ಗಲಾಟೆ ನಡೆಸಿದ್ದರು. ಚೌಕ, ಪ್ರಭುವಿಗೆ ಚಾಕುವಿನಿಂದ ಇರಿದು ಪರಾರಿಯಾಗಿದ್ದ. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಪ್ರಭು ಮಂಗಳವಾರ ಮೃತಪಟ್ಟಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ರೌಡಿ ರಾಘವೇಂದ್ರನ ಬಂಧನ

ಬೆಂಗಳೂರು: ಶಾಂತಿ ಹಾಗೂ ಕಾನೂನು ಸುವ್ಯವಸ್ಥೆಗೆ ಧಕ್ಕೆ ಉಂಟು ಮಾಡುತ್ತಿದ್ದ, ರಾಜರಾಜೇಶ್ವರಿ ನಗರದ ಗಟ್ಟಿಗೆರೆ ಬಡಾವಣೆಯ 5ನೇ ಕ್ರಾಸ್ ನಿವಾಸಿ ರಾಘವೇಂದ್ರ (25) ಎಂಬ ಕುಖ್ಯಾತ ರೌಡಿಯನ್ನು ಆರ್.ಆರ್ ನಗರದ ಪೊಲೀಸರು ಮಂಗಳವಾರ ಬಂಧಿಸಿದ್ದಾರೆ.

'ಆರ್ ಆರ್ ನಗರ, ಕೆಂಗೇರಿ, ಉಪ್ಪಾರಪೇಟೆ, ಸುಬ್ರಹ್ಮಣ್ಯ ನಗರದ ಪೊಲೀಸ್ ಠಾಣೆಗಳಲ್ಲಿ ವಿವಿಧ ಪ್ರಕರಣಗಳು ದಾಖಲಾಗಿದ್ದವು. 5 ಕೊಲೆ ಯತ್ನ, 1 ಸುಲಿಗೆ, 2 ದರೋಡೆ ಯತ್ನ, ಎರಡು ಹಲ್ಲೆ ಹಾಗೂ ಅಕ್ರಮ ಶಸ್ತ್ರಾಸ್ತ್ರ ಪೂರೈಕೆ ಪ್ರಕರಣಗಳು ಈತನ ವಿರುದ್ಧ ದಾಖಲಾಗಿದ್ದವು. ಹಲವು ಬಾರಿಗೆ ಜೈಲಿಗೆ ಹೋಗಿ ಜಾಮೀನಿನ ಮೇಲೆ ಬಿಡುಗಡೆ ಆಗಿದ್ದ. ಜೂಜು, ಗೂಂಡಾ ವರ್ತನೆ, ಅನೈತಿಕ ಚಟುವಟಿಕೆ ಮುಂದುವರಿಸಿದ್ದ. ಅ.21ರಂದು ನಗರ ಪೊಲೀಸ್ ಆಯುಕ್ತ ಗೂಂಡಾ ಕಾಯ್ದೆ ಅಡಿ ಬಂಧನಕ್ಕೆ ಆದೇಶ ನೀಡಿದ್ದರು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ನಟಿಯ ಅಶ್ಲೀಲ ವಿಡಿಯೊ ಹರಿಯಬಿಡುವ ಬೆದರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಟಿಯ ಅಶ್ಲೀಲ ವಿಡಿಯೊವನ್ನು ಸಾಮಾಜಿಕ ಜಾಲತಾಣದಲ್ಲಿ ಹರಿಯಬಿಟ್ಟು ಮಾನಹಾನಿ ಮಾಡುತ್ತೇನೆ ಎಂದು ಬೆದರಿಸಿ, ₹ 30 ಲಕ್ಷ ಬೇಡಿಕೆಯಿಟ್ಟಿದ್ದ ನಟಿಯ ಮೇಕಪ್ ಮ್ಯಾನ್ ಮಹಾಂತೇಶ್ (37) ಎಂಬಾತನನ್ನು ಈಶಾನ್ಯ ವಿಭಾಗದ ಪೊಲೀಸರು ಬಂಧಿಸಿದ್ದಾರೆ.

ಮಹಾಂತೇಶ್

'ನಗ್ನ ಹಾಗೂ ಅರೆನಗ್ನ ಚಿತ್ರಗಳು ನನ್ನ ಬಳಿಯಿವೆ ಎಂದು ನಟಿಗೆ ವಾಟ್ಸ್‌ಆ್ಯಪ್ ಮೂಲಕ ಆರೋಪಿ ಸಂದೇಶ ಕಳುಹಿಸಿದ್ದ. ನನಗೆ ಬೇಡಿಕೆಯಷ್ಟು ಹಣ ನೀಡಬೇಕು. ಇಲ್ಲದಿದ್ದರೆ ಈ ಚಿತ್ರಗಳು ಹಾಗೂ ವಿಡಿಯೊಗಳನ್ನು ಹರಿಯಬಿಡುತ್ತೇನೆ ಎಂದು ಬೆದರಿಕೆ ಹಾಕಿದ್ದ. ಆರಂಭದಲ್ಲಿ ನಟಿ ಅದನ್ನು ನಂಬದೇ ನಿರ್ಲಕ್ಷ್ಯ ವಹಿಸಿದ್ದರು. ಅದಾದ ಕೆಲವೇ ದಿನಗಳ ಬಳಿಕ ಕೆಲವು ಅಶ್ಲೀಲ ವಿಡಿಯೊಗಳನ್ನು ಆರೋಪಿಯು ಅನಾಮಧೇಯ ನಂಬರ್‌ನಿಂದ ಕಳುಹಿಸಿದ್ದ. ಇದರಿಂದ ಹೆದರಿದ ನಟಿ ದೂರು ನೀಡಿದ್ದರು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಆರೋಪಿಯು ಭುವನೇಶ್ವರಿ ನಗರದಲ್ಲಿ ನೆಲೆಸಿದ್ದ. ಇದೇ ರೀತಿ ಇನ್ನೂ ಕೆಲವು ಮಹಿಳೆಯರನ್ನು ಬೆದರಿಸಿ ಸುಲಿಗೆ ಮಾಡುತ್ತಿದ್ದ' ಎಂದು ಮೂಲಗಳು ಹೇಳಿವೆ.

'ಈಕೆ ಕೆಲವು ಕನ್ನಡದ ಸಿನಿಮಾಗಳಲ್ಲಿ ನಟಿಸಿದ್ದರು. ಲೈವ್ ಸ್ಟ್ರೀಮಿಂಗ್ ಆ್ಯಪ್‌ಗಳಲ್ಲಿ ಖಾತೆ ತೆರೆದು ಅರೆನಗ್ನ ವಿಡಿಯೊ ಹಂಚಿಕೊಂಡಿದ್ದರು. ಆ್ಯಪ್‌ಗಳಲ್ಲಿ ಹೆಚ್ಚು ಲೈಕ್ ಬಂದರೆ ಹಣ ಸಿಗಲಿದೆ ಎಂಬ ಕಾರಣಕ್ಕೆ ನಟಿ ಇಂತಹ ವಿಡಿಯೊಗಳನ್ನು ಹಾಕಿದ್ದರು. ಅದನ್ನೇ ಬಂಡವಾಳ ಮಾಡಿಕೊಂಡಿದ್ದ ಆರೋಪಿ ಅದೇ ವಿಡಿಯೊ ಕಳುಹಿಸಿ ಬೆದರಿಸಿದ್ದ. ಹಣಕ್ಕೆ ಬೇಡಿಕೆಯಿಟ್ಟಿದ್ದ'

'ಮೇಕಪ್ ಮ್ಯಾನ್ ಆಗಿ ಕೆಲಸ ಮಾಡುತ್ತಿದ್ದ. ನಟಿ ಸಂಬಂಧಿಯೂ ಹೌದು. ಇದೇ ಸಲುಗೆಯಿಂದ ಕೃತ್ಯ ನಡೆಸಿದ್ದ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಪ್ರತ್ಯೇಕ ಪ್ರಕರಣ: ಆರು ಮಂದಿ ಬಂಧನ

ಬೆಂಗಳೂರು: ಚಿನ್ನಾಭರಣ, ದ್ವಿಚಕ್ರ ವಾಹನ ಕಳವು ಮಾಡುತ್ತಿದ್ದ ನಾಲ್ಕು ಪ್ರತ್ಯೇಕ ಪ್ರಕರಣಗಳಲ್ಲಿ ಆರು ಮಂದಿಯನ್ನು ಆಗ್ನೇಯ ವಿಭಾಗದ ಪೊಲೀಸರು ಬಂಧಿಸಿದ್ದಾರೆ.

ಮನೆಗೆ ನುಗ್ಗಿ ಕಳವು ಮಾಡುತ್ತಿದ್ದ ಸೈಯದ್ ಪರ್ವೇಜ್ (36) ಎಂಬಾತನನ್ನು ಬಂಧಿಸಿರುವ ತಿಲಕ್ ನಗರದ ಪೊಲೀಸರು, ₹ 5.50 ಲಕ್ಷ ಮೌಲ್ಯದ 92 ಗ್ರಾಂ ಚಿನ್ನಾಭರಣ ಮತ್ತು ದ್ವಿಚಕ್ರ ವಾಹನ, ಒಂದು ಮೊಬೈಲ್ ಜಪ್ತಿ ಮಾಡಿದ್ದಾರೆ.

ಈತನ ವಿರುದ್ಧ ನಗರದ ವಿವಿಧ ಠಾಣೆಯಲ್ಲಿ 26 ಪ್ರಕರಣಗಳು ದಾಖಲಾಗಿವೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಮಡಿವಾಳ ಪೊಲೀಸರು ಜಾನ್ ಮಲ್ಟಿನ್ ಎಂಬಾತನನ್ನು ಬಂಧಿಸಿದ್ದಾರೆ. ಆರೋಪಿಯಿಂದ ₹ 2.50 ಲಕ್ಷ ಮೌಲ್ಯದ 52.33 ಗ್ರಾಂ ಚಿನ್ನಾಭರಣ, ₹ 11.65 ಲಕ್ಷ ನಗದು, ಮೊಬೈಲ್ ವಶಕ್ಕೆ ಪಡೆದಿದ್ದಾರೆ. ಈತನ ವಿರುದ್ಧ 27 ಮನೆ ಕಳವು ಪ್ರಕರಣಗಳು ಇವೆ.

ಆಂಧ್ರಪ್ರದೇಶದ ಆರೋಪಿ ಬಂಧನ: ನಗರದಲ್ಲಿ ಐಷಾರಾಮಿ ಜೀವನ ನಡೆಸಲೆಂದೇ ಬೀಗ ಹಾಕಿರುವ ಮನೆಗಳಲ್ಲಿ ಕಳವು ಮಾಡುತ್ತಿದ್ದ ಆರೋಪಿಯ್ನು ಎಚ್‌ಎಸ್‌ಆರ್ ಲೇಔಟ್ ಠಾಣೆ ಪೊಲೀಸರು ಬಂಧಿಸಿದ್ದಾರೆ. ಅಕ್ಷಯ್ ಕುಮಾರ್ (40) ಬಂಧಿತ ಆರೋಪಿ. ಬಂಧಿತನಿಂದ ₹ 8.5 ಲಕ್ಷ ಮೌಲ್ಯದ 178 ಗ್ರಾಂ ಚಿನ್ನಾಭರಣ, ಒಂದು ಲ್ಯಾಪ್‌ಟಾಪ್ ಹಾಗೂ ಎರಡು ಮೊಬೈಲ್ ವಶಕ್ಕೆ ಪಡೆಯಲಾಗಿದೆ.

ಮೂವರು ಅಂತರರಾಜ್ಯ ಕಳ್ಳರ ಬಂಧನ: ಮನೆ ಬಾಗಿಲು ಒಡೆದು ಚಿನ್ನಾಭರಣ ಕಳವು ಮಾಡುತ್ತಿದ್ದ ತಮಿಳುನಾಡಿನ ಇಬ್ಬರು ಸೇರಿ ಮೂವರು ಆರೋಪಿಗಳನ್ನು ಹುಳಿಮಾವು ಠಾಣೆ ಪೊಲೀಸರು ಬಂಧಿಸಿದ್ದಾರೆ. ಆರೋಪಿಗಳಿಂದ ₹ 27.40 ಲಕ್ಷ ಮೌಲ್ಯದ 533 ಗ್ರಾಂ ಚಿನ್ನಾಭರಣ, 113 ಗ್ರಾಂ ಬೆಳ್ಳಿ ಸಾಮಗ್ರಿ, 2 ಬೈಕ್ ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

5ಜಿಗೆ ಬೇಕಿದೆ ಸಿದ್ಧತೆ

ದುಬಾರಿ ಬೆಲೆಯ ಸ್ಮಾರ್ಟ್‌ಫೋನ್‌ಗಳೂ 5ಜಿ ಹಾರ್ಡ್‌ವೇರ್ ಹೊಂದಿದ್ದರೂ ಅವುಗಳ ಸಾಫ್ಟ್‌ವೇರ್ ಅಪ್‌ಡೇಟ್ ಆಗದ ಹೊರತು ಜನರು 5ಜಿ ಬಳಸಲು ಸಾಧ್ಯವಿಲ್ಲ.



ಕೃಷ್ಣ ಭಟ್

ಪ್ರಧಾನಿ ನರೇಂದ್ರ ಮೋದಿ ಅಕ್ಟೋಬರ್ 1ರಂದು ಇಂಡಿಯಾ ಮೊಬೈಲ್ ಕಾಂಗ್ರೆಸ್‌ನಲ್ಲಿ 5ಜಿ ಸೇವೆಗಳನ್ನು ಬಿಡುಗಡೆ ಮಾಡಿದಾಗ ಎಲ್ಲರಿಗೂ 5ಜಿ ಸೇವೆ ಸಿಕ್ಕೇ ಬಿಟ್ಟಿತು ಎಂದು ಭಾವಿಸಿದವರಿದ್ದಾರೆ! 5ಜಿ ಸ್ಮಾರ್ಟ್‌ಫೋನ್ ಇದ್ದರೆ ಸೀದಾ 5ಜಿ ಬಳಸಬಹುದು ಎಂದೇ ಅಂದುಕೊಂಡವರೂ ಇದ್ದಾರೆ. ವಾಸ್ತವದಲ್ಲಿ ಸರ್ಕಾರವೇನೋ ತರಂಗಾಂತರಗಳ ಹರಾಜು ಹಾಕಿ, ಅದನ್ನು ಎರಡೇ ದಿನದಲ್ಲಿ ಟೆಲಿಕಾಂ ಕಂಪನಿಗಳಿಗೆ ಪರಭಾರೆಯನ್ನೂ ಮಾಡಿತು. ಟೆಲಿಕಾಂ ಕಂಪನಿಗಳೂ ಕೆಲವು ವಲಯಗಳಲ್ಲಿ 5ಜಿ ತರಂಗಾಂತರಗಳನ್ನು ಹರಿಬಿಟ್ಟವು. ಆದರೆ, ಅದು ಜನರ ಕೈಗೆ ಅಷ್ಟು ಸುಲಭದಲ್ಲಿ ಸಿಗುವುದಿಲ್ಲ. ಇದಕ್ಕೆ ಅಡೆತಡೆ ಹಲವು.

4ಜಿ ಹಾಗೂ 3ಜಿಗಿಂತ 5ಜಿ ತರಂಗಾಂತರಗಳ ಬ್ಯಾಂಡ್‌ಗಳು ಸಂಕೀರ್ಣವಾದ ವ್ಯವಸ್ಥೆ. ಹೀಗಾಗಿ, ಈ ಎಲ್ಲ ಬ್ಯಾಂಡ್‌ಗಳಲ್ಲೂ ಸರಿಯಾಗಿ ಸ್ಮಾರ್ಟ್‌ಫೋನ್‌ಗಳು ಕಾರ್ಯನಿರ್ವಹಿಸುತ್ತವೆ ಎಂಬುದನ್ನು ಖಚಿತಪಡಿಸಿಕೊಳ್ಳಲು ಪರೀಕ್ಷೆಗಳು ನಡೆಯಬೇಕಿದೆ. 5ಜಿ ಬರುವುದಕ್ಕಿಂತಲೂ ಮೊದಲೇ ಮಾರಾಟವಾದ ಬಹುತೇಕ ಸ್ಮಾರ್ಟ್‌ಫೋನ್‌ಗಳ ಹಾರ್ಡ್‌ವೇರ್ 5ಜಿ ಬ್ಯಾಂಡ್‌ಗಳನ್ನು ಬೆಂಬಲಿಸುತ್ತವೆಯಾದರೂ, ಅವುಗಳು ಬೆಂಬಲಿಸುವ ಎಲ್ಲ ಬ್ಯಾಂಡ್‌ಗಳಲ್ಲೂ ಸರಿಯಾಗಿ ಕಾರ್ಯನಿರ್ವಹಿಸುತ್ತವೆ ಎಂಬುದನ್ನು ಖಚಿತಪಡಿಸಿಕೊಳ್ಳಲಿ ಟೆಸ್ಟಿಂಗ್ ನಡೆಸಿ ಅದನ್ನು ಬೆಂಬಲಿಸುವಂತೆ ಜನರಿಗೆ ಸಾಫ್ಟ್‌ವೇರ್ ಅಪ್‌ಡೇಟ್ ಮಾಡುವ ಪ್ರಕ್ರಿಯೆ ಇನ್ನೂ ಚಾಲ್ತಿಯಲ್ಲಿದೆ.

ದುಬಾರಿ ಬೆಲೆಯ ಸ್ಮಾರ್ಟ್‌ಫೋನ್‌ಗಳೂ 5ಜಿ ಹಾರ್ಡ್‌ವೇರ್ ಹೊಂದಿದ್ದರೂ ಅವುಗಳ ಸಾಫ್ಟ್‌ವೇರ್ ಅಪ್‌ಡೇಟ್ ಆಗದ ಹೊರತು ಜನರು 5ಜಿ ಬಳಸಲು ಸಾಧ್ಯವಿಲ್ಲ. ಇದಕ್ಕಾಗಿ ಇನ್ನೂ ಪರೀಕ್ಷೆ ನಡೆಯುತ್ತಿದೆ.

ಯಾಕೆ ಈ ವಿಳಂಬ?

ಇದಕ್ಕೆ ಕಾರಣ ಹಲವು. ಆರಂಭದಲ್ಲೇ ಸ್ಮಾರ್ಟ್‌ಫೋನ್ ಕಂಪನಿಗಳು ಮಾರುಕಟ್ಟೆಯಲ್ಲಿ ಪ್ರಚಾರ ಗಿಟ್ಟಿಸಿಕೊಳ್ಳಲೋ ಅಥವಾ ಅದಾಗಲೇ ಚೀನಾದಲ್ಲಿ 5ಜಿ ಬಳಕೆಗೆ ಬಂದಿದ್ದರಿಂದ ಅಲ್ಲಿಯ ಮಾರುಕಟ್ಟೆಗಾಗಿಯೋ 5ಜಿ ಹಾರ್ಡ್‌ವೇರ್‌ಗಳನ್ನು ಅಳವಡಿಸಿದವು. ಆದರೆ, ತೀರಾ ಆರೆಂಟು ತಿಂಗಳ ಹಿಂದೆಯೂ 5ಜಿ ಗೆ ಯಾವ ಬ್ಯಾಂಡ್‌ಗಳನ್ನು ಭಾರತದಲ್ಲಿ ಬಳಸಲಾಗುತ್ತದೆ ಎಂಬುದು ಖಚಿತವಿರಲಿಲ್ಲ.

ಇದೇ ಸಮಸ್ಯೆ, 4ಜಿ ಬಂದಾಗಲೂ ಆಗಿತ್ತು. ಆಗ 4ಜಿ ಕೇವಲ ತರಂಗಾಂತರ ಬದಲಾಗಲಿಲ್ಲ. ಬದಲಿಗೆ, ಕರೆಗಳನ್ನೂ ಡೇಟಾ ಮೂಲಕವೇ ಸಾಗಿಸುವ ವ್ಯವಸ್ಥೆ VoLTE ಬಂತು. 3ಜಿ ಯಲ್ಲಿ ಕರೆಗಳು ರೇಡಿಯೋ ಅಲೆಗಳ ಮೂಲಕ ನಮ್ಮ ಸ್ಮಾರ್ಟ್‌ಫೋನ್‌ನಿಂದ ಟವರ್‌ಗೆ ಹೋಗುತ್ತಿದ್ದವು. ಆದರೆ, VoLTE ವ್ಯವಸ್ಥೆಯಲ್ಲಿ ಸ್ಮಾರ್ಟ್‌ಫೋನ್‌ನಲ್ಲೇ ಕರೆಗಳು ಡೇಟಾ ಆಗಿ ಪರಿವರ್ತನೆಯಾಗಿ ಟವರ್‌ಗೆ ಹೋಗುವಂತಾಯಿತು. ಇದರಿಂದ ಕರೆಗಳಲ್ಲಿನ ಧ್ವನಿಯ ಗುಣಮಟ್ಟ ಸುಧಾರಿಸಿತು. ಈ ವ್ಯವಸ್ಥೆ ಅದಾಗಲೇ 4ಜಿ ಬೆಂಬಲಿಸುತ್ತಿದ್ದ ಫೋನ್‌ಗಳಲ್ಲೂ ಇರಲಿಲ್ಲ. ಹಾಗಾಗಿ, ಆ ವ್ಯವಸ್ಥೆಯನ್ನು ಮೊದಲು ಪರಿಚಯಿಸಿದ್ದ ರಿಲಾಯನ್ಸ್ ಜಿಯೋ, VoLTE ಬಳಸಲು ಅನುವಾಗಲಿ ಎಂದು ಪ್ರತ್ಯೇಕ ಆ್ಯಪ್ ಅನ್ನೇ ಬಿಡುಗಡೆ ಮಾಡಿತ್ತು.

ಇಂಥ ಗೊಂದಲ 5ಜಿಯಲ್ಲೂ ಮುಂದುವರಿದಿದೆ. ಈಗಾಗಲೇ ಮಾರುಕಟ್ಟೆಯಲ್ಲಿರುವ ಬಹುತೇಕ ಸ್ಮಾರ್ಟ್‌ಫೋನ್‌ಗಳು ಮಿಲಿಮೀಟರ್ ವೇವ್ಸ್ ಅನ್ನು ಬೆಂಬಲಿಸುವುದಿಲ್ಲ. ಆದರೆ, ನಿಜವಾದ 5ಜಿ ಅನುಭವವನ್ನು ನೀಡುವ ಬ್ಯಾಂಡ್‌ಗಳೇ ಇವು. ಈ ಬ್ಯಾಂಡ್‌ನಲ್ಲಿ ಒಂದು ಸೆಕೆಂಡಿಗೆ 3ಜಿಬಿ ಡೇಟಾವನ್ನು ಇಳಿಸಿಕೊಳ್ಳಬಹುದು. ಹೆಚ್ಚು ಬೆಲೆಯ ಸ್ಮಾರ್ಟ್‌ಫೋನ್‌ಗಳಲ್ಲಿ ಕೆಲವು ಈ ಬ್ಯಾಂಡ್ ಅನ್ನು ಬೆಂಬಲಿಸುತ್ತಿವೆ. ಹೀಗಾಗಿ, ಈ ಬ್ಯಾಂಡ್‌ನಲ್ಲಿ ಸ್ಮಾರ್ಟ್‌ಫೋನ್‌ಗಳು ಸರಿಯಾಗಿ ಕೆಲಸ ಮಾಡುತ್ತವೆಯೇ ಎಂಬುದೂ ಸೇರಿದಂತೆ ಹಲವು ಟೆಸ್ಟಿಂಗ್ ನಡೆಯುತ್ತಿದೆ.

ಬ್ಯಾಂಡ್‌ನಲ್ಲಿ ಅಸಲಿ ವೇಗ!

5ಜಿ ಹರಾಜಿನಲ್ಲಿ ಮೂರೂ ಕಂಪನಿಗಳೂ ವಿವಿಧ ಬ್ಯಾಂಡ್‌ಗಳ ತರಂಗಾಂತರಗಳನ್ನು ಖರೀದಿ ಮಾಡಿವೆ. ಏರ್‌ಟೆಲ್ 900 ಮೆ.ಹ. (ಎನ್‌8), 1800 ಮೆ.ಹ. (ಎನ್‌3), 2100 ಮೆ.ಹ. (ಎನ್‌1), 3300 ಮೆ.ಹ. (ಎನ್‌78) ಮತ್ತು 26 ಗಿಗಾ ಹರ್ಟ್ಸ್ (ಎನ್‌258 ಮಿಲಿಮೀಟರ್ ವೇವ್) ಖರೀದಿ ಮಾಡಿದ್ದರೆ, ಜಿಯೋ 700 ಮೆ.ಹ. (ಎನ್‌28), ಎನ್‌78, ಎನ್‌258 ಹಾಗೂ ವೋಡಾಫೋನ್ ಎನ್‌78 ಮತ್ತು ಎನ್‌258 ಅನ್ನು ಖರೀದಿ ಮಾಡಿವೆ. ಈ ಪೈಕಿ ಯಾವ ಫೋನ್‌ಗಳೂ ಎನ್‌258 ಬ್ಯಾಂಡ್ ಅನ್ನು ತನ್ನ ಹಾರ್ಡ್‌ವೇರ್‌ನಲ್ಲೂ ಬೆಂಬಲಿಸುವುದಿಲ್ಲ! ಆಗ, ಒಂದೊಂದು ಟೆಲಿಕಾಂ ಕಂಪನಿಯೂ ಹೊದಿರುವ ಬ್ಯಾಂಡ್‌ಗಳಿಗೆ ಸ್ಮಾರ್ಟ್‌ಫೋನ್‌ಗಳನ್ನು ಸಜ್ಜುಗೊಳಿಸಿ, ಆ ಕಂಪನಿ ಬೆಂಬಲಿಸುವ ಬ್ಯಾಂಡ್‌ಗಳಲ್ಲಿ ಸ್ಮಾರ್ಟ್‌ಫೋನ್‌ನ 5ಜಿ ಬೆಂಬಲಿಸುವುದನ್ನು ಖಚಿತಪಡಿಸಿಕೊಂಡು, ಅದಕ್ಕೆ ಅಗತ್ಯ ಸಾಫ್ಟ್‌ವೇರ್ ಅಪ್‌ಡೇಟ್ ಮಾಡಬೇಕಿರುವುದು ಸದ್ಯದ ಅಗತ್ಯ. ಇದಕ್ಕಾಗಿ, ಎಲ್ಲ ಸ್ಮಾರ್ಟ್‌ಫೋನ್ ತಯಾರಿಕೆ ಕಂಪನಿಗಳೂ ಆಯಾ ದೇಶದ ಟೆಲಿಕಾಂ ಕಂಪನಿಗಳ ಜೊತೆ ಸೇರಿ ಈ ಪರೀಕ್ಷೆ ನಡೆಸಬೇಕು!

ಕೆಲವು ಸ್ಮಾರ್ಟ್‌ಫೋನ್‌ಗಳು ಮಾತ್ರ ಬೆಂಬಲಿಸುವುದು ಏಕೆ?

ಈಗಾಗಲೇ ಟೆಲಿಕಾಂ ಕಂಪನಿಗಳು 5ಜಿ ನೆಟ್‌ವರ್ಕ್‌ಗಾಗಿ ಹರಾಜಿನಲ್ಲಿ ಪಡೆದಿರುವ ಕೆಲವು ಬ್ಯಾಂಡ್‌ಗಳಲ್ಲಿ ಈಗಾಗಲೇ 4ಜಿ ಸೇವೆ ಚಾಲ್ತಿಯಲ್ಲಿದೆ! ಉದಾಹರಣೆಗೆ, 700 ಮೆ.ಹ. ಮತ್ತು 800 ಮೆ.ಹ. ಬ್ಯಾಂಡ್‌ಗಳಲ್ಲಿ 4ಜಿ ಸೇವೆ ಲಭ್ಯವಿದೆ. ಅನಿಲ್ ಅಂಬಾನಿಯ ರಿಲಾಯನ್ಸ್ ಟೆಲಿಕಮ್ಯೂನಿಕೇಶನ್ಸ್‌ನಿಂದ ಜಿಯೋ 700 ಮೆ.ಹ. ತರಂಗಾಂತರಗಳನ್ನು ಖರೀದಿ ಮಾಡಿದ್ದರಿಂದಾಗಿ ಜಿಯೋ ಈಗಾಗಲೇ ಇರುವ ತರಂಗಾಂತರಗಳಲ್ಲೇ 5ಜಿ ಸೇವೆಯನ್ನು ನೀಡಬಲ್ಲ ಸಾಮರ್ಥ್ಯ ಹೊಂದಿದೆ. ಆದರೆ, ಈ ತರಂಗಾಂತರಗಳು ಹೆಚ್ಚೆಂದರೆ ಪ್ರತಿ ಸೆಕೆಂಡಿಗೆ 300 ಎಂಬಿ ಡೇಟಾ ಕೊಡಬಲ್ಲವು. ಆದರೆ, ಇವು ದೂರದವರೆಗೆ ಸಾಗುವ ಸಾಮರ್ಥ್ಯ ಹೊಂದಿವೆ. ಅಂದರೆ, 4ಜಿ ಟವರ್‌ಗಳಲ್ಲೇ ಈ ತರಂಗಾಂತರಗಳನ್ನು ನಿರ್ವಹಿಸಬಹುದು. ಹಾಗಾಗಿ, ಈಗಾಗಲೇ ಇರುವ ಸ್ಮಾರ್ಟ್‌ಫೋನ್‌ಗಳೇ ಈ ಬ್ಯಾಂಡ್‌ಗಳನ್ನು ಸುಲಭವಾಗಿ ಬೆಂಬಲಿಸುತ್ತವೆ. ಅದಕ್ಕೆ ಹೆಚ್ಚು ಟೆಸ್ಟ್ ಮಾಡುವ ಅಗತ್ಯ ಇರುವುದಿಲ್ಲ.
ಆದರೆ, ಎನ್‌258 ಹಾಗಲ್ಲ. ಇದು ಹೆಚ್ಚೆಂದರೆ 300-500 ಅಡಿ ದೂರಕ್ಕೆ ಸಂಕೇತಗಳನ್ನು ಹೊತ್ತೊಯ್ಯುತ್ತವೆ. ಅಷ್ಟೇ ಅಲ್ಲ, ಈ ಸಾಗುವ ಹಾದಿಯಲ್ಲಿ ಒಂದು ಮರದ ಎಲೆ ಅಡ್ಡವಾದರೂ ಅದನ್ನು ದಾಟಿ ಹೋಗಲಾರವು. ಇದಕ್ಕಾಗಿ ಸಣ್ಣ ಸೆಲ್‌ಗಳ ಟವರ್‌ಗಳು ಬೇಕಿರುತ್ತವೆ. ಇದನ್ನೆಲ್ಲ ಪರೀಕ್ಷೆ ಮಾಡಲು ಸಮಯ ಬೇಕಿದೆ.

ಸ್ಮಾರ್ಟ್‌ಫೋನ್ ತಯಾರಕರ ಮೇಲೆ ಜನರ ದೂರು 5ಜಿ ಸಿಗ್ನಲ್ ಬಂದು ಒಂದು ತಿಂಗಳಾಯಿತು. 5ಜಿ ಬೆಂಬಲಿಸುತ್ತದೆ ಎಂಬ ಕಾರಣಕ್ಕೆ ಸ್ಮಾರ್ಟ್‌ಫೋನ್ ತೆಗೆದುಕೊಂಡೆ. ಆದರೆ, ಈಗ ನೋಡಿದರೆ, ಸಾಫ್ಟ್‌ವೇರ್ ಬಂದ ಹೊರತು 5ಜಿ ಬಳಸುವುದಕ್ಕಾಗುವುದಿಲ್ಲ ಎಂದು ಕಂಪನಿ ಹೇಳುತ್ತಿದೆ. ಮೊಬೈಲ್ ಕಂಪನಿಗಳು ಮೋಸ ಮಾಡುತ್ತಿವೆ ಎಂಬ ಅಭಿಪ್ರಾಯ ಜನರಲ್ಲಿ ಈಗ ಮೂಡುತ್ತಿದೆ. ಇದು ಒಂದು ರೀತಿಯಲ್ಲಿ ನಿಜವಾದರೂ, ಅದರ ಹಿಂದಿನ ಹಲವು ಕಸರತ್ತುಗಳ ತಿಳಿವಳಿಕೆ ಇಲ್ಲದವರಿಗೆ ಇದು ಮೋಸ ಎನಿಸೀತು. ❖

ನಡೆಯುವುದು ಜಾರುವಷ್ಟೇ ಸುಲಭ!

ಅಮೃತೇಶ್ವರಿ ಬಿ.

ಇತರೆ ಪ್ರಾಣಿಗಳಂತೇ ನಾವೂ ನಾಲ್ಕು ಕಾಲುಗಳಲ್ಲೇ ನಡೆದಾಡುತ್ತಿದ್ದೆವು. ವಿಕಾಸವಾಗುತ್ತಿದ್ದಂತೇ ಎರಡು ಕಾಲುಗಳಲ್ಲಿ ನಡೆಯುವದನ್ನೂ, ಮುಂಗಾಲುಗಳನ್ನು ಕೈಗಳನ್ನಾಗಿ ಮಾಡಿಕೊಂಡು ಬದುಕುವುದನ್ನೂ ಕಲಿತೆವು ಎನ್ನುವುದು ವಿಕಾಸವಾದ. ಆದರೆ ಇನ್ನೂ ಮುಂದುವರಿದು ಪ್ರಸ್ತುತ ಯಾಂತ್ರೀಕರಣಗೊಂಡಿರುವ ಜೀವನಶೈಲಿಗೆ ನಾವು ತಲುಪಿದ್ದೇವೆ. ಆದರೆ ನಾಯಿ, ಹಸು, ಮೇಕೆ, ಕುರಿ, ಹುಲಿ, ಸಿಂಹ ಅಥವಾ ಯಾವುದೇ ನಾಲ್ಕು ಕಾಲುಗಳ ಪ್ರಾಣಿಗಳ ನಡಿಗೆಯನ್ನು ಎಂದಾದರೂ ಗಮನಿಸಿದ್ದೀರಾ? ಅವುಗಳ ನಡಿಗೆಯೂ ನಾವು ಎರಡೇ ಕಾಲುಗಳಲ್ಲಿ ನಡೆದಷ್ಟೇ ಸುಲಭವೇ, ಅದಕ್ಕಿಂತಲೂ ಸುಲಭವೇ ಅಥವಾ ಇನ್ನು ಸಂಕೀರ್ಣವೋ ಎಂದು ಯೋಚಿಸಿದ್ದೀರಾ? ಹಾಗೊಂದು ವೇಳೆ ಅದರತ್ತ ಗಮನ ಹರಿಸಿದ್ದರೂ ನಾಲ್ಕು ಕಾಲಿನ ಪ್ರಾಣಿಗಳ ನಡಿಗೆಯನ್ನು ನೋಡಿದರೆ ತುಂಬಾ ಸಂಕೀರ್ಣವಿರಬಹುದೇನೋ ಎನ್ನಿಸುತ್ತದೆ. ಅದು ಸರಿಯೂ ಹೌದು. ಇದು ನಮ್ಮ ಹಾಗೇ ವಿಜ್ಞಾನಿಗಳ ಕುತೂಹಲದ ಪ್ರಶ್ನೆಯೂ ಆಗಿತ್ತು. ಅದರ ಬೆನ್ನತ್ತಿದಾಗ ನಾಲ್ಕು ಕಾಲಿನ ಪ್ರಾಣಿಗಳಲ್ಲಿ ಒಂದು ಮುಂಗಾಲು ಹಾಗೂ ಅದರ ಹಿಂದಿನ ಕಾಲು, ಎರಡು ಕಾಲಿನ ಪ್ರಾಣಿಯಂತೆ ಚಲಿಸುತ್ತವೆ ಮತ್ತು ಇನ್ನೊಂದು ಮುಂಗಾಲು ಹಾಗೂ ಅದರ ಹಿಂದಿನ ಕಾಲು ಮತ್ತೊಂದು ದ್ವಿಪಾದಿಯಂತೆ ಚಲಿಸುತ್ತವೆ. ಅಂದರೆ ಎರಡು ದ್ವಿಪಾದಿ ಪ್ರಾಣಿಗಳಂತೆ ಚಲಿಸುತ್ತವೆ ಈ ಚತುಷ್ಪಾದಿಗಳು ಎನ್ನುವುದು ತಿಳಿಯಿತು. ಆದರೆ ನಾವು ಮಾತ್ರ ಇಂತಹ ಸಂಕೀರ್ಣ ಚಲನಾವ್ಯವಸ್ಥೆಯಿರುವ ಬಹುಪಾದಿ ಪ್ರಾಣಿಗಳನ್ನು ಅನುಕರಿಸಿ ನಮ್ಮ ಅನುಕೂಲಕ್ಕೆ ತಕ್ಕಂತೆ ನಮ್ಮಂತೆಯೇ ಕಾಣುವ ನಮ್ಮ ಕೆಲಸಗಳೆಲ್ಲವನ್ನೂ ಮಾಡಬಲ್ಲಂತಹ ರೋಬಾಟುಗಳನ್ನೂ ಕಂಡು ಹಿಡಿದು ಬದುಕನ್ನು ಸುಗಮಗೊಳಿಸಿಕೊಂಡಿದ್ದೇವೆ.

ರೋಬಾಟುಗಳು ಹೇಗೆ ನಡೆಯುತ್ತವೆ ಎನ್ನುವ ಕಲ್ಪನೆ ಎಲ್ಲರಿಗೂ ಇದೆ. ಅವು ನಮ್ಮಂತೆ ಸರಾಗವಾಗಿ ನಡೆಯಲಾರವು. ಅವುಗಳ ಕೈಕಾಲುಗಳ ಚಲನೆ ನಾವು ಚಲಿಸಿದಷ್ಟು ಆರಾಮದಾಯಕವಾಗಿ ತೋರುವುದಿಲ್ಲ. ಆದರೀಗ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾನಿಲಯದ ಡಿಪಾರ್ಟ್‌ಮೆಂಟ್ ಆಫ್ ಮೆಕ್ಯಾನಿಕಲ್ ಆ್ಯಂಡ್ ಏರೋಸ್ಪೇಸ್ ಎಂಜಿನಿಯರಿಂಗ್ ವಿಭಾಗದ ವಿಜ್ಞಾನಿ ನಿಕ್ ಗ್ರೇವಿಶ್ ಮತ್ತು ತಂಡದವರು ನಾಲ್ಕು ಕಾಲಿನಲ್ಲಿ ನಡೆಯುವುದು, ಅಂದರೆ ಬಹುಪಾದಿ ರೋಬಾಟುಗಳ ನಡಿಗೆ ಜಾರಿದಷ್ಟೇ ಸುಲಭ, ಎನ್ನುತ್ತಿದ್ದಾರೆ. ನಡೆಯುವಾಗ ಕಾಲುಗಳಿಗಿರುವ ಶ್ರಮ ಜಾರುವಾಗ ಇರುವುದಿಲ್ಲ ಅಲ್ಲವೇ?

ಇದನ್ನು ಅಧ್ಯಯನ ಮಾಡಲು ಇವರು ಆರು ಕಾಲುಗಳಿರುವ ಇರುವೆಗಳು ಹಾಗೂ ರೋಬಾಟುಗಳನ್ನು ಹೋಲಿಸಿ ನೋಡಿದ್ದಾರೆ. ಈ ಪ್ರಯೋಗದಲ್ಲಿ ಅರ್ಜೆಂಟೈನಾದ ಇರುವೆಗಳ ಅನೇಕ ಗೂಡುಗಳನ್ನು ಬೆನ್ನತ್ತಿ ಪರೀಕ್ಷಿಸಿದ್ದಾರೆ, ಗ್ರೇವಿಶ್ ಮತ್ತು ತಂಡದವರು. ಇವು ತಮ್ಮ ಗೂಡುಗಳು ನಾಶವಾದರೆ ಕೂಡಲೇ ಪುನಃ ಕಟ್ಟಿಕೊಳ್ಳಬಲ್ಲವಂತೆ. ವಿವಿಧ ಭೂಪ್ರದೇಶಗಳಲ್ಲಿಯೂ ಒಂದೇ ಸಮನೆ ಅತ್ಯಂತ ದೂರ ಕ್ರಮಿಸಬಲ್ಲವಂತೆ. ಒಟ್ಟಾರೆ ಸಾಹಸಿ ಇರುವೆಗಳು ಎಂತಲೇ ಹೇಳಬಹುದು. ಈ ಅರ್ಜೆಂಟೈನಾ ಇರುವೆಗಳನ್ನು ಪ್ರಯೋಗಕ್ಕೆ ಬಹಳ ಸುಲಭವಾಗಿ ಬಳಸಿಕೊಳ್ಳಬಹುದಂತೆ. ಹಾಗಾಗಿ ಗ್ರೇವಿಶ್ ಮತ್ತು ಸಹಸಂಶೋಧಕರು ನಿರ್ದಿಷ್ಟ ಜಾಗಗಳಲ್ಲಿ ಅವುಗಳಿಗೆ ಆಹಾರವನ್ನು ಇರಿಸಿ ಅದರೆಡೆಗೆ ಈ ಇರುವೆಗಳನ್ನು ಸೆಳೆದಿದ್ದಾರೆ. ಆಹಾರದ ವಾಸನೆ ಹಿಡಿದ ಇರುವೆಗಳು ಅದನ್ನು ಅರಸುತ್ತಾ ಸಾಲುಗಟ್ಟಿ ಸಾಗುತ್ತವೆ. ಹೀಗೆ ಚಲಿಸುವಾಗ ಅವುಗಳ ಚಲನೆಯನ್ನು ಅಧ್ಯಯನ ಮಾಡಿದ್ದಾರೆ ವಿಜ್ಞಾನಿಗಳು. ಈ ಹಿಂದೆಯೂ ವಿಜ್ಞಾನಿಗಳು ಇರುವೆಗಳ ಕಾಲುಗಳ ಚಲನೆಯ ಹಿಂದಿರುವ ವಿಜ್ಞಾನವನ್ನು ಅರಿತು ಅದನ್ನು ರೋಬಾಟುಗಳ ಮೇಲೆ ಅನ್ವಯಿಸಲು ಪ್ರಯತ್ನಿಸಿದ್ದಾರೆ. ಹೀಗೆ ಮಾಡುತ್ತಾ ನಡಿಗೆ, ಜಿಗಿತ, ಜಾರುವುದು ಹಾಗೂ



ಅಂಟುದ್ರವಗಳಲ್ಲಿ ಈಜುವುದು – ಇವುಗಳ ನಡುವಿನ ಸಂಬಂಧ ಹಾಗೂ ವ್ಯತ್ಯಾಸವನ್ನು ಪತ್ತೆಮಾಡಿ ಗಣಿತದ ಮಾದರಿಯೊಂದನ್ನು ರಚಿಸಿದ್ದರು.

ಅದುವೇ ಮಿಷಿಗನ್ ವಿಶ್ವವಿದ್ಯಾನಿಲಯದ ಶಾಯ್ ರೆವ್‌ಜೆನ್ ಮತ್ತು ತಂಡದವರು ರೂಪಿಸಿರುವ, ಪ್ರಾಣಿಗಳ ಸಂಕೀರ್ಣ ಚಲನೆಗಳನ್ನು ಅರ್ಥಮಾಡಿಕೊಳ್ಳಲು ಅವುಗಳ ಚಲನವಲನಗಳನ್ನು ಯಾವುದೋ ಆಕಾರಕ್ಕೆ ಹೋಲಿಸಿ ಸರಳೀಕರಿಸುವ ಒಂದು ನಿಯಮ. ಈ ನಿಯಮವನ್ನು ಬಳಸಿಕೊಂಡು ನಿಕ್ ಗ್ರೇವಿಶ್ ಮತ್ತು ಸಹಸಂಶೋಧಕರು ವಿವಿಧ ಪ್ರಾಣಿಗಳು ಹಾಗೂ ರೋಬಾಟುಗಳನ್ನು ಅಧ್ಯಯನ ಮಾಡಿದ್ದಾರೆ. ಈ ಮಾದರಿಯ ಸಹಾಯದಿಂದ ಗ್ರೇವಿಶ್ ಮತ್ತು ಸಂಗಡಿಗರು, ಈ ಕ್ಷಣ ಒಂದು ಭಾವಭಂಗಿಯಲ್ಲಿರುವ ಯಾವುದೋ ಪ್ರಾಣಿ, ಅಥವಾ ರೋಬಾಟು ಮುಂದಿನ ಕ್ಷಣ ಯಾವ ಭಂಗಿಯಲ್ಲಿ ಇರಬಹುದು ಎಂದು ಅಂದಾಜಿಸಿದ್ದಾರೆ. ನಂತರ ಈ ನಿಯಮವನ್ನು ಅವರು ಪರೀಕ್ಷೆಗೆ ತೆಗೆದುಕೊಂಡಿದ್ದ ಇರುವೆ ಹಾಗೂ ಎರಡು ವಿಭಿನ್ನ ರೀತಿಯ ಆರು ಕಾಲಿನ ಮತ್ತು ಬಹುಪಾದಿ ರೋಬಾಟುಗಳಿಗೆ ಅನ್ವಯಿಸಿ ನೋಡಿದ್ದಾರೆ. ಇರುವೆ ಹಾಗೂ ರೋಬಾಟುಗಳ ನಡಿಗೆಯಲ್ಲಿ ಬಹಳಷ್ಟು ವ್ಯತ್ಯಾಸವಿದ್ದರೂ, ಅವುಗಳ ಭಂಗಿಯ ಆಧಾರದ ಮೇಲೆ ಅವೆರಡೂ ನಂತರ ಯಾವ ಭಂಗಿಯನ್ನು ತೆಗೆದುಕೊಳ್ಳುತ್ತವೆ ಎಂದು ಅಂದಾಜಿಸಲು ಸಾಧ್ಯವಾಯಿತಂತೆ.
ನಾವು ನೆಲದ ಮೇಲೆ ಬೀಳದೆ ನಡೆಯುತ್ತಿದ್ದೇವೆ ಎಂದರೆ ನಮ್ಮ ಪಾದ ಹಾಗೂ ನೆಲದ ನಡುವೆ ಒಂದು ಘರ್ಷಣಾ ಬಲ ಏರ್ಪಟ್ಟಿರುತ್ತದೆ. ಈ ಘರ್ಷಣೆ ಇಲ್ಲದಿದ್ದರೆ ನಾವು ಬೀಳುವುದು ಸಹಜ. ರೋಬಾಟುಗಳೂ ಕೂಡ ಸುಲಭವಾಗಿ ನಡೆಯಬೇಕಾದರೆ ಈ ಘರ್ಷಣಾ ಬಲ ಅವಶ್ಯಕ. ಈ ಮಾದರಿಯು ಘರ್ಷಣೆಯಿರುವ ಎಲ್ಲಾ ಪ್ರದೇಶಗಳಲ್ಲಿ ಚಲಿಸುವ ರೋಬಾಟುಗಳಿಗೆ ಅನ್ವಯವಾಗಬಲ್ಲದಂತೆ.

ಈ ಗಣಿತದ ಮಾದರಿಯನ್ನು ಉಪಯೋಗಿಸಿ ಮೊದಲಿಗೆ ಜಾರುವುದು ಮತ್ತು ಅಂಟುದ್ರವಗಳಲ್ಲಿ ಈಜಾಡುವುದು ಹೇಗೆ ಎನ್ನುವುದನ್ನು ಮಾತ್ರ ತಿಳಿದುಕೊಳ್ಳುವ ಪ್ರಯತ್ನವಾಗಿತ್ತು.

ಈಗ ಗ್ರೇವಿಶ್ ಮತ್ತು ತಂಡದವರು ಅದೇ ನಿಯಮವನ್ನು ಉಪಯೋಗಿಸಿ ಬಹುಪಾದಿಗಳು ಅಂದರೆ ರೋಬಾಟುಗಳು ಆರಾಮಾಗಿ ನಡೆಯಬಲ್ಲವೇ ಅಥವಾ ಜಾರಿಬೀಳುತ್ತವೆಯೇ ಎಂದು ಪರೀಕ್ಷಿಸಿದ್ದಾರೆ. ನಡೆ, ಜಿಗಿ, ತೆವಳು ಅಥವಾ ಈಜು ಯಾವುದೇ ಚಲನೆಗೂ ಈ ಮಾದರಿಯು ಸಾರ್ವತ್ರಿಕವಾಗಿ ಅನ್ವಯವಾಗಬಲ್ಲದು ಎಂದು ಸಾಬೀತಾಗಿರುವುದರಿಂದ, ಇದರ ಸಹಾಯದಿಂದ ರೋಬಾಟುಗಳ ವಿನ್ಯಾಸ ಹಾಗೂ ಅವುಗಳ ಚಲನೆಯನ್ನು ಹೇಗೆಲ್ಲಾ ನಿಯಂತ್ರಿಸಬಹುದು ಎನ್ನುವುದರ ಬಗ್ಗೆ ಸೂಕ್ಷ್ಮ ಒಳನೋಟ ಸಿಕ್ಕಿದೆ ಎಂಬುದು ವಿಜ್ಞಾನಿಗಳ ನಂಬಿಕೆ. ❖

ಇಲಿಯ ಮೆದುಳಲ್ಲಿ 'ಮಾನವ'

ಇಲಿಗಳು ಮನುಷ್ಯನಂತೆ ಚಿಂತಿಸಬಲ್ಲವೇ? ನಡೆದುಕೊಳ್ಳಬಲ್ಲವೇ? ಮನುಷ್ಯನ ಕೋಶಗಳು ಇಲಿಗಳದ್ದರಂತೆ ಆಗಿಬಿಡಬಹುದೇ?

ಕೊಳ್ಳೇಗಾಲ ಶರ್ಮ

ಚಿಕ್ಕವನಾಗಿದ್ದಾಗ 'ಹೊಯ್ಟಿ, ಟೊಯ್ಟಿ' ಎನ್ನುವ ಕಥೆಯನ್ನು ಓದಿದ್ದೆ. ಅದೊಂದು ಆನೆಯ ಕಥೆ. ಆಫ್ರಿಕಾದ ಆನೆಯೊಂದಕ್ಕೆ ಹೃದಯ ನಿಂತಾಗ, ನಿಧನನಾಗಿದ್ದ ಜರ್ಮನ್ ವಿಜ್ಞಾನಿಯೊಬ್ಬನ ಮೆದುಳನ್ನು ಜೋಡಿಸಲಾಗಿರುತ್ತದೆ. ಗುಪ್ತವಾಗಿ ನಡೆದ ಈ ಪ್ರಯೋಗದ ಫಲ ಅನಂತರ ಸರ್ಕಸ್ಸಿನಲ್ಲಿ ನೋಡುಗರನ್ನು ತನ್ನ ಬುದ್ಧಿವಂತಿಕೆಯಿಂದ ರಂಜಿಸುತ್ತದೆ. ಒಮ್ಮೆ ಏತಕ್ಕೋ ಸಿಟ್ಟಾಗಿ ಸರ್ಕಸ್ಸಿನಿಂದ ತಪ್ಪಿಸಿಕೊಂಡು ಹೋದ ಆನೆ ಊರೆಲ್ಲಾ ದಾಂಧಲೆ ಮಾಡುತ್ತದೆ. ತನ್ನನ್ನು ಸೃಷ್ಟಿಸಿದ ವಿಜ್ಞಾನಿಯ ಭೇಟಿ ಆಗುತ್ತದೆ. ಶಾಂತವಾಗುತ್ತದೆ. ಎಲ್ಲರಿಗೂ ಈ ಗುಪ್ತವಿಚಾರ ಗೊತ್ತಾಗುತ್ತದೆ. ಇದು ಕಥೆ. ರಷ್ಯನ್ ಭಾಷೆಯಲ್ಲಿ ಮೊದಲಿಗೆ ಎ. ಬೆಲ್ಯೋವ್ ಎಂಬಾತ ಬರೆದಿದ್ದ ಈ ವೈಜ್ಞಾನಿಕ ಕಥೆಯ ಕನ್ನಡಾನುವಾದ 'ಮಯೂರ' ಪತ್ರಿಕೆಯಲ್ಲಿ ಪ್ರಕಟವಾಗಿತ್ತು. ಮಕ್ಕಳಲ್ಲಿ ಬೆರಗು ಮೂಡಿಸಿತ್ತು.

ಕನ್ನಡಕ್ಕೆ ಈ ಕಥೆಯನ್ನು ಅನುವಾದಿಸಿದವರು ಯಾರೆಂಬುದು ನೆನಪಿಲ್ಲದಿದ್ದರೂ, ಕಥೆಯ ಹೂರಣ ಮಾತ್ರ ಮರೆಯಲಾಗಿಲ್ಲ. ಹೌದೇ? ಮೆದುಳನ್ನು ಕಸಿ ಮಾಡಿದರೆ ವ್ಯಕ್ತಿತ್ವ ಬದಲಾಗುತ್ತದೆಯೇ? ಆನೆಯು ಮನುಷ್ಯನಂತೆ ನಡೆದುಕೊಳ್ಳಬಹುದೇ? ಹೀಗೆಲ್ಲ ಆಗ ಪ್ರಶ್ನೆಗಳು ಎದ್ದಿದ್ದುವು. ತದನಂತರ ವಿಜ್ಞಾನವನ್ನು ಅಧ್ಯಯನ ಮಾಡುತ್ತ ಹೋದ ಹಾಗೆ, ಈ ಬಗೆಯ ಮೆದುಳಿನ ಕಸಿ ಕಷ್ಟಕರ ಎಂದು ತಿಳಿದಾಗ, ಹೊಯ್ಟಿ-ಟೊಯ್ಟಿಯ ಅದ್ಭುತವೆನ್ನಿಸಿತು. ಮೊನ್ನೆ 'ನೇಚರ್' ಪತ್ರಿಕೆಯಲ್ಲಿ ಪ್ರಕಟವಾಗಿರುವ ಸಂಶೋಧನೆಯೊಂದು ಇದೇ ಬಗೆಯಲ್ಲಿ ಇಲಿಯ ಮೆದುಳಿನೊಳಗೆ ಮನುಷ್ಯನ ಇಡೀ ಮೆದುಳಲ್ಲದಿದ್ದರೂ ಕೆಲವು ನರಕೋಶಗಳನ್ನು ಕಸಿ ಮಾಡಿರುವ ಬಗ್ಗೆ ವರದಿ ಮಾಡಿದೆ.

ಅಮೆರಿಕೆಯ ಸ್ಟ್ಯಾನ್‌ಫರ್ಡ್ ವಿಶ್ವವಿದ್ಯಾನಿಲಯದ ನರವಿಜ್ಞಾನಿ ಸರ್ಜೂ ಪ್ಯಾಶ್ಕ ಮತ್ತು ಸಂಗಡಿಗರು ಪ್ರನಾಳಗಳಲ್ಲಿ ಬೆಳೆಸಿದ ಮಾನವ ನರಕೋಶಗಳ ಮುದ್ದೆಯನ್ನು ಇಲಿಮರಿಗಳ ಮೆದುಳಿನಲ್ಲಿ ಕಸಿ ಮಾಡಿ, ಅವು ಅಲ್ಲಿ ಉಳಿದು, ಬೆಳೆದು, ಕೆಲಸ ಮಾಡುತ್ತವೆಯೋ ಎಂದು ಪರೀಕ್ಷಿಸಿದ್ದಾರೆ. ಮನುಷ್ಯರ ನರಕೋಶಗಳನ್ನು ಕೃಷಿ ಮಾಡಿದರೆ, ಅವು ಸಣ್ಣ ಮುದ್ದೆಯಾಗಿ ಬೆಳೆಯುತ್ತವೆಯೇ ಹೊರತು



ಮೆದುಳಿನಂತೆ ವ್ಯವಸ್ಥಿತವಾಗಿ ಹೆಣೆದ ನರಗಳ ಜಾಲವಾಗುವುದಿಲ್ಲ. ಮೆದುಳಿನ ಚಟುವಟಿಕೆಗೆ ಇಂತಹ ಜಾಲಗಳೇ ಕಾರಣ. ಹೀಗಾಗಿ ಕೋಶಗಳ ಮುದ್ದೆಯನ್ನು ಇಲಿಗಳ ಮೆದುಳಿನಲ್ಲಿ ಬೆಳೆಸಿ, ಅವು ಜಾಲದೊಳಗೆ ಬೆಸೆದುಕೊಳ್ಳಬಹುದೇ ಎಂದು ಪ್ಯಾಶ್ಕ ಮತ್ತು ಸಂಗಡಿಗರು ಪರೀಕ್ಷಿಸಿದ್ದಾರೆ.

ಇನ್ನೂ ಮೆದುಳು ಚೆನ್ನಾಗಿ ಬೆಳೆಯದ ಇಲಿಮರಿಗಳ ಶಿರದಲ್ಲಿ ಒಂದಿಷ್ಟು ಮಾನವಕೋಶಗಳನ್ನು ಕಸಿ ಮಾಡಿದ್ದಾರೆ. ಮೀಸೆಗಳನ್ನು ನಿಯಂತ್ರಿಸುವ ಇಲಿಗಳ ಮೆದುಳಿನ ಭಾಗದಲ್ಲಿ ಇವನ್ನು ಇರಿಸಿ, ಎಂಆರ್‌ಐ ತಂತ್ರದ ಮೂಲಕ ಬೆಳವಣಿಗೆಯನ್ನು ಗಮನಿಸಿದ್ದಾರೆ. ಇಲಿಗಳ ಮೆದುಳಿನಲ್ಲಿ ಹೀಗೆ ನೆಟ್ಟ ಕೋಶಗಳು ಕ್ರಮೇಣ ಬೆಳೆದು ಒಂಬತ್ತು ಪಾಲು ದೊಡ್ಡದಾದುವಂತೆ. ಅಷ್ಟೇ ಅಲ್ಲ. ಇಲಿಗಳದ್ದೇ ನರಕೋಶಗಳ ಜೊತೆಗೆ ಬೆಸೆದುಕೊಂಡು, ಜಾಲದೊಳಗೆ ಒಂದಾದುವು ಎನ್ನುತ್ತಾರೆ ಪ್ಯಾಶ್ಕ.

ಅವು ಅಲ್ಲಿ ಸುಮ್ಮನೇ ಬೆಳೆದವ್ರೋ, ಇಲ್ಲ ಇಲಿಯ ಮೆದುಳಿನ ಅಂಗವಾಗಿ ಕೆಲಸ ಮಾಡುತ್ತಿದ್ದುವ್ರೋ ಗಮನಿಸಲು ಮೀಸೆಗಳಿಗೆ ಚುರುಕು ಮುಟ್ಟಿಸಿ ಗಮನಿಸಿದರು. ಮೀಸೆಗಳು ಅಲ್ಲಾಡಿದಾಗೆಲ್ಲ, ಈ ಮಾನವ ನರಕೋಶಗಳು ಚುರುಕಾಗಿ ವಿದ್ಯುತ್ ಹರಿಸುತ್ತಿದ್ದುವು. ಅರ್ಥಾತ್, ಅವು ಕಾರ್ಯಪ್ರವೃತ್ತವಾಗಿದ್ದುವು ಎನ್ನುತ್ತಾರೆ ಪ್ಯಾಶ್ಕ.

ಆದರೆ ಇವು ನಿಜವಾಗಿಯೂ ಮನುಷ್ಯನ ನರಕೋಶಗಳಾಗಿಯೇ ಉಳಿದಿವೆಯೇ ಅಥವಾ ಇಲಿಗಳದ್ದೋ ಎಂದು ತಿಳಿಯಬೇಕಲ್ಲ! ಇದಕ್ಕಾಗಿ ಪ್ಯಾಶ್ಕ ತಂಡ ಕಸಿ ಮಾಡುವ ಮೊದಲು ಜೀವಕೋಶಗಳನ್ನು ಗುರುತಿಸಲಾಗುವಂತೆ ಮಾರ್ಪಡಿಸಿತ್ತು. ಬೆಳಕು ಬಿದ್ದಾಗ ವಿದ್ಯುತ್ ಹೊಮ್ಮಿಸುವ ಪ್ರೋಟೀನು ತಯಾರಿಸುವಂತೆ ಅವುಗಳನ್ನು ತಿದ್ದಿತ್ತು. ಇಂತಹ ಕೋಶಗಳನ್ನು ಕಸಿ ಮಾಡಿದ ಇಲಿಗಳ ಮೆದುಳಿನ ಭಾಗಗಳ ಮೇಲೆ ಬೆಳಕು ಚೆಲ್ಲಿದಾಗ ಅವು ವಿದ್ಯುತ್ ಸಂಕೇತಗಳನ್ನು ಸೃಷ್ಟಿಸಿದುವು. ಅರ್ಥಾತ್, ಇಲಿಗಳ ಮೆದುಳಿನಲ್ಲಿ ಇದ್ದಾಗಲೂ ಇವು ತಮ್ಮತನವನ್ನು ತೋರ್ಪಡಿಸಬಲ್ಲುವು ಎಂದಾಯಿತು.

ಹಾಗಿದ್ದರೆ ಇಲಿಗಳು ಮನುಷ್ಯನಂತೆ ಚಿಂತಿಸಬಲ್ಲವೇ? ನಡೆದುಕೊಳ್ಳಬಲ್ಲವೇ? ಅಥವಾ ಮನುಷ್ಯನ ಕೋಶಗಳು ಇಲಿಗಳದ್ದರಂತೆ ಆಗಿಬಿಡಬಹುದೇ? ಈ ಪ್ರಶ್ನೆಗಳಿಗೆ ಉತ್ತರಿಸಲು ಇನ್ನೂ ಸಾಕಷ್ಟು ಕಾಲ ಬೇಕು ಎನ್ನುತ್ತಾರೆ ಪ್ಯಾಶ್ಕ. ಏಕೆಂದರೆ ಕಸಿ ಮಾಡಿದ ಮೇಲೆ ಒಂಬತ್ತು ಪಟ್ಟು ದೊಡ್ಡದಾದ ಮನುಷ್ಯ ಕೋಶಗಳು ಇಲಿಗಳ ಮೆದುಳಿನಲ್ಲಿರುವ ಎರಡು ಕೋಟಿ ನರಕೋಶಗಳಲ್ಲಿ ಕೇವಲ ಒಂದು ಶತಾಂಶಕ್ಕೂ ಕಡಿಮೆಯಷ್ಟೆ ಇವೆ. ಮನುಷ್ಯನ ಮೆದುಳಿನಲ್ಲಿ ಇದರ ಹತ್ತು ಪಟ್ಟು ಹೆಚ್ಚು ಕೋಶಗಳಿವೆ. ಅವೆಲ್ಲವೂ ಸೇರಿ ಮಾಡುವ ಕೆಲಸವನ್ನು ಈ ಪುಟಾಣಿ ನರಗಳ ಗುಂಪು ಮಾಡುತ್ತದೆನ್ನುವುದು ಊಹೆಗೂ ನಿಲುಕದ ವಿಷಯ.

ಹಾಗಿದ್ದರೆ ಹೊಯ್ಟಿ ಟೊಯ್ಟಿ ಕಥೆ ನಿಜವಾಗುವುದಿಲ್ಲವೇ? ಕನಿಷ್ಠ ಇಲಿಗಳಲ್ಲಿಯಂತೂ ಆಗುವುದಿಲ್ಲ. ಏಕೆಂದರೆ ಮನುಷ್ಯನ ಮೆದುಳು ಐದು ತಿಂಗಳು ಬೆಳೆದಲ್ಲದೆ ಪೂರ್ಣ ಪ್ರಮಾಣದ ಸಾಮರ್ಥ್ಯವನ್ನು ಪಡೆಯಲಾರದು. ಇಷ್ಟು ಅವಧಿಯಲ್ಲಿ ಇಲಿ ತನ್ನ ಜೀವನದ ಕಾಲು ಭಾಗವನ್ನೇ ಕಳೆದು ಬಿಟ್ಟಿರುತ್ತದೆ. ಅಂದರೆ ಇಲಿಯ ಮೆದುಳಿನ ಬೆಳವಣಿಗೆಯಷ್ಟು ವೇಗವಾಗಿ ಮನುಷ್ಯನ ನರಕೋಶಗಳೂ ಬೆಳೆಯಬೇಕಷ್ಟೆ. ಇದು ಸಾಧ್ಯವೋ ತಿಳಿದಿಲ್ಲ.
ಹಾಗಿದ್ದರೆ ಇಂತಹ ಪ್ರಯೋಗಗಳ ಪ್ರಯೋಜನವೇನು? ಇದಕ್ಕೂ ಪ್ಯಾಶ್ಕ ತಂಡ ಉತ್ತರಿಸಿದೆ. ಮನುಷ್ಯರಲ್ಲಿ ಅತಿ ಅಪರೂಪವೆನ್ನಿಸುವ ಕೆಲವು ನರರೋಗಗಳ ಮೆದುಳಿನಿಂದ ತೆಗೆದ ನರಕೋಶಗಳನ್ನು ಈ ಇಲಿಗಳಲ್ಲಿ ಬೆಳೆಸಿ ಗಮನಿಸಿದೆ. ಸಾಮಾನ್ಯ ಮೆದುಳಿನ ಕೋಶಗಳಲ್ಲಿ ಇಲ್ಲದ ಕೆಲವು ದೋಷಗಳು ಈ ಕೋಶಗಳಲ್ಲಿ ಕಂಡು ಬಂದಿವೆ. ಇಲಿಗಳಲ್ಲಿ ಅವುಗಳ ಚಟುವಟಿಕೆ ಕುಂದಿದೆ. ಹೀಗಾಗಿ ಏನಿಲ್ಲವೆಂದರೂ ಮನುಷ್ಯರ ಮೆದುಳಿನ ಕೆಲವು ಚಟುವಟಿಕೆಗಳನ್ನು ಅರ್ಥ ಮಾಡಿಕೊಳ್ಳಲು ಇಂಥ ಕಸಿಪ್ರಯೋಗಗಳು ನೆರವಾಗಬಹುದು ಎನ್ನುವುದು ಪ್ಯಾಶ್ಕ ಅವರ ಆಶಯ. ❖

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ಆ ದಿವ್ಯಶಕ್ತಿಯೇ ಈ ಮಣ್ಣ ಹಣತೆಯಲಿ ಹರಿಯುತಿರೆ,
ಕಿರಿಹಣತೆ ಕಿರಿದಾದರೇನು? ಬೆಳಕ ಬೀರುವ ಶಕ್ತಿ
ಹಿರಿದಲ್ಲವೇನು?

-ಜಿ.ಎಸ್. ಶಿವರುದ್ರಪ್ಪ

ಬ್ರಿಟನ್ ಪ್ರಧಾನಿ ರಿಷಿ ಮುಂದೆ ಸವಾಲುಗಳ ಸಾಲು ಸಾಲು

ಬ್ರಿಟನ್ ಆರ್ಥಿಕವಾಗಿ ಅತೀವ ಸಂಕಷ್ಟದಲ್ಲಿರುವ ಮತ್ತು ರಾಜಕೀಯವಾಗಿ ಚಂಚಲ ಹಾಗೂ ಅಸ್ಥಿರವಾಗಿರುವ ಈ ಹೊತ್ತಿನಲ್ಲಿ ರಿಷಿ ಸುನಕ್ ಅವರು ಪ್ರಧಾನಿಯಾಗಿ ಅಧಿಕಾರ ವಹಿಸಿಕೊಂಡಿದ್ದಾರೆ. ಈ ಹಿಂದೆ ನಾಯಕತ್ವಕ್ಕಾಗಿ ನಡೆದ ಪೈಪೋಟಿಯಲ್ಲಿ ಲಿಜ್ ಟ್ರಸ್ ಅವರು ರಿಷಿ ಅವರನ್ನು ಸೋಲಿಸಿದ್ದರು. 44 ದಿನಗಳ ಸಂಕ್ಷಿಪ್ತ ಅವಧಿಯ ಅಧಿಕಾರದ ನಂತರ ಟ್ರಸ್ ಅವರು ಅಧಿಕಾರ ತೊರೆಯುವುದಾಗಿ ಘೋಷಿಸಿದರು. ಹಾಗಾಗಿ, ಪ್ರಧಾನಿ ಹುದ್ದೆಗೆ ರಿಷಿ ಅವರನ್ನು ಬಿಟ್ಟು ಬೇರೆ ಆಯ್ಕೆಯೇ ಇಲ್ಲದ ಸ್ಥಿತಿ ನಿರ್ಮಾಣ ಆಗಿತ್ತು. ಸಾಂಪ್ರದಾಯಿಕವಾದ ರೀತಿಯಲ್ಲಿಯೇ ಅವರ ಆಯ್ಕೆ ನಡೆಯಿತು. ಮತದಾನವೇ ಇಲ್ಲದೆ ಅವರು ಸ್ಪರ್ಧೆಯಲ್ಲಿ ಗೆದ್ದರು. ಸ್ಪರ್ಧಿಸಲು ಅಗತ್ಯವಾದ 100 ಸಂಸದರ ಬೆಂಬಲ ಗಳಿಸಲು ಕೂಡ ಆಕಾಂಕ್ಷಿಗಳಾಗಿದ್ದ ಇತರರಿಗೆ ಸಾಧ್ಯವಾಗದಿದ್ದುದು ರಿಷಿ ಅವರ ಗೆಲುವನ್ನು ಸುಲಲಿತವಾಗಿಸಿತು. ನಾಲ್ಕು ತಿಂಗಳಲ್ಲಿ ಬ್ರಿಟನ್‌ನ ಪ್ರಧಾನಿಯಾದ ಮೂರನೇ ವ್ಯಕ್ತಿಯಾಗಿರುವ ಇವರು ಸದ್ಯದ ಹೊಸ ತಂಡವನ್ನು ಕಟ್ಟಿಕೊಳ್ಳಲಿದ್ದಾರೆ. 2016ರಲ್ಲಿನ ಬ್ರೆಕ್ಸಿಟ್ ಜನಮತಗಣನೆಯ ಬಳಿಕ ಪ್ರಧಾನಿ ಹುದ್ದೆಗೇರಿದ ಕನ್ಸರ್ವೇಟಿವ್ ಪಕ್ಷದ ಐದನೇ ನಾಯಕ ಇವರು. ಎರಡು ಶತಮಾನಗಳಲ್ಲಿಯೇ ಅತ್ಯಂತ ಕಿರಿಯ ಪ್ರಧಾನಿ ಎಂಬ ಹೆಗ್ಗಳಿಕೆಯೂ ಅವರಿಗೆ ಇದೆ. ಅವರು ಈ ಹುದ್ದೆಗೇರಿದ ಬಿಳಿಯನಲ್ಲದ, ಏಷ್ಯಾದ ಮತ್ತು ಹಿಂದೂ ಧರ್ಮದ ಮೊದಲ ವ್ಯಕ್ತಿ ಎನಿಸಿಕೊಂಡಿದ್ದಾರೆ.

ರಿಷಿ ಅವರು ಅತ್ಯುನ್ನತ ಅಧಿಕಾರ ಸ್ಥಾನಕ್ಕೆ ಏರಿರುವುದು ಬ್ರಿಟನ್‌ನ ಪ್ರಜಾಸತ್ತೆಯು ಅತ್ಯಂತ ಪ್ರಬುದ್ಧ ಸ್ಥಿತಿಗೆ ತಲುಪಿದೆ ಎಂಬ ಸೂಚನೆಯನ್ನೂ ನೀಡುತ್ತದೆ

ರಿಷಿ ಅವರ ಮುಂದೆ ಹತ್ತು ಹಲವು ಸವಾಲುಗಳಿವೆ. ಲಿಜ್ ಟ್ರಸ್ ಅವರ ಅವಧಿಯಲ್ಲಿ ಮಂಡಿಸಲಾದ ಕಿರು-ಬಜೆಟ್‌ನ ಪರಿಣಾಮವಾಗಿ ತತ್ತರಗೊಂಡ ಅರ್ಥ ವ್ಯವಸ್ಥೆಯನ್ನು ಅವರು ಸರಿದಾರಿಗೆ ತರಬೇಕಿದೆ. ಹಣದುಬ್ಬರವನ್ನು ನಿಯಂತ್ರಿಸಬೇಕಿದೆ ಮತ್ತು ಆರ್ಥಿಕ ಹಿಂಜರಿತದ ಅಪಾಯವನ್ನು ತಪ್ಪಿಸಬೇಕಿದೆ. ಇಂಧನ ದರದಲ್ಲಿ ಆಗಿರುವ ಭಾರಿ ಏರಿಕೆ, ಬಡ್ಡಿ ದರದ ತೀವ್ರ ಹೆಚ್ಚಳವು ದೇಶದ ಅರ್ಥವ್ಯವಸ್ಥೆಯನ್ನು ಬಾಧಿಸಿದೆ. ಹಾಗೆಯೇ ಅದು ಕುಟುಂಬ ನಿರ್ವಹಣೆಯ ವೆಚ್ಚವನ್ನು ಅಗಾಧಗೊಳಿಸಿದೆ. ಇದನ್ನು ಸರಿಪಡಿಸಬೇಕಿದೆ. ರಾಷ್ಟ್ರೀಯ ಆರೋಗ್ಯ ಸೇವೆಯು ಮರುಚೇತನಗೊಳ್ಳುವಂತೆ ನೋಡಿಕೊಳ್ಳಬೇಕಿದೆ. ಆರ್ಥಿಕ ಹಿಂಜರಿತ ಮತ್ತು ಹಣಕಾಸು ಸಮಸ್ಯೆಗಳು ಈಗ ಆರಂಭವಾಗಿದ್ದೇನೂ ಅಲ್ಲ. ಅವುಗಳ ಮೂಲವನ್ನು ಬ್ರೆಕ್ಸಿಟ್ ಕಾಲದಲ್ಲಿ ಮತ್ತು ಅದಕ್ಕೂ ಹಿಂದೆಯೇ ಗುರುತಿಸಬಹುದು. ಈ ಹಿಂದೆ ಆಳ್ವಿಕೆ ನಡೆಸಿದ ಕೆಲವರು ಈ ಸಮಸ್ಯೆಗಳನ್ನು ಸರಿಯಾಗಿ ನಿಭಾಯಿಸಿಲ್ಲ. ಲಿಜ್ ಟ್ರಸ್ ಅವರ ಪ್ರಯೋಗಗಳು ಫಲ ಕೊಡಲಿಲ್ಲ ಮಾತ್ರವಲ್ಲ ಅವು ಸಮಸ್ಯೆಗಳನ್ನು ಇನ್ನಷ್ಟು ಗೋಜಲುಗೊಳಿಸಿದವು. ಹಣಕಾಸಿನ ಕುರಿತು ಅರಿವು ಇರುವ ಪ್ರಬುದ್ಧ ವ್ಯಕ್ತಿ ಎಂಬ ಖ್ಯಾತಿ ರಿಷಿ ಅವರಿಗೆ ಇದೆ. ಹಾಗೆಯೇ ಹಣಕಾಸು ಸಚಿವನಾಗಿ ಕೆಲಸ ಮಾಡಿದ ಅನುಭವ ಇದೆ. ಕೋವಿಡ್ ಸಂದರ್ಭದಲ್ಲಿ ಅರ್ಥ ವ್ಯವಸ್ಥೆಯನ್ನು ಸರಿಯಾಗಿ ನಿಭಾಯಿಸಿದ್ದರು ಎಂದೂ ಜನರು ಅವರನ್ನು ಹೊಗಳಿದ್ದಾರೆ. ತೆರಿಗೆ ಕಡಿತಗೊಳಿಸುವ ಯೋಜನೆಯನ್ನು ಟ್ರಸ್ ಅವರು ಪ್ರಕಟಿಸಿದಾಗ, ಅದು ತಿರುಗುಬಾಣ ಆಗಬಹುದು ಎಂದು ಎಚ್ಚರಿಸಿದ್ದವರು ರಿಷಿ. ಅವರು ನೀಡಿದ್ದ ಎಚ್ಚರಿಕೆ ನಿಜವಾಯಿತು ಎಂಬುದು ಗಮನಾರ್ಹ. ಅರ್ಥ ವ್ಯವಸ್ಥೆಯನ್ನು ಸರಿಪಡಿಸುವುದು ಸುದೀರ್ಘವಾದ ಪ್ರಕ್ರಿಯೆ. ಆದರೆ, ರಿಷಿ ಅವರಿಗೆ ಬಹಳಷ್ಟು ಸಮಯವೇನೂ ಇಲ್ಲ. 2025ರ ಜನವರಿಯಲ್ಲಿ ಚುನಾವಣೆ ಇದೆ. ಅದಕ್ಕೂ ಮುಂಚೆ ಇನ್ನೊಂದು ಬಾರಿ ನಾಯಕತ್ವ ಬದಲಾವಣೆಗೆ ಕನ್ಸರ್ವೇಟಿವ್ ಪಕ್ಷವು ಕೈಹಾಕದು. ವಿರೋಧ ಪಕ್ಷ ಲೇಬರ್ ಪಾರ್ಟಿಯು ತಕ್ಷಣವೇ ಚುನಾವಣೆ ನಡೆಸಬೇಕು ಎಂದು ಆಗ್ರಹಿಸುತ್ತಿದೆ. ರಿಷಿ ಅವರು ಪ್ರಧಾನಿ ಹುದ್ದೆಯ ಅಭ್ಯರ್ಥಿಯಾಗಿ ಜನರಿಂದ ಆಯ್ಕೆ ಆದವರು ಅಲ್ಲ ಎಂಬುದು ಆ ಪಕ್ಷವು ಅವಧಿಪೂರ್ವ ಚುನಾವಣೆಗೆ ನೀಡುತ್ತಿರುವ ಕಾರಣ.

ರಿಷಿ ಅವರು ಅತ್ಯುನ್ನತ ಅಧಿಕಾರ ಸ್ಥಾನಕ್ಕೆ ಏರಿರುವುದು ಬ್ರಿಟನ್‌ನ ಪ್ರಜಾಸತ್ತೆಯು ಅತ್ಯಂತ ಪ್ರಬುದ್ಧ ಸ್ಥಿತಿಗೆ ತಲುಪಿದೆ ಎಂಬ ಸೂಚನೆಯನ್ನೂ ನೀಡುತ್ತದೆ. ಅವರು ಬ್ರಿಟನ್‌ನಲ್ಲಿಯೇ ಹುಟ್ಟಿ ಬೆಳೆದವರು. ಆದರೆ ಅವರಿಗೆ ಬೇರೆ ಅಸ್ಮಿತೆಗಳೂ ಇವೆ. ಈ ಭಿನ್ನ ಅಸ್ಮಿತೆಗಳೇ ಉನ್ನತ ಹುದ್ದೆ ಪಡೆಯುವುದಕ್ಕೆ ಅವರಿಗೆ ಅಡ್ಡಿ ಆಗಬಹುದಿತ್ತು. ಬಿಳಿಯರಲ್ಲದ ಮತದಾರರು ಅಷ್ಟಾಗಿ ಇಷ್ಟಪಡದ ಕನ್ಸರ್ವೇಟಿವ್ ಪಕ್ಷದ ನಾಯಕ ಅವರು ಎಂಬುದು ಕೂಡ ಗಮನಿಸಬೇಕಾದ ವಿಚಾರವೇ ಆಗಿದೆ. ಆ ಸಮಾಜವು ಹೆಚ್ಚು ಹೆಚ್ಚು ಒಳಗೊಳ್ಳುವ ಗುಣವನ್ನು ಬೆಳೆಸಿಕೊಂಡಿದೆ ಎಂಬುದರ ಸಂಕೇತವಾಗಿಯೂ ರಿಷಿ ಅವರ ಆಯ್ಕೆಯನ್ನು ನೋಡಬಹುದು. ಇತರ ಹಲವು ದೇಶಗಳಲ್ಲಿ ಅಸಹಿಷ್ಣುತೆ ಮತ್ತು ಸಂಕುಚಿತ ಭಾವವೇ ವಿಜೃಂಭಿಸುತ್ತಿರುವ ಕಾಲದಲ್ಲಿ ಬ್ರಿಟನ್ ಹೆಚ್ಚು ಪ್ರಬುದ್ಧವಾಗಿ ವರ್ತಿಸುತ್ತಿರುವುದು ಸ್ವಾಗತಾರ್ಹ.

ದಿನದ ಟ್ವೀಟ್

ಮಾಹಿತಿ ಯಾಕಿಲ್ಲ?

ವಿವಿಧ ನಮೂನೆಯ ಪಟಾಕಿ ಪೊಟ್ಟಣ ನೋಡಿ, ಒಂದಕ್ಕಿಂತಲೂ ಒಂದು ಹೊಗೆಕಾರಕ, ಅಪಾರ ಶಬ್ದ ಮತ್ತು ಬೆಳಕನ್ನು ಸೂಸುತ್ತವೆ. ಆಕಾಶಕ್ಕೆ ಚಿಮ್ಮುವ ಸಿಡಿಮದ್ದುಗಳಂತೂ ತೀರಾ ಅಪಾಯಕಾರಿ. ಯಾವುದೇ ಪಟಾಕಿ ಪೊಟ್ಟಣದಲ್ಲಿ ಅದನ್ನು ಹೇಗೆ ಬಳಸಬೇಕೆಂಬ ಸೂಚನಾ ಕೈಪಿಡಿಯಿಲ್ಲ. ಸಿಡಿಮದ್ದಿನ ಅವಘಡಗಳಿಂದ ಅಂಗಾಂಗಗಳು ಊನವಾಗುವ ಅಪಾಯವಿದ್ದರೂ ಅಗತ್ಯ ಮಾಹಿತಿ ಮಾತ್ರ ಸಿಗದು!

ಕೆ.ಬಿ.ಕೆ. ಸ್ವಾಮಿ, ವಕೀಲ

ಕಿಡಿನುಡಿ

ಭಾರತದಲ್ಲಿ ನಾವು ಹೆಚ್ಚಿನ ಅಂಕಗಳನ್ನು ಪಡೆಯುವ ಸಲುವಾಗಿ ಮಾತ್ರ ವಿಜ್ಞಾನವನ್ನು ಕಲಿಯುತ್ತೇವೆ. ಸಮಸ್ಯೆ ಇರುವುದೇ ಇಲ್ಲಿ. ವಿಜ್ಞಾನ ಪದವೀಧರರು ಗ್ರಹಣದ ಬಗ್ಗೆ ತಪ್ಪು ಕಲ್ಪನೆ ಹೊಂದಿರುವುದು ಮತ್ತು ಭ್ರಮಾಧೀನರಾಗಿರುವುದನ್ನು ನೋಡುವುದು ನಿಜಕ್ಕೂ ಮುಜುಗರದ ಸಂಗತಿ. ಗೆಳೆಯರೇ, ಮತ್ತೊಮ್ಮೆ ಕಲಿಯಿರಿ. ಭೌತಶಾಸ್ತ್ರದಲ್ಲಿ ನೀವು ಕಲಿತದ್ದನ್ನು ಪುನರ್ಮನನ ಮಾಡಿಕೊಳ್ಳಲು ಪ್ರಯತ್ನಿಸಿ.

ರಾಮಚಂದ್ರ ಎಮ್.

25 ವರ್ಷಗಳ ಹಿಂದೆ

ಭಾನುವಾರ, 26-10-1997

● ದಕ್ಷಿಣ ಏಷ್ಯಾ ನಿಧಿ ಸ್ಥಾಪನೆ

ಎಡಿನ್‌ಬರೊ, ಅಕ್ಟೋಬರ್ 25 (ಪಿಟಿಐ)– ದಕ್ಷಿಣ ಏಷ್ಯಾ ರಾಷ್ಟ್ರಗಳ ಅಭಿವೃದ್ಧಿಗಾಗಿ 200 ದಶಲಕ್ಷ ಡಾಲರ್‌ಗಳ ಬಂಡವಾಳ ನಿಧಿಯನ್ನು ಸ್ಥಾಪಿಸಲಾಗಿದೆ.

ಇಲ್ಲಿ ನಡೆಯುತ್ತಿರುವ ಕಾಮನ್‌ವೆಲ್ತ್ ಸಮ್ಮೇಳನದಲ್ಲಿ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಅಮಿಕ ಎನಯಾಕು ಅವರು ಇಂದು ನಿಧಿಯನ್ನು ಉದ್ಘಾಟಿಸಿದರು.

ಪ್ರಾರಂಭಿಕ ಹಂತವಾಗಿ 110 ದಶಲಕ್ಷ ಡಾಲರ್ ಹಣದೊಂದಿಗೆ ನಿಧಿಯನ್ನು ಆರಂಭಿಸಲಾಗಿದೆ. ಇದನ್ನು ಗರಿಷ್ಠ 200 ದಶಲಕ್ಷ ಡಾಲರ್‌ಗಳಿಗೆ ಹೆಚ್ಚಿಸಲು ಉದ್ದೇಶಿಸಲಾಗಿದೆ. ಭಾರತ, ಬಾಂಗ್ಲಾದೇಶ, ಪಾಕಿಸ್ತಾನ, ಶ್ರೀಲಂಕಾ ಹಾಗೂ ಮಾಲ್ಡೀವ್ಸ್‌ನಲ್ಲಿ ಬಂಡವಾಳವಾಗಿ ತೊಡಗಿಸಲಾಗುವುದು.

● ‘ವಿದ್ಯುತ್ ಕ್ಷೇತ್ರಕ್ಕೆ ಆದ್ಯತೆ’

ಗದಗ, ಅಕ್ಟೋಬರ್ 25– ರಾಜ್ಯದಲ್ಲಿ ಕಳೆದ ಕೆಲವು ವರ್ಷಗಳಿಂದ ಆಗುತ್ತಿರುವ ವಿದ್ಯುತ್ ಕೊರತೆಯನ್ನು ನೀಗಿಸಲು ವಿದ್ಯುತ್ ಉತ್ಪಾದನಾ ಯೋಜನೆಗಳನ್ನು ಆದ್ಯತೆಯ ಮೇಲೆ ಜಾರಿಗೆ ತರಲು ರಾಜ್ಯ ಸರ್ಕಾರ ನಿರ್ಧರಿಸಿದೆ ಎಂದು ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಇಂದು ಇಲ್ಲಿ ಘೋಷಿಸಿದರು.

ಎನ್.ಇ.ಪಿ.ಸಿ ಪ್ರಾಯೋಜಿತ 300 ಮೆ.ವಾ. ಸಾಮರ್ಥ್ಯದ ಪವನ ವಿದ್ಯುತ್ ಘಟಕದ ಶಂಕುಸ್ಥಾಪನೆ ಹಾಗೂ 240 ಕಿ.ವಾ. ಸಾಮರ್ಥ್ಯದ ಪವನ ವಿದ್ಯುತ್ ಘಟಕವನ್ನು ಉದ್ಘಾಟಿಸಿದ ಅವರು, ಸರ್ಕಾರವು ಖಾಸಗಿ ಕ್ಷೇತ್ರದಲ್ಲಿ ಬೃಹತ್, ಲಘು ಪ್ರಮಾಣದ ವಿದ್ಯುತ್ ಘಟಕಗಳ ನಿರ್ಮಾಣಕ್ಕೆ ಮಂಜೂರಾತಿ ನೀಡಿದೆ ಎಂದರು.

50 ವರ್ಷಗಳ ಹಿಂದೆ

ಗುರುವಾರ, 26-10-1972

● ಬಾಂಗ್ಲಾದೇಶಕ್ಕೆ ಮಾನ್ಯತೆ ವಿಳಂಬದಿಂದ ಯುದ್ಧ ಕೈದಿಗಳ ವಾಪಸಿಗೆ ಅಡ್ಡಿ: ಮುಜೀಬುರ್

ನವದೆಹಲಿ, ಅಕ್ಟೋಬರ್ 25– ಬಾಂಗ್ಲಾದೇಶಕ್ಕೆ ಮಾನ್ಯತೆ ನೀಡಿರುವುದನ್ನು ವಿಳಂಬಗೊಳಿಸಿ ಪಾಕಿಸ್ತಾನವೇ ತನ್ನ ಯುದ್ಧ ಕೈದಿಗಳ ವಾಪಸಿಗೆ ಅಡ್ಡಿಯಾಗುತ್ತಿದೆ ಎಂದು ಬಾಂಗ್ಲಾದೇಶದ ಪ್ರಧಾನಿ ಷೇಖ್ ಮುಜೀಬುರ್ ರೆಹಮಾನ್ ಅವರು ತಿಳಿಸಿದರು.

ಉಪಖಂಡದಲ್ಲಿ ಮೂಡಿರುವ ವಾಸ್ತವಿಕತೆಯನ್ನು ಅಂಗೀಕರಿಸುವುದರ ಆಧಾರದ ಮೇಲೆಯೇ ಪಾಕಿಸ್ತಾನ– ಬಾಂಗ್ಲಾದೇಶದ ಬಾಂಧವ್ಯ ನಿಂತಿದೆಯೆಂದೂ ಅವರು ಢಾಕಾದಲ್ಲಿ ತಮ್ಮನ್ನು ಸಂದರ್ಶಿಸಿದ ಕರಾಚಿಯ ‘ಡಾನ್’ ಪತ್ರಿಕೆಯ ಪ್ರತಿನಿಧಿಗಳಿಗೆ ನೀಡಿದ ಲಿಖಿತ ಉತ್ತರದಲ್ಲಿ ಸ್ಪಷ್ಟವಾಗಿ ಘೋಷಿಸಿದ್ದಾರೆ.

● ಮುಂದಿನ ಸುಗ್ಗಿಯಿಂದ ದಪ್ಪಕ್ಕಿ ಬೆಲೆ ಕೆ.ಜಿ.ಗೆ ಒಂದು ರೂಪಾಯಿ

ಬೆಂಗಳೂರು, ಅಕ್ಟೋಬರ್ 25– ಮುಂದಿನ ಸುಗ್ಗಿಯಿಂದ ಮಾರುಕಟ್ಟೆಯಲ್ಲಿ ದೊರೆಯುವ ಹೆಚ್ಚುವರಿ ಭತ್ತವನ್ನು ಸರ್ಕಾರ ಕೊಳ್ಳುವ ಪರಿಣಾಮವಾಗಿ ರಾಜ್ಯದ 1 ಕೋಟಿ ಜನರಿಗೆ ಅಕ್ಕಿ ಕೆ.ಜಿ. ಒಂದಕ್ಕೆ ಒಂದು ರೂಪಾಯಿನಿಂದ 1.30 ರೂ. ಬೆಲೆಗೆ ದೊರೆಯಲಿದೆ.

ಇಂದು ನಡೆದ ಮಂತ್ರಿಮಂಡಲದ ಸಭೆಯು ಭತ್ತದ ಸಗಟು ವ್ಯಾಪಾರವನ್ನು ವಹಿಸಿಕೊಳ್ಳುವ ಪ್ರಮುಖ ನಿರ್ಧಾರವನ್ನು ಕೈಗೊಂಡಿತು.

ಮೀಸಲಾತಿ ಪ್ರಮಾಣ ಏರಿಕೆಯು ಊರ್ಜಿತವಾಗಲು ಆಗಬೇಕಿರುವುದು ಇದು...

ಮೀಸಲಾತಿ ಹೆಚ್ಚಳ: ಲಕ್ಷ್ಮಣರೇಖೆ ದಾಟಲಾಗದೇ?

ವಿಶ್ಲೇಷಣೆ

ಎಚ್. ಕಾಂತರಾಜ

ರಾಜ್ಯದಲ್ಲಿ ಪರಿಶಿಷ್ಟ ಜಾತಿಗಳಿಗೆ (ಎಸ್‌ಸಿ) ಮೀಸಲಾತಿಯು ಶೇಕಡ 15 ಇದ್ದಿದ್ದನ್ನು ಶೇ 17 ಹಾಗೂ ಪರಿಶಿಷ್ಟ ಪಂಗಡಗಳಿಗೆ (ಎಸ್‌ಟಿ) ಮೀಸಲಾತಿಯು ಶೇ 3ರಷ್ಟು ಇದ್ದಿದ್ದನ್ನು ಶೇ 7ಕ್ಕೆ ಹೆಚ್ಚಿಸಲು ರಾಜ್ಯ ಸರ್ಕಾರವು ಸುಗ್ರೀವಾಜ್ಞೆ ಹೊರಡಿಸಿದೆ. ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದಿರುವ ತಮಗೆ ತಮ್ಮ ಜನಸಂಖ್ಯೆಯ ಪ್ರಮಾಣಕ್ಕೆ ಅನುಗುಣವಾಗಿ ಮೀಸಲಾತಿ ನೀಡಬೇಕು ಎಂಬುದು ಸಮುದಾಯಗಳ ಬೇಡಿಕೆ. ಎಸ್‌ಟಿ ಸಮುದಾಯಗಳಿಂದ ಈ ಬೇಡಿಕೆ ಬಂದ ನಂತರದಲ್ಲಿ ರಾಜ್ಯ ಸರ್ಕಾರವು ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಎಚ್.ಎನ್.ನಾಗಮೋಹನದಾಸ್ ನೇತೃತ್ವದಲ್ಲಿ ಆಯೋಗವೊಂದನ್ನು ರಚಿಸಿತು. ಆಯೋಗವು ಮೀಸಲಾತಿ ಹೆಚ್ಚಿಸುವ ಶಿಫಾರಸು ಮಾಡಿತು. ಅದನ್ನು ಆಧರಿಸಿ ರಾಜ್ಯ ಸರ್ಕಾರವು ಮೀಸಲಾತಿ ಹೆಚ್ಚಿಸುವ ತೀರ್ಮಾನ ಕೈಗೊಂಡಿದೆ. ಇದೇ ಸಂದರ್ಭದಲ್ಲಿ ಇತರೆ ಹಿಂದುಳಿದ ವರ್ಗಗಳಿಗೆ ಇರುವ ಶೇ 32ರ ಮೀಸಲಾತಿಯನ್ನು ಯಾವುದೇ ಬದಲಾವಣೆಗೆ ಒಳಪಡಿಸುವುದಿಲ್ಲವೆಂದು ಸ್ಪಷ್ಟಪಡಿಸಿದೆ. ಇದು ಸ್ವಾಗತಾರ್ಹ. ಸರ್ಕಾರದ ಸುಗ್ರೀವಾಜ್ಞೆಯನ್ನು ಯಾರಾದರೂ ನ್ಯಾಯಾಲಯದಲ್ಲಿ ಪ್ರಶ್ನಿಸಿದಲ್ಲಿ, ಮೀಸಲಾತಿ ಹೆಚ್ಚಳವು ಊರ್ಜಿತವಾಗಬೇಕು ಎಂದಾದರೆ ಸರ್ಕಾರವು ಕೆಲವು ಸಾಂವಿಧಾನಿಕ ಕ್ರಮಗಳನ್ನು ಕೈಗೊಳ್ಳಬೇಕು.

ಮೀಸಲಾತಿ ಹೆಚ್ಚಿಸುವುದಕ್ಕೆ ಸಮುದಾಯಗಳ ಜನಸಂಖ್ಯೆಯ ನಿಖರ ಅಂಕಿ–ಅಂಶಗಳು ಬೇಕು. ಹಾಗೆಯೇ, ಸಮುದಾಯಗಳ ಸಾಮಾಜಿಕ ಹಿಂದುಳಿದಿರುವಿಕೆ ಖಚಿತವಾಗಬೇಕು. ನಾಗಮೋಹನದಾಸ್ ಆಯೋಗದ ವರದಿಯು ಬಹಿರಂಗವಾಗಿಲ್ಲ. ಜನಸಂಖ್ಯೆ ಪ್ರಮಾಣ ಮತ್ತು ಸಾಮಾಜಿಕ ಹಿಂದುಳಿದಿರುವಿಕೆಗೆ ಅನುಗುಣವಾಗಿ ಮೀಸಲಾತಿ ಹೆಚ್ಚಿಸುವುದರಲ್ಲಿ ತಪ್ಪಿಲ್ಲ.

ಮೀಸಲಾತಿ ಹೆಚ್ಚಿಸುವ ವಿಚಾರ ಬಂದಾಗಲೆಲ್ಲ ಪ್ರಸ್ತಾಪ ಆಗುವುದು ಇಂದಿರಾ ಸಹಾನಿ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪು. ಅಂದರೆ, ಒಟ್ಟು ಮೀಸಲಾತಿಯು ಲಭ್ಯ ಹುದ್ದೆಗಳ ಶೇಕಡ 50ರಷ್ಟನ್ನು ಮೀರಬಾರದು ಎಂಬ ನಿಯಮ. ಈ ಮಾತನ್ನು ಸುಪ್ರೀಂ ಕೋರ್ಟ್ 1963ರ ಬಾಲಾಜಿ ಪ್ರಕರಣದಲ್ಲಿಯೂ ಹೇಳಿದೆ. 1992ರ ಮಂಡಲ್ ತೀರ್ಪಿನಲ್ಲಿಯೂ (ಇಂದಿರಾ ಸಹಾನಿ ಪ್ರಕರಣ) ಒಂಬತ್ತು ನ್ಯಾಯಮೂರ್ತಿಗಳ ಪೀಠವು ಈ ಮಾತು ಹೇಳಿದೆ. ಬಾಲಾಜಿ ಪ್ರಕರಣದ ತೀರ್ಪಿನಲ್ಲಿ ಹೇಳಿರುವಂತೆಯೇ, ಶೇ 50ರ ಮಿತಿ ಮೀರಬಾರದೆಂದು ಹೇಳುತ್ತಿರುವುದಾಗಿ ಮಂಡಲ್ ತೀರ್ಪಿನಲ್ಲಿ ಕೋರ್ಟ್ ಹೇಳಿ, ಕೆಲವು ವಿಶೇಷ ಸಂದರ್ಭಗಳನ್ನು ಹೊರತುಪಡಿಸಿದರೆ ಮೀಸಲಾತಿ ಶೇ 50ರಷ್ಟು ಇರಬೇಕು ಎಂದು ತೀರ್ಮಾನಿಸಿದೆ. ಮೀಸಲಾತಿಯನ್ನು ಹೆಚ್ಚಿಸಬೇಕು ಎಂದಾದರೆ ಅದಕ್ಕೆ ವಿಶಿಷ್ಟವಾದ ಸಂದರ್ಭ ಇರಬೇಕು ಎಂದು ಅರ್ಥೈಸಬಹುದು.

ಅಂದರೆ, ಮೀಸಲಾತಿ ವಿಚಾರವಾಗಿ ಶೇ 50ರ ಮಿತಿಯನ್ನು ಮೀರಲೇಬಾರದು ಎಂದೇನೂ ಇಲ್ಲ. ಶೇ 50 ಎಂಬುದು ಲಕ್ಷ್ಮಣರೇಖೆ ಅಲ್ಲ. ವಿಶೇಷ ಸಂದರ್ಭಗಳಿಗೆ ಇದು ಅನ್ವಯಿಸುವುದಿಲ್ಲ ಎಂದು ಹೇಳಬಹುದು.

2021ರಲ್ಲಿ ಜೈಶ್ರೀ ಲಕ್ಷ್ಮಣರಾವ್ ಪಾಟೀಲ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್, ಮಹಾರಾಷ್ಟ್ರ ಸರ್ಕಾರವು ಮರಾಠಾ ಸಮುದಾಯಕ್ಕೆ ಮೀಸಲಾತಿ ಕಲ್ಪಿಸಿದ್ದರಿಂದಾಗಿ ಒಟ್ಟು ಮೀಸಲಾತಿಯು ಶೇ 50ರ ಗಡಿಯನ್ನು ಮೀರಿದ್ದು, ಹಾಗೆ ಮಿತಿ ಮೀರುವುದಕ್ಕೆ ಬೇಕಿದ್ದ ಅಸಾಧಾರಣ ಸನ್ನಿವೇಶ ಸೃಷ್ಟಿಯಾಗಿಲ್ಲ ಎಂಬ ಕಾರಣ ನೀಡಿ ಆ ಮೀಸಲಾತಿಯನ್ನು ಅನೂರ್ಜಿತಗೊಳಿಸಿತು. ಈ ಪ್ರಕರಣದಲ್ಲಿ ಮರಾಠಾ ಸಮುದಾಯಕ್ಕೆ ಅಷ್ಟು ಮೀಸಲಾತಿ (ಶೇ16) ಕಲ್ಪಿಸಲು ಆಧಾರ ಏನು ಎಂಬುದು ಸ್ಪಷ್ಟವಿರಲಿಲ್ಲ, ಅಲ್ಲಿ ಅಂಕಿ–ಅಂಶಗಳ ಕೊರತೆ ಇತ್ತು ಎಂಬುದನ್ನು ಗಮನಿಸಬೇಕು. ಅಲ್ಲದೆ, ಶೇ 50ರ ಮಿತಿಯನ್ನು ಮೀರಬಹುದಾದ ಅಸಾಧಾರಣ ಪರಿಸ್ಥಿತಿ ಯಾವುದು ಎಂಬುದಕ್ಕೆ ಸ್ಪಷ್ಟವಾದ ವಿವರಣೆ ಯಾವ ತೀರ್ಪಿನಲ್ಲಿಯೂ ಈವರೆಗೆ ಬಂದಿಲ್ಲ ಎಂಬ ವಾದ ಇದೆ. ಅಂದರೆ, ಶೇ 50ರ ಮಿತಿ ಎಂಬ ಗಡಿಯನ್ನು ದಾಟುವಂತೆಯೇ ಇಲ್ಲ ಎನ್ನುವಂತಿಲ್ಲ. ಒಟ್ಟಿನಲ್ಲಿ, ಸಂವಿಧಾನ ಬಯಸುವ ಸಮಾನತೆಯ ಆಶಯ ಈಡೇರುವುದು ಮುಖ್ಯ.

ನಮ್ಮಲ್ಲಿ ಶೇ 50ರ ಮಿತಿಯನ್ನು ಮೀರಿರುವ ನಿದರ್ಶನಗಳು ಹಲವು ಇವೆ. ಮೀಸಲಾತಿಯು ಶೇ 50ರಷ್ಟೇ ಇರಬೇಕು ಎಂದು ಕೋರ್ಟ್ ಈ ಹಿಂದೆ ಹೇಳಲು ಒಂದು ಕಾರಣ, ಸಮುದಾಯಗಳ ಜನಸಂಖ್ಯೆ ಮತ್ತು ಸಮುದಾಯಗಳ ಹಿಂದುಳಿದಿರುವಿಕೆ ವಿಚಾರವಾಗಿ ಕೋರ್ಟ್ ಮುಂದೆ ನಿಖರ ಅಂಕಿ–ಅಂಶಗಳು ಇರದಿದ್ದುದು. ನಿಖರವಾದ ಅಂಕಿ–ಅಂಶಗಳು ಸಿಗುವುದು ಜನಗಣತಿ ಅಥವಾ ಸಮೀಕ್ಷೆಗಳ ಮೂಲಕ. 1931ರ ನಂತರದ ಜಾತಿವಾರು ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿ ಕುರಿತ ವಿವರ ಲಭ್ಯವಿಲ್ಲ. ಕರ್ನಾಟಕದಲ್ಲಿ 2015ರಲ್ಲಿ ಜಾತಿವಾರು ಸಮೀಕ್ಷೆ ನಡೆದಿದೆ. ಆದರೆ ಅದರ ವಿವರ ಬಹಿರಂಗವಾಗಿಲ್ಲ. ಯಾವ ಜಾತಿ ಎಷ್ಟು ಹಿಂದುಳಿದಿದೆ ಅಥವಾ ಮುಂದೆ ಬಂದಿದೆ ಎಂಬ ಬಗ್ಗೆ ಅನುಭವಗಮ್ಯ ಅಂಕಿ–ಅಂಶ ಇಲ್ಲ ಎಂದು ಸುಪ್ರೀಂ ಕೋರ್ಟ್ ಕೂಡ ಹೇಳಿದೆ. 2010ರಲ್ಲಿ ಕೆ. ಕೃಷ್ಣಮೂರ್ತಿ ಪ್ರಕರಣದಲ್ಲಿಯೂ ಅಂಕಿ–ಅಂಶಗಳ ಕೊರತೆ ಇದೆ ಎಂದು ಸುಪ್ರೀಂ ಕೋರ್ಟ್ ಅಭಿಪ್ರಾಯಪಟ್ಟಿದೆ. ನಾವು ಮೀಸಲಾತಿ ನಿಗದಿ ಮಾಡುವುದು ಅಂಕಿ–ಅಂಶ ಆಧರಿಸಿದ್ದರೆ ಶೇ 50ರ ಗಡಿಯನ್ನು ಮೀರಲು ಅವಕಾಶ ಇದೆ.

ಮೀಸಲಾತಿಯ ಮೂಲ ಇರುವುದು ಸಂವಿಧಾನದಲ್ಲಿ. ಮೀಸಲಾತಿಯು ಇಂತಿಷ್ಟೇ ಪ್ರಮಾಣದಲ್ಲಿ ಇರಬೇಕು ಎಂದು ಸಂವಿಧಾನವು ಹೇಳಿಲ್ಲ. ಮೀಸಲಾತಿ ಇರಬೇಕು ಎಂದಷ್ಟೇ ಸಂವಿಧಾನ ಹೇಳುತ್ತದೆ. ಸಂವಿಧಾನದ ಉದ್ದೇಶ ಸಮಾನತೆಯ ಸಾಕಾರ. ಹಿಂದುಳಿದವರು, ಅಶಕ್ತರಿಗೆ ಶಕ್ತಿ ತುಂಬಿದಾಗ ಮಾತ್ರ ಸಮಾನತೆ ಸಾಧ್ಯ ಎಂಬುದು ಅದರ ಆಶಯ. ಸಮಾನತೆಯನ್ನು ತರಲು ಅಗತ್ಯವಿರುವ ಕ್ರಮಗಳನ್ನು ಕೈಗೊಳ್ಳಿ ಎಂದು ಸಂವಿಧಾನ ಹೇಳುತ್ತದೆ. 1985ರ ಕೆ.ಸಿ. ವಸಂತಕುಮಾರ್ ಪ್ರಕರಣದಲ್ಲಿ ನ್ಯಾಯಮೂರ್ತಿ ಚಿನ್ನಪ್ಪ ರೆಡ್ಡಿಯವರು, ‘ಮೀಸಲಾತಿ ಪ್ರಮಾಣಕ್ಕೆ ಮಿತಿ ಹೇರುವುದು ನ್ಯಾಯಾಲಯದ ಕೆಲಸವಲ್ಲ. ಆದರೆ ಅದು ಜನರ ಹಕ್ಕು. ಅಷ್ಟೇ ಅಲ್ಲ, ಮೀಸಲಾತಿ ಪ್ರಮಾಣ ನಿಗದಿಪಡಿಸಲು ಅಗತ್ಯ ಆಧಾರ ಇಲ್ಲದಿದ್ದಾಗ ಮೀಸಲಾತಿಯು ಶೇ 40, 50, 60 ಅನ್ನು ಮೀರಬಾರದು ಎಂದು ಹೇಳಿದರೆ ಅದು ಇಚ್ಛಾನುಸಾರ ವರ್ತನೆಯಾಗುತ್ತದೆ. ಅದಕ್ಕೆ ಸಂವಿಧಾನ ಅವಕಾಶ ಕೊಡುವುದಿಲ್ಲ’ ಎಂದು ಅಭಿಪ್ರಾಯಪಟ್ಟಿದ್ದಾರೆ.

ಇವನ್ನೆಲ್ಲ ಆಧಾರವಾಗಿ ಇರಿಸಿಕೊಂಡು, ಜಾತಿಗಳ ಹಿಂದುಳಿದಿರುವಿಕೆಗೆ ಸಂಬಂಧಿಸಿದ ಅಂಕಿ–ಅಂಶಗಳನ್ನು ನಿಖರವಾಗಿ ಇಟ್ಟುಕೊಂಡು ಮುನ್ನಡೆದರೆ ಶೇ 50ರ ಮಿತಿಯನ್ನು ಮೀರಲು ಆಗದ ಸನ್ನಿವೇಶ ಎದುರಾಗುವುದಿಲ್ಲ. ಕರ್ನಾಟಕದಲ್ಲಿ ಶೇ 50ಕ್ಕಿಂತ ಹೆಚ್ಚಿನ ಮೀಸಲಾತಿ ಕಲ್ಪಿಸಬೇಕಾದ ಸಂದರ್ಭ ಇದೆ ಎಂಬುದನ್ನು ಸಾಬೀತುಪಡಿಸಬೇಕು. ಆಗ ಮೀಸಲಾತಿ ಹೆಚ್ಚಿಸಿದ ಕ್ರಮವು ಉಳಿದುಕೊಳ್ಳುತ್ತದೆ.

ರಾಜ್ಯ ಸರ್ಕಾರ ಕೈಗೊಂಡಿರುವ ತೀರ್ಮಾನವು ನ್ಯಾಯಾಲಯದಲ್ಲಿ ಪ್ರಶ್ನೆಗೆ ಒಳಗಾದರೆ, ಮೀಸಲಾತಿ ಪ್ರಮಾಣವನ್ನು ಎಸ್‌ಸಿ ಸಮುದಾಯಗಳಿಗೆ ಶೇ 2ರಷ್ಟು, ಎಸ್‌ಟಿ ಸಮುದಾಯಗಳಿಗೆ ಶೇ 4ರಷ್ಟು ಜಾಸ್ತಿ ಮಾಡಲು ಅಂಕಿ–ಅಂಶ ಏನಿದೆ ಎಂಬ ಪ್ರಶ್ನೆ ಎದುರಾಗಬಹುದು. ಅದಕ್ಕೆ ಸೂಕ್ತ ವಿವರಣೆ ನೀಡಿದಲ್ಲಿ ಕ್ರಮ ಸಿಂಧುವಾಗುವ ಸಾಧ್ಯತೆ ಇರುತ್ತದೆ. ಇಂದಿರಾ ಸಹಾನಿ ಪ್ರಕರಣದ ಮರು ಪರಿಶೀಲನೆಗೆ ಕೂಡ ಸರ್ಕಾರ ಮನವಿ ಮಾಡಬಹುದು. ಅಥವಾ ಮೀಸಲಾತಿ ಹೆಚ್ಚಿಸಲು ಸಂವಿಧಾನಕ್ಕೆ ಅಗತ್ಯ ತಿದ್ದುಪಡಿ ತರಬೇಕು.

ಮೀಸಲಾತಿ ಹೆಚ್ಚಿಸುವ ಕ್ರಮವನ್ನು ಸಂವಿಧಾನದ 9ನೆಯ ಪರಿಚ್ಛೇದಕ್ಕೆ ಸೇರಿಸಿದ ಮಾತ್ರಕ್ಕೆ ಅದು ಸಿಂಧುವಾಗುತ್ತದೆ ಎನ್ನಲಾಗದು. ಏಕೆಂದರೆ, ಹಾಗೆ 9ನೆಯ ಪರಿಚ್ಛೇದಕ್ಕೆ ಸೇರಿಸುವ ಕ್ರಮ ಕಾನೂನು ಪ್ರಕಾರ ಇತ್ತೇ, ಹಾಗೆ ಸೇರಿಸುವುದಕ್ಕೆ ಅಂಕಿ–ಅಂಶಗಳ ಆಧಾರ ಇದೆಯೇ, ಪರಿಚ್ಛೇದಕ್ಕೆ ಸೇರಿಸಿದ್ದರಿಂದ ಸಂವಿಧಾನದ ಮೂಲತತ್ವಗಳಿಗೆ ಧಕ್ಕೆ ಬಂದಿದೆಯೇ ಎಂಬ ನೆಲೆಯಲ್ಲಿ ನ್ಯಾಯಾಲಯದಲ್ಲಿ ಅದನ್ನು ಪ್ರಶ್ನಿಸಬಹುದು ಎಂದು ಸುಪ್ರೀಂ ಕೋರ್ಟ್ ಈ ಹಿಂದೆ ಹೇಳಿರುವುದು ಗಮನಾರ್ಹ. ಮೀಸಲಾತಿ ಹೆಚ್ಚಳದ ತೀರ್ಮಾನವನ್ನು 9ನೇ ಪರಿಚ್ಛೇದಕ್ಕೆ ಸೇರಿಸಿದ ಮಾತ್ರಕ್ಕೆ ಅದು ಪ್ರಶ್ನಾತೀತ ಆಗುವುದಿಲ್ಲ. ಮೇಲೆ ವಿವರಿಸಿರುವ ನಿರ್ದಿಷ್ಟ ಕ್ರಮಗಳ ಮೂಲಕ, ಮೀಸಲಾತಿ ಹೆಚ್ಚಳವನ್ನು ಊರ್ಜಿತವಾಗಿಸಬಹುದು. ಹಾಗೆ ಮಾಡಿದಾಗ ಮಾತ್ರ ಸರ್ಕಾರ ಈಗ ಕೈಗೊಂಡಿರುವ ಕ್ರಮಕ್ಕೆ ಭವಿಷ್ಯ ಇರುತ್ತದೆ.

ಲೇಖಕ: ಕರ್ನಾಟಕ ಹೈಕೋರ್ಟ್‌ನ ಹಿರಿಯ ವಕೀಲ, ರಾಜ್ಯ ಹಿಂದುಳಿದ ವರ್ಗಗಳ ಶಾಶ್ವತ ಆಯೋಗದ ಮಾಜಿ ಅಧ್ಯಕ್ಷ

ಚುರುಮುರಿ



ಅನಿರೀಕ್ಷಿತ ಅದೃಷ್ಟ

• ಕೆ.ವಿ.ರಾಜಲಕ್ಷ್ಮಿ

‘ಇದಕ್ಕಿಂತ ದೀಪಾವಳಿ ಉಡುಗೊರೆ ಬೇಕೆ? ಅಬ್ಬಾ! ಪಂದ್ಯದ ಕೊನೆಯ ಓವರ್ ಅದೆಷ್ಟು ರೋಚಕವಾಗಿತ್ತು!’ ನೇರ ಪ್ರಸಾರದಲ್ಲಿ ನೋಡಿದ್ದರೂ, ಪೇಪರಿನಲ್ಲಿ ಕ್ರಿಕೆಟ್ ಸುದ್ದಿ ಓದುವಾಗ ಮತ್ತೆ ಮೆಲುಕಿದ್ದೆ.

‘ಹೌದಪ್ಪಾ, ಗೆಲುವು ದೂರದ ಮಾತು ಅನ್ನೋವಾಗ ಕೊಹ್ಲಿ, ಪಾಂಡ್ಯ ಜೋಡಿಯಾಟ ವಿರಾಟ್ ದರ್ಶನ ಅನ್ನೋ ಹಾಗಿತ್ತು’ ಪುಟ್ಟಿಯ ಹಾರ್ದಿಕ ಮೆಚ್ಚುಗೆ.

‘ಕೊನೆಯ ಓವರಿನ ವೈಡ್, ಫ್ರೀ ಹಿಟ್ ನಮ್ಮ ಪಾಲಿಗೆ ವರವಾಗಿ ಬಂತು’ ಎಂದೆ.

‘ಫ್ರೀ ಹಿಟ್ ಅಂದ್ರೇನು? ಪುಕ್ಕಟೆ ಹೊಡೆಯೋದಾ?’ ಅತ್ತೆಯ ಕುತೂಹಲ.

‘ಒಂದು ರೀತಿ ಅನಿರೀಕ್ಷಿತ ಅದೃಷ್ಟ ಅಜ್ಜಿ, ನೋ ಬಾಲ್ ನಂತರದ ಎಸೆತ ಫ್ರೀ ಹಿಟ್. ಈ ಎಸೆತದಲ್ಲಿ ಬ್ಯಾಟ್ಸ್‌ಮನ್ ಔಟ್ ಆಗುವ ಭಯವಿಲ್ಲದೆ ರಿಸ್ಕ್ ತಗೊಂಡು ಚಚ್ಚಬಹುದು. ಬೌಲರ್‌ಗೆ ಇದು ದಂಡ, ಅದೇ ದಾಂಡಿಗರಿಗೆ ಉಪಕಾರ. ರನ್‌ಔಟ್ ಆಗದಂತೆ ಜಾಗ್ರತೆ ವಹಿಸಬೇಕು, ಅಷ್ಟೇ’ ಎನ್ನುತ್ತಾ ಪಟಾಕಿ ಗನ್‌ನಲ್ಲಿ ಢಂಢಂ ಅನ್ನಿಸಿ ಸಂಭ್ರಮಿಸಿದಳು.

‘ಅದೃಷ್ಟ ಕೈ ಹಿಡಿದರೆ ಎಲ್ಲವೂ ನಮಗೆ ಸಾಧಕ ಅಲ್ವೇ, ಅವಕಾಶ ಕೈ ತಪ್ಪಿತು ಅನ್ನೋ ಹೊತ್ತಿಗೆ ಹೇಗೋ ಕೈ ಸೇರುತ್ತೆ?’ ಅತ್ತೆಗೆ ಅರ್ಥವಾಗಿತ್ತು.

‘ಹ್ಞೂಂ ಮತ್ತೆ, ಈಗ ನಮ್ಮ ರಿಷಿ ಸುನಕ್ ವಿಷಯದಲ್ಲೂ ಹಾಗೇ... ಮೊದಲಿಗೆ ತಪ್ಪಿದರೂ ಎರಡನೇ ಅವಕಾಶದಲ್ಲಿ ಪ್ರಧಾನಿ ಗದ್ದುಗೆ ಒಲಿಯಿತಲ್ಲ’ ನನ್ನವಳ ಸುದ್ದಿಸಾರ.

ಅಷ್ಟರಲ್ಲೇ ಕಂಠಿಯ ದರ್ಶನ...

‘ನಮ್ಮ ಬಡಾವಣೇಲಿ ಹೊಸ ರೇಷ್ಮೆ ಸೀರೆ ಅಂಗಡಿ ಪ್ರಾರಂಭೋತ್ಸವ. ಒಂದು ಸೀರೆಗೆ ಇನ್ನೊಂದು ಸೀರೆ ಫ್ರೀ, ಶ್ರೀಮತಿ ಇನ್ನೊಂದರ್ಧ ಗಂಟೇಲಿ ಹೊರಡ್ತಾಳೆ. ನಿಮಗೂ ಒಂದ್ಮಾತು ಹೇಳೋಕ್ಕೆ ಹೇಳಿದಳು’ ಎಂದು ಆಟಂಬಾಂಬ್ ಸಿಡಿಸಿದ.

‘ಅನಿರೀಕ್ಷಿತ ಅದೃಷ್ಟ ಅಂದರೆ ಇದು! ಅವಕಾಶ ಬಿಡಬಾರದು’ ಅತ್ತೆ ಕಣ್ಣರಳಿಸಿದರು.

ನನ್ನ ಸ್ಥಿತಿ ಠುಸ್ ಪಟಾಕಿಯಾಗಿದ್ದರೆ, ಹೂಕುಂಡದ ಬೆಳಕು ಮಿಣುಕೆಲ್ಲ ನನ್ನವಳ ಮೊಗದಲ್ಲಿ ಪ್ರತಿಫಲಿಸಿತ್ತು.

ಸಂಗತ

ಬನ್ನಿ, ಬೆಲ್ಲ ಸವಿದು ಸಂಭ್ರಮಿಸೋಣ

ಉತ್ತಮ ಗುಣಮಟ್ಟದ ಬೆಲ್ಲ ತಯಾರಿಸುವ ಸುಲಭ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಲಾಗಿದೆ. ರೈತರು ಅದರ ಪ್ರಯೋಜನ ಪಡೆಯಬೇಕು

• ಮಲ್ಲಿಕಾರ್ಜುನ ಹೆಗ್ಗಳಗಿ

ದೀಪಾವಳಿ ಹಬ್ಬದ ಸಂದರ್ಭ ನಮ್ಮ ನೆರೆಮನೆಯ ಅಜ್ಜಿ ‘ಈಗ ಹಬ್ಬಗಳಲ್ಲಿ ರುಚಿ ಉಳಿದಿಲ್ಲ’ ಎಂದು ಥಟ್ಟನೆ ಹೇಳಿದಾಗ ನಾನು ಚಕಿತನಾಗಿ ‘ಅಜ್ಜಿ ಯಾಕೆ ಹೀಗೆ ಹೇಳುತ್ತೀರಿ’ ಎಂದು ಕೇಳಿದೆ. ದೊಡ್ಡ ಹಬ್ಬ ಎಂದು ಪೇಟೆಯೆಲ್ಲಾ ಸುತ್ತಿ ಬೆಲ್ಲ ತಂದು ಹೋಳಿಗೆ, ಕಡುಬು, ಶೇಂಗಾ ಉಂಡಿ ಮಾಡಿದ್ದೆ. ನನ್ನ ಮಕ್ಕಳು, ಮೊಮ್ಮಕ್ಕಳು ಸಿಹಿ ಊಟ ಮಾಡಲೇ ಇಲ್ಲ. ಚಪಾತಿ, ಪಲ್ಯ, ಅನ್ನ ಸಾರು ಮಾತ್ರ ಊಟ ಮಾಡಿದರು’ ಎಂದು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ಹೌದು, ನಾವು ಸಿಹಿ ಆಹಾರ ತಿನ್ನುವ ಸಂಭ್ರಮದಿಂದ ದೂರ ಸರಿಯುತ್ತಿದ್ದೇವೆ. ಬೆಲ್ಲ-ಬೇಳೆಯ ಹೂರಣದ ಹೋಳಿಗೆ, ಕಡುಬು ಅತ್ಯುತ್ತಮ ಪೌಷ್ಟಿಕ ಆಹಾರ. ಇಂಥ ಸಿಹಿ ಊಟ ಸವಿಯುವುದಕ್ಕಾಗಿಯೇ ಹಿರಿಯರು ಹಬ್ಬಗಳನ್ನು ರೂಪಿಸಿದ್ದಾರೆ ಎಂಬುದನ್ನು ಮರೆಯಬಾರದು.

ಬೆಲ್ಲ, ಸಕ್ಕರೆ ಬಳಕೆ ಕುರಿತು ಜನರಲ್ಲಿ ತಪ್ಪು ಗ್ರಹಿಕೆ ಇದೆ. ‘ಸಕ್ಕರೆ ಕಾಯಿಲೆ’ ಬರುತ್ತದೆ, ತೂಕ ಜಾಸ್ತಿಯಾಗುತ್ತದೆ ಎಂಬ ಭಯ ಸಾಮಾನ್ಯವಾಗಿದೆ. ಪಾಲಕರು ಸಿಹಿ ತಿನ್ನುವುದಿಲ್ಲ ಎಂದು ಮಕ್ಕಳು ಕೂಡ ಸಿಹಿ ತಿಂಡಿ ದೂರ ಸರಿಸುತ್ತಾರೆ.

ಆಯುರ್ವೇದದ ಔಷಧಗಳಲ್ಲಿ ಬೆಲ್ಲಕ್ಕೆ ಅಗ್ರಸ್ಥಾನ. ರಕ್ತಹೀನತೆ ತಡೆಯುವಲ್ಲಿ ಬೆಲ್ಲ ಮಹತ್ವದ ಪಾತ್ರ ವಹಿಸುತ್ತದೆ. ಬೆಲ್ಲದಲ್ಲಿರುವ ಕ್ಯಾಲ್ಸಿಯಂ, ಮ್ಯಾಗ್ನೀಶಿಯಂ, ಕಬ್ಬಿಣ, ಗ್ಲುಕೋಸ್, ಕಾರ್ಬೊಹೈಡ್ರೇಟ್ ಮತ್ತು ವಿಟಮಿನ್‌ಗಳು ದೇಹದ ಆರೋಗ್ಯ ಕಾಪಾಡುವಲ್ಲಿ ಮಹತ್ವದ ಪಾತ್ರ ವಹಿಸುತ್ತವೆ.

ಹಿಂದೆ ಮನೆಗೆ ಬಂದ ಅತಿಥಿಗಳಿಗೆ ಸ್ವಲ್ಪ ಬೆಲ್ಲ, ನೀರು ಕೊಡುವ ಸಂಪ್ರದಾಯವಿತ್ತು. ಹಬ್ಬದ ದಿನಗಳಲ್ಲಿ ಸ್ನೇಹಿತರನ್ನು ಫಳಾರಕ್ಕೆ (ಉಪಾಹಾರ) ಕರೆಯುತ್ತಿದ್ದರು. ಫಳಾರದಲ್ಲಿ ಉಂಡಿ ತಿನ್ನುವ ಸ್ಪರ್ಧೆ ನಡೆಯುತ್ತಿತ್ತು. ಈಗ ಈ ಸಂಸ್ಕೃತಿ ನಿಂತುಹೋಗಿದೆ. ಮದುವೆಯಂತಹ ಸಮಾರಂಭಗಳಲ್ಲಿಯೂ ಜನರು ಸಿಹಿ ಪದಾರ್ಥಗಳನ್ನು ಬಹಳ ಕಡಿಮೆ ತಿನ್ನುತ್ತಾರೆ. ಇದು ರೋಗ ರುಜಿನ ಭಯದಿಂದ ಹುಟ್ಟಿದ ಅನಾರೋಗ್ಯಕರ ಬೆಳವಣಿಗೆಯಾಗಿದೆ.

ರೈತರು ತಾವು ಬೆಳೆದ ಕಬ್ಬಿನಲ್ಲಿ ಕನಿಷ್ಠ ಶೇ 5ರಷ್ಟು ಕಬ್ಬಿನಿಂದಲಾದರೂ ಬೆಲ್ಲ ತಯಾರಿಸಬೇಕು ಎಂದು ಸರ್ಕಾರ ಬಹಳ ಹಿಂದೆಯೇ ಕಡ್ಡಾಯಗೊಳಿಸಿದೆ. ಆದರೆ ಬಹಳಷ್ಟು ರೈತರು ಇದನ್ನು ಪಾಲಿಸುವುದಿಲ್ಲ. ತಾವು ಬೆಳೆದ ಎಲ್ಲ ಕಬ್ಬನ್ನು ಕಾರ್ಖಾನೆಗಳಿಗೆ ಸಾಗಿಸುತ್ತಾರೆ. ಹೀಗಾಗಿ ಕಬ್ಬು ಬೆಳೆದ ರೈತರು ಕೂಡ ಬೆಲ್ಲದ ಸವಿಯಿಂದ ವಂಚಿತರಾಗುತ್ತಿದ್ದಾರೆ.

ಉತ್ತಮ ಗುಣಮಟ್ಟದ ಬೆಲ್ಲ ತಯಾರಿಸುವ ಸುಲಭ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಲಾಗಿದೆ. ಕಬ್ಬಿನ ಹಾಲು ಸೋಸಿ ದೊಡ್ಡ ಸ್ಟೀಲ್ ಪಾತ್ರೆಯಲ್ಲಿ 30 ನಿಮಿಷ ಚೆನ್ನಾಗಿ ಕುದಿಸಿದರೆ ನೀರಿನ ಅಂಶ ಹೋಗಿ ಬೆಲ್ಲದ ದ್ರಾವಣ ಸಿದ್ಧವಾಗುತ್ತದೆ. ಬೆಲ್ಲ ತಯಾರಿಸುವುದು ಒಂದು ಸಂಭ್ರಮದ ಕೆಲಸ. ಒಂದು ಟನ್ ಕಬ್ಬಿನಿಂದ 115 ಕೆ.ಜಿ.ಯಿಂದ 130 ಕೆ.ಜಿ. ಬೆಲ್ಲ ತಯಾರಾಗುತ್ತದೆ. ಬೆಲ್ಲ ತಯಾರಿಕೆ ಘಟಕಗಳನ್ನು ಕೃಷಿ ಆಧಾರಿತ ಗ್ರಾಮೀಣ ಗುಡಿ ಕೈಗಾರಿಕೆ ಎಂದು ಸರ್ಕಾರ ಘೋಷಿಸಿದೆ. ಇದರ ಲಾಭವನ್ನು ರೈತರು ಪಡೆಯಬಹುದು. ಪ್ರತೀ ಬೆಲ್ಲ ತಯಾರಿಕೆಯ ಘಟಕದಲ್ಲಿ 12-15 ಕೃಷಿ ಕಾರ್ಮಿಕರಿಗೆ ಉದ್ಯೋಗ ಅವಕಾಶ ದೊರೆಯುತ್ತದೆ.

ಇಸ್ರೇಲ್ ದೇಶದ ತಲಾವಾರು ವಾರ್ಷಿಕ ಬೆಲ್ಲದ ಬಳಕೆ 50 ಕೆ.ಜಿ.ಯಷ್ಟಿದೆ. ರಷ್ಯಾ ಸೇರಿದಂತೆ ಇನ್ನೂ ಕೆಲವು ದೇಶಗಳಲ್ಲೂ ಬೆಲ್ಲದ ಬಳಕೆ ಸರಿಸುಮಾರು ಇದೇ ಪ್ರಮಾಣದಲ್ಲಿದೆ. ಆದರೆ ಭಾರತದಲ್ಲಿ ಇದು 8 ಕೆ.ಜಿ. ಮಾತ್ರ. ಭಾರತದ ಬೆಲ್ಲವು ರಷ್ಯಾ, ಇಸ್ರೇಲ್‌ಗೆ ರಫ್ತಾಗುತ್ತದೆ. ರಷ್ಯಾದ ಬೆಲ್ಲ ಖರೀದಿದಾರರು ಕರ್ನಾಟಕ, ಮಹಾರಾಷ್ಟ್ರದಲ್ಲಿ ಕಾಯಂ ಆಗಿ ನೆಲೆಸಿದ್ದಾರೆ.

ಬೆಲ್ಲ ಮಾತ್ರವಲ್ಲ, ಹಿತಮಿತ ಪ್ರಮಾಣದಲ್ಲಿ ಸಕ್ಕರೆ ಸೇವನೆಯೂ ಬೇಕು ಎನ್ನುವವರಿದ್ದಾರೆ. ಸಕ್ಕರೆಯಲ್ಲಿ ದೇಹಕ್ಕೆ ಬೇಕಾಗುವ ಕಾರ್ಬೊಹೈಡ್ರೇಟ್ ಮತ್ತು ಸುಕ್ರೋಸ್ ಹೇರಳ ಪ್ರಮಾಣದಲ್ಲಿ ಇರುತ್ತವೆ. ದೇಶದಲ್ಲಿ ವಾರ್ಷಿಕ ಸಕ್ಕರೆ ಬಳಕೆ ಪ್ರಮಾಣ ಕ್ರಮೇಣ ಕಡಿಮೆಯಾಗುತ್ತಿದೆ ಎಂಬ ಕಳವಳವನ್ನು ಭಾರತೀಯ ಸಕ್ಕರೆ ಸಂಸ್ಥೆ ವ್ಯಕ್ತಪಡಿಸಿದೆ. ಸಲ್ಫರ್ ಬಳಸಿ ಸಕ್ಕರೆ ಉತ್ಪಾದಿಸುವ ಹಳೆಯ ವಿಧಾನಕ್ಕೆ ಬದಲಾಗಿ ಕಾರ್ಬನ್ ಡೈಆಕ್ಸೈಡ್ ಬಳಸಿ ಉತ್ತಮ ಗುಣಮಟ್ಟದ ಸಕ್ಕರೆಯನ್ನು ಉತ್ಪಾದಿಸಲಾಗುತ್ತಿದೆ.

ಬೆಲ್ಲ, ಸಕ್ಕರೆ ಮಧುರ ಸಂಗೀತ ಇದ್ದಹಾಗೆ. ಇಂಪಾದ ಸಂಗೀತ ಕಿವಿಗೆ ಬೀಳುತ್ತಲೇ ದೇಹದಲ್ಲಿ ಉತ್ಸಾಹ ತುಂಬುತ್ತದೆ. ಇದೇ ಶಕ್ತಿ ಬೆಲ್ಲ, ಸಕ್ಕರೆಗೆ ಇದೆ. ನಾಲಿಗೆ ಮೇಲೆ ಈ ಸವಿ ವಸ್ತುಗಳನ್ನು ಇಡುತ್ತಲೇ ದೇಹ ಉತ್ಸಾಹಗೊಳ್ಳುತ್ತದೆ.

ಶಾಲಾ ಮಕ್ಕಳಿಗೆ ಮಧ್ಯಾಹ್ನದ ಬಿಸಿ ಊಟದೊಂದಿಗೆ ಸಿಹಿ ತಿಂಡಿ ಕೊಡುವ ಚಿಂತನೆ ನಡೆದಿದೆ. ಹಾಲಿನಲ್ಲಿ ಉತ್ತಮ ಗುಣಮಟ್ಟದ ಬೆಲ್ಲ ಬೆರೆಸಿ ಕೊಡುವ ವಿಧಾನ ಅನುಸರಿಸಿದರೆ ಮಕ್ಕಳ ಆರೋಗ್ಯಪೂರ್ಣ ಬೆಳವಣಿಗೆಗೆ ಖಂಡಿತ ನೆರವಾಗುತ್ತದೆ.

ಅತಿಯಾದರೆ ಅಮೃತವೂ ವಿಷ ಎನ್ನುವ ಮಾತಿದೆ. ಮಿತವಾಗಿ ದೇಹಕ್ಕೆ ಒಗ್ಗುವ ಪ್ರಮಾಣದಲ್ಲಿ ಬೆಲ್ಲ, ಸಕ್ಕರೆ ಸವಿ ಸವಿಯಬೇಕು. ಖುಷಿ ಅನುಭವಿಸಬೇಕು.

ವಾಚಕರ ವಾಣಿ

ಪದಪ್ರಯೋಗ: ಸಮುಚಿತ ಅಲ್ಲ

‘ನಮ್ಮ ಕಿರಣ ನಮ್ಮ ಬೆಳಕು’ ಲೇಖನದಲ್ಲಿ (ಪ್ರ.ವಾ., ಅ. 24) ಟಿ.ಎನ್. ವಾಸುದೇವಮೂರ್ತಿ ಅವರು ಬೇಂದ್ರೆಯವರು ಅಲ್ಲಮಪ್ರಭುವಿನ ಬಗ್ಗೆ ಬರೆದ ಕವಿತೆಯ ‘ಬೆಳುದಿಂಗಳವ ಕುಡಿದ ಮಧುಮತ್ತ ಚಿತ್ತ-ಚಕೋರ ಕೇಳುತಿದೆ, ಹೇಳುತಿದೆ- ಬೇರೆ ದರುಶನವೇಕೆ? ಮಾತೆ ಜ್ಯೋತಿರ್ಲಿಂಗ’ ಎಂಬ ನುಡಿ ಉದ್ಧರಿಸಿದ್ದಾರೆ. ಅದರಲ್ಲಿರುವ ಪ್ರಶ್ನಾರ್ಥಕ ಚಿಹ್ನೆಯು ‘ಕೇಳುತಿದೆ, ಹೇಳುತಿದೆ ಬೇರೆ ದರುಶನವೇಕೆ’ಗೆ ಧನಾತ್ಮಕತೆಯನ್ನು ಉಂಟುಮಾಡಿದೆ.

ಉದಾಹರಣೆಗೆ, ಲೋಕಾರೂಢಿಯ ಮಾತಿನಲ್ಲಿ ‘ನನಗೇನು ಹೊಟ್ಟೆಕಿಚ್ಚೆ?’ ಎಂದು ಪ್ರಶ್ನಿಸಿದಾಗ, ಅದರ ಅರ್ಥ ‘ಹೊಟ್ಟೆಕಿಚ್ಚಿಲ್ಲ’ ಎನ್ನುವುದು. ಅಂತಹ ಪ್ರಶ್ನೆಯಲ್ಲಿ ಖಚಿತ ಉತ್ತರ ಅಡಗಿರುತ್ತದೆ.

‘ಬೆಳಕನ್ನು ಹಂಬಲಿಸುತ್ತಿರುವ ಅಲ್ಲಮನ ಚಿತ್ತವೆಲ್ಲೋ ಲಯಗೊಳ್ಳದೇ ವಿಕಲ್ಪಗೊಂಡಿರಬೇಕು’ ಮತ್ತು ‘ಅಲ್ಲಮ ಲೋಕವನ್ನು ಪ್ರಶ್ನಿಸುತ್ತಿರುವನೋ ಅಥವಾ ಲೋಕಕ್ಕೆ ಆಜ್ಞಾಪಿಸುತ್ತಿರುವನೋ ಎಂಬ ಸಂಶಯವನ್ನು ವ್ಯಕ್ತಪಡಿಸಿದ್ದಾರೆ’ ಎಂಬ ವಾಸುದೇವಮೂರ್ತಿ ಅವರ ಅಭಿಪ್ರಾಯಕ್ಕೆ ಅಲ್ಲಿ ಎಡೆಯಿಲ್ಲ. ‘ಲಯ’, ‘ಚಿತ್ತವಿಕಲ್ಪ’ ಇಲ್ಲಿ ಅನ್ವಯವಾಗುವುದಿಲ್ಲ. ಈ ಪದಗಳ ಪ್ರಯೋಗವಿಲ್ಲಿ ಸಮುಚಿತವೆನಿಸುವುದಿಲ್ಲ. ವರಕವಿ ಬೇಂದ್ರೆಯವರು ಸಿದ್ಧ ಅಲ್ಲಮನನ್ನು ವಿಡಂಬಿಸುವರೆ?

ಡಾ. ಜಿ.ಕೃಷ್ಣಪ್ಪ, ಬೆಂಗಳೂರು

ಸದೃಢವಾಗಿಸಲಿ...

ಅಂದು ಬ್ರಿಟಿಷರು
ಭಾರತವನ್ನು ಆಳಿದರು
ಇಂದು ಭಾರತೀಯ ಸಂಜಾತ
ಬ್ರಿಟಿಷರನ್ನು ಆಳಲಿದ್ದಾರೆ!
ಬ್ರಿಟಿಷರು ಮಾಡಿದ್ದು ಲೂಟಿ
ಹೇರಿದ್ದು ಗುಲಾಮಗಿರಿ
ಆದರೆ ನೂತನ ಪ್ರಧಾನಿ ಬ್ರಿಟನ್ನನ್ನು
ಆರ್ಥಿಕವಾಗಿ ಸದೃಢವಾಗಿಸಲಿ
ಜನರ ಬವಣೆ ನೀಗಿಸಲಿ

ಚಿಕ್ಕೋಬನಹಳ್ಳಿ ಚಾಂದ್ ಬಾಷ
ತಳಕು, ಚಳ್ಳಕೆರೆ

ಇದು ನಮ್ಮೊಳಗಿನ ದ್ವಂದ್ವ...

ಬ್ರಿಟನ್ ಪ್ರಧಾನಿಯಾಗಿ ಕರ್ನಾಟಕದ ಅಳಿಯ ರಿಷಿ ಸುನಕ್ ಅವರು ಆಯ್ಕೆಯಾಗಿರುವುದು ಭಾರತೀಯರಲ್ಲಿ ಪುಳಕ ಮೂಡಿಸಿದೆ. ಇದಕ್ಕಿಂತ ದೊಡ್ಡ ದೀಪಾವಳಿ ಕೊಡುಗೆ ಬೇರೇನಿರಲು ಸಾಧ್ಯ? ಭಾರತೀಯ ಮೂಲದವರು ಇಂಗ್ಲೆಂಡ್‌ನ ಪ್ರಧಾನಿಯಾಗುವುದು ನಮಗೆಲ್ಲ ಹೆಮ್ಮೆಯ ಸಂಗತಿ. ಆದರೆ ಇಟಲಿ ಮೂಲದ ಸೋನಿಯಾ ಗಾಂಧಿ ಅವರು ಭಾರತದ ಪ್ರಧಾನಿಯಾಗುವುದು ನಮ್ಮಲ್ಲಿ ಕೆಲವರಿಗೆ ನ್ಯಾಯಸಮ್ಮತ ಎನಿಸಿರಲಿಲ್ಲ! ಈ ಸಂಬಂಧ ದೇಶದಾದ್ಯಂತ ಅವರು ಹುಯಿಲೆಬ್ಬಿಸಿದ್ದರು. ಏಕೆ ಈ ದ್ವಂದ್ವ ನಿಲುವು?

ದೊಡ್ಡ ಕಮರವಳ್ಳಿ ಸಿದ್ದಲಿಂಗಪ್ಪ, ಮೈಸೂರು

ಅಮೋಘ ಆಟ, ನೆನಪು ಅಮರ

ಟಿ20 ವಿಶ್ವಕಪ್‌ನಲ್ಲಿ ಭಾನುವಾರ ನಡೆದ ಭಾರತ– ಪಾಕಿಸ್ತಾನ ಕ್ರಿಕೆಟ್ ಪಂದ್ಯದ ರೋಚಕ ಹಣಾಹಣಿಯಲ್ಲಿ ವಿರಾಟ್ ಕೊಹ್ಲಿ ಅವರ ಅಮೋಘ ಆಟದಿಂದಾಗಿ ಭಾರತ ಗೆಲುವು ಸಾಧಿಸಿತು. ಬ್ಯಾಟಿಂಗ್ ಲಯ ಕಳೆದುಕೊಂಡಿದ್ದ ಕೊಹ್ಲಿ, ಎರಡು–ಮೂರು ತಿಂಗಳುಗಳಿಂದ ತಮ್ಮ ನೈಜ ಆಟಕ್ಕೆ ಮರಳಿರುವುದು ಸಂತಸದಾಯಕ. ಚೇಸಿಂಗ್‌ನಲ್ಲಿ ಸುಂದರವಾಗಿ ಇನಿಂಗ್ಸ್ ಕಟ್ಟಿ ತಂಡಕ್ಕೆ ಗೆಲುವು ತಂದುಕೊಟ್ಟಿದ್ದಾರೆ. ಕ್ರಿಕೆಟ್ ಇತಿಹಾಸದಲ್ಲಿ ಖ್ಯಾತನಾಮರಾದ ಬ್ಯಾಟರ್‌ಗಳ ನಡುವೆ ಕೊಹ್ಲಿ ಅವರ ಸಾಧನೆ ವಿಶಿಷ್ಟವಾದುದು.

ಮೆಲ್ಬರ್ನ್‌ನ ಬೃಹತ್ ಕ್ರೀಡಾಂಗಣದಲ್ಲಿ 90 ಸಾವಿರಕ್ಕೂ ಹೆಚ್ಚು ಪ್ರೇಕ್ಷಕರ ಎದುರು ಭಾರತ ತಂಡವು ಸೋಲಿನ ದವಡೆಯಲ್ಲಿದ್ದಾಗ, ಜವಾಬ್ದಾರಿಯಿಂದ ಆಡಿ ಪಂದ್ಯವನ್ನು ಗೆಲ್ಲಿಸಿದ ಕೊಹ್ಲಿ ಅವರ ಕೆಚ್ಚೆದೆಯ ಆಟಕ್ಕೆ ವಿಶ್ವದಾದ್ಯಂತ ಪ್ರಶಂಸೆಯ ಮಾತುಗಳು ಕೇಳಿಬರುತ್ತಿವೆ. ಪಾಕಿಸ್ತಾನ ತಂಡದ ವಿರುದ್ಧ ಕೊಹ್ಲಿ ಅವರ ಈ ಆಟವು ಕ್ರೀಡಾಭಿಮಾನಿಗಳಲ್ಲಿ ಮಧುರ ನೆನಪಾಗಿ ಉಳಿಯಲಿದೆ.

ಅನಿಲ್ ಕುಮಾರ್, ನಂಜನಗೂಡು

ಗೂಗಲ್ ಮ್ಯಾಪ್: ತಪ್ಪು ಸರಿಪಡಿಸಿ

ಕನಕಪುರ ಸುತ್ತಲಿನ ಕೆಲವು ಹಳ್ಳಿಗಳ ಹೆಸರು ಗೂಗಲ್ ಮ್ಯಾಪ್‌ನಲ್ಲಿ ವಿಚಿತ್ರವಾಗಿ ನಮೂದಾಗಿದೆ. ಮ್ಯಾಟಿಕುಂಟೆ, ಗಡ್ಸಾಲಿ, ಮೊರಲ್, ತೇಂಜನಾಮವಾದದೊಡ್ಡಿ... ಹೀಗಿವೆ ಹಳ್ಳಿ ಹೆಸರು. ಇವುಗಳ ಮೂಲ ಹೆಸರು– ಮತ್ತಿಕುಂಟೆ, ಗಡಸಹಳ್ಳಿ, ಮೊರಳೆ, ತೆಂಗಿನಮರದೊಡ್ಡಿ. ಹೆಸರು ಹೀಗೆ ವಿರೂಪವಾಗಲು ಕಾರಣ ಯಾರಾದರೂ ಆಗಿರಲಿ ಅದನ್ನು ಸರಿಪಡಿಸುವುದು ಅಗತ್ಯ. ಇಲ್ಲವಾದಲ್ಲಿ ಮುಂದೊಂದು ದಿನ ಮೂಲ ಹೆಸರು ಮತ್ತು ಅದರ ಅರ್ಥ ಮರೆತುಹೋಗಬಹುದು. ಹೀಗಾಗಿ ತಪ್ಪು ಸರಿಪಡಿಸುವ ಕೆಲಸ ತ್ವರಿತವಾಗಿ ಆಗಬೇಕು.

ನಾಗರಾಜ್ ಮಾದೇಗೌಡ, ಕನಕಪುರ

ಠೇವಣಿದಾರರ ಹಿತರಕ್ಷಣೆಗೂ ಗಮನವಿರಲಿ

ಪ್ರತೀ ತ್ರೈಮಾಸಿಕದ ಅಂತ್ಯಕ್ಕೆ ಬ್ಯಾಂಕುಗಳು ಕೋಟ್ಯಂತರ ರೂಪಾಯಿ ಲಾಭ ಗಳಿಸುತ್ತಿರುವುದನ್ನು ನೋಡುತ್ತಿದ್ದೇವೆ. ಆದರೆ ಅದೇ ಬ್ಯಾಂಕುಗಳು ಸಾರ್ವಜನಿಕರು ಇಡುವ ಠೇವಣಿ ಹಣದ ಮೇಲೆ ಬಡ್ಡಿ ನೀಡುವಾಗ ಮಾತ್ರ ಅತಿ ಜಿಪುಣತನವನ್ನು ತೋರಿಸುತ್ತವೆ. ಬ್ಯಾಂಕುಗಳು ಉಳಿದಿರುವುದು ಮತ್ತು ಬೆಳೆಯುತ್ತಿರುವುದು ಸಾರ್ವಜನಿಕರು ಬ್ಯಾಂಕುಗಳಲ್ಲಿ ಠೇವಣಿ ಇಡುತ್ತಿರುವ ಅಪಾರ ಮೊತ್ತದ ಮೇಲೆ. ಅದೇ ಹಣದ ಮೇಲೆ ವ್ಯಾಪಕ ವ್ಯವಹಾರ ನಡೆಸುತ್ತ, ಮರಳಿ ಬಾರದ ಸಾಲವನ್ನು ಹಲವರಿಗೆ ನೀಡಿಯೂ ಅವು ಬಹಳಷ್ಟು ಲಾಭ ಗಳಿಸುತ್ತಿವೆ.

ಲಾಭದ ಕೆಲವೊಂದು ಅಂಶವು ಗ್ರಾಹಕರಿಗೆ ಮತ್ತು ಅದರಲ್ಲೂ ಠೇವಣಿದಾರರಿಗೆ ವರ್ಗಾವಣೆಯಾಗಬೇಕು. ಬ್ಯಾಂಕುಗಳು ತಮ್ಮ ಹಿತಾಸಕ್ತಿಯನ್ನಷ್ಟೇ ಪರಿಗಣಿಸದೆ ಠೇವಣಿದಾರರ ಹಿತವನ್ನೂ ಗಣನೆಗೆ ತೆಗೆದುಕೊಳ್ಳಬೇಕು.

ವೆಂಕಟೇಶ ಮಾಚಕನೂರ, ಧಾರವಾಡ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

‘ಚೇಸಿಂಗ್ ಕಿಂಗ್’ ಕೊಹ್ಲಿ

● ಗಿರೀಶ ದೊಡ್ಡಮನಿ

ಚುಟುಕು ಕ್ರಿಕೆಟ್ ಪಂದ್ಯಗಳಲ್ಲಿ ಗುರಿ ಬೆನ್ನಟ್ಟುವ ಆಟವೆಂದರೆ ವಿರಾಟ್ ಕೊಹ್ಲಿಗೆ ಅದೇನೋ ಅಗಾಧ ಪ್ರೀತಿ. ಅವರೊಳಗಿನ ಶಕ್ತಿ ದುಪ್ಪಟ್ಟಾಗಿಬಿಡುತ್ತದೆ. ಚುರುಕು ಬುದ್ಧಿಮತ್ತೆಯ ವೇಗ ಇಮ್ಮಡಿಯಾಗುತ್ತದೆ. ಕೊನೆಯ ಎಸೆತದವರೆಗೂ ಛಲ ಬಿಡದೇ ಮಾಡುವ ಬ್ಯಾಟಿಂಗ್‌ನಲ್ಲಿ ಕ್ರಿಕೆಟ್ ಕಾಪಿಬುಕ್ ಹೊಡೆತಗಳು ಲಯ ತಪ್ಪುವುದಿಲ್ಲ.

ಮೆಲ್ಬರ್ನ್‌ನಲ್ಲಿ ಭಾನುವಾರ ರಾತ್ರಿ ಪಾಕಿಸ್ತಾನ ಎದುರಿನ ಟಿ20 ವಿಶ್ವಕಪ್ ಪಂದ್ಯದಲ್ಲಿ ಅವರ ಬ್ಯಾಟಿಂಗ್ ಕೂಡ ಈ ಮಾತಿಗೆ ಉದಾಹರಣೆ. ಅಲ್ಲಿ ಹೊಡೆದ ಅಜೇಯ 82 ರನ್‌ಗಳ ಬಗ್ಗೆಯೇ ಈಗ ಕ್ರಿಕೆಟ್ ವಲಯದಲ್ಲಿ ಚರ್ಚೆಗಳು ನಡೆಯುತ್ತಿವೆ. ವಿರಾಟ್ ವೃತ್ತಿಜೀವನದಲ್ಲಿಯೇ ಅತ್ಯಂತ ಸುಂದರ ಹಾಗೂ ಶ್ರೇಷ್ಠ ಇನಿಂಗ್ಸ್ ಎಂದು ನಾಯಕ ರೋಹಿತ್ ಶರ್ಮಾ ಸೇರಿದಂತೆ ಹಲವು ದಿಗ್ಗಜರು ಶ್ಲಾಘಿಸಿದ್ದಾರೆ.

ಇದೀಗ ಈ ಸ್ಕೋರ್ ಸುತ್ತ ವಿಶ್ವದಾಖಲೆಗಳು ಸಾಲುಗಟ್ಟುತ್ತಿವೆ. ಭಾರತ ತಂಡವು ಅಂತರರಾಷ್ಟ್ರೀಯ ಟಿ20 ಕ್ರಿಕೆಟ್‌ನಲ್ಲಿ ಗುರಿ ಬೆನ್ನಟ್ಟಿದ ಪಂದ್ಯಗಳಲ್ಲಿ ಕೊಹ್ಲಿ ಗಳಿಸಿದ 20ನೇ ಅರ್ಧಶತಕ ಇದಾಗಿದೆ. ಎರಡನೇ ಇನಿಂಗ್ಸ್‌ನಲ್ಲಿ ಇಷ್ಟು ಬಾರಿ 50ರ ಗಡಿ ದಾಟಿದವರು ಮತ್ತೊಬ್ಬರಿಲ್ಲ. ಅಲ್ಲದೇ ಅವರು ಚೇಸಿಂಗ್ ಇನಿಂಗ್ಸ್‌ಗಳಲ್ಲಿ ಗಳಿಸಿರುವುದು 1983 ರನ್‌ಗಳನ್ನು. ಈ ಪೈಕಿ ಕೊಹ್ಲಿಯವರ 16 ಅರ್ಧಶತಕಗಳು ತಂಡದ ಗೆಲುವಿಗೆ ಕಾರಣವಾಗಿರುವುದು ಕೂಡ ದಾಖಲೆ ಎಂದು ಕ್ರಿಕೆಟ್ ಅಂಕಿ ಸಂಖ್ಯೆ ತಜ್ಞ ಎಚ್.ಆರ್. ಗೋಪಾಲಕೃಷ್ಣ ‘ಪ್ರಜಾವಾಣಿ’ಗೆ ತಿಳಿಸಿದ್ದಾರೆ.

ಭಾರತವು ಚೇಸಿಂಗ್‌ನಲ್ಲಿ ಗೆದ್ದ ಪಂದ್ಯಗಳಲ್ಲಿ ಕೊಹ್ಲಿ ಒಟ್ಟು 1621 ರನ್ ಗಳಿಸಿದ್ದಾರೆ. ಇದು ಕೂಡ ಶ್ರೇಷ್ಠ ದಾಖಲೆಯೇ ಆಗಿದೆ.

ಮೂರನೇ ಕ್ರಮಾಂಕದಲ್ಲಿ ಬ್ಯಾಟಿಂಗ್ ಮಾಡಿ ಅತಿ ಹೆಚ್ಚು ರನ್ ಗಳಿಸಿರುವ ಬ್ಯಾಟರ್‌ಗಳಲ್ಲಿ ಕೊಹ್ಲಿ (1974 ರನ್) ಈಗ ಅಗ್ರಸ್ಥಾನದಲ್ಲಿದ್ದಾರೆ. ಇನ್ನು 26 ರನ್ ಗಳಿಸಿದರೆ, ಎರಡು ಸಾವಿರ ರನ್ ಗಳಿಸಿದ ಮೊದಲ ಬ್ಯಾಟರ್ ಆಗುತ್ತಾರೆ. ಈ ಕ್ರಮಾಂಕದಲ್ಲಿ ಅವರು ಒಟ್ಟು 29 ಅರ್ಧಶತಕ ಗಳಿಸಿರುವುದು ವಿಶೇಷ.

ಕೊಹ್ಲಿ ಅಜೇಯ 82 ರನ್ ಗಳಿಸಿರುವುದು ಇದು ಎರಡನೇ ಸಲ. 2016ರಲ್ಲಿ ಮೊಹಾಲಿಯಲ್ಲಿ ಟಿ20 ವಿಶ್ವಕಪ್ ಟೂರ್ನಿಯ ಪಂದ್ಯದಲ್ಲಿ ಆಸ್ಟ್ರೇಲಿಯಾದ ವಿರುದ್ಧ 51 ಎಸೆತಗಳಲ್ಲಿ ಇದೇ ಮೊತ್ತ ಗಳಿಸಿದ್ದರು. ಅವತ್ತು 161 ರನ್‌ಗಳ ಗೆಲುವಿನ ಗುರಿ ಬೆನ್ನಟ್ಟಿದ್ದ ಭಾರತ ತಂಡವು 49 ರನ್‌ಗಳಿಗೆ ಮೂರು ವಿಕೆಟ್ ಕಳೆದುಕೊಂಡಿತ್ತು. ಆಗ ತಂಡವನ್ನು ಗೆಲುವಿನ ದಡ ಸೇರಿಸಿದ್ದು ಕೊಹ್ಲಿಯೇ.

‘ಮೊಹಾಲಿಯಲ್ಲಿ ಕೊಹ್ಲಿ ಆಡಿದ್ದ ಆ ಇನಿಂಗ್ಸ್ ಶ್ರೇಷ್ಠವಾಗಿತ್ತು. ಆದರೆ ಮೆಲ್ಬರ್ನ್ ಇನಿಂಗ್ಸ್ ಅದಕ್ಕಿಂತಲೂ ಉತ್ಕೃಷ್ಟವಾಗಿದೆ. ಎರಡು ಬಾರಿಯೂ ತಂಡವನ್ನು ಸೋಲಿನ ದವಡೆಯಿಂದ ಜಯದತ್ತ ಕೊಂಡೊಯ್ದಿದ್ದಾರೆ. ಅದೂ ವಿದೇಶಿ ನೆಲದಲ್ಲಿ ಕೊನೆಯ ಎಸೆತದವರೆಗೂ ಜವಾಬ್ದಾರಿಯುತ ಹಾಗೂ ಚಾಣಾಕ್ಷತನ ಮೇಳೈಸಿದ ಬ್ಯಾಟಿಂಗ್ ಅವರಿಂದ ಮೂಡಿಬಂದಿದೆ’ ಎಂದು ಮಾಜಿ ಕ್ರಿಕೆಟಿಗ ಗೌತಮ್ ಗಂಭೀರ್ ಶ್ಲಾಘಿಸಿದ್ದಾರೆ.

ಸ್ವತಃ ಕೊಹ್ಲಿ ಕೂಡ ಮೊಹಾಲಿಗಿಂತಲೂ ಮೆಲ್ಬರ್ನ್‌ನ ಆಟ ತೃಪ್ತಿ ನೀಡಿದೆ ಎಂದೂ ಹೇಳಿಕೊಂಡಿದ್ದಾರೆ.

33 ವರ್ಷದ ಕೊಹ್ಲಿ ಈಗ ಇನ್ನೊಂದು ದಾಖಲೆಗೂ ಒಡೆಯರಾಗಿದ್ದಾರೆ. ಟಿ20 ಕ್ರಿಕೆಟ್‌ನಲ್ಲಿ ಅತಿ ಹೆಚ್ಚು ರನ್ ಗಳಿಸಿರುವವರ ಪಟ್ಟಿಯಲ್ಲಿ ಅಗ್ರಸ್ಥಾನಕ್ಕೆ (3,794 ರನ್) ಏರಿದ್ದಾರೆ. ರೋಹಿತ್ ಶರ್ಮಾ (3,741) ಮತ್ತು ನ್ಯೂಜಿಲೆಂಡ್‌ನ ಮಾರ್ಟಿನ್ ಗಪ್ಟಿಲ್ (3,531 ರನ್) ಅವರಿಗೆ ನಿಕಟ ಸ್ಪರ್ಧೆ ಒಡ್ಡಿದ್ದಾರೆ. ಟಿ20 ವಿಶ್ವಕಪ್ ಟೂರ್ನಿಗಳಲ್ಲಿ ಒಟ್ಟು 22 ಪಂದ್ಯಗಳಲ್ಲಿ ಆಡಿರುವ ಅವರು 927 ರನ್ ಗಳಿಸಿದ್ದಾರೆ. ಒಟ್ಟಾರೆ ಮೂರನೇ ಸ್ಥಾನಕ್ಕೇರಿದ್ದಾರೆ. ಮೊದಲ ಸ್ಥಾನದಲ್ಲಿರುವ ಶ್ರೀಲಂಕಾದ ಮಹೇಲ ಜಯವರ್ಧನೆ (1,016) ಅವರನ್ನು ಹಿಂದಿಕ್ಕಲು 89 ರನ್‌ಗಳ ಅಗತ್ಯವಿದೆ.

ಹೆಚ್ಚು ಅರ್ಧಶತಕ ಗಳಿಸಿದವರು

ಬ್ಯಾಟರ್	ದೇಶ	ಪಂದ್ಯ	ಅರ್ಧಶತಕ
ವಿರಾಟ್ ಕೊಹ್ಲಿ	ಭಾರತ	110	34
ರೋಹಿತ್ ಶರ್ಮಾ	ಭಾರತ	143	28
ಬಾಬರ್ ಆಜಂ	ಪಾಕಿಸ್ತಾನ	93	29
ಡೇವಿಡ್ ವಾರ್ನರ್	ಆಸ್ಟ್ರೇಲಿಯಾ	97	24
ಮೊಹಮ್ಮದ್ ರಿಜ್ವಾನ್	ಪಾಕಿಸ್ತಾನ	74	22

ಟಿ20: ಅತಿ ಹೆಚ್ಚು ಬೌಂಡರಿ ಗಳಿಕೆ

ಬ್ಯಾಟರ್	ದೇಶ	ಪಂದ್ಯ	ಬೌಂಡರಿ
ಪಿ.ಆರ್. ಸ್ಟರ್ಲಿಂಗ್	ಐರ್ಲೆಂಡ್	118	355
ಬಾಬರ್ ಅಜಂ	ಪಾಕಿಸ್ತಾನ	93	342
ವಿರಾಟ್ ಕೊಹ್ಲಿ	ಭಾರತ	110	337
ರೋಹಿತ್ ಶರ್ಮಾ	ಭಾರತ	143	337
ಮಾರ್ಟಿನ್ ಗಪ್ಟಿಲ್	ನ್ಯೂಜಿಲೆಂಡ್	122	309

ಎರಡನೇ ಸ್ಥಾನದಲ್ಲಿ ವೆಸ್ಟ್ ಇಂಡೀಸ್‌ನ ಕ್ರಿಸ್ ಗೇಲ್ (965) ಇದ್ದಾರೆ. ಕೊಹ್ಲಿ ಇದೇ ಲಯದಲ್ಲಿ ಮುಂದುವರಿದರೆ ಈ ವಿಶ್ವಕಪ್ ಟೂರ್ನಿಯಲ್ಲಿಯೇ ಈ ದಾಖಲೆ ರಚನೆಯಾಗಬಹುದು!

ಮೂರೂ ಮಾದರಿಗಳಲ್ಲಿ ಸೇರಿ ಅತಿ ಹೆಚ್ಚು ರನ್ ಗಳಿಸಿದವರ ಪಟ್ಟಿಯಲ್ಲಿಯೂ ಕೊಹ್ಲಿ (24,212 ರನ್) ಆರನೇ ಸ್ಥಾನಕ್ಕೇರಿದ್ದು, ಸದ್ಯ ಭಾರತ ತಂಡದ ಕೋಚ್ ರಾಹುಲ್ ದ್ರಾವಿಡ್ ಅವರು ಮಾಡಿದ್ದ ದಾಖಲೆ (24,208) ಹಿಂದಿಕ್ಕಿದ್ದಾರೆ. ಈ ಪಟ್ಟಿಯಲ್ಲಿ ಮೊದಲ ಸ್ಥಾನಕ್ಕೇರಲು (ಸಚಿನ್ ತೆಂಡೂಲ್ಕರ್; 34,357) ಕೊಹ್ಲಿಗೆ ಇನ್ನೂ ಹತ್ತು ಸಾವಿರಕ್ಕಿಂತಲೂ ಹೆಚ್ಚು ರನ್‌ಗಳು ಬೇಕು.

‘ದಾಖಲೆಗಳು ನಿರ್ಮಾಣವಾಗುವುದೇ ಮುರಿಯಲು’ ಎಂಬುದು ಕ್ರೀಡಾಕ್ಷೇತ್ರದಲ್ಲಿನ ಜನಪ್ರಿಯ ಮಾತು. ಆದರೆ ಎಷ್ಟೇ ದಾಖಲೆಗಳ ರಾಶಿ ಹಾಕಿದರೂ ಆಟಗಾರ ನೆನಪಿನಲ್ಲಿ ಉಳಿಯುವುದು ತನ್ನ ತಂಡವನ್ನು ಕಠಿಣ ಪರಿಸ್ಥಿತಿಯಿಂದ ಮೇಲೆತ್ತಿ ಜಯದ ಕಾಣಿಕೆ ನೀಡಿದಾಗ ಮಾತ್ರ. ಅದು 1983ರ ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಜಿಂಬಾಬ್ವೆ ವಿರುದ್ಧ ಕಪಿಲ್ ದೇವ್ ಗಳಿಸಿದ ಅಜೇಯ 175 ರನ್ ಗಳಿರಬಹುದು. 2007ರ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಜೋಗಿಂದರ್ ಶರ್ಮಾ ಅವರ ಕೊನೆಯ ಓವರ್ ಬೌಲಿಂಗ್ ಆಗಿರಬಹುದು. 2000–01ರ ಕೋಲ್ಕತ್ತಾ ಟೆಸ್ಟ್‌ನಲ್ಲಿ ಆಸ್ಟ್ರೇಲಿಯಾದ ಎದುರು ವಿವಿಎಸ್ ಲಕ್ಷ್ಮಣ್ ಮತ್ತು ದ್ರಾವಿಡ್ ಅವರ ಅಮೋಘ ಬ್ಯಾಟಿಂಗ್ ಇರಬಹುದು. ಅದೇ ಸಾಲಿಗೆ ಕೊಹ್ಲಿಯ ಮೆಲ್ಬರ್ನ್ ಇನಿಂಗ್ಸ್ ಸೇರುತ್ತದೆ. ಬಹುಕಾಲ ನೆನಪಿನ ಪುಟದಲ್ಲಿ ಉಳಿಯುತ್ತದೆ.

ಪ್ರಜಾವಾಣಿ ಪ್ರಜಾಧ್ವನಿ

ಜನರ ಮನದಾಳದ ಮಾತು

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ



ಬ್ರಿಟನ್ ಪ್ರಧಾನಿಯಾಗಿ ಆಯ್ಕೆಯಾಗಿರುವ ರಿಷಿ ಸುನಕ್ ಸಮರ್ಥವಾಗಿ ಆಡಳಿತ ನಡೆಸುವ ವಿಶ್ವಾಸ ಇದೆಯೇ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 259

ಶಿವಕಲ್ಯಾಣಕ್ಕೆ ಬಂದ ಚಂಡಿ

ಹಿಮವಂತನ ರಾಜಧಾನಿಗೆ ಹೊರಟ ಮದುವೆ ದಿಬ್ಬಣದಲ್ಲಿ ಚಂಡೀದೇವಿ ರುದ್ರನ ಸಹೋದರಿಯಾಗಿ ತನ್ನ ಪರಿವಾರದೊಡನೆ ಪ್ರೀತಿಯಿಂದ ಬಂದು ಸೇರಿದಳು. ದುಷ್ಟರಿಗೆ ಭಯಂಕರಿಯಾದ ಚಂಡಿಯು ಪ್ರೇತಾಸನವನ್ನೇರಿ ಬಂದಿದ್ದಳು. ಅವಳು ಮೈಗೆಲ್ಲಾ ಹಾವುಗಳನ್ನು ಸುತ್ತಿಕೊಂಡಿದ್ದಳು. ಚಂಡಿಯ ಪರಿವಾರದಲ್ಲೂ ಶಿವನ ಪರಿವಾರದಲ್ಲಿರುವಂತೆ ಕೋಟ್ಯಂತರ ಭೂತಗಣಗಳಿದ್ದವು. ಅವುಗಳಲ್ಲಿ ಕೆಲವು ವಿಕಾರವಾದವುಗಳಾಗಿದ್ದರೆ, ಕೆಲವು ಸುಂದರವಾಗಿದ್ದವು. ಚಂಡಿಯು ವಿಕಾರವಾದ ಮುಖದಿಂದ ಭಯಂಕರಳಾಗಿ ಕಾಣುತ್ತಿದ್ದಳು. ಅವಳನ್ನು ನೋಡಿದ ಜನರಿಗೆ ಆಶ್ಚರ್ಯ ಮತ್ತು ಭಯ ಒಟ್ಟೊಟ್ಟಿಗೆ ಆಗುತ್ತಿತ್ತು. ಇಂತಹ ಚಂಡಿಯು ಶಿವನ ವಿವಾಹ ಮಹೋತ್ಸವದಲ್ಲಿ ಪಾಲ್ಗೊಳ್ಳಲು ಮದುವೆ ದಿಬ್ಬಣಕ್ಕೆ ಬಂದು, ಭಯಂಕರರೂ ರುದ್ರಪ್ರಿಯರೂ ಆದ ಹನ್ನೊಂದುಕೋಟಿ ರುದ್ರಗಣಗಳ ಮುಂದೆ ನಿಂತಳು.

ತಮ್ಮ ಮುಂದೆ ಚಂಡಿ ನಿಲ್ಲುತ್ತಿದ್ದಂತೆ ರುದ್ರಗಣಗಳು ಸಂತೋಷದಿಂದ ಡಮರು ಮತ್ತು ಭೇರಿಗಳನ್ನು ಜೋರಾಗಿ ಬಾರಿಸಿ, ಕಿವಿ ಬಿರಿಯುವಂತೆ ಶಂಖಗಳನ್ನ ಊದಿದರು. ಡಮರು ಮತ್ತು ಭೇರಿಗಳ ಜೊತೆ ದೇವ ದುಂದುಭಿಗಳು ಮೊಳಗಿ ದೊಡ್ಡ ಶಬ್ದಗಳುಂಟಾಯಿತು. ರುದ್ರಗಣಗಳ ಕೋಲಾಹಲಶಬ್ದವು ಪ್ರಪಂಚವನ್ನು ವ್ಯಾಪಿಸಿತು. ಇದು ಜಗತ್ತಿಗೆ ಮಂಗಳವನ್ನು ಉಂಟುಮಾಡುವ ಮತ್ತು ಅಮಂಗಳವನ್ನು ಹೋಗಲಾಡಿಸುವ ಶಬ್ದವಾಗಿತ್ತು. ಲೋಕಪಾಲಕರು ಮೊದಲಾದ ಎಲ್ಲ ದೇವತೆಗಳೂ ಸಿದ್ಧರೂ ಗಣಗಳ ಹಿಂಭಾಗದಲ್ಲಿ ನಿಂತು ಉತ್ಸವದ ಸಂಭ್ರಮದಲ್ಲಿ ಭಾಗಿಗಳಾಗಿದ್ದರು.

ದೇವತೆಗಳ ಮಧ್ಯದಲ್ಲಿ ಹರಿಯು ಗರುಡನನ್ನೇರಿ ಹೋಗುತ್ತಿದ್ದರೆ, ಪಾರ್ಷ ಗಣಗಳು ಅವನ ಮೇಲೆ ಛತ್ರಿಯನ್ನು ಹಿಡಿದು, ಚಾಮರಗಳಿಂದ ಗಾಳಿ ಬೀಸುತ್ತಿದ್ದರು. ಪ್ರಮಥಗಣಗಳ ಹಿಂದೆ ಚತುರ್ಮುಖ ಬ್ರಹ್ಮ ಬರುತ್ತಿದ್ದ. ಬ್ರಹ್ಮನ ಸುತ್ತಲೂ ವೇದಗಳು, ಶಾಸ್ತ್ರಗಳು, ಪುರಾಣಗಳು, ಆಗಮಗಳು ಸಶರೀರವನ್ನು ಧರಿಸಿ ಆಗಮಿಸುತ್ತಿದ್ದರು. ಹಾಗೆಯೇ, ಸನಕಾದಿ ಮಹಾಸಿದ್ಧರು, ಪ್ರಜಾಪತಿಗಳು ಮತ್ತು ಬ್ರಹ್ಮನ ಮಾನಸಪುತ್ರರು ಬ್ರಹ್ಮನನ್ನು ಸುತ್ತುವರೆದು ಬರುತ್ತಿದ್ದರು. ದೇವೇಂದ್ರ ಐರಾವತದ ಮೇಲೆ ಕುಳಿತು ಬರುತ್ತಿದ್ದ. ಇಂದ್ರನ ಸುತ್ತ ದೇವಸೇನೆ ಇದ್ದರೆ, ಅವನ ಹಿಂದೆ ಬಹುಜನ ಋಷಿಗಳು ಉತ್ಸಾಹದಿಂದ ಹೊರಟಿದ್ದರು. ದಿಬ್ಬಣದಲ್ಲಿ ಶಾಕಿನೀದೇವಿಯರು, ರಾಕ್ಷಸರು, ಬೇತಾಳಗಳು, ಬ್ರಹ್ಮರಾಕ್ಷಸಗಳು, ಭೂತ, ಪ್ರೇತ, ಪಿಶಾಚಿ ಮುಂತಾದುವುಗಳು ಭಾಗವಹಿಸಿದ್ದವು. ಪ್ರಮಥ ಗಣಗಳು, ನಾರದ, ತುಂಬುರು, ಹಾಹಾ, ಹೂಹೂ, ಗಂಧರ್ವರು, ಕಿನ್ನರರು ಮಾರ್ಗದುದ್ದಕ್ಕೂ ವಾದ್ಯಗಳನ್ನು ಬಾರಿಸುತ್ತಾ ಹರ್ಷದಿಂದ ಹೆಜ್ಜೆ ಹಾಕುತ್ತಿದ್ದರು. ಜಗನ್ಮಾತೆಯರು. ದೇವಕನ್ಯೆಯರು, ಗಾಯತ್ರೀದೇವಿ, ಸಾವಿತ್ರೀದೇವಿ, ಲಕ್ಷ್ಮೀದೇವಿಯಂಥ ದೇವಸ್ತ್ರೀಯರು, ದೇವಪತ್ನಿಯರು ಶಂಕರನ ಮದುವೆಯನ್ನು ನೋಡಬೇಕೆಂದು ಸಂತೋಷದಿಂದ ಹೊರಟಿದ್ದರು. ಧರ್ಮವೇ ನಿರ್ಮಲ ಸ್ಫಟಿಕದಂತಿರುವ ವೃಷಭರೂಪವನ್ನು ಧರಿಸಿತ್ತು. ಆ ವೃಷಭವನ್ನೇರಿ ಹೊರಟಿದ್ದ ಮಹಾದೇವ ಸರ್ವಾಲಂಕಾರಗಳಿಂದ ಭೂಷಿತನಾಗಿ ಕಂಗೊಳಿಸುತ್ತಿದ್ದ. ಮದುವೆ ದಿಬ್ಬಣದ ಒಡ್ಡೋಲಗದಲ್ಲಿ ಭಾಗವಹಿಸಿದವರೆಲ್ಲ ಹರ್ಷಚಿತ್ತದಿಂದ ಶಿವನಿಗೆ ಜಯಕಾರ ಹಾಕುತ್ತಾ ಸಾಗಿದ್ದರು. ಹೀಗೆ ಮಹಾಶಿವ ಎಲ್ಲ ದೇವತೆಗಳು, ಮಹರ್ಷಿಗಳ ಒಲ್ಮೆಕೆಯೊಂದಿಗೆ ಗಿರಿಜೆಯನ್ನು ಮದುವೆಯಾಗಲು ಹಿಮವಂತನ ಮನೆಗೆ ಹೊರಟ.

ಇಲ್ಲಿಗೆ ಶ್ರೀಶಿವಮಹಾಪುರಾಣದ ರುದ್ರಸಂಹಿತೆಯ ಮೂರನೆಯ ಖಂಡವಾದ ಪಾರ್ವತೀಖಂಡದ ನಲವತ್ತನೆಯ ಅಧ್ಯಾಯ ಮುಗಿಯಿತು. ●

ದೀಪಾವಳಿ ಸಂಸ್ಕೃತಿಯ ಪ್ರಭಾವಳಿ

ಆಚರಣೆಗಳಿಗೆ ನಂಬಿಕೆಯ ಬಂಧ

ರಾಮ ವನವಾಸ ಮುಗಿಸಿ ಮರಳಿ ಬಂದ ದಿನ ಎಂಬ ಅರ್ಥದಲ್ಲಿ ದೀಪಾವಳಿಯನ್ನು ಆಚರಿಸುವುದು ಉತ್ತರ ಭಾರತದ ಹೆಚ್ಚಿನ ಭಾಗಗಳಲ್ಲಿ ಪ್ರಚಲಿತದಲ್ಲಿದೆ. ದಕ್ಷಿಣ ಭಾರತದ ಕೆಲವು ರಾಜ್ಯಗಳಲ್ಲಿ ದೀಪಾವಳಿಯು ಕೃಷ್ಣನ ಕತೆಯೊಂದಿಗೆ ಬೆಸೆದುಕೊಂಡಿದೆ. ಕೃಷ್ಣನು ನರಕಾಸುರನನ್ನು ಕೊಂದನು ಎಂಬುದು ಪೌರಾಣಿಕ ಕತೆ. ಅದಕ್ಕಾಗಿ ಆ ದಿನವನ್ನು ನರಕ ಚತುರ್ದಶಿ ಎಂದು ಆಚರಿಸಲಾಗುತ್ತದೆ. ಬಲಿ–ವಾಮನರ ಕತೆಯೂ ಮಹತ್ವವಾದುದು. ವಾಮನರೂಪಿಯಾಗಿ ಬಂದ ನಾರಾಯಣನು, ತನ್ನ ಕಾಲಿನಿಂದ ತುಳಿದು ಅಸುರ ಚಕ್ರವರ್ತಿ ಬಲಿಯನ್ನು ನರಕಕ್ಕೆ ಕಳುಹಿಸಿದ್ದ ಕತೆ ಪ್ರಸಿದ್ಧವಾದುದು. ಧೈರ್ಯಶಾಲಿ ಹಾಗೂ ದಾನಶೂರನಾಗಿದ್ದ ಬಲಿ ಚಕ್ರವರ್ತಿ ಚತುರ್ದಶಿಯ ದಿನ ತನ್ನ ಪ್ರಜೆಗಳನ್ನು ನೋಡಲು ಮತ್ತೆ ಬರುತ್ತಾನೆ ಎಂಬ ನಂಬಿಕೆಯಿದ್ದು, ಜನರು ದೀಪಹಚ್ಚಿ ಆತನನ್ನು ಬರಮಾಡಿಕೊಳ್ಳುತ್ತಾರೆ. ಬಲಿಪಾಡ್ಯವನ್ನು ಭಕ್ತಿಯಿಂದ ಆಚರಿಸಲಾಗುತ್ತದೆ.

ಸಿಖ್ಖರು ಮತ್ತು ಜೈನ ಸಮುದಾಯದವರಲ್ಲೂ ದೀಪಾವಳಿ ಆಚರಣೆಯಿದೆ. ಹರಗೋವಿಂದ ಸಿಂಗ್ ಅವರು ದೊರೆ ಜಹಾಂಗೀರನ ವಶದಲ್ಲಿದ್ದ ರಾಜರನ್ನು ಬಿಡಿಸಿ ತಂದಿದ್ದ ಆ ದಿನವನ್ನು ‘ಬಂಧಮುಕ್ತಿ ದಿನ’ದ ರೂಪದಲ್ಲಿ ಆಚರಿಸಲಾಗುತ್ತದೆ. ಮಹಾವೀರನ ಜ್ಞಾನೋದಯದ ಸಂದರ್ಭವನ್ನು ಗುರುತಿಸಲು ಸ್ವರ್ಗ ಮತ್ತು ಭೂಮಿಗಳನ್ನು ದೀಪಗಳಿಂದ ಅಲಂಕರಿಸಲಾಗಿತ್ತು ಎಂಬುದು ಜೈನರ ನಂಬಿಕೆ.

ಬೆಳಕಿನ ಹಬ್ಬ ಎಂದೇ ಹೆಸರಾಗಿರುವ ದೀಪಾವಳಿಯು ಧರ್ಮ, ಸಂಸ್ಕೃತಿ, ಸಂಪ್ರದಾಯ, ಪುರಾಣಗಳ ಜೊತೆ ಬೆಸೆದುಕೊಂಡಿದೆ. ನಾಡಿನ ಒಂದೊಂದು ಭಾಗದಲ್ಲಿ ಒಂದೊಂದು ರೀತಿಯ ಆಚರಣೆಗಳು ಕಾಣಸಿಗುತ್ತವೆ. ಎಲ್ಲವೂ ವಿಭಿನ್ನ, ವಿಶಿಷ್ಟ. ಪ್ರತಿ ಆಚರಣೆಯ ಹಿಂದೆಯೂ ಒಂದೊಂದು ನಂಬಿಕೆ ಹಾಗೂ ಕತೆಗಳಿವೆ. ಕೆಡುಕಿನ ಮೇಲೆ ಒಳಿತು ಗೆಲ್ಲುವುದೇ ಈ ಎಲ್ಲ ಆಚರಣೆಗಳ ತಾತ್ಪರ್ಯ. ಗ್ರಾಮೀಣ ಭಾಗಗಳಲ್ಲಿ ವಿವಿಧ ಸ್ಪರ್ಧೆಗಳು, ಮನೋರಂಜನೆ ಚಟುವಟಿಕೆಗಳು ಪ್ರಾಮುಖ್ಯ ಪಡೆದಿವೆ.

ಪಶ್ಚಿಮ ಬಂಗಾಳದ ನಾದಿಯಾ ಜಿಲ್ಲೆಯ ಶಾಂತಿಪುರದಲ್ಲಿ ದೀಪಾವಳಿ ಅಂಗವಾಗಿ ಪ್ರತಿಷ್ಠಾಪಿಸಿದ್ದ ಕಾಳಿ ಮಾತೆ ವಿಗ್ರಹ ವಿಸರ್ಜನೆಗೂ ಮುನ್ನ ಭಕ್ತರು ಮೆರವಣಿಗೆ ಮಾಡಿದರು –ಪಿಟಿಐ ಚಿತ್ರ

ದೇಶದ ಪ್ರಧಾನ ಹಬ್ಬ ದೀಪಾವಳಿಯಂದು ಲಕ್ಷ್ಮೀ ಪೂಜೆ ಹಾಗೂ ವಿಷ್ಣು ಆರಾಧನೆ ಮುಖ್ಯವಾದವು. ಉತ್ತರ ಭಾರತ ಹಾಗೂ ದಕ್ಷಿಣ ಭಾರತದಲ್ಲಿ ಆಚರಣೆಗಳಲ್ಲಿ ವೈವಿಧ್ಯವಿದೆ. ನರಕ ಚತುರ್ದಶಿಯಂದು ನರಕಾಸುರನ ಬೃಹತ್ ಪ್ರತಿಕೃತಿಯನ್ನು ದಹಿಸುವ ಆಚರಣೆ ಗೋವಾದಲ್ಲಿದೆ. ದೀಪಾವಳಿಯ ಮೂಲಕ ಗುಜರಾತಿಗಳ ವರ್ಷ ಕೊನೆಗೊಳ್ಳುತ್ತದೆ. ದೀಪಾವಳಿಯ ನಂತರದ ದಿನದಂದು ಹೊಸ ವರ್ಷ ‘ಬೆಸ್ತು ವರಸ್’ ಅಡಿಯಿಡುತ್ತದೆ. ಮಹಾರಾಷ್ಟ್ರದಲ್ಲಿ ಧನ್‌ತೆರಾಸ್ ಆಚರಣೆ ಮೂಲಕ ಮೊದಲ ವೈದ್ಯ ಧನ್ವಂತರಿಯನ್ನು ಸ್ಮರಿಸಲಾಗುತ್ತದೆ. ದೀಪಾವಳಿ ಚಾ ಪಾಡ್ವಾ, ಭಾವ್ ಬಿಜ್ ಮತ್ತು ತುಳಸಿ ಹಬ್ಬ ಇಲ್ಲಿನ ವೈಶಿಷ್ಟ್ಯಗಳು. ಪಶ್ಚಿಮ ಬಂಗಾಳದಲ್ಲಿ ದೀಪಾವಳಿಯಂದು ಕಾಳಿಯ ಆರಾಧನೆಗೆ ಪ್ರಾಧಾನ್ಯವಿದೆ. ಇದು ದುರ್ಗಾಪೂಜೆಯಷ್ಟೇ ಸಂಭ್ರಮದಿಂದ ನಡೆಯುತ್ತದೆ. ಕಾಳಿಪೂಜೆಯ ಮುನ್ನಾದಿನ ಮನೆಗಳಲ್ಲಿ ಹದಿನಾಲ್ಕು ದೀಪಗಳನ್ನು ಹಚ್ಚುವ ಸಂಪ್ರದಾಯವಿದೆ. ಕಾಳಿಗೆ ಅಲಂಕಾರ ಮಾಡಿ, ಸಿಹಿ ಪದಾರ್ಥ, ಅಕ್ಕಿ, ಮೀನು ಮೊದಲಾದ ನೈವೇದ್ಯ ಮಾಡಲಾಗುತ್ತದೆ.

ಒಡಿಶಾದ ಜನರು ಸೆಣಬಿನ ಕಟ್ಟಿಗೆ ಸುಡುವ ಮೂಲಕ ಹಿರಿಯರನ್ನು ಸ್ಮರಿಸುತ್ತಾರೆ. ಉತ್ತರ ಪ್ರದೇಶದಲ್ಲಿ ದೇವ ದೀಪಾವಳಿ ಎಂದು ಕರೆಯಲಾಗುತ್ತದೆ. ವಾರಾಣಸಿಯಲ್ಲಿ ದೇವತೆಗಳು ಗಂಗಾ ನದಿಯಲ್ಲಿ ಮುಳುಗುಹಾಕಲು ಬರುತ್ತಾರೆ ಎಂಬ ಪ್ರತೀತಿ ಇದೆ. ಹೀಗಾಗಿ ರಂಗೋಲಿಯಿಂದ ಅಲಂಕರಿಸಲಾದ ಗಂಗಾ ನದಿತಟದಲ್ಲಿ ಪ್ರಜ್ವಲಿಸುವ ದೀಪಗಳನ್ನು ಬೆಳಗಲಾಗುತ್ತದೆ.

ದಕ್ಷಿಣ ಭಾರತದಲ್ಲಿ ಅಮಾವಾಸ್ಯೆ, ನರಕ ಚತುರ್ದಶಿ ಮತ್ತು ಬಲಿ ಪಾಡ್ಯಮಿಯಂದು ವಿವಿಧ ಆಚರಣೆಗಳು ಇರುತ್ತವೆ. ಈ ಭಾಗದ ರಾಜ್ಯಗಳಲ್ಲಿ ಲಕ್ಷ್ಮೀ ಪೂಜೆಗೆ ಮಹತ್ವ ಹೆಚ್ಚು. ಹಿರಿಯರ ಸ್ಮರಣೆ ಮಾಡಿ ಸಿಹಿ ಅಡುಗೆ ತಯಾರಿಸಲಾಗುತ್ತದೆ. ಮನೆಯ ಮುಂದೆ ರಂಗೋಲಿ ಬಿಡಿಸಿ, ದೀಪ ಬೆಳಗಿಸಿ, ಪಟಾಕಿ ಸಿಡಿಸಲಾಗುತ್ತದೆ. ಅಂಗಡಿಗಳಲ್ಲಿ ಧನಲಕ್ಷ್ಮಿ ಪೂಜೆ ನಡೆಯುತ್ತದೆ. ತಮಿಳುನಾಡಿನಲ್ಲಿ ಎಣ್ಣೆಸ್ನಾನ ಮಾಡುವ ಸಂಪ್ರದಾಯವಿದೆ. ದೀಪಾವಳಿಗೆಂದೇ ವಿಶೇಷವಾಗಿ ತಯಾರಿಸಲಾದ ಲೇಹ್ಯವನ್ನು ಇಲ್ಲಿನ ಜನ ಸೇವಿಸುತ್ತಾರೆ. ಆಂಧ್ರಪ್ರದೇಶದಲ್ಲಿ ‘ಸತ್ಯಭಾವ’ ಎಂಬ ಮಣ್ಣಿನ ದೇವತಾಮೂರ್ತಿಯನ್ನು ಪೂಜಿಸಲಾಗುತ್ತದೆ.

ವಿದೇಶಗಳಲ್ಲಿ ಸಂಭ್ರಮ: ಹಿಂದೂಗಳು ಹೆಚ್ಚಾಗಿ ನೆಲೆಸಿರುವ ಸಿಂಗಪುರ, ಮಲೇಷ್ಯಾ ಮೊದಲಾದ ದೇಶಗಳಲ್ಲೂ ಹಬ್ಬದ ಆಚರಣೆಯಿದೆ. ವಿದೇಶಗಳಲ್ಲಿ ನೆಲೆನಿಂತಿರುವ ಭಾರತೀಯ ಸಮುದಾಯದವರು ಬಹಳ ಸಡಗರದಿಂದ ಹಬ್ಬವನ್ನು ಆಚರಿಸುತ್ತಾರೆ. ಭಾರತೀಯ ಸಮುದಾಯದವರು ಹೆಚ್ಚಾಗಿರುವ ಫಿಜಿ, ಮಾರಿಷಸ್‌ನಲ್ಲಿ ದೀಪಾವಳಿಯಂದು ಸರ್ಕಾರಿ ರಜೆಯೂ ಇರುತ್ತದೆ. ನೇಪಾಳದಲ್ಲಿ ತಿಹಾರ್ ಎಂಬ ಹೆಸರಿನಲ್ಲಿ ಆಚರಣೆ ನಡೆಯುತ್ತದೆ. ಮಲೇಷ್ಯಾದಲ್ಲಿ ದೀಪಾವಳಿಯನ್ನು ‘ಹರಿ ದೀಪಾವಳಿ’ ಎನ್ನಲಾಗುತ್ತದೆ. ಕೆನಡಾ, ಬ್ರಿಟನ್, ಟ್ರಿನಿಡಾಡ್ ಮತ್ತು ಟೊಬ್ಯಾಗೊ ದ್ವೀಪರಾಷ್ಟ್ರಗಳೂ ಪ್ರತೀ ವರ್ಷ ದೀಪದ ಹಬ್ಬಕ್ಕೆ ಸಾಕ್ಷಿಯಾಗುತ್ತವೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ಪ್ರಳಯ - ಸೃಷ್ಟಿ

ಎಲ್ಲ ನಾಶನವೆಲ್ಲಕಾಲವಶವಾದೊಡಂ
ಕ್ಷುಲಕನು ನರನಾದೊಡಂ ಕಾಲನಿದಿರೊಳ್ ||
ಉಲ್ಲಾಸವೇ ಧರ್ಮ; ಕೊಲ್ಲಿಪನೆ ಬೆಳೆಯಿಪನು |
ಹುಲ್ಲೊಣಗಿ ಬೆಳೆವುದಲ?- ಮಂಕುತಿಮ್ಮ || 743 ||

ಪದ-ಅರ್ಥ: ನಾಶನವೆಲ್ಲಕಾಲವಶವಾದೊಡಂ = - ನಾಶನವು + ಎಲ್ಲ + ಕಾಲವಶವು + ಆದೊಡಂ ಕಾಲನಿದಿರೊಳ್ = ಕಾಲನ + ಇದಿರೊಳ್(ಎದುರು), ಕೊಲ್ಲಿಪನು = ಕೊಲ್ಲುವವನು, ಬೆಳೆಯಿಪನು- = ಬೆಳೆಸುವವನು, ಹುಲ್ಲೊಣಗಿ = ಹುಲ್ಲು + ಒಣಗಿ.

ವಾಚ್ಯಾರ್ಥ: ಇರುವುದೆಲ್ಲ ನಾಶವಾಗಿ ಕಾಲವಶವಾದರೂ, ಮನುಷ್ಯ ಕಾಲನ ಎದುರಿನಲ್ಲಿ ಒಂದು ಅತ್ಯಂತ ಕ್ಷುಲ್ಲಕವಾದ ಪ್ರಾಣಿ ಎನ್ನಿಸಿದರೂ, ಪ್ರಪಂಚದಲ್ಲಿ ಉಲ್ಲಾಸವೇ ಧರ್ಮ. ಯಾಕೆಂದರೆ ಯಾವ ಶಕ್ತಿ ಕೊಲ್ಲಿಸುತ್ತದೆಯೋ ಅದೇ ಬೆಳೆಸುತ್ತದೆ ಕೂಡ. ಒಣಗಿಹೋದ ಹುಲ್ಲು ಬೆಳೆಯುವುದಿಲ್ಲವೇ?

ವಿವರಣೆ: ಭಗವದ್ಗೀತೆಯಲ್ಲಿ ಒಂದು ಮಾತಿದೆ. ಪ್ರಕೃತಿಂ ಸ್ವಾಮವಷ್ಟಭ್ಯ ವಿಸ್ರಜಾಮಿ ಪುನಃ ಪುನಃ || ಬ್ರಹ್ಮವು ಈಶ್ವರಭಾವದಿಂದ ತನ್ನ ಪ್ರಕೃತಿಯಿಂದಲೇ ಜಗತ್ತನ್ನು ಪುನಃ ಪುನಃ ಸೃಷ್ಟಿ ಮಡುತ್ತದೆ ಎಂಬುದು ಅರ್ಥ.

ಆ ಪರಸತ್ವ ತನ್ನ ಲೀಲೆಯಂತೆ ಪ್ರಪಂಚವನ್ನು ಪುನಃ ಪುನಃ ಸೃಷ್ಟಿ ಮಾಡುತ್ತದೆಯೆಂದರೆ, ಅದು ಆಗಾಗ ಪ್ರಪಂಚವನ್ನು ನಾಶಮಾಡುತ್ತದೆ ಎಂದೇ ಅರ್ಥ. ಅಂದರೆ ಪ್ರಪಂಚದ ಸೃಷ್ಟಿ, ಪ್ರಳಯಗಳು ಆಗುತ್ತಲೇ ಇರುವಂಥವುಗಳು. ಪ್ರಳಯಕಾಲದಲ್ಲಿ ಎಲ್ಲವೂ ನಾಶವಾಗಿ ಹೋಗುತ್ತದೆ ಎಂಬ ನಂಬಿಕೆ ಇದೆ. ಹಾಗೆ ಎಲ್ಲವೂ ನಾಶವಾಗಿ ಹೋಗುವಾಗ ಮನುಷ್ಯ ಒಂದು ಕ್ಷುದ್ರ ಜಂತುವಿನಂತೆ ಭಾಸವಾಗುತ್ತಾನೆ. ನಾವೇ ಕಂಡಿದ್ದೇವೆ, ಭಯಂಕರವಾದ ಸುನಾಮಿ, ತೀರವನ್ನು ಅಪ್ಪಳಿಸಿದಾಗ, ಭೂಕಂಪವಾದಾಗ, ಬಿರುಗಾಳಿ ತಡೆಯದೇ ಹೊಡೆದಾಗ, ಸಹಸ್ರಾರು ಜನ ಸತ್ತು ಹೋಗುತ್ತಾರೆ. ಊರಿಗೆ ಊರೇ ನಿರ್ನಾಮವಾಗಿ ಹೋಗುತ್ತದೆ. ಆ ಸಂದರ್ಭದಲ್ಲಿ ಮನುಷ್ಯ ಒಂದು ಅತ್ಯಂತ ಅಸಹಾಯಕವಾಗಿ, ಅಲ್ಪನಾದವನಂತೆ ಭಾಸವಾಗುತ್ತದೆ. ಕಾಲನ ಎದುರಿನಲ್ಲಿ ಮನುಷ್ಯ ಒಂದು ತೃಣವೂ ಅಲ್ಲ ಎನ್ನಿಸುತ್ತದೆ. ಇದೆಲ್ಲ ಒಪ್ಪಿತವೇ. ಆದರೆ ಇದಕ್ಕೆ ಇನ್ನೊಂದು ಆಯಾಮವಿದೆ. ಮನುಷ್ಯ ಮತ್ತು ಪ್ರಕೃತಿಯ ಅನೇಕ ವಸ್ತುಗಳು ನಿರ್ನಾಮವಾದರೂ ಪ್ರಕೃತಿ ಮತ್ತೆ ಹೊಸದಾದಂತೆಯೇ ಇದೆಯಲ್ಲ? ಕೆಲ ಮನುಷ್ಯರು ಮರೆಯಾದರೆ, ಹೊಸದಾಗಿ ಅನೇಕರು ಬಂದಿದ್ದಾರಲ್ಲ? ಕೆಲವಸ್ತುಗಳು ನಾಶವಾಗಿದ್ದರೆ ಅವುಗಳಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಮರಳಿ ಬಂದಿವೆ. ಅಂದರೆ, ಯಾವುದು ಕಳೆದುಹೋಗಿದೆಯೋ ಅದು ಹೆಚ್ಚುಪಟ್ಟಾಗಿ ಮರಳಿ ಬಂದಿದೆ. ಅದನ್ನೇ ಕಗ್ಗ ಸುಂದರವಾಗಿ ‘ಕೊಲ್ಲಿಪನೆ ಬೆಳೆಯಿಪನು’ ಎನ್ನುತ್ತದೆ. ಯಾವ ಶಕ್ತಿ ನಾಶಮಾಡಲು ಉದ್ಯುಕ್ತವಾಗಿತ್ತೋ, ಅದು ಪುನರ್ ಸೃಷ್ಟಿ ಮಾಡುವುದನ್ನು ತೀರ್ಮಾನಿಸಿತ್ತು ಎಂದಾಯಿತು. ಆದ್ದರಿಂದ ಈ ಪ್ರಕ್ರಿಯೆಗೆ ನಾವು ದುಃಖಪಡುವುದು ಸರಿಯಲ್ಲ.

ಉಲ್ಲಾಸವೇ ನಮಗೆ ನಿಜವಾದ ಧರ್ಮ. ಇದಕ್ಕೊಂದು ಸುಂದರ ಉದಾಹರಣೆಯನ್ನು ಕಗ್ಗ ನೀಡುತ್ತದೆ. ಬೇಸಿಗೆಯಲ್ಲಿ ಒಣಗಿ ಕಾಣದಂತಾದ ಹುಲ್ಲು ಒಂದು ಮಳೆಯಾದೊಡನೆ ಹಸಿರಿನಿಂದ ನಳನಳಿಸುವುದಿಲ್ಲವೇ? ಅಂತೆಯೇ ನಾಶವಾದದ್ದು ಮತ್ತೆ ಹುಟ್ಟಿಬರುತ್ತದೆ. ಅದಕ್ಕೆ ದುಃಖಪಡುವ ಕಾರಣವಿಲ್ಲ. ಅದು ನಿರಂತರ ಎನ್ನುವುದಕ್ಕಾಗಿ ನಾವು ಸಂತೋಷಪಡಬೇಕು. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಬುಧವಾರ ಅಕ್ಟೋಬರ್ 26, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಕಾರ್ತಿಕ ಶುಕ್ಲ ಪ್ರತಿಪದ್ ಗಂ. 14-43 ನಕ್ಷತ್ರ: ಸ್ವಾತಿ ಗಂ. 13-24 ಯೋಗ: ಪ್ರೀತಿ ಗಂ. 10-08, ಕರಣ: ಬವ ಗಂ. 14-43, ತುಲಾ ಮಾಸದ 08 ನೇ ದಿನ.

ರಾಹುಕಾಲ : ಮಧ್ಯಾಹ್ನ 12-00 – 01:30 ಸೂರ್ಯೋದಯ : 06-27 ಸೂರ್ಯಾಸ್ತ : 06-02 ಮುಸ್ಲಿಂ ದಿನಾಂಕ : 29 ರಬಿಉಲ್ಲಾವಲ್,

ದಿನ ವಿಶೇಷ : ಕಾರ್ತಿಕ ಶುಕ್ಲಾದಿ

ಅದೃಷ್ಟ ಸಂಖ್ಯೆ : 4, 9

ಮೇಷ: ತುರ್ತು ಕೆಲಸವಾದರೂ ಅವಸರ ಮಾಡಿಕೊಳ್ಳದೇ ಆಲೋಚಿಸಿ ಕೆಲಸವನ್ನು ನಿರ್ವಹಿಸಿ. ವಿವಾದಾಸ್ಪದ ವಿಷಯಗಳ ಕಡೆ ಗಮನ ಕೊಡದೆ ಕೆಲಸ ಮಾಡಿಕೊಂಡಲ್ಲಿ ಲಾಭ ಖಂಡಿತ ದೊರಕುವುದು.

ವೃಷಭ: ಉದ್ಯೋಗದಲ್ಲಿ ಸ್ಥಾನ ಬದಲಾವಣೆಯಾಗಿ ಮನಸ್ಸಿಗೆ ನೆಮ್ಮದಿ ಸಿಗುವುದು. ಆದಾಯ ಉತ್ತಮವಾಗಿದ್ದು ಹೂಡಿಕೆಗೆ ಒಳ್ಳೆಯ ಸಮಯ. ಪ್ರಿಂಟಿಂಗ್ ಪ್ರೆಸ್‌ನವರಿಗೆ ಹೆಚ್ಚಿದ ಅವಕಾಶಗಳಿಂದ ಲಾಭವಿರುವುದು.

ಮಿಥುನ: ನಿಮ್ಮ ಸೋದರರು ನಿಮ್ಮ ಕೆಲಸದಲ್ಲಿ ದೈಹಿಕವಾಗಿ, ಆರ್ಥಿಕವಾಗಿ ಹೆಚ್ಚಿನ ನೆರವಿಗೆ ಬರಲಿದ್ದಾರೆ. ಸಂಶೋಧನಾ ಕ್ಷೇತ್ರದಲ್ಲಿನ ಕಾರ್ಯಗಳಲ್ಲಿ ಪ್ರಗತಿ ಸಾಧಿಸುವಿರಿ. ವಿದೇಶ ಪ್ರಯಾಣ ಮಾಡಬೇಕಾದ ಸಂದರ್ಭ ಬರಲಿದೆ.

ಕರ್ಕಾಟಕ: ಮನೆಯವರ ವಿಚಾರದಲ್ಲಿ ಈ ದಿನ ದೃಢವಾದ ಮನೋಭಾವ ತಾಳಬೇಕಾಗುವುದು. ಕೆಲವೊಂದು ವಿಷಯಗಳನ್ನು ಹಾಗೂ ಅದರಿಂದಾಗುವ ಲಾಭ ನಷ್ಟಗಳ ಬಗ್ಗೆ ಪುನರಾವಲೋಕನ ಮಾಡುವುದು ಉತ್ತಮ.

ಸಿಂಹ: ಇಂದಿನ ಕೆಲಸಕ್ಕೆ ವಿಘ್ನಗಳ ಭೀತಿ ಇರಲಿದೆ. ಚಟುವಟಿಕೆಗಳಿಂದ ಬಿಡುವು ಮಾಡಿಕೊಂಡು ಮನೆಯವರೊಡನೆ ಕಾಲ ಕಳೆಯಲು ಪ್ರಯತ್ನಿಸಿ. ಧಾರ್ಮಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವ ಅವಕಾಶ ಸಿಗಲಿದೆ.

ಕನ್ಯಾ: ಸಂಸಾರದ ಜವಾಬ್ದಾರಿ ಹೆಚ್ಚಲಿದೆ. ಸ್ವಂತ ಉದ್ಯೋಗ ನಡೆಸುವವರಿಗೆ ಸಂಪಾದನೆ ಕಡಿಮೆ ಇದ್ದರೂ ಉದ್ಯೋಗ ಬದಲಾಯಿಸದೇ ಅದನ್ನೇ ಮುಂದುವರಿಸುವುದು ಉತ್ತಮ. ಮಕ್ಕಳ ಆರೋಗ್ಯದಲ್ಲಿ ವ್ಯತ್ಯಾಸ ಉಂಟಾಗಬಹುದು.

ತುಲಾ: ನಿಮ್ಮ ಉದಾಸೀನತೆಯನ್ನು ದೂರ ಮಾಡುವುದರಿಂದ ಇನ್ನೂ ಹೆಚ್ಚಿನ ಯಶಸ್ಸು ಪಡೆಯಬಹುದು. ಈ ದಿನದ ನಿಮ್ಮ ಪರಿಸ್ಥಿತಿಯು ಬೆಕ್ಕಿನ ಬಾಯಿಗೆ ಸಿಕ್ಕಿದಂತಹ ಇಲಿಯಂತಿರುವುದು. ಇನ್ನೊಬ್ಬರ ಬಗ್ಗೆ ಕೆಟ್ಟ ಮಾತುಗಳು ಬೇಡ.

ವೃಶ್ಚಿಕ: ಕೆಲಸ ಆರಂಭಿಸುವ ಮುನ್ನ ಆಮೂಲಾಗ್ರ ಚಿಂತನೆ ಅಗತ್ಯ ಎಂಬುದು ಈ ದಿನ ತಿಳಿದುಬರಲಿದೆ. ವಸ್ತ್ರ ಖರೀದಿಯಲ್ಲಿ ವಿಶೇಷ ರಿಯಾಯಿತಿ ಮಾರಾಟಗಳಿಂದ ಲಾಭ ಪಡೆಯುವಿರಿ. ನೂತನ ವಾಹನ ಕೊಳ್ಳುವ ಯೋಗ.

ಧನು: ಇನ್ನೊಬ್ಬರನ್ನು ನೋಡಿ ಅಸೂಯೆ ಪಡುವ ನಿಮ್ಮ ವ್ಯಕ್ತಿತ್ವವನ್ನು ಬದಲಿಸಿಕೊಳ್ಳುವುದು ಅಭಿವೃದ್ಧಿಗೆ ಕಾರಣವಾಗುತ್ತದೆ. ಬಾಲ್ಯ ಸ್ನೇಹಿತರೊಂದಿಗೆ ಸಂತಸದ ಕ್ಷಣಗಳನ್ನು ಕಳೆಯುವಿರಿ. ಬರಹಗಾರರಿಗೆ ಗೌರವ ದೊರೆಯಲಿದೆ.

ಮಕರ: ಗುತ್ತಿಗೆ ಆಧಾರಿತ ಉದ್ಯೋಗ ನಡೆಸುವವರಿಗೆ ಜನಬಲದ ಸಮಸ್ಯೆ ಎದುರಾಗಬಹುದು. ಮಾನಸಿಕ ಸ್ಥೈರ್ಯ ಹೆಚ್ಚಲಿದೆ. ವೈಯಕ್ತಿಕ ಸಮಸ್ಯೆಗಳು ಬಗೆ ಹರಿಯುವುದು. ಇಚ್ಛೆ ಈಡೇರಲು ಲಕ್ಷ್ಮಿವೆಂಕಟರಮಣನನ್ನು ಆರಾಧಿಸಿ.

ಕುಂಭ: ಬಹಳ ಸಮಯದಿಂದ ಇತ್ಯರ್ಥವಾಗದ ನಿಮ್ಮ ಕೌಟುಂಬಿಕ ಸಮಸ್ಯೆ ಈ ದಿನ ಕೈಗೂಡುವುದು, ಅದರಲ್ಲೂ ಮುಖ್ಯವಾಗಿ ಸಹೋದರರಲ್ಲಿ ಭಿನ್ನಾಭಿಪ್ರಾಯವಿಲ್ಲದೇ ಪರಸ್ಪರ ವಿಶ್ವಾಸದಿಂದ ಇತ್ಯರ್ಥವಾಗಲಿದೆ.

ಮೀನ: ಜೀವನದಲ್ಲಿ ಸವಾಲಾಗಿ ಬಂದ ಗೃಹ ನಿರ್ಮಾಣದ ಜವಾಬ್ದಾರಿಯಲ್ಲಿ ಜಯವನ್ನು ಸಾಧಿಸುವಿರಿ. ಕೃಷಿಕರು ಮಿಶ್ರ ಕೃಷಿ ಪದ್ಧತಿಯನ್ನು ಅನುಸರಿಸಿದರೆ ಲಾಭವಾಗಲಿದೆ. ಈ ದಿನ ಸಂತೋಷವಾಗಿರಲಿದೆ.

ಪದಬಂಧ 5120

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಮಧ್ಯಾಹ್ನದ ಹೊತ್ತು ಏರಿರುವ ಅಮಲು! (2)
3.ವಿಜ್ಞಾನಿಯ ಜೊತೆಗೆ ಬಲ್ಲವನಿದ್ದಾನಲ್ಲಾ? (2)
5.ಯಾರೂ ಓದಲಾಗದ ಲಲಾಟಲಿಪಿ (5)
6.ಗಡಕ್ಕನೆ ಬಂದೆರಗಿದ ಗಂಡು ಕೋತಿ (3)
7.ಜುಳು ಜುಳು ಹರಿವ ಜಲದಲ್ಲಿ ಮಾಡಿದ ಸ್ನಾನ (3)
8.ಅಳಿಯತನಕ್ಕೆ ವಹಿಸಿಕೊಂಡಿರುವ ಮಧ್ಯಸ್ತಿಕೆ (5)
9.ನಿಧಾನವಾಗಿ ರೂಢಿಸಿಕೊಂಡ ರೀತಿ (3)
10.ಈತ ದೇವರನ್ನೇ ನಂಬದವನು (3)
13.ಪಾಕಕ್ಕೆ ಸಿಕ್ಕಿರುವ ಉಡುಗೊರೆ (5)
14.ನೆನಪಾದಾಗ ಹೇಳಲು ಇದೊಂದು ಕಾರಣ! (2)
15.ಮಚ್ಚೆ ಉಳ್ಳವನು ಹಿಡಿದಿರುವ ಕಡಿಗತ್ತಿ! (2)

ಮೇಲಿಂದ ಕೆಳಕ್ಕೆ

1.ಮಲಗಿದ ಮಗನಿಗೆ ಬಂದಿರುವುದು ಅಪಸ್ಮಾರವೇ? (4)
2.ಗಿಂಬಳಕ್ಕೆ ಕೈ ಚಾಚಿದವನ ಮೂಗಿನ ಶ್ಲೇಷ್ಮ! (3)
4.ಸ್ವಲ್ಪವೂ ಪ್ರಯೋಜನಕ್ಕೆ ಬಾರದುದು (4)
5. ಅಶ್ವದ ಮೊಗವಿದು (5)
7.ಈ ಲೀಡರ್ ಪಕ್ಕಾ ಕನ್ನಡಿಗ! (5)
9.ಜ್ಞಾಪಕದಿಂದ ಮಾಡಿಕೊಡಿರುವ ಮನವಿ (4)
11.ಅಕ್ಕಿ ತೊಳೆದ ನೀರು (4)
12.ಆನಂದ ಹೀಗೆ ಬಂದಿದೆ (3)



5119 ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪರಿತಾಪ 3.ಕೂಗಳತೆ
5.ಮಾರ್ಮಿಕ 6.ಅವಗುಣ
8.ಷರಬತ್ತು 10.ಮತದಾನ
12.ತರಗತಿ 13.ವಕ್ತಾರ
16.ಉಪಹಾಸ 17.ಮಧುಚಂದ್ರ

ಮೇಲಿಂದ ಕೆಳಕ್ಕೆ:
1.ಪತ್ತೆ 2.ಪರಿಮಾಣ
3.ಕೂಲಂಕಷ 4.ತೆಪ್ಪ
7.ವರಾತ 9.ಬಳಗ
11.ನವಮಾಸ 12.ತರತಮ
14.ಗ್ರಿಲು 15.ಇಂದ್ರ

ಸುಡೊಕು 5506

		7	1		2		6	
				3		8		9
2		4				1		7
	6	8		5			4	1
						7	9	
9	4			2				
3	7			8		9		5
		6					8	
	8		3		5	6		2

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5505 ಸುಡೊಕು

4	5	7	3	6	8	9	1	2
9	8	1	5	7	2	3	4	6
6	3	2	9	4	1	7	5	8
3	7	4	2	8	9	1	6	5
5	2	9	4	1	6	8	3	7
1	6	8	7	3	5	2	9	4
2	9	3	8	5	4	6	7	1
7	4	6	1	2	3	5	8	9
8	1	5	6	9	7	4	2	3

'ಮೈತ್ರಿ ಸರ್ಕಾರ ಬಂಡೆಯಂತೆ ಗಟ್ಟಿ'

ತೇಜಸ್ವಿ

ಪಟ್ನಾ (ಪಿಟಿಐ): ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟದತ್ತ ಮತ್ತೆ ವಾಲಿದ್ದಾರೆ ಎಂಬ ಊಹಾಪೋಹಗಳಿಗೆ ಆರ್‌ಜೆಡಿ ನಾಯಕ ಹಾಗೂ ಉಪಮುಖ್ಯಮಂತ್ರಿ ತೇಜಸ್ವಿ ಯಾದವ್ ಅವರು ಮಂಗಳವಾರ ತೆರೆ ಎಳೆದಿದ್ದಾರೆ. 'ಮಹಾಘಟಬಂಧನ್' ಗಟ್ಟಿಯಾಗಿದೆ ಎಂದು ಅವರು ಹೇಳಿದ್ದಾರೆ.

ನಿತೀಶ್ ಕುಮಾರ್ ನೇತೃತ್ವದ ಜೆಡಿಯು ಹಾಗೂ ತೇಜಸ್ವಿ ಯಾದವ್ ನೇತೃತ್ವದ ಆರ್‌ಜೆಡಿ ಹಾಗೂ ಇತರ ಪಕ್ಷಗಳು ಸೇರಿ ಬಿಹಾರದ ಮೈತ್ರಿ ಸರ್ಕಾರವನ್ನು ಮುನ್ನಡೆಸುತ್ತಿವೆ. ತಮ್ಮ ಪಕ್ಷಕ್ಕೆ ಮೈತ್ರಿಕೂಟದ ಇತರ ಪಕ್ಷಗಳ ಸಂಪೂರ್ಣ ಬೆಂಬಲವಿದ್ದು, ಮುಂದಿನ ವಾರ ನಡೆಯಲಿರುವ ಎರಡು ಕ್ಷೇತ್ರಗಳ ಉಪಚುನಾವಣೆಯಲ್ಲಿ ಗೆಲ್ಲಲಿದ್ದೇವೆ ಎಂದು ತೇಜಸ್ವಿ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಮೊಕಾಮಾ ಹಾಗೂ ಗೋಪಾಲಗಂಜ್ ವಿಧಾನಸಭಾ ಕ್ಷೇತ್ರಗಳಲ್ಲಿ ಉಪಚುನಾವಣೆ ನಿಗದಿಯಾಗಿದೆ. ಎರಡೂ ಕಡೆಗಳಲ್ಲಿ ಸ್ಪರ್ಧೆ ಮಾಡಲು ಮೈತ್ರಿಕೂಟ ನಿರ್ಧರಿಸಿದೆ. ಎರಡೂ ಕ್ಷೇತ್ರಗಳಲ್ಲಿ ಮೈತ್ರಿಕೂಟದ ಅಭ್ಯರ್ಥಿಗಳು ಗೆಲ್ಲಲಿದ್ದಾರೆ ಎಂದು ಅವರು ಹೇಳಿದ್ದಾರೆ.

ಚುನಾವಣಾ ಕಾರ್ಯತಂತ್ರ ತಜ್ಞ ಪ್ರಶಾಂತ್ ಕಿಶೋರ್ ಅವರು ನಿತೀಶ್ ಕುರಿತು ಇತ್ತೀಚೆಗೆ ನೀಡಿದ್ದ ಹೇಳಿಕೆಯು ಬಿಹಾರದ ಮೈತ್ರಿ ಸರ್ಕಾರದ ಭವಿಷ್ಯದ ಬಗ್ಗೆ ಊಹಾಪೋಹ ಸೃಷ್ಟಿಸಿತ್ತು. 'ಎನ್‌ಡಿಎ ಜೊತೆಗಿನ ಮೈತ್ರಿ ಮುರಿದುಕೊಂಡ ಬಳಿಕ, ರಾಜ್ಯಸಭಾ ಉಪಸಭಾಪತಿಯಾಗಿರುವ ಜೆಡಿಯು ಸಂಸದ ಹರಿವಂಶ ಸಿಂಗ್ ಅವರಿಗೆ ರಾಜೀನಾಮೆ ನೀಡುವಂತೆ ನಿತೀಶ್ ಸೂಚಿಸಿಲ್ಲ. ಅವರು ಬಿಜೆಪಿ ಜೊತೆಗಿನ ಮೈತ್ರಿ ಹಾದಿಯನ್ನು ಮುಕ್ತವಾಗಿ ಇಟ್ಟುಕೊಂಡಿದ್ದಾರೆ' ಎಂದು ಆರೋಪಿಸಿದ್ದರು.

ತೇಜಸ್ವಿ ಅವರು ಸುದ್ದಿಗಾರರ ಜೊತೆ ಮಾತನಾಡುವಾಗ, ಮೈತ್ರಿಕೂಟದ ಮತ್ತೊಬ್ಬ ನಾಯಕ ಹಾಗೂ ಹಿಂದುಸ್ತಾನ್ ಅವಾಮ್ ಮೋರ್ಚಾ ಮುಖ್ಯಸ್ಥ ಜಿತನ್‌ರಾಮ್ ಮಾಂಝಿ ಅವರು ಇದ್ದರು. ನಿತೀಶ್ ಅವರು ರಾಜ್ಯದ ಹಿತಾಸಕ್ತಿಗಾಗಿ ತೆಗೆದುಕೊಳ್ಳುವ ನಿರ್ಧಾರಕ್ಕೆ ಬದ್ಧ ಎಂದು ಮಾಂಝಿ ಇತ್ತೀಚೆಗೆ ಹೇಳಿಕೆ ನೀಡಿದ್ದು ಇನ್ನಷ್ಟು ಅನುಮಾನಗಳಿಗೆ ಕಾರಣವಾಗಿತ್ತು.

'ಮಾಂಝಿ ಅವರು ಹಿರಿಯರು. ಅವರು ರಕ್ಷಕರಿದ್ದಂತೆ. ನಮ್ಮ ಮೈತ್ರಿಕೂಟವು ಬಂಡೆಯಂತೆ ಗಟ್ಟಿಯಾಗಿದೆ' ಎಂದು ತೇಜಸ್ವಿ ಹೇಳಿದ್ದಾರೆ. ಕೆಲವರು ವದಂತಿಗಳನ್ನು ಹರಡಲು ಯತ್ನಿಸುತ್ತಿದ್ದರೂ, ಅಂತಹ ಅನುಮಾನಗಳಿಗೆ ಅವಕಾಶವಿಲ್ಲ ಎಂದಿದ್ದಾರೆ.

ಅತಿಥಿಗೃಹದಲ್ಲಿ ಗಾಯಗೊಂಡ ಸ್ಥಿತಿಯಲ್ಲಿ ಬಾಲಕಿ ಪತ್ತೆ

ಕನೌಜ್, ಉತ್ತರ ಪ್ರದೇಶ (ಪಿಟಿಐ): 12 ವರ್ಷದ ಬಾಲಕಿಯೊಬ್ಬಳು ಇಲ್ಲಿಯ ತಿರ್ವಾ ಪ್ರದೇಶದ ಸರ್ಕಾರಿ ಅತಿಥಿಗೃಹದಲ್ಲಿ ರಕ್ತಸ್ರಾವ, ನೋವಿನಿಂದ ಒದ್ದಾಡುತ್ತಿದ್ದ ಸ್ಥಿತಿಯಲ್ಲಿ ಪತ್ತೆಯಾಗಿದ್ದಾಳೆ ಎಂದು ಪೊಲೀಸರು ಮಂಗಳವಾರ ತಿಳಿಸಿದ್ದಾರೆ.

ಈ ಸಂಬಂಧ ವಿಡಿಯೊವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದೆ.

ಅತಿಥಿ ಗೃಹದಲ್ಲಿದ್ದ ಸಿಸಿಟಿವಿ ಕ್ಯಾಮೆರಾ ಪರಿಶೀಲಿಸಿದ ವೇಳೆ ಬಾಲಕಿಯು ಯುವಕನೊಬ್ಬನ ಜೊತೆ ಮಾತನಾಡುತ್ತಿರುವುದು ಕಂಡುಬಂದಿದೆ ಎಂದು ಅವರು ಹೇಳಿದ್ದಾರೆ.

ಕರ್ನಾಟಕ ಸರಕಾರ

ಜಿಲ್ಲಾ ನಗರಾಭಿವೃದ್ಧಿ ಕೋಶ, ಉತ್ತರ ಕನ್ನಡ, ಕಾರವಾರ – 581 301

DISTRICT URBAN DEVELPOMENT CELL, D.C. OFFICE UTTARA KANNADA DISTRICT, KARWAR-581 301

Telephone & Fax: 08382 221170 Email: itstaffdudckarwar@gmail.com

No: UK/DUDC/AmrutNagarothanaPhase-4/CR-07:2022-23 Dated: 21-10-2022

TENDER NOTIFICATION (Call-2) (Two Cover system)

The Executive Engineer, District Urban Development Cell, Uttar Kannada District, Karwar invites e-tenders from PWD Registered contractors for Amrut Nagarothan-4 Project work as per KTPP Act 1999 Rule 2000 as detailed below.

Uploading Tender Documents: **21-10-2022 at 16.30 hrs**, Pre bid Meeting date: **03-11-2022 at 11.00 hrs**, Last date for submission of tender: **10-11-2022 at 16.30 hrs**, Opening of Technical Bid: **14-11-2022 at 17.00 hrs** & Opening of Financial Bid: **18-11-2022 at 11.00 hrs.**

Sl. No	Description of work	Amount put to tender (Rs. In Lakhs)	EMD Amount (Rs in Lakhs)	Work Completion Period
1	Improvements to Roads and Drains under Amrut Nagarothana Phase – 4 in **CMC Dandeli limit. Indent No. DMA/2022-23/ RD/ WORK_INDENT 132778/Call -2**	699.44	10.50	12 Months (Including Monsoon Season)
2	Improvements to Roads and Drains under Amrut Nagarothana Phase – 4 in **TMC Ankola limit. Indent No. DMA/2022-23/ RD/ WORK_INDENT 133005 /Call -2**	490.62	7.36	12 Months (Including Monsoon Season)

All other required tender information may be availed from the website **https://eproc.karnataka.gov.in.** or Project Director, DUDC, UK Office .

Sd/-, Executive Engineer, District Urban Development Cell DC Office, U.K. District, Karwar

DIPR/ADK/MCA/534/22-23 dt. 25.10.2022

ಸಕ್ಷಮ ಪ್ರಾಧಿಕಾರ

ಶ್ರೀ ಕಣ್ವ ಸೌಹಾರ್ದ ಕೋ-ಆಪರೇಟಿವ್ ಕ್ರೆಡಿಟ್ ಲಿ. ಹಾಗೂ ಕಣ್ವ ಗ್ರೂಪ್ ಆಫ್ ಕಂಪನೀಸ್,

ಪ್ರಾದೇಶಿಕ ಆಯುಕ್ತರ ಕಛೇರಿ, ಬೆಂಗಳೂರು ವಿಭಾಗ, ಬಿಎಂಟಿಸಿ ಕಟ್ಟಡ,
ಸಿ. ಬ್ಲಾಕ್, 2ನೇ ಮಹಡಿ, ಕೆ ಹೆಚ್ ರಸ್ತೆ, ಶಾಂತಿನಗರ, ಬೆಂಗಳೂರು–560027

ಸಂ: SPLOCA/KANVA/CLAM(GEN)/1/2022 ದಿನಾಂಕ: 25.10.2022

ಸಾರ್ವಜನಿಕ ಪ್ರಕಟಣೆ ತಿದ್ದುಪಡಿ

ಶ್ರೀ ಕಣ್ವ ಸೌಹಾರ್ದ ಕೋ-ಆಪರೇಟಿವ್ ಕ್ರೆಡಿಟ್ ಲಿ. ಹಾಗೂ ಕಣ್ವ ಗ್ರೂಪ್ ಆಫ್ ಕಂಪನೀಸ್‌ಗೆ ಸಂಬಂಧಿಸಿದಂತೆ ಕ್ಲೇಮು ಅರ್ಜಿಗಳ ಬಗ್ಗೆ ಸಾರ್ವಜನಿಕ ಪ್ರಕಟಣೆಯನ್ನು ದಿನಾಂಕ: 22–10–2022ರಂದು ಸಕ್ಷಮ ಪ್ರಾಧಿಕಾರದಿಂದ ಪ್ರಕಟಿಸಲಾಗಿದ್ದು, ಈ ಪ್ರಕಟಣೆಯಲ್ಲಿ ಕೆಲವೊಂದು ತಿದ್ದುಪಡಿ ಮಾಡಲಾಗಿದ್ದು, ಈ ಕೆಳಕಂಡಂತೆ ವಿವರಗಳನ್ನು ಓದಿಕೊಳ್ಳತಕ್ಕದ್ದು.

2ನೇ ಪ್ಯಾರದ 4ನೇ ಸಾಲಿನಲ್ಲಿ => **ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಂಡು ಸಲ್ಲಿಸುವುದು"** ಎಂಬುದರ ಬದಲಾಗಿ **"https://rcb.karnataka.gov.in** ವೆಬ್‌ಸೈಟ್‌ನಿಂದ ಮಾಹಿತಿಯನ್ನು ಪಡೆಯಬಹುದು" ಎಂದು ಓದಿಕೊಳ್ಳತಕ್ಕದ್ದು.

3ನೇ ಪ್ಯಾರದ 3ನೇ ಸಾಲಿನಲ್ಲಿ => "ತಮ್ಮ ಕ್ಲೇಮು ಅರ್ಜಿಗಳನ್ನು ಸಲ್ಲಿಸತಕ್ಕದ್ದು" ಎಂಬುದಾಗಿ ಇದ್ದು, ಇದನ್ನು "ಠೇವಣಿದಾರರು / ಅಧಿಕೃತ ಪ್ರತಿನಿಧಿ / ನಾಮಿನಿದಾರರು ಹಾಗೂ ನಾಮಿನಿದಾರರು ಗೈರಾಗಿದ್ದಲ್ಲಿ ಪವರ್ ಆಫ್ ಅಟಾರ್ನಿ ಹೊಂದಿರುವವರು ಸ್ಪಷ್ಟವಾದ ಪಬ್ಲಿಕ್ ಫೋಟೋ ಐ.ಡಿ./ಹಣ ಹೂಡಿಕೆ ಮಾಡಿರುವ ಬಗ್ಗೆ ಪುರಾವೆ ದಾಖಲೆಗಳ ದೃಢೀಕರಿಸಿದ ಪ್ರತಿ (ಬಾಂಡ್/ಎಂ.ಒ.ಯು.) ಮತ್ತು ಅಧಿಕೃತ ಪತ್ರ / ಪಿ.ಒ.ಎ. ದಾಖಲೆಗಳ ಮೂಲ ಪ್ರತಿಗಳನ್ನು ಸಂದರ್ಭಾನುಸಾರ, ಹಾಜರುಪಡಿಸಿದ್ದಲ್ಲಿ ಕ್ಲೇಮು ಅರ್ಜಿಗಳನ್ನು ವಿತರಿಸತಕ್ಕದ್ದು" ಎಂದು ಓದಿ ಕೊಳ್ಳತಕ್ಕದ್ದು.

ಠೇವಣಿದಾರರು/ಠೇವಣಿದಾರರ ಸಂಬಂಧಿಕರು ಕಾಲಂನ => 4ನೇ ಕ್ರಮ ಸಂಖ್ಯೆಯಲ್ಲಿ ಜಿ.ಪಿ.ಎ. (General Power of Attorney) ಎಂಬುದರ ಬದಲಾಗಿ "ಕ್ಲೇಮು ಅರ್ಜಿಗಳನ್ನು ಸಲ್ಲಿಸಲು ಪವರ್ ಆಫ್ ಅಟಾರ್ನಿ (P.O.A.)" ಎಂದು ಓದಿಕೊಳ್ಳತಕ್ಕದ್ದು.

ಸೂಚನೆಗಳು ಕ್ರ.ಸಂ. 6ರಲ್ಲಿ => ಜಿ.ಪಿ.ಎ. ಹೊಂದಿರುವವರು ಎಂಬುದರ ಬದಲಾಗಿ "ಕ್ರಮಬದ್ಧವಾಗಿ ಅಧಿಕೃತಗೊಳಿಸಿದ ನಾಮಿನಿದಾರರು ಅಥವಾ ಇವರ ಗೈರಿನಲ್ಲಿ ಪವರ್ ಆಫ್ ಅಟಾರ್ನಿ ಹೊಂದಿರುವವರು ಮಾತ್ರ ಅರ್ಜಿಯನ್ನು ಪಡೆಯಲು ಮತ್ತು ಅರ್ಜಿ /ದಾಖಲೆಗಳನ್ನು ಸಲ್ಲಿಸತಕ್ಕದ್ದು." ಎಂದು ಓದಿಕೊಳ್ಳತಕ್ಕದ್ದು.

ಕ್ರ.ಸಂ. 8ರಲ್ಲಿ=> "ಅರ್ಜಿ ಸ್ವೀಕರಿಸುವ ಸ್ಥಳ–"ಕ್ಲೇಮು ಅರ್ಜಿ ನಮೂನೆಗಳನ್ನು ಪಡೆಯಲು ಹಾಗೂ ದಾಖಲಾತಿಗಳೊಂದಿಗೆ ಕ್ಲೇಮು ಅರ್ಜಿಗಳನ್ನು ಸಲ್ಲಿಸಲು ಪ್ರಾದೇಶಿಕ ಆಯುಕ್ತರ ಕಛೇರಿ, ಬೆಂಗಳೂರು ವಿಭಾಗ ಮತ್ತು ವಿಶೇಷಾಧಿಕಾರಿ ಹಾಗೂ ಸಕ್ಷಮ ಪ್ರಾಧಿಕಾರಿ, ಐ.ಎಂ.ಎ. ಹಾಗೂ ಇತರೆ ವಂಚನೆ ಪ್ರಕರಣಗಳು, 4ನೇ ಮಹಡಿ, ಪೋಡಿಯಂ ಬ್ಲಾಕ್, ವಿ.ವಿ. ಗೋಪುರ, ಡಾ॥ ಅಂಬೇಡ್ಕರ್ ರಸ್ತೆ, ಬೆಂಗಳೂರು ಈ ಎರಡೂ ಕಛೇರಿಗಳಲ್ಲಿ ಅವಕಾಶವಿರುತ್ತದೆ." ಎಂದು ಓದಿಕೊಳ್ಳತಕ್ಕದ್ದು.

ಕ್ರ.ಸಂ. 11ರಲ್ಲಿ => ಅರ್ಜಿ ಸಲ್ಲಿಸುವ ಪ್ರತಿಗಳು ಬೆರಳಚ್ಚು ಮಾಡಿಸತಕ್ಕದ್ದು ಎಂಬುದರ ಬದಲಾಗಿ "ಬೆರಳಚ್ಚು ಅಥವಾ ಶುದ್ಧ ಕೈಬರವಣಿಗೆಯಲ್ಲಿ ಬರೆದಿರತಕ್ಕದ್ದು" ಎಂದು ಓದಿಕೊಳ್ಳತಕ್ಕದ್ದು.

ಕೊನೆಯ ಕಂಡಿಕೆ ಈ ರೀತಿ ಸೇರಿಸಿದೆ => "ಕ್ಲೇಮು ಅರ್ಜಿಗಳನ್ನು ಈ ಕಛೇರಿಗಳಿಂದ ಪಡೆದ ಮೂಲ ಪ್ರತಿಯಲ್ಲಿ ಸಲ್ಲಿಸತಕ್ಕದ್ದು. ಸೈಕ್ಲೋಸ್ಟೈಲ್, ಸ್ವಯಂ ಸೃಷ್ಟಿತ ನಮೂನೆಗಳಲ್ಲಿನ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ."

ಸಹಿದಾರರು => ಆಯುಕ್ತರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಎಂಬುದರ ಬದಲಾಗಿ "ಅಪರ ಪ್ರಾದೇಶಿಕ ಆಯುಕ್ತರು, ಬೆಂಗಳೂರು" ಎಂದು ಓದಿಕೊಳ್ಳತಕ್ಕದ್ದು.

ಸಹಿ/- ಸಕ್ಷಮ ಪ್ರಾಧಿಕಾರಿ
ಶ್ರೀ ಕಣ್ವ ಸೌಹಾರ್ದ ಕೋ-ಆಪರೇಟಿವ್ ಕ್ರೆಡಿಟ್ ಲಿ.
ಹಾಗೂ ಕಣ್ವ ಗ್ರೂಪ್ ಆಫ್ ಕಂಪನೀಸ್, "ಅಪರ ಪ್ರಾದೇಶಿಕ ಆಯುಕ್ತರು, ಬೆಂಗಳೂರು

DIPR/CP/RO2789/AAPL/2022-23

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ

ಕೇಂದ್ರ ಕಚೇರಿ: ಉಗ್ರಾಣ ಮತ್ತು ಖರೀದಿ ವಿಭಾಗ, ಕೆಹೆಚ್ ರಸ್ತೆ, ಶಾಂತಿ ನಗರ, ಬೆಂಗಳೂರು-560027

ಟೆಂಡರ್ ಪ್ರಕಟಣೆ ನೋಟೀಸ್ ಸಂ.07 ದಿನಾಂಕ: 21/10/2022

ಈ ಕೆಳಗೆ ತಿಳಿಸಿರುವ ಸಾಮಗ್ರಿಗಳನ್ನು ಸರಬರಾಜು ಮಾಡಲು / ಸೇವೆಗಳನ್ನು ಒದಗಿಸಲು ಅರ್ಹ ಸರಬರಾಜುದಾರರಿಂದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (**http://eproc.karnataka.gov.in**) ಮೂಲಕ (ಪೂರ್ವ ಅರ್ಹತೆ ವಾಣಿಜ್ಯ ದರ) ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಟೆಂಡರ್ ಸಂಖ್ಯೆ	ಖರೀದಿಸುವ ಸಾಮಗ್ರಿಗಳ ಸೇವೆಗಳ ವಿವರ	ಟೆಂಡರ್‌ನ ಮೊತ್ತ ರೂ.ಕೋಟಿಗಳಲ್ಲಿ (ಅಂದಾಜು)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ & ವೇಳೆ 5.00 ಗಂಟೆ
ಜಿ-54/22-23	ಎಲ್‌ಇಡಿ ಲ್ಯಾಂಪ್ಸ್ ವಿತ್ ಅಸೆಂಬ್ಲಿಗಳ ಖರೀದಿ	2.50	22/11/2022
ಜಿ-55/22-23	ಪ್ರಾಜೆಕ್ಟ್ ಮ್ಯಾನೇಜ್‌ಮೆಂಟ್ ಕನ್ಸಲ್‌ಟೆನ್ಸಿ ಸರ್ವಿಸಸ್ ಫಾರ್ ಇಂಪ್ಲಿಮೆಂಟೇಷನ್ ಆಫ್ ಆನ್‌ಲೈನ್ ಪ್ಯಾಸೆಂಜರ್ ರಿಸರ್ವೇಷನ್ ಸಿಸ್ಟಮ್-ಒಪಿಆರ್‌ಎಸ್ (ಅವತಾರ್ 4.0) ಫಾರ್ ಕೆಎಸ್‌ಆರ್‌ಟಿಸಿ	0.50	07/11/2022
ಜಿ-57/22-23	ಪಿ ಯು ಸೀಲೆಂಟ್‌ಗಳ ಖರೀದಿ	5.00	22/11/2022
ಜಿ-58/22-23	ಯೂನಿಫಾರಂ ಬಟ್ಟೆಗಳ ಖರೀದಿ	10.00	22/11/2022
ಜಿ-59/22-23	ಮೇಕಾನಿಕಲ್ ಮತ್ತು ಹೈಡ್ರಾಲಿಕ್ ಜಾಕ್ ವಿತ್ ಟಾಮಿಬಾರ್ ಖರೀದಿ	0.90	07/11/2022
ಜಿ-60/22-23	ನ್ಯೂ ಮಾಟಿಕಲಿ / ಮೇಕಾನಿಕಲಿ ಆಫ್ ರೇಟೆಡ್ ಮೈನರ್ ಗ್ಯಾರೇಜ್ ಇಕ್ವೀಪ್‌ಮೆಂಟ್ ಆನ್ ಟರ್ನ್ ಕೀ ಬೇಸಿಸ್	1.10	22/11/2022
ಜಿ-61/22-23	ಎಲೆಕ್ಟ್ರಿಕಲಿ ಆಫ್ ರೇಟೆಡ್ ಮೈನರ್ ಗ್ಯಾರೇಜ್ ಇಕ್ವೀಪ್‌ಮೆಂಟ್ ಆನ್ ಟರ್ನ್ ಕೀ ಬೇಸಿಸ್	1.10	22/11/2022
ಎ-19/22-23	ಸ್ಪ್ರಿಂಗ್‌ಲೀವ್ಸ್‌ಗಳ ಖರೀದಿ	18.00	22/11/2022
	ಅಲ್ಪಾವಧಿ ಟೆಂಡರ್		
ಜಿ-56/22-23	ಕೋಲ್ಡ್ ಅಪ್ಲೈಡ್ ಸೆಲ್ಫ್ ಅಡೇಸಿವ್ ಪಾಲಿಮರ್ ಮಾಡಿಫೈಡ್ ಬಿಟಮಿನಸ್ ಕಂಪೋಸಿಟ್ ಮೆಂಬ್ರೇನ್ ವಿತ್ ಅಲ್ಯೂಮಿನಿಯಂ ಫಾಯಿಲ್	2.50	03/11/2022

ಜಿ-04/22-23, ಜಿ-05/22-23, ಜಿ-21/22-23, ಜಿ-26/21-22 ಮತ್ತು ಜಿ-33/22-23, ಸದರಿ ಟೆಂಡರ್‌ನ್ನು ತಾಂತ್ರಿಕ ಕಾರಣಗಳಿಂದ ರದ್ದುಗೊಳಿಸಲಾಗಿದೆ.

ಮುಂದುವರೆದು, ಸಾಮಾಗ್ರಿಗಳ ತಾಂತ್ರಿಕ ವಿವರಗಳು, ವ್ಯಾಪ್ತಿ ಇತರೆ ನಿಯಮ ಮತ್ತು ನಿಬಂಧನೆಗಳಲ್ಲಿ ಹಾಗೂ ಮೇಲ್ಕಂಡ ದಿನಾಂಕಗಳಲ್ಲಿ ಯಾವುದೇ ಸೇರ್ಪಡೆ / ತಿದ್ದುಪಡಿ ಇದ್ದಲ್ಲಿ, ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿಯೇ ಮಾತ್ರ ಪ್ರಕಟಗೊಳಿಸಲಾಗುವುದು.

ಸೂಚನೆ: ಆಸಕ್ತಿಯುಳ್ಳ ಸರಬರಾಜುದಾರರು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಂದಣಿ ಹೊಂದಿರಬೇಕು. ಹೆಚ್ಚಿನ ವಿವರಗಳನ್ನು ಸದರಿ ಕಚೇರಿ ಅಥವಾ ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ ಅಥವಾ ದೂರವಾಣಿ ಸಂಖ್ಯೆ : 080–2223 0960 / 2223 4115. ಕರೆಮಾಡಿ **eprocurement_helpdesk@gmail.com** ಮೇಲ್ ಮಾಡಿ ಮಾಹಿತಿಪಡೆಯ ಬಹುದಾಗಿರುತ್ತದೆ.

ಬಿಡ್‌ದಾರರಿಗೆ ಕರಾಸಾರನಿಗಮದಿಂದ ಸಹಾಯದ ಅಗತ್ಯವಿದ್ದರೆ **cosp@ksrtc.org** ನಲ್ಲಿ ಸಂಪರ್ಕಿಸಬಹುದು. (ಸಂಪರ್ಕಿಸಿ: 7760990225, 7760990224)

ಸಹಿ/- ಉಗ್ರಾಣ ಮತ್ತು ಖರೀದಿ ನಿಯಂತ್ರಣಾಧಿಕಾರಿಗಳು
(ಟೆಂಡರ್ ಕರೆಯುವ ಪ್ರಾಧಿಕಾರಿ)

DIPR/CP/RO2790/AAPL/2022-23

ಬಲೀಂದ್ರನ ಸ್ವಾಗತಿಸುವ ಹಬ್ಬ

• ಶಾಂತಾ ನಾಗಮಂಗಲ

ಇಂದು ಬಲಿಪಾಡ್ಯಮಿ

ಭಾರತದ ಉದ್ದಗಲದಲ್ಲೂ ಆಚರಿಸಲಾಗುವ ದೀಪಾವಳಿ ಹಬ್ಬವು ನಮ್ಮ ದೇಶದ ಪ್ರಮುಖವಾದ ಹಬ್ಬಗಳಲ್ಲೊಂದು. ನವರಾತ್ರಪರ್ವವನ್ನು ಬಿಟ್ಟರೆ ನಾಲ್ಕೈದು ದಿನಗಳ ಆಚರಣೆಯಿರುವ ದೀರ್ಘವಾದ ಹಬ್ಬವೆಂದರೆ ದೀಪಾವಳಿಯೇ.

ದೀಪಾವಳಿಯನ್ನು ಕುರಿತಂತೆ ಭವಿಷ್ಯೋತ್ತರಪುರಾಣದಲ್ಲಿ-
ಉಪಶಮಿತ ಮೇಘನಾದಂ ಪ್ರಜ್ವಲಿತ ದಶಾನನಂ ರಮಿತರಾಮಮ್ |
ರಾಮಾಯಣಮಿವ ಸುಭಗಂ ದೀಪದಿನಂ ಹರತು ವೋ ದುರಿತಮ್ ||

ಎಂಬ ಪ್ರಶಸ್ತಿ ಶ್ಲೋಕವಿದೆ. ಇದರಲ್ಲಿ ದೀಪಾವಳಿಯನ್ನು ರಾಮಾಯಣಕ್ಕೆ ಹೋಲಿಸಿದೆ. ಮಳೆಯಿಲ್ಲದ ಕಾಲದಲ್ಲಿ ಆಚರಿಸುವ ದೀಪಾವಳಿಯು ದುಷ್ಟಸಂಹಾರವನ್ನು ಮಾಡಿ, ಎಲ್ಲರನ್ನೂ ಮುದಗೊಳಿಸಿದ ರಾಮಾಯಣದಂತೆ ಪಾಪಹರವೂ, ರಮಣೀಯವೂ ಆಗಿದೆ ಎಂದಿದೆ.

ಆಶ್ವಯುಜ ಬಹುಳ ತ್ರಯೋದಶಿಯ ನೀರುತುಂಬುವ ಹಬ್ಬದಿಂದ ಆರಂಭಿಸಿ ಕಾರ್ತಿಕ ಶುದ್ಧ ದ್ವಿತೀಯಾ ತಿಥಿಯ ಸೋದರಬಿದಿಗೆ-ಯವರೆಗಿನ ಐದೂ ದಿನಗಳೂ ದೀಪಾವಳಿಯ ಹಬ್ಬದ ಅಂಗಭೂತವಾದ ಆಚರಣೆಗಳೇ ಆಗಿವೆ. ಇವುಗಳಲ್ಲಿ ನರಕಚತುರ್ದಶಿ ಮತ್ತು ಬಲಿಪಾಡ್ಯಮಿಗಳನ್ನು ಹೆಚ್ಚಾಗಿ ಆಚರಿಸುವ ಪದ್ಧತಿ ಕರ್ನಾಟಕದಲ್ಲಿದೆ.

ಈ ಹಬ್ಬದ ಐದೂ ದಿನಗಳ ಆಚರಣೆಗಳಿಗೆ ಅವುಗಳದೇ ಆದ ವೈಶಿಷ್ಟ್ಯಗಳು, ಪೌರಾಣಿಕ ಹಿನ್ನೆಲೆಗಳು ಸೇರಿಕೊಂಡಿವೆ. ಜೊತೆಗೆ ಹಬ್ಬದ ಆಚರಣೆಯ ಹಿಂದಿರುವ ತಾತ್ತ್ವಿಕ ಮೌಲ್ಯಗಳನ್ನು ಬಿಂಬಿಸುವ ದಿವ್ಯರೂಪಕಗಳೂ ಸೇರಿಕೊಂಡಿವೆ. ಈ ಹಬ್ಬದ ಆಚರಣೆಯ ವಿವರಗಳನ್ನು ಭವಿಷ್ಯೋತ್ತರ, ಪದ್ಮ, ಸ್ಕಾಂದವೇ ಮೊದಲಾದ ಪುರಾಣಗಳಲ್ಲಿಯೂ, ಪೂಜಾಕಲ್ಪಗಳಲ್ಲಿಯೂ ಕಾಣಬಹುದಾಗಿದೆ.

ಕಾರ್ತಿಕಶುದ್ಧ ಪ್ರಥಮಾ ತಿಥಿಯಂದು ಬಲಿಪಾಡ್ಯಮಿಯ ಆಚರಣೆ. 'ಉಂಡದ್ದೇ ಉ(ಯು)ಗಾದಿ, ಮಿಂದದ್ದೇ ದೀವಳಿಗೆ' ಎನ್ನುವಂತೆ ಇದರ ಆಚರಣೆಯೂ ಅಭ್ಯಂಗಸ್ನಾನದಿಂದಲೇ ಆರಂಭವಾಗುತ್ತದೆ. 'ತೈಲೇ ಲಕ್ಷ್ಮೀ ಜಲೇ ಗಂಗಾ' ಎಂದು ಹೇಳಿ ಪದ್ಮಪುರಾಣವು ಅಭ್ಯಂಗಸ್ನಾನಕ್ಕೆ ಒತ್ತುಕೊಟ್ಟಿದೆ.

ಸಾಯಂಕಾಲದಲ್ಲಿ ನಡೆಸುವ ಬಲೀಂದ್ರನ ಪೂಜೆ ಈ ದಿನದ ಮುಖ್ಯ ಕಲಾಪ.

ಎರಡು ಕೈಗಳಿಂದ ಶೋಭಿಸುವ ಬಲೀಂದ್ರನ ಚಿತ್ರವನ್ನು ಐದು ಬಣ್ಣದ ರಂಗೋಲಿಪುಡಿಗಳಿಂದ ಬರೆದು ಪೂಜಿಸುವ ಪದ್ಧತಿ ಕೆಲವೆಡೆ ಕಂಡುಬಂದರೆ, ಕೆಲವೆಡೆ ಕಿರೀಟ-ಕುಂಡಲಗಳಿಂದ ಅಲಂಕರಿಸಿದ ಬಲೀಂದ್ರನ ವಿಗ್ರಹವನ್ನು ಇಟ್ಟು, ಬಾಣ, ಮುರ ಮೊದಲಾದ ಅಸುರರನ್ನು ಜೊತೆಯಲ್ಲಿಟ್ಟು ಪೂಜಿಸುತ್ತಾರೆ. ಮೈಸೂರುಸೀಮೆಯ ಸುತ್ತಮುತ್ತ ಕಳಶದಲ್ಲಿ ಬಲೀಂದ್ರನನ್ನು ಸ್ಥಾಪಿಸಿ, ದಾಳಿಂಬೆಯ ಹೂವು, ಮೊಗ್ಗು, ಹೀಚು ಮತ್ತು ಹಣ್ಣುಗಳಿರುವ ರೆಂಬೆಯೊಂದನ್ನು ಜೊತೆಯಲ್ಲಿಟ್ಟು ಧೂಪ-ದೀಪ-ನೈವೇದ್ಯಗಳಿಂದ ಪೂಜಿಸುವ ಪದ್ಧತಿಯಿದೆ.

ಸುವರ್ಣಪುಷ್ಪಗಳಿಂದ ಪೂಜಿಸುವುದಕ್ಕೆ ಪರ್ಯಾಯವಾಗಿ ಹೊನ್ನಾವರಿಕೆಯ ಹೂವುಗಳನ್ನು 'ಹೊನ್ನು ಹೊನ್ನು' ಎಂದು ಹೇಳುತ್ತಾ ಅಂಗಳದ ತುಂಬೆಲ್ಲಾ ಎರಚಿ ಬಲೀಂದ್ರನನ್ನು ಸ್ವಾಗತಿಸುತ್ತಾರೆ.

ಬಲಿಪಾಡ್ಯಮಿಯ ಬೆಳಿಗ್ಗೆ ಆಗಷ್ಟೇ ಹಾಕಿದ ಹಸುವಿನ ಸಗಣಿಯಿಂದ ಬಲೀಂದ್ರನ ಕೋಟೆ ನಿರ್ಮಿಸಿ, ಅದರ ಮಧ್ಯದದಲ್ಲಿ ಸಗಣಿಯ ಗೋಪುರಾಕಾರದ ಬಲೀಂದ್ರನನ್ನು ಸ್ಥಾಪಿಸಿ ಪೂಜಿಸುವುದೂ ಕಂಡುಬರುತ್ತದೆ.

ಬಲೀಂದ್ರನಿಗೆ ಅರ್ಘ್ಯ ಕೊಡುವಾಗ –
ಬಲಿರಾಜ ನಮಸ್ತುಭ್ಯಂ ವಿರೋಚನ ಸುತ ಪ್ರಭೋ |
ಭವಿಷ್ಯೇಂದ್ರ ಸುರಾರಾತೇ ವಿಷ್ಣು ಸಾನ್ನಿಧ್ಯೋ ಭವ ||

ಎಂದು ಹೇಳಿ, ಅಸುರನಾದರೂ, ವಿಷ್ಣುವಿಗೆ ಪ್ರಿಯನಾಗಿ ಭಾಗವತರ ಸಾಲಿಗೆ ಸೇರಿದ ಬಲಿಯನ್ನು ನೆನಪಿಸಿಕೊಳ್ಳಲಾಗುತ್ತದೆ.

ಭವಿಷ್ಯೋತ್ತರ ಪುರಾಣವು ಬಲಿಪಾಡ್ಯಮಿಯಂದು ರಾತ್ರಿಯೆಲ್ಲಾ ಎಚ್ಚರವಿದ್ದು ವೀರಕ್ಷತ್ರಿಯರ ಕಥೆಗಳಿಂದ ಕೂಡಿದ ನಾಟಕಗಳನ್ನು ಆಡಬೇಕು ಎಂದಿದೆ. ಹಾಗಾಗಿಯೇ ಬಲಿಪಾಡ್ಯಮಿಯನ್ನು 'ವೀರಪ್ರತಿಪದಾ' ಎಂದೂ ಕರೆಯುತ್ತಾರೆ.

ಮಲೆನಾಡಿನ ಊರುಗಳಲ್ಲಿ ರಾಸುಗಳಿಗೆ ಅಲಂಕಾರಮಾಡಿ ಪೂಜಿಸುವ ಪದ್ಧತಿ ಇದೆ. 'ಅನ್ನಕೂಟ'ವೆಂದು ಕರೆಯಲಾಗುವ ಗೋವರ್ಧನಪೂಜೆಯೂ ಬಲಿಪಾಡ್ಯಮಿಯಂದು ಹಲವೆಡೆ ನಡೆಯುತ್ತದೆ. ನಮ್ಮ ಹಬ್ಬಗಳು ಕೃಷಿ-ಪಶುಪಾಲನೆಯ ಜೊತೆ ಬೆಸೆದುಕೊಂಡಿರುವುದಕ್ಕೆ ಇದು ಒಂದು ನಿದರ್ಶನ.

ಗಡಿ ಬಳಿ ಒಟ್ಟಾಗಿ ದೀಪಾವಳಿ ಆಚರಿಸಿದ ಹಿಂದೂ, ಮುಸ್ಲಿಮರು

ಪ್ರಜಾವಾಣಿ ವಾರ್ತೆ

ಶ್ರೀನಗರ: ಕಾಶ್ಮೀರದ ಕುಪ್ವಾರ ಜಿಲ್ಲೆಯ ಗಡಿ ನಿಯಂತ್ರಣ ರೇಖೆ ಬಳಿಯ ತೀತ್ವಾಲ್ ಗ್ರಾಮದಲ್ಲಿ ನಿರ್ಮಾಣವಾಗುತ್ತಿರುವ ಶಾರದಾ ದೇವಿ ದೇವಸ್ಥಾನದಲ್ಲಿ ಹಿಂದೂ ಮತ್ತು ಮುಸ್ಲಿಂ ಸಮುದಾಯದವರು ಒಟ್ಟಾಗಿ ದೀಪಾವಳಿ ಆಚರಿಸಿದರು.

ದೇಶಕ್ಕೆ ಸ್ವಾತಂತ್ರ್ಯ ಬಂದ ಬಳಿಕ ಇದೇ ಮೊದಲ ಬಾರಿಗೆ ದೀಪಾವಳಿಯನ್ನು ಅದ್ದೂರಿಯಾಗಿ ಆಚರಿಸಲು ಸ್ಥಳೀಯರಿಗೆ ಅವಕಾಶ ಸಿಕ್ಕಿದೆ. ಹಣತೆ ಮತ್ತು ಬಣ್ಣದ ದೀಪಗಳಿಂದ ದೇವಸ್ಥಾನವನ್ನು ಸಿಂಗರಿಸಲಾಗಿತ್ತು. ಈ ಆಚರಣೆಯು ಹಿಂದೂ ಮತ್ತು ಮುಸ್ಲಿಂ ಸಮುದಾಯಗಳ ನಡುವಿನ ಭ್ರಾತೃತ್ವಕ್ಕೆ ಉದಾಹರಣೆಯಾಗಿತ್ತು.

'ದೀಪಾವಳಿಯಂದು ದೀಪದ ಬೆಳಕು ಜನರಲ್ಲಿ ಹೊಸ ಜೀವನವನ್ನು ಉದ್ದೀಪಿಸಿತು. ಸಮಗ್ರ ಮನುಕುಲದ ಒಳಿತಿಗಾಗಿ ಜನರು ಪ್ರಾರ್ಥನೆ ಸಲ್ಲಿಸಿದರು' ಎಂದು ಶಾರದಾ ಪೀಠ ಸಮಿತಿಯ ಮುಖ್ಯಸ್ಥ ರವೀಂದ್ರ ಪಂಡಿತ್ ಹೇಳಿದರು.

ಪತಿಯ ತೇಜೋವಧೆ ಮಾಡುವುದು ಸಲ್ಲದು: ಬಾಂಬೆ ಹೈಕೋರ್ಟ್

'ನಿರಾಧಾರ ಆರೋಪವೂ ಕ್ರೌರ್ಯ'

ಮುಂಬೈ (ಪಿಟಿಐ): 'ಪತ್ನಿ ಯಾವುದೇ ಪುರಾವೆಗಳಿಲ್ಲದೇ ತನ್ನ ಪತಿಯನ್ನು 'ಹೆಣ್ಣುಬಾಕ ಮತ್ತು ಕುಡುಕ'ನೆಂದು ಆರೋಪಿಸಿ ತೇಜೋವಧೆ ಮಾಡುವುದು ಕ್ರೌರ್ಯ' ಎಂದು ಬಾಂಬೆ ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ಪುಣೆ ಮೂಲದ ದಂಪತಿಗೆ ವಿವಾಹ ವಿಚ್ಛೇದನ ನೀಡಿ ಆದೇಶ ನೀಡಿದ್ದ ಕೌಟುಂಬಿಕ ನ್ಯಾಯಾಲಯದ ತೀರ್ಪನ್ನು ನ್ಯಾಯಮೂರ್ತಿಗಳಾದ ನಿತಿನ್ ಜಾಮದಾರ್ ಮತ್ತು ಶರ್ಮಿಳಾ ದೇಶ್‌ಮುಖ್ ಅವರಿದ್ದ ವಿಭಾಗೀಯ ಪೀಠ ಎತ್ತಿಹಿಡಿದಿದೆ.

ನಿವೃತ್ತ ಸೇನಾಧಿಕಾರಿಯೊಬ್ಬರು ಪತ್ನಿಯ ನಿರಾಧಾರ ಆರೋಪ ಮತ್ತು ತೇಜೋವಧೆಯಿಂದ ಬೇಸತ್ತು ವಿವಾಹ ವಿಚ್ಛೇದನ ಕೋರಿದ್ದರು. ಅರ್ಜಿಯ ವಿಚಾರಣೆ ನಡೆಸಿದ್ದ ಪುಣೆಯ ಕೌಟುಂಬಿಕ ನ್ಯಾಯಾಲಯವು 2005ರಲ್ಲಿ ವಿಚ್ಛೇದನಕ್ಕೆ ಆದೇಶ ನೀಡಿತ್ತು. ಇದನ್ನು ಪ್ರಶ್ನಿಸಿ ಸೇನಾಧಿಕಾರಿಯ ಪತ್ನಿ (50 ವರ್ಷ) ಸಲ್ಲಿಸಿದ್ದ ಮೇಲ್ಮನವಿ ಅರ್ಜಿಯನ್ನು ವಿಭಾಗೀಯ ಪೀಠವು ಅ.12ರಂದು ವಜಾಗೊಳಿಸಿ, ತೀರ್ಪು ನೀಡಿದೆ.

ಮೇಲ್ಮನವಿ ಅರ್ಜಿ ವಿಚಾರಣೆಗೆ ಬಾಕಿ ಇರುವಾಗ ಪ್ರತಿವಾದಿ ಮೃತಪಟ್ಟಿದ್ದರು. ಹಾಗಾಗಿ ಅವರ ವಕೀಲರನ್ನೇ ಉತ್ತರಾಧಿಕಾರಿ ಪ್ರತಿವಾದಿಯಾಗಿ ಪ್ರತಿನಿಧಿಸಲು ಕೋರ್ಟ್ ನಿರ್ದೇಶಿಸಿತ್ತು.

ಮಹಿಳೆ ತನ್ನ ಪತಿ ವಿರುದ್ಧದ ಆರೋಪಗಳಿಗೆ ಪುರಾವೆ ಸಲ್ಲಿಸಲು ವಿಫಲವಾದ ಕಾರಣಕ್ಕೆ ನ್ಯಾಯಪೀಠವು, ತನ್ನ ಗಂಡನ ವಿರುದ್ಧ ಹೆಂಡತಿ ಅನಗತ್ಯ ಮತ್ತು ಸುಳ್ಳು ಆರೋಪಗಳನ್ನು ಮಾಡುವುದು, ಹೆಂಡತಿಯ ಇಂತಹ ನಡವಳಿಕೆಯು ಸಮಾಜದಲ್ಲಿ ಆತನ ಘನತೆಗೆ ಧಕ್ಕೆ ಆಗುತ್ತದೆ. ಇದು ಕ್ರೌರ್ಯಕ್ಕೆ ಸಮಾನ ಎಂದು ಅಭಿಪ್ರಾಯಪಟ್ಟಿದೆ.

'ಅರ್ಜಿದಾರ ಮಹಿಳೆ ಆಧಾರರಹಿತವಾಗಿ ಪ್ರತಿವಾದಿ ಮೇಲೆ ಮದ್ಯವ್ಯಸನಿ ಮತ್ತು ಹೆಣ್ಣುಬಾಕ ಎನ್ನುವ ಕಳಂಕ ಹಚ್ಚಿರುವುದರಿಂದ ಹಿಂದೂ ವಿವಾಹ ಕಾಯ್ದೆಯ ಸೆಕ್ಷನ್ 13(1) (ಐ-ಎ) ಪ್ರಕಾರ ಇದನ್ನು ಕ್ರೌರ್ಯವೆಂದು ಪರಿಗಣಿಸಿ, ವಿಚ್ಛೇದನಕ್ಕೆ ಇದು ಸೂಕ್ತ ಪ್ರಕರಣವಾಗಿ ಪರಿಗಣಿಸಲಾಗಿದೆ' ಎಂದು ವಿಭಾಗೀಯ ಪೀಠ ಹೇಳಿದೆ.

'ಸಂಗಾತಿಯ ಆಯ್ಕೆ ವೈಯಕ್ತಿಕ ಸ್ವಾತಂತ್ರ್ಯದ ಮೂಲಸಾರ'

ನವದೆಹಲಿ (ಪಿಟಿಐ): 'ಬಾಳಸಂಗಾತಿಯ ಆಯ್ಕೆ ಸ್ವಾತಂತ್ರವು ವೈಯಕ್ತಿಕ ಸ್ವಾತಂತ್ರ್ಯದ ಮೂಲಸಾರ. ಈ ವಿಷಯದಲ್ಲಿ ನಂಬಿಕೆಯ ಪ್ರಶ್ನೆಯು ಅಡ್ಡಿಯಾಗಬಾರದು' ಎಂದು ದೆಹಲಿ ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ಸಂಗಾತಿ ಆಯ್ಕೆಗೆ ಸಂಬಂಧಿಸಿದಂತೆ ಕುಟುಂಬ ಸದಸ್ಯರು ಸೇರಿದಂತೆ ಕೆಲವರಿಂದ ದಂಪತಿಗೆ ರಕ್ಷಣೆ ನೀಡುವಂತಹ ಸೂಕ್ಷ್ಮ ವಿಷಯದಲ್ಲಿ ಪೊಲೀಸರು ಕಟ್ಟುನಿಟ್ಟಾಗಿ ಕಾರ್ಯನಿರ್ವಹಿಸಬೇಕು ಎಂದು ಕೋರ್ಟ್ ಅಭಿಪ್ರಾಯಪಟ್ಟಿದೆ.

ಪತ್ನಿಯ ಕುಟುಂಬದ ಸದಸ್ಯರು ನಮ್ಮನ್ನು ಅಪಹರಿಸಿದ್ದು, ತೀವ್ರವಾಗಿ ಹಲ್ಲೆ ಮಾಡಿದ್ದಾರೆ. ಕತ್ತಿಯಿಂದ ನನ್ನ ಗುಪ್ತಾಂಗಕ್ಕೆ ಹಾನಿ ಮಾಡಿದ್ದಾರೆ. ಹಲ್ಲೆಯಿಂದ ಇರಿತದ ಗಾಯಗಳಾಗಿವೆ ಎಂದು ವ್ಯಕ್ತಿಯೊಬ್ಬರು ಸಲ್ಲಿಸಿದ್ದ ಅರ್ಜಿಗೆ ಸಂಬಂಧಿಸಿದಂತೆ ಕೋರ್ಟ್ ಈ ರೀತಿ ಹೇಳಿದೆ.

ದಂಪತಿಯ ಸುರಕ್ಷತೆಗೆ ಒತ್ತು ನೀಡಲು ಹಾಗೂ ಭದ್ರತೆ ನೀಡುವಲ್ಲಿ ಪೊಲೀಸರು ಸೂಕ್ತವಾದ ಕ್ರಮ ಕೈಗೊಂಡಿಲ್ಲ ಎಂಬುದು ದುರದೃಷ್ಟಕರ. ಪೊಲೀಸರಿಂದ ಇಂಥ ಲೋಪವನ್ನು ಸಹಿಸಲಾಗದು. ಕರ್ತವ್ಯಲೋಪ ತೋರಿದವರ ವಿರುದ್ಧ ಕ್ರಮವಹಿಸಬೇಕು ಎಂದು ಹೇಳಿದೆ.

ಇಂಥ ಪ್ರಕರಣಗಳಲ್ಲಿ ದೂರುಗಳು ಬಂದಾಗ ಪೊಲೀಸರು, ಸಂಬಂಧಿಸಿದ ಅಧಿಕಾರಿಗಳು ಹೆಚ್ಚು ಸೂಕ್ಷ್ಮತೆ ವಹಿಸುವಂತೆ ಸಿಬ್ಬಂದಿಯನ್ನು ಸಜ್ಜುಗೊಳಿಸಬೇಕು ಎಂದೂ ಕೋರ್ಟ್, ದೆಹಲಿ ಪೊಲೀಸ್ ಕಮಿಷನರ್ ಅವರಿಗೆ ಸಲಹೆ ಮಾಡಿತು.

ಇಟಾನಗರ: ಬೆಂಕಿ ಅನಾಹುತಕ್ಕೆ 700 ಅಂಗಡಿಗಳು ಭಸ್ಮ

ಇಟಾನಗರ (ಪಿಟಿಐ): ಅರುಣಾಚಲ ಪ್ರದೇಶದ ಇಟಾನಗರದ ಸಮೀಪದ ನಹಾರ್ಲಾಗುನ್ ಡೈಲಿ ಮಾರ್ಕೆಟ್‌ನಲ್ಲಿ ಸಂಭವಿಸಿದ ಭಾರಿ ಬೆಂಕಿ ಅವಘಡದಲ್ಲಿ ಸುಮಾರು 700 ಅಂಗಡಿಗಳು ಭಸ್ಮವಾಗಿರುವುದಾಗಿ ಪೊಲೀಸರು ತಿಳಿಸಿದ್ದಾರೆ.

ನಸುಕಿನ 4 ಗಂಟೆಯ ಸುಮಾರಿಗೆ ಬೆಂಕಿ ಅವಘಡ ಸಂಭವಿಸಿದೆ. ಅಗ್ನಿಶಾಮಕ ಮತ್ತು ತುರ್ತು ಸೇವೆ ಸಿಬ್ಬಂದಿ ತಕ್ಷಣ ಸ್ಥಳಕ್ಕೆ ಧಾವಿಸಿ, ಬೆಂಕಿ ನಂದಿಸಿದರು. ಅದೃಷ್ಟವಶಾತ್ ಯಾವುದೇ ಸಾವು-ನೋವು ಸಂಭವಿಸಿಲ್ಲ. ದೀಪಾವಳಿಯ ಸಂದರ್ಭದಲ್ಲಿ ಪಟಾಕಿ ಸಿಡಿಸಿರುವುದು ಅಥವಾ ದೀಪಗಳನ್ನು ಹಚ್ಚಿರುವುದು ಬೆಂಕಿ ಅನಾಹುತಕ್ಕೆ ಕಾರಣವಾಗಿರಬಹುದು ಎಂದು ಪೊಲೀಸರು ಶಂಕಿಸಿದ್ದಾರೆ.

ರಾಮಮಂದಿರ ನಿರ್ಮಾಣ ಕಾರ್ಯ ಪ್ರಗತಿಯಲ್ಲಿರುವುದು –ಪಿಟಿಐ ಚಿತ್ರ

'ರಾಮಮಂದಿರ: ಶೇ 50ರಷ್ಟು ಕಾಮಗಾರಿ ಪೂರ್ಣ'

ಪ್ರಜಾವಾಣಿ ವಾರ್ತೆ

ಲಖನೌ: ರಾಮಮಂದಿರ ನಿರ್ಮಾಣದ ಪ್ರಗತಿ ಪರಿಶೀಲನೆಗೆ ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ಅಯೋಧ್ಯೆಗೆ ಭೇಟಿ ನೀಡಿದ್ದ ಬೆನ್ನಲ್ಲೇ, ನಿರ್ಮಾಣ ಕಾಮಗಾರಿ ಇನ್ನಷ್ಟು ಚುರುಕು ಪಡೆದುಕೊಂಡಿದೆ.

ನಿರ್ಮಾಣ ಕಾರ್ಯ 2023ರ ಡಿಸೆಂಬರ್‌ಗೆ ಪೂರ್ಣಗೊಳ್ಳಲಿದೆ. ಶೇ 50 ರಷ್ಟು ಕಾಮಗಾರಿ ಈಗಾಗಲೇ ಪೂರ್ಣಗೊಂಡಿದೆ ಎಂದು ನಿರ್ಮಾಣ ಕಾರ್ಯದ ಉಸ್ತುವಾರಿ ಹೊತ್ತಿರುವ ರಾಮಜನ್ಮ ಭೂಮಿ ತೀರ್ಥಕ್ಷೇತ್ರ ಟ್ರಸ್ಟ್ ಪ್ರಧಾನ ಕಾರ್ಯದರ್ಶಿ ಚಂಪತ್ ರೈ ಹೇಳಿದ್ದಾರೆ.

'ನಿರ್ಮಾಣ ಕಾರ್ಯವನ್ನು 2023ರ ಡಿಸೆಂಬರ್‌ಗೆ ಪೂರ್ಣಗೊಳಿಸಿ ರಾಮಜನ್ಮಭೂಮಿ ಮಂದಿರ ನಿರ್ಮಾಣ ಸಮಿತಿಯ ಸುಪರ್ದಿಗೆ ಒಪ್ಪಿಸಬೇಕು ಎಂಬುದು ನಮ್ಮ ಗುರಿಯಾಗಿದೆ' ಎಂದು ಗುತ್ತಿಗೆ ಪಡೆದಿರುವ ಸಂಸ್ಥೆಯ ಅಧಿಕಾರಿಯೊಬ್ಬರು ತಿಳಿಸಿದರು.

ರಾಮಮಂದಿರದ ಪ್ರಮುಖ ಸಂಕೀರ್ಣದ ನಿರ್ಮಾಣ ಕಾರ್ಯ ಬಹುತೇಕ ಮುಗಿದಿದೆ. ಪ್ರಸ್ತುತ, ನೆಲಮಹಡಿಯಲ್ಲಿ ಕಲ್ಲು ಕೆತ್ತನೆ ಕಾಮಗಾರಿ ಪ್ರಗತಿಯಲ್ಲಿದೆ ಎಂದೂ ತಿಳಿಸಿದರು.

ಭಾನುವಾರ ಅಯೋಧ್ಯೆಗೆ ಭೇಟಿ ನೀಡಿದ್ದ ಪ್ರಧಾನಿ ಮೋದಿ ಅವರು, ನಿರ್ಮಾಣ ಕಾರ್ಯ ಕುರಿತಂತೆ ಎಂಜಿನಿಯರುಗಳು, ಕುಶಲಕರ್ಮಿಗಳ ಜೊತೆಗೆ ಸಮಾಲೋಚನೆ ನಡೆಸಿದ್ದರು.

ಸಂಕ್ಷಿಪ್ತ ಸುದ್ದಿ

ಕುಂದು ಕೊರತೆ ಆಲಿಸಲು ಆ್ಯಪ್

ನವದೆಹಲಿ: ರಸ್ತೆಗಳ ಗುಣಮಟ್ಟದ ಕುರಿತು ದೂರುಗಳು ಬರುತ್ತಿರುವ ಕಾರಣ, ಮಳೆಗಾಲ ಮತ್ತು ಆ ನಂತರ ಹೆದ್ದಾರಿಗಳ ಸ್ಥಿತಿಗತಿಗಳ ಬಗ್ಗೆ ಸಾರ್ವಜನಿಕರಿಂದ ಕುಂದು ಕೊರತೆಗಳನ್ನು ಆಲಿಸಲು 'ಸುಖದ್‌ಯಾತ್ರಾ' ಸ್ಮಾರ್ಟ್‌ಫೋನ್ ಆ್ಯಪ್ ಅನ್ನು ಮೇಲ್ದರ್ಜೆಗೇರಿಸಲು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ ತೀರ್ಮಾನಿಸಿದೆ.

ಕೇರಳ: ಮತ್ತೆ ಇಬ್ಬರು ಕುಲಪತಿಗಳಿಗೆ ನೋಟಿಸ್

ತಿರುವನಂತಪುರ (ಪಿಟಿಐ): ನೇಮಕಾತಿಯಲ್ಲಿ ಯುಜಿಸಿ ನಿಯಮಾವಳಿ ಉಲ್ಲಂಘನೆ ಆರೋಪ ಸಂಬಂಧ ಕೇರಳ ರಾಜ್ಯಪಾಲ ಆರಿಫ್ ಮೊಹಮ್ಮದ್ ಖಾನ್ ಅವರು ಮತ್ತೆ ಇಬ್ಬರು ಕುಲಪತಿಗಳಿಗೆ ಷೋಕಾಸ್ ನೋಟಿಸ್ ಜಾರಿಗೊಳಿಸಿದ್ದಾರೆ.

ಶ್ರೀನಾರಾಯಣಗುರು ಮುಕ್ತ ವಿವಿ ಕುಲಪತಿ ಡಾ.ಪಿ.ಎಂ.ಮುಬಾರಕ್ ಪಾಶಾ ಮತ್ತು ಡಿಜಿಟಲ್ ವಿಜ್ಞಾನ, ಆವಿಷ್ಕಾರ ಮತ್ತು ತಾಂತ್ರಿಕ ವಿಶ್ವವಿದ್ಯಾಲಯದ ಕುಲಪತಿ ಡಾ.ಸಾಜಿ ಗೋಪಿನಾಥ್ ಅವರಿಗೆ ನೋಟಿಸ್ ರವಾನಿಸಲಾಗಿದೆ.

ಗ್ರಾಮ ತೊರೆದ ಪಂಡಿತರ ಕುಟುಂಬ

ಜಮ್ಮು (ಪಿಟಿಐ): ತಮ್ಮನ್ನು ಗುರಿಯಾಗಿಸಿ ಕಾಶ್ಮೀರದ ಶೋಪಿಯಾನ್ ಜಿಲ್ಲೆಯಲ್ಲಿ ನಡೆಯುತ್ತಿರುವ ಹತ್ಯೆಗಳಿಂದಾಗಿ ಇಲ್ಲಿ ವಾಸಿಸುತ್ತಿರುವ ಕಾಶ್ಮೀರಿ ಪಂಡಿತರು ಭಯಭೀತರಾಗಿದ್ದಾರೆ. ಜಿಲ್ಲೆಯ ಚೌಧರೀಗುಂಡ್ ಗ್ರಾಮದ 10 ಕಾಶ್ಮೀರಿ ಪಂಡಿತ ಕುಟುಂಬಗಳು ಗ್ರಾಮವನ್ನು ತೊರೆದಿವೆ.

'ಉಗ್ರರ ಚಟುವಟಿಕೆಗಳು ತೀವ್ರವಾಗಿದ್ದ 1990ರ ಸಂಕಷ್ಟ ಕಾಲದಲ್ಲೂ ಗ್ರಾಮಗಳನ್ನು ತೊರೆಯದ ಪಂಡಿತರು ಈಗ ಗ್ರಾಮವನ್ನು ತೊರೆಯುತ್ತಿದ್ದಾರೆ' ಎಂದು ಗ್ರಾಮದವರು ಹೇಳಿದ್ದಾರೆ.

ಓಮೈಕ್ರಾನ್ ಮುನ್ನೆಚ್ಚರಿಕೆಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಾರಾಷ್ಟ್ರದಲ್ಲಿ ಕೊರೊನಾ ವೈರಾಣುವಿನ ರೂಪಾಂತರಿ ಓಮೈಕ್ರಾನ್‌ನ ಉಪತಳಿಗಳು ಪತ್ತೆಯಾಗಿರುವುದರಿಂದ ರಾಜ್ಯದಲ್ಲಿ ಮುನ್ನೆಚ್ಚರಿಕೆ ವಹಿಸುವಂತೆ ಆರೋಗ್ಯ ಇಲಾಖೆ ಸೂಚಿಸಿದೆ.

ಈ ಬಗ್ಗೆ ಇಲಾಖೆ ಆಯುಕ್ತ ಡಿ. ರಂದೀಪ್ ಸುತ್ತೋಲೆ ಹೊರಡಿಸಿದ್ದಾರೆ. 'ಅಮೆರಿಕದಲ್ಲಿ ಬಿಕ್ಯೂ.1, ಮಹಾರಾಷ್ಟ್ರದಲ್ಲಿ ಬಿಎ 2.75 ಹಾಗೂ ಬಿಜೆ.1 ಉಪತಳಿಗಳು ಪತ್ತೆಯಾಗಿವೆ. ದೀಪಾವಳಿ, ಕನ್ನಡ ರಾಜ್ಯೋತ್ಸವ ಸೇರಿ ವಿವಿಧ ಉತ್ಸವಗಳು ನಡೆಯುವುದರಿಂದ ಸೋಂಕು ಹರಡದಂತೆ ಮುನ್ನೆಚ್ಚರಿಕೆ ವಹಿಸಬೇಕು. ಕೋವಿಡ್ ನಿಯಮಗಳನ್ನು ಈ ಅವಧಿಯಲ್ಲಿ ಪಾಲಿಸಬೇಕು' ಎಂದು ಸುತ್ತೋಲೆಯಲ್ಲಿ ಹೇಳಲಾಗಿದೆ.

'ಈಗಾಗಲೇ ಎರಡು ಡೋಸ್ ಲಸಿಕೆ ಪಡೆದವರು ಇನ್ನೊಂದು ಡೋಸ್ ಲಸಿಕೆಯನ್ನು ಪಡೆದುಕೊಳ್ಳಬೇಕು. 60 ವರ್ಷ ಮೇಲ್ಪಟ್ಟವರು ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ವಹಿಸಬೇಕು. ರೋಗ ಲಕ್ಷಣ ಹೊಂದಿರುವವರಿಂದ ಅಂತರ ಕಾಯ್ದುಕೊಳ್ಳಬೇಕು' ಎಂದು ಸೂಚಿಸಲಾಗಿದೆ.

ನದಿಗಳ ಮಾಲಿನ್ಯಕ್ಕಿಲ್ಲ ಕಡಿವಾಣ

ಒಂದನೇ ಪುಟದಿಂದ..

ಇದಕ್ಕೆ ಉತ್ತರ ನೀಡಿರುವ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಸದಸ್ಯ ಕಾರ್ಯದರ್ಶಿ, 'ಈ ಸಮಸ್ಯೆಯನ್ನು ರಾಜ್ಯ ಸರ್ಕಾರ ಶೀಘ್ರದಲ್ಲೇ ಪರಿಹರಿಸಲಿದೆ. ಎಸ್‌ಟಿಪಿಗಳ ನಿರ್ಮಾಣಕ್ಕೆ ಅನುದಾನ ಮೀಸಲಿಡಲಾಗಿದೆ' ಎಂದು ಸಭೆಗೆ ತಿಳಿಸಿದರು.

'ಕೈಗಾರಿಕಾ ತ್ಯಾಜ್ಯ ನೀರು ಸಂಸ್ಕರಣಾ ಘಟಕಗಳನ್ನು (ಇಟಿಪಿ) ಹೊಂದಿರದ 46 ಕೈಗಾರಿಕೆಗಳನ್ನು ಮುಚ್ಚಿಸಲಾಗಿದೆ. ತಮ್ಮದೇ ಕಾರಣಗಳಿಂದಾಗಿ 61 ಕೈಗಾರಿಕೆಗಳು ಮುಚ್ಚಿವೆ. ಕೊಳಚೆ ನೀರು ಜಲಮೂಲಗಳಿಗೆ ಸೇರದಂತೆ ಅಗತ್ಯ ಯೋಜನೆಗಳನ್ನು ರೂಪಿಸಲಾಗುತ್ತಿದೆ' ಎಂದು ಕರ್ನಾಟಕ ಸರ್ಕಾರ ಹೇಳಿದೆ.

'ಸಣ್ಣ ಮಾದರಿಗಳ ಎಸ್‌ಟಿಪಿಗಳ (ವಿಕೇಂದ್ರಿಕೃತ) ನಿರ್ಮಾಣಕ್ಕೆ ಜಪಾನ್ ಸರ್ಕಾರದ ಜತೆಗೆ ಭಾರತ ಸರ್ಕಾರ ಒಪ್ಪಂದ ಮಾಡಿಕೊಂಡಿದೆ. ಅಂತಹ ಎಸ್‌ಟಿಪಿಗಳು ದೇಶದಲ್ಲಿ ಈಗ ಲಭ್ಯ ಇವೆ. ಇಂತಹ ಎಸ್‌ಟಿಪಿಗಳು ಬೆಂಗಳೂರಿನಂತಹ ನಗರಗಳ ಸಮಸ್ಯೆ ನಿವಾರಣೆಗೆ ಪರಿಣಾಮಕಾರಿ ಆಗಬಲ್ಲದು. ಈ ದಿಸೆಯಲ್ಲಿ ಸರ್ಕಾರ ಕಾರ್ಯೋನ್ಮುಖವಾಗಬೇಕು' ಎಂದು ಜಲ ಶಕ್ತಿ ಸಚಿವಾಲಯ ನಿರ್ದೇಶನ ನೀಡಿದೆ.

ಕಂಚುಗಲ್ ಬಂಡೆ ಮಠದ ಬಸವಲಿಂಗ ಸ್ವಾಮೀಜಿ ಆತ್ಮಹತ್ಯೆ: ಹಲವು ಆಯಾಮದಲ್ಲಿ ತನಿಖೆ

ಮಹಿಳೆಯಿಂದ ಸ್ವಾಮೀಜಿಗೆ ಬ್ಲಾಕ್‌ಮೇಲ್?

ಪ್ರಜಾವಾಣಿ ವಾರ್ತೆ

ರಾಮನಗರ: ಸೋಮವಾರ ಆತ್ಮಹತ್ಯೆ ಮಾಡಿಕೊಂಡ ಮಾಗಡಿ ತಾಲ್ಲೂಕಿನ ಕಂಚುಗಲ್ ಬಂಡೆ ಮಠದ ಬಸವಲಿಂಗ ಸ್ವಾಮೀಜಿ ಅವರು ಹನಿಟ್ರ್ಯಾಪ್‌ಗೆ ಒಳಗಾಗಿದ್ದರೆ? ಮಹಿಳೆಯೊಬ್ಬರಿಂದ ಅವರು ಬ್ಲಾಕ್‌ಮೇಲ್‌ಗೆ ಒಳಗಾಗಿದ್ದರೆ?

ಶ್ರೀಗಳ ಆತ್ಮಹತ್ಯೆಯ ಬೆನ್ನಲ್ಲೇ ಇಂತಹ ಮಾತು ಜಿಲ್ಲೆಯಲ್ಲಿ ಕೇಳಿಬರುತ್ತಿದೆ. ಶ್ರೀಗಳ ಡೆತ್‌ನೋಟ್ ಎನ್ನಲಾದ ಕೈಬರಹದ ಪುಟ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ. ಅದರಲ್ಲಿ ಮಹಿಳೆಯ ಉಲ್ಲೇಖವಿದ್ದು, ಆರೇಳು ತಿಂಗಳಿಂದಲೂ ಆಕೆ ಪೀಡಿಸುತ್ತಿದ್ದರು ಎಂದು ವಿವರಿಸಲಾಗಿದೆ.

> **ಬಸವಲಿಂಗ ಶ್ರೀ ಸಾವಿನ ಕುರಿತ ತನಿಖೆ ಪ್ರಗತಿಯಲ್ಲಿದೆ. ಮೂರು ಪುಟದ ಡೆತ್‌ನೋಟ್ ಅಷ್ಟೇ ಸಿಕ್ಕಿದೆ. ಹಲವರ ಹೆಸರು ಉಲ್ಲೇಖವಾಗಿದೆ**
>
> **ಸಂತೋಷ್ ಬಾಬು**
>
> ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ರಾಮನಗರ

ಪೊಲೀಸರ ಪ್ರಕಾರ, ಶ್ರೀಗಳು ಡೆತ್‌ನೋಟ್‌ನಲ್ಲಿ ಅಪರಿಚಿತ ವ್ಯಕ್ತಿಯೊಬ್ಬರಿಂದ ಆಗುತ್ತಿರುವ ತೊಂದರೆ ಬಗ್ಗೆ ಪದೇ ಪದೇ ಉಲ್ಲೇಖಿಸಿದ್ದಾರೆ.

'ಸ್ವಾಮೀಜಿಯಾಗಿ 25 ವರ್ಷ ಕಳಂಕರಹಿತ ಜೀವನ ನಡೆಸಿದ್ದೆ. ಈಚೆಗೆ ಒಬ್ಬರು ಪದೇ ಪದೇ ತೊಂದರೆ ಕೊಡುತ್ತಿದ್ದಾರೆ' ಎಂದು ಹೇಳಿಕೊಂಡಿದ್ದಾರೆ.

ಆ ವ್ಯಕ್ತಿ ಮಾತ್ರವಲ್ಲದೆ, ಇನ್ನೂ ಹಲವರ ಹೆಸರೂ, ಮತ್ತೊಬ್ಬ ಶ್ರೀಗಳ ಹೆಸರೂ ಅದರಲ್ಲಿದೆ. ಆದರೆ, ತನಿಖೆಯ ದೃಷ್ಟಿಯಿಂದ ಆ ಹೆಸರುಗಳನ್ನು ಬಹಿರಂಗಗೊಳಿಸಲು ಆಗದು' ಎಂದು ಪೊಲೀಸರು ಹೇಳಿದ್ದಾರೆ.

ಶ್ರೀಗಳಿಗೆ ಆಗಾಗ್ಗೆ ಬೆದರಿಕೆ ಕರೆ ಬರುತ್ತಿತ್ತು ಎನ್ನಲಾಗಿದೆ. ಆತ್ಮಹತ್ಯೆ ಮಾಡಿಕೊಂಡಿದ್ದ ಕೊಠಡಿಯಲ್ಲಿ ಎರಡು ಮೊಬೈಲ್ ಫೋನ್ ಸಿಕ್ಕಿವೆ. ಇವುಗಳು ತನಿಖೆಗೆ ಪ್ರಮುಖ ಸಾಕ್ಷ್ಯವಾಗಿವೆ. ಮೊಬೈಲ್‌ಗಳ ಪಾಸ್‌ವರ್ಡ್ ಭೇದಿಸಿ ಮಾಹಿತಿ ಕಲೆ ಹಾಕಲು ಪೊಲೀಸರು ಮುಂದಾಗಿದ್ದಾರೆ.

ನಸುಕಿನಲ್ಲಿ ಆತ್ಮಹತ್ಯೆ: ಆಪ್ತರು ಹೇಳುವಂತೆ ಶ್ರೀಗಳು ಭಾನುವಾರ ತಡರಾತ್ರಿವರೆಗೆ ಭಕ್ತರ ಜೊತೆ ಮಾತುಕತೆಯಲ್ಲಿ ನಿರತರಾಗಿದ್ದರು. ಹೀಗಾಗಿ, ಸೋಮವಾರ ನಸುಕಿನ 1ರಿಂದ 4 ಗಂಟೆ ನಡುವೆ ಆತ್ಮಹತ್ಯೆ ಮಾಡಿಕೊಂಡಿರಬಹುದು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

> ### ಆಪ್ತರು ಡೆತ್‌ನೋಟ್ ಎತ್ತಿಟ್ಟರೇ?
>
> ಶ್ರೀಗಳ ಕೊಠಡಿಗೆ ಪೊಲೀಸರು ಹೋಗುವುದಕ್ಕೂ ಮುನ್ನವೇ ಡೆತ್‌ನೋಟ್ ಓದಲಾಗಿತ್ತು. ಶ್ರೀಗಳು 9 ಪುಟದ ಪತ್ರ ಬರೆದಿದ್ದು, ಆ ಪೈಕಿ ಆರು ಪುಟಗಳನ್ನು ಎತ್ತಿಟ್ಟು ಮೂರು ಪುಟಗಳನ್ನಷ್ಟೇ ಅಲ್ಲಿ ಇಡಲಾಗಿತ್ತು ಎಂದು ಹೇಳಲಾಗುತ್ತಿದೆ.
>
> ಆದರೆ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಂತೋಷ್ ಬಾಬು ಈ ವದಂತಿಯನ್ನು ನಿರಾಕರಿಸುತ್ತಾರೆ. 'ಸದ್ಯ ಮೂರು ಪುಟಗಳ ಡೆತ್‌ನೋಟ್ ಸಿಕ್ಕಿದ್ದು, ಪರಿಪೂರ್ಣವಾಗಿವೆ. ಹೆಚ್ಚಿನ ಪುಟ ಇದ್ದರೆ ತನಿಖೆ ಕೈಗೊಳ್ಳುತ್ತೇವೆ' ಎಂದು ಹೇಳಿದರು.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	124.80	10,808	10,808
ಹಾರಂಗಿ	2,859	2,856.13	494	1,050
ಕಬಿನಿ	2,284	2,283.33	1,120	1,500
ಹೇಮಾವತಿ	2,922	2,921.60	2,576	1,392
ಲಿಂಗನಮಕ್ಕಿ	1,819	1,813	1,508	4,803
ಸೂಪಾ (ಮೀ)	564	553.92	1411.99	141.21
ಮಾಣಿ	595	589	193	757
ತುಂಗಭದ್ರಾ	1633	1632.99	17585	14279
ಮಲಪ್ರಭಾ	2,079.50	2,079.50	994	994
ಘಟಪ್ರಭಾ	2,175	2,175	308	308
ಭದ್ರಾ	186	185	2,456	2,456
ಆಲಮಟ್ಟಿ (ಮೀ)	519.60	519.57	66,528	42,617
ನಾರಾಯಣಪುರ (ಮೀ)	492.25	492.14	35,000	14,000

* ನೆಲಮಟ್ಟದಿಂದ

ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ: ಕೆ.ನಾಗಣ್ಣಗೌಡ ಅಧ್ಯಕ್ಷ

ಪ್ರಜಾವಾಣಿ ವಾರ್ತೆ

ಮಂಡ್ಯ: ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ನೂತನ ಅಧ್ಯಕ್ಷರನ್ನಾಗಿ ಕೆ.ನಾಗಣ್ಣಗೌಡ ಅವರನ್ನು ನೇಮಕ ಮಾಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ಇವರ ಅಧಿಕಾರ ಅವಧಿ ಮೂರು ವರ್ಷಗಳು.

ನಾಗಣ್ಣಗೌಡ ಅವರು 2016ರಿಂದ 2018ರವರೆಗೆ ಅವರು ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷರಾಗಿ ಕೆಲಸ ಮಾಡಿದ್ದರು. ಅದಕ್ಕೂ ಮೊದಲು ಹಲವು ವರ್ಷ ಮಕ್ಕಳು ಹಾಗೂ ಯುವಜನ ಸೇವಾ ಚಟುವಟಿಕೆಗಳಲ್ಲಿ ಗುರುತಿಸಿಕೊಂಡಿದ್ದು, ಯುವ ರಾಷ್ಟ್ರಪ್ರಶಸ್ತಿ ಪಡೆದಿದ್ದರು. ವಿಕಸನ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಚಟುವಟಿಕೆಗಳಲ್ಲಿ ಭಾಗಿಯಾಗಿದ್ದರು. 5 ವರ್ಷ ಬಾಲಕಾರ್ಮಿಕ ಮಕ್ಕಳ ಶಾಲೆಯ ಅಧ್ಯಕ್ಷರಾಗಿದ್ದರು.

ಸಾಕ್ಷರತಾ ಆಂದೋಲನದಲ್ಲಿ ಜಿಲ್ಲಾ ಕಾರ್ಯದರ್ಶಿಯಾಗಿ ಕೆಲಸ ಮಾಡುವ ಮೂಲಕ ಸೇವಾ ಕ್ಷೇತ್ರಕ್ಕೆ ಪದಾರ್ಪಣೆ ಮಾಡಿದ್ದರು. ರಾಜ್ಯ ಸ್ವಯಂಸೇವಾ ಸಂಸ್ಥೆಗಳ ಒಕ್ಕೂಟದಲ್ಲಿ ಕೆಲಸ ಮಾಡಿದ್ದರು. 'ಧ್ವನಿ' ಸ್ವಯಂ ಸೇವಾ ಸಂಸ್ಥೆ ಸ್ಥಾಪಿಸಿ ಮಕ್ಕಳ ಪರ ಚಟುವಟಿಕೆ ನಡೆಸಿದ್ದರು.

ಶಾಲೆ ಬಿಟ್ಟ ಮಕ್ಕಳಿಗೆ ಶಿಕ್ಷಣ ಕುರಿತು ಅಭಿಯಾನ ನಡೆಸಿದ್ದರು. ಬೀದಿ ನಾಟಕ ಆಯೋಜಿಸಿ ಶಿಕ್ಷಣದ ಬಗ್ಗೆ ಜಾಗೃತಿ ಮೂಡಿಸುತ್ತಿದ್ದರು. ಬಿಆರ್‌ವಿ ಶಿಕ್ಷಣ ಸಂಸ್ಥೆ ಸಂಸ್ಥಾಪಕರಲ್ಲಿ ಒಬ್ಬರಾಗಿದ್ದು, ಹಲವು ಎನ್‌ಜಿಒಗಳ ಜೊತೆಯಲ್ಲೂ ಗುರುತಿಸಿಕೊಂಡಿದ್ದಾರೆ.

'ಮೂರು ದಶಕಗಳಿಗೂ ಹೆಚ್ಚು ಕಾಲ ಮಕ್ಕಳ ಅಭಿವೃದ್ಧಿ ಚಟುವಟಿಕೆಯಲ್ಲಿ ಕೆಲಸ ಮಾಡಿದ್ದೇನೆ. ಪ್ರಸ್ತುತ ಸಂದರ್ಭದಲ್ಲಿ ಮಕ್ಕಳ ಮೇಲೆ ನಡೆಯುತ್ತಿರುವ ದೌರ್ಜನ್ಯ ತಡೆಯುವುದು ನನ್ನ ಪ್ರಮುಖ ಆದ್ಯತೆಯಾಗಿದೆ' ಎಂದು ಕೆ.ನಾಗಣ್ಣಗೌಡ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

ರಾಹುಲ್ ಗಾಂಧಿ ಜತೆ ಸಂವಾದ ನಡೆಸಲು ಬಿಡದೇ ಅಪಮಾನ: ಆರೋಪ

'ಕೈ' ನಾಯಕರ ವಿರುದ್ಧ ಕಾಡುಗೊಲ್ಲರ ಆಕ್ರೋಶ

ಪ್ರಜಾವಾಣಿ ವಾರ್ತೆ

ತುಮಕೂರು: ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ನೇತೃತ್ವದಲ್ಲಿ ನಡೆಯುತ್ತಿರುವ ಭಾರತ್ ಜೋಡೊ ಯಾತ್ರೆ ಸಮಯದಲ್ಲಿ ರಾಯಚೂರು ಜಿಲ್ಲೆಯಲ್ಲಿ ನಿಗದಿಯಾಗಿದ್ದ ಸಂವಾದ ಸಭೆಯಲ್ಲಿ ಭಾಗವಹಿಸಿ, ತಮ್ಮ ಅಹವಾಲು ಹೇಳಿಕೊಳ್ಳಲು ಅವಕಾಶ ನೀಡದೆ ಸಿದ್ದರಾಮಯ್ಯ ಹಾಗೂ ಅವರ ಬೆಂಬಲಿಗರು ಅಪಮಾನ ಮಾಡಿದ್ದಾರೆ ಎಂದು ಕಾಡುಗೊಲ್ಲ, ಕೋಲೆ ಬಸವ ಸಮುದಾಯದ ಮುಖಂಡರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಅ.21ರಂದು ಗಿಲ್ಲೆಸೂಗೂರುನಲ್ಲಿ ತಳ ಸಮುದಾಯಗಳ ಮುಖಂಡರೊಂದಿಗೆ ಸಂವಾದ ನಿಗದಿಯಾಗಿತ್ತು. ತುಮಕೂರು ಜಿಲ್ಲೆಯಿಂದ ನಮಗೆ ಆಹ್ವಾನ ನೀಡಿದ್ದು, ಹೋಗಿದ್ದೆವು. ಆದರೆ, ನಮಗೆ ಅವಕಾಶ ನೀಡದೆ ಮುಖಂಡ ಎಚ್.ಎಂ.ರೇವಣ್ಣ ಹಾಗೂ ಅವರ ಜತೆಯಲ್ಲಿ ಇದ್ದವರು ಹೊರದಬ್ಬಿದರು ಎಂದು ಕರ್ನಾಟಕ ರಾಜ್ಯ ಕಾಡುಗೊಲ್ಲ ಅಸ್ಮಿತೆ ಹೋರಾಟ ಸಮಿತಿ ಅಧ್ಯಕ್ಷ ಜಿ.ಕೆ.ನಾಗಣ್ಣ ಆರೋಪಿಸಿದ್ದಾರೆ.

'ಸಂವಾದ ನಡೆಯಬೇಕಿದ್ದ ಕೊಠಡಿಗೆ ಹೋಗುವ ಸಮಯದಲ್ಲಿ ವಕೀಲ ಪ್ರೊ.ರವಿವರ್ಮ ಕುಮಾರ್ ನೇತೃತ್ವದಲ್ಲಿ ಬಂದಿದ್ದ ಹಿಂದುಳಿದ ವರ್ಗಗಳ ಒಕ್ಕೂಟದ ಮುಖಂಡರಾದ ರಾಮಚಂದ್ರ, ಎಚ್.ಎಂ.ರೇವಣ್ಣ, ಬೈರತಿ ಸುರೇಶ್ ಇತರರು ನಮ್ಮನ್ನು ತಡೆದರು. ಹಿಂದುಳಿದ ವರ್ಗಗಳ ಒಕ್ಕೂಟದವರು ಒಳಕ್ಕೆ ಹೋಗಬೇಕು. ನೀವು ಏಕೆ ಬಂದಿದ್ದೀರಿ ಎಂದು ರೇವಣ್ಣ ಕತ್ತಿನ ಪಟ್ಟಿ ಹಿಡಿದು ಹೊರಕ್ಕೆ ನೂಕಿದರು' ಎಂದು ಹೇಳಿದರು.

'ನಾವು ಕಾಡುಗೊಲ್ಲ ಸಮುದಾಯದ ಪ್ರತಿನಿಧಿಯಾಗಿ ಬಂದಿದ್ದೇವೆ. ರಾಹುಲ್ ಜತೆಗೆ ಮಾತನಾಡಲು ಸಮಯ ನಿಗದಿಯಾಗಿದೆ. ವಿಶೇಷ ಪಾಸ್ ಕೊಟ್ಟಿದ್ದಾರೆ. ನಿಮ್ಮಂತಹವರು ನಮ್ಮಂತಹ ತಬ್ಬಲಿ ಸಮುದಾಯದ ಮೇಲೆ ದೌರ್ಜನ್ಯ ನಡೆಸಬಾರದು. ಒಳಗೆ ಬಿಡಿ ಎಂದು ಬೇಡಿಕೊಂಡಾಗ ರೇವಣ್ಣ ವ್ಯಗ್ರರಾದರು. ನಮ್ಮ ತಂಡದ ಮೂವರನ್ನು ಬಿಡದೆ ಹೊರಗೆ ನೂಕಿದರು' ಎಂದು ಘಟನೆಯನ್ನು 'ಪ್ರಜಾವಾಣಿ'ಗೆ ವಿವರಿಸಿದರು.

'ನಾನು, ಕೋಲೆ ಬಸವ ಸಮುದಾಯದ ಮುಖಂಡ ಶ್ರೀನಿವಾಸ್ ಕಷ್ಟಪಟ್ಟು ಒಳಗೆ ಹೋಗುತ್ತಿದ್ದಂತೆ ಸಿದ್ದರಾಮಯ್ಯ ಅವರು ನೀವು ಏಕೆ ಬಂದಿದ್ದೀರಿ ಎಂದು ಪ್ರಶ್ನಿಸಿದರು. ನಾವು ಎಂಬಿಸಿ (ಅತಿ ಹಿಂದುಳಿದ ಸಮುದಾಯ) ಎಂದು ಹೇಳುತ್ತಿದ್ದಂತೆ ಅವರೂ ಕೋಪಗೊಂಡರು. ಅಲ್ಲಿದ್ದವರು ನಮ್ಮನ್ನು ಹಿಡಿದು ಹಿಂದಕ್ಕೆ ತಳ್ಳಿದರು. ಇಷ್ಟೆಲ್ಲ ದೌರ್ಜನ್ಯದ ನಡುವೆ ರಾಹುಲ್ ಬಳಿಗೆ ಹೋಗಿ ಮನವಿ ಮಾಡಿಕೊಳ್ಳಲು ಯತ್ನಿಸಿದರೂ ಸಿದ್ದರಾಮಯ್ಯ ಅದಕ್ಕೂ ಅವಕಾಶ ನೀಡದೆ ಹಿಂದಕ್ಕೆ ನೂಕಿದರು' ಎಂದು ಅಂದಿನ ಸನ್ನಿವೇಶ ನೆನಪಿಸಿಕೊಂಡು ಕಣ್ಣೀರಾದರು.

> ### ಕತ್ತು ಹಿಡಿದು ತಳ್ಳಿಲ್ಲ: ರೇವಣ್ಣ ಸ್ಪಷ್ಟನೆ
>
> ಕಾಡುಗೊಲ್ಲ ಸಮುದಾಯದ ನಾಗಣ್ಣ ಯಾರು ಎಂಬುದೇ ಗೊತ್ತಿರಲಿಲ್ಲ. ಅವರನ್ನು ಕತ್ತು ಹಿಡಿದು ಹೊರಕ್ಕೆ ತಳ್ಳಿಲ್ಲ. ಸಂಪರ್ಕ ಕೊರತೆಯಿಂದ ಗೊಂದಲ ಆಗಿರಬಹುದು ಎಂದು ಕಾಂಗ್ರೆಸ್ ಮುಖಂಡ ಎಚ್.ಎಂ.ರೇವಣ್ಣ ಸ್ಪಷ್ಟಪಡಿಸಿದರು. ಹಿಂದುಳಿದ ಜಾತಿಗಳ ಒಕ್ಕೂಟ ಕೊಟ್ಟಿದ್ದ ಪಟ್ಟಿಯಲ್ಲಿ ಅವರ ಹೆಸರು ಇರಲಿಲ್ಲ. ರಾಹುಲ್ ಗಾಂಧಿ ಜತೆಗೆ ಮಾತನಾಡಲು ಸಾಧ್ಯವಾಗಲಿಲ್ಲ ಎಂಬ ಕಾರಣಕ್ಕೆ ಅವರು ಆರೋಪ ಮಾಡುತ್ತಿರಬಹುದು ಎಂದರು.

ಡಿ. ವೀರೇಂದ್ರ ಹೆಗ್ಗಡೆ ಗೌರವಕ್ಕೆ ಚ್ಯುತಿ ತಂದ ಪ್ರಕರಣ

ಸೋಮನಾಥ ನಾಯಕ್ ಮೇಲ್ಮನವಿ ವಜಾ

ಉಜಿರೆ (ದಕ್ಷಿಣ ಕನ್ನಡ): ಗುರುವಾಯನಕೆರೆಯ ನಾಗರಿಕ ಸೇವಾ ಟ್ರಸ್ಟ್ ಅಧ್ಯಕ್ಷ ಕೆ. ಸೋಮನಾಥ್ ನಾಯಕ್ ಅವರ ವಿಶೇಷ ಮೇಲ್ಮನವಿಯನ್ನು ತಿರಸ್ಕರಿಸಿರುವ ಸುಪ್ರೀಂ ಕೋರ್ಟ್, ವಿಚಾರಣಾ ನ್ಯಾಯಾಲಯ ವಿಧಿಸಿದ್ದ ಮೂರು ತಿಂಗಳ ಸಜೆಯನ್ನು ಎತ್ತಿ ಹಿಡಿದಿದೆ.

ಏನಿದು ಪ್ರಕರಣ: ಧರ್ಮಸ್ಥಳ ಕ್ಷೇತ್ರ, ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆ ಹಾಗೂ ಕ್ಷೇತ್ರದ ಸಂಸ್ಥೆಗಳ ಗೌರವಕ್ಕೆ ಚ್ಯುತಿ ಬರುವಂತಹ ಹೇಳಿಕೆ ನೀಡಬಾರದು ಎಂದು ಬೆಳ್ತಂಗಡಿ ಜೆಎಂಎಫ್ ನ್ಯಾಯಾಲಯವು 2013ರ ನ.5ರಂದು ಸೋಮನಾಥ ನಾಯಕ್ ಮತ್ತು ಇತರ ಐವರ ವಿರುದ್ಧ ನಿರ್ಬಂಧ ಹೇರಿತ್ತು.

ಆ ಬಳಿಕವೂ ನಾಯಕ್ ಸಾಮಾಜಿಕ ಜಾಲತಾಣಗಳಲ್ಲಿ ಹೆಗ್ಗಡೆ ವಿರುದ್ಧ ಆರೋಪಗಳನ್ನು ಮಾಡಿದ್ದರು. ಈ ಬಗ್ಗೆ ಹೆಗ್ಗಡೆ ಅವರು ನೀಡಿದ್ದ ದೂರಿನ ವಿಚಾರಣೆ ನಡೆಸಿದ್ದ ನ್ಯಾಯಾಲಯವು ಸೋಮನಾಥ ನಾಯಕ್ ದೋಷಿ ಎಂದು ಪರಿಗಣಿಸಿ, ಮೂರು ತಿಂಗಳ ಜೈಲು ಶಿಕ್ಷೆ ವಿಧಿಸಿ ತೀರ್ಪು ನೀಡಿತ್ತು. ದೂರುದಾರರಿಗೆ ₹ 4.5 ಲಕ್ಷ ಪರಿಹಾರ ನೀಡಬೇಕು. ಇದಕ್ಕಾಗಿ ಆಸ್ತಿಯನ್ನೂ ಮುಟ್ಟುಗೋಲು ಹಾಕಬಹುದು ಎಂದು ಆದೇಶಿಸಿತ್ತು.

ಈ ತೀರ್ಪಿನ ವಿರುದ್ಧ ನಾಯಕ್ ಸಲ್ಲಿಸಿದ್ದ ಮೇಲ್ಮನವಿಯ ವಿಚಾರಣೆ ನಡೆಸಿದ್ದ ಬೆಳ್ತಂಗಡಿಯ ಜೆಎಂಎಫ್‌ಸಿಯ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು 2021 ಜೂನ್ 8ರಂದು ಕೆಳ ನ್ಯಾಯಾಲಯದ ತೀರ್ಪನ್ನು ಕಾಯಂಗೊಳಿಸಿ ತೀರ್ಪು ನೀಡಿದ್ದರು. ಅದರ ವಿರುದ್ಧವೂ ನಾಯಕ್ ಮೇಲ್ಮನವಿ ಸಲ್ಲಿಸಿದ್ದರು.

'ನಾಯಕ್ ಅವರ ಮೇಲ್ಮನವಿಯಲ್ಲಿ ನಿಜಾಂಶ ಇಲ್ಲ' ಎಂದು 2022 ಮಾರ್ಚ್ 22ರಂದು ಬೆಳ್ತಂಗಡಿಯ ಜೆಎಂಎಫ್‌ಸಿಯ ಪ್ರಧಾನ ಸಿವಿಲ್ ನ್ಯಾಯಾಧೀಶರು ತೀರ್ಪು ನೀಡಿದ್ದರು. ನಾಯಕ್ ದಸ್ತಗಿರಿಗೆ 2022ರ ಮಾರ್ಚ್ 31ರಂದು ಆದೇಶವಾಗಿತ್ತು.

ತೀರ್ಪನ್ನು ಪ್ರಶ್ನಿಸಿ ಕರ್ನಾಟಕದ ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ ಸಲ್ಲಿಸಿದ್ದ ನಾಯಕ್, 'ತನ್ನನ್ನು ಬಂಧಿಸದಂತೆ ತಡೆಯಾಜ್ಞೆ ನೀಡಬೇಕು ಹಾಗೂ ವಿಚಾರಣಾ ನ್ಯಾಯಾಲಯದ ಆದೇಶ ವಜಾ ಮಾಡಬೇಕು' ಎಂದು ಕೋರಿದ್ದರು. 'ವಿಚಾರಣಾ ನ್ಯಾಯಾಲಯಗಳ ಆದೇಶ ಸಮಂಜಸವಾಗಿದೆ. ಈ ಪ್ರಕರಣದ ಹೈಕೋರ್ಟ್ ಮಧ್ಯಪ್ರವೇಶಿಸುವ ಅಗತ್ಯವಿಲ್ಲ' ಎಂದು ಹೈಕೋರ್ಟ್ 2022ರ ಮೇ 5ರಂದು ತೀರ್ಪು ನೀಡಿತ್ತು. ಇದನ್ನು ನಾಯಕ್ ಅವರು ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಿದ್ದರು. ಅವರ ಮೇಲ್ಮನವಿಯನ್ನು ಸುಪ್ರೀಂ ಕೋರ್ಟ್ ಅ.19ರಂದು ತಿರಸ್ಕರಿಸಿದೆ.

ಸಂಕ್ಷಿಪ್ತ ಸುದ್ದಿ

ಟ್ಯೂಷನ್ ಹಾವಳಿ ನಿಯಂತ್ರಣಕ್ಕೆ ಸೂಚನೆ

ಬೆಂಗಳೂರು: ಅನಧಿಕೃತ ಮನೆಪಾಠ ಕೇಂದ್ರಗಳ (ಟ್ಯೂಷನ್) ಮೇಲೆ ಶಿಕ್ಷಣ ಕಾಯ್ದೆಯ ಅನ್ವಯ ಕ್ರಮ ಕೈಗೊಳ್ಳುವಂತೆ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಆಯುಕ್ತರು ಸೂಚಿಸಿದ್ದಾರೆ.

ರಾಜ್ಯದಲ್ಲಿ ನಡೆಯುತ್ತಿರುವ ಅನಧಿಕೃತ ಟ್ಯೂಷನ್ ಹಾವಳಿ ನಿಯಂತ್ರಿಸುವಂತೆ ಖಾಸಗಿ ಶಿಕ್ಷಣ ಸಂಸ್ಥೆಗಳ ಒಕ್ಕೂಟ ಸಲ್ಲಿಸಿದ ಮನವಿ ಉಲ್ಲೇಖಿಸಿರುವ ಆಯುಕ್ತರು, ಆಯಾ ಜಿಲ್ಲೆಗಳ ಪ್ರಾಧಿಕಾರದ ಮುಖ್ಯಸ್ಥರಾಗಿರುವ ಉಪ ನಿರ್ದೇಶಕರು (ಡಿಡಿಪಿಐ) ಕರ್ನಾಟಕ ಶಿಕ್ಷಣ ಕಾಯ್ದೆಯ ಅಡಿ ಕೇಂದ್ರಗಳನ್ನು ತಪಾಸಣೆ ನಡೆಸಬೇಕು, ನೋಂದಾಯಿತವಲ್ಲದ ಕೇಂದ್ರಗಳ ವಿರುದ್ಧ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಸುತ್ತೋಲೆಯಲ್ಲಿ ಸೂಚಿಸಿದ್ದಾರೆ.

ಪರೀಕ್ಷೆ ತರಬೇತಿ: ನ.13ರಂದು ಪರೀಕ್ಷೆ

ಬೆಂಗಳೂರು: ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿಗಾಗಿ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ನ.13ರಂದು ಸಾಮಾನ್ಯ ಪ್ರವೇಶ ಪರೀಕ್ಷೆ ನಡೆಯಲಿದೆ.

ಅಂದು ಬೆಳಿಗ್ಗೆ 10.30ರಿಂದ ಮಧ್ಯಾಹ್ನ 12.30ರವರೆಗೆ ಯುಪಿಎಸ್‌ಸಿ, ಕೆಎಎಸ್, ಗ್ರೂಪ್ 'ಸಿ' ಪರೀಕ್ಷೆ ಬಯಸುವ ಅಭ್ಯರ್ಥಿಗಳಿಗೆ, ಮಧ್ಯಾಹ್ನ 2.30ರಿಂದ 4.30ರವರೆಗೆ ಬ್ಯಾಂಕಿಂಗ್ ಸೇರಿದಂತೆ ಇತರೆ ಅಭ್ಯರ್ಥಿಗಳಿಗೆ ಪರೀಕ್ಷೆಗಳು ನಡೆಯಲಿವೆ. ಅ.31ರಿಂದ ಪ್ರವೇಶ ಪತ್ರಗಳನ್ನು ವೆಬ್‌ಸೈಟ್ http:/kea/kar.nic.in ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ತಿಳಿಸಿದೆ.ಯುಪಿಎಸ್‌ಸಿ, ಕೆಎಎಸ್, ಬ್ಯಾಂಕಿಂಗ್, ಆರ್‌ಆರ್‌ಬಿ, ನ್ಯಾಯಾಂಗ ಸೇವೆ, ಗಗನಸಖಿ, ಗ್ರೂಪ್ ಸಿ, ಎಸ್‌ಎಸ್‌ಸಿ ಪರೀಕ್ಷೆಗಳಿಗೆ ಖಾಸಗಿ ಕೇಂದ್ರಗಳಲ್ಲಿ ತರಬೇತಿ ನೀಡಲಾಗುತ್ತದೆ.



ಗೂಗಲ್‌ಗೆ ಮತ್ತೆ ದಂಡ ವಿಧಿಸಿದ ಸಿಸಿಐ

ಒಂದನೇ ಪುಟದಿಂದ

ಸುದ್ದಿ ಹಾಗೂ ಸ್ಮಾರ್ಟ್ ಟಿವಿ ವಿಚಾರವಾಗಿ ಗೂಗಲ್ ಸ್ಪರ್ಧಾತ್ಮಕತೆಗೆ ವಿರುದ್ಧವಾದ ನಡೆ ಅನುಸರಿಸುತ್ತಿದೆ ಎಂಬ ದೂರಿನ ಕುರಿತೂ ಸಿಸಿಐ ತನಿಖೆ ನಡೆಸುತ್ತಿದೆ.

ಯುಪಿಐ ವ್ಯವಸ್ಥೆ ಮೂಲಕ ಹಣ ಪಾವತಿಸಲು ಅವಕಾಶ ಕಲ್ಪಿಸಿರುವ ಆ್ಯಪ್‌ಗಳು ತನ್ನ ಯುಪಿಐ ಆ್ಯಪ್ ಬಳಸು-ತ್ತಿಲ್ಲದಿದ್ದರೆ, ಅವುಗಳಿಗೆ ತಾರತಮ್ಯ ಮಾಡುವಂತಿಲ್ಲ ಎಂದು ಕೂಡ ಗೂಗಲ್‌ಗೆ ಸಿಸಿಐ ಹೇಳಿದೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಮೂರನೇ ವರ್ಷದ ಪುಣ್ಯಸ್ಮರಣೆ

ಶ್ರೀಮತಿ ಗಾಯತ್ರಿ ಶೇಖರ್
ಜನನ: 17.03.1950 – ನಿಧನ: 26.10.2019
ಸದಾ ನಿಮ್ಮ ನೆನಪಿನಲ್ಲಿರುವ:
ಬಿ.ಹೆಚ್. ಚಂದ್ರಶೇಖರ್ ಮತ್ತು ಕುಟುಂಬವರ್ಗದವರು

6ನೇ ವರ್ಷದ ಪುಣ್ಯಸ್ಮರಣೆ

ಶ್ರೀಮತಿ ಶ್ವೇತಾ ರಂಗನಾಥ ಕಾಪ್ಸಿ
ಮರಣ : 26/10/2016
ಸದಾ ನಿಮ್ಮ ನೆನಪಿನಲ್ಲಿರುವ
ಕಾಪ್ಸಿ ಕುಟುಂಬ

ನಿಧನ

ಆರ್. ಮಂಜುನಾಥಸ್ವಾಮಿ, IRS (R)
(1ನೇ ಏಪ್ರಿಲ್ 1961- 24ನೇ ಅಕ್ಟೋಬರ್ 2022)
ನಮ್ಮ ಪ್ರೀತಿಪಾತ್ರರಾದ ಶ್ರೀ ಆರ್.ಮಂಜುನಾಥಸ್ವಾಮಿ ರವರು 24ನೇ ಅಕ್ಟೋಬರ್, 2022ರ ಸೋಮವಾರ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
26ನೇ ಅಕ್ಟೋಬರ್, 2022ರ ಬುಧವಾರ ಬೆಳಗ್ಗೆ 10 ಗಂಟೆ ನಂತರ ನಮ್ಮ ನಿವಾಸ #7, ಅದಿತಿ ಗ್ರೀನ್ ಸ್ಕೇಪ್ಸ್, ಜಕ್ಕೂರು ಪಿಒ, ಬೆಂಗಳೂರು–560064 ಇಲ್ಲಿ ಪಾರ್ಥಿವ ಶರೀರದ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ.
28ನೇ ಅಕ್ಟೋಬರ್, 2022ರಂದು ಶುಕ್ರವಾರ ಮಧ್ಯಾಹ್ನ 2 ಗಂಟೆಗೆ ಹೆಬ್ಬಾಳದ ವಿದ್ಯುತ್ ಚಿತಾಗಾರದಲ್ಲಿ ಅಂತ್ಯಸಂಸ್ಕಾರ ನೆರವೇರಿಸಲಾಗುವುದು.
ಸತ್ಸಂಗ: ಬೆಳಗ್ಗೆ 11.30 ಗಂಟೆಯಿಂದ ನಮ್ಮ ನಿವಾಸ #7, ಅದಿತಿ ಗ್ರೀನ್ ಸ್ಕೇಪ್ಸ್, ಸಂಪಿಗೆಹಳ್ಳಿ ರೋಡ್, ಜಕ್ಕೂರು ಪಿಒ, ಬೆಂಗಳೂರು–560064.
ಊಟದ ವ್ಯವಸ್ಥೆ ಇರುತ್ತದೆ
ಇಂತಿ ದುಃಖತಪ್ತರು
ಶ್ರೀಮತಿ ನೀಲಂ ಮಂಜುನಾಥ್
ಆಕಾಂಕ್ಷಾ ಮಂಜುನಾಥಸ್ವಾಮಿ
ಹರ್ಷವರ್ಧನ್ ಮಂಜುನಾಥಸ್ವಾಮಿ
ಸುಲೋಚನ ಮತ್ತು ಲಕ್ಷ್ಮಪ್ಪ
ಗೋವಿಂದರಾಜು, ವಿಜಯ, ಗೀತಾ, ಶಾಲಿನಿ

ರಿಷಿ ಸುನಕ್ ಆಯ್ಕೆ: ‘ಹೊಸ ಬೆಳಗು’ ಎಂಬ ಶ್ಲಾಘನೆ ● ‘ಪ್ರಜಾಪ್ರಭುತ್ವದ ಸಾವು’ ಎಂದು ಟೀಕೆ

ಮಾಧ್ಯಮಗಳಲ್ಲಿ ಮಿಶ್ರ ಪ್ರತಿಕ್ರಿಯೆ

ಲಂಡನ್ (ಪಿಟಿಐ): ರಿಷಿ ಸುನಕ್ ಅವರು ಬ್ರಿಟನ್ ಪ್ರಧಾನಿ ಆಗಿರುವುದಕ್ಕೆ ಅಲ್ಲಿನ ಮಾಧ್ಯಮಗಳು ಮಿಶ್ರ ಪ್ರತಿಕ್ರಿಯೆ ವ್ಯಕ್ತಪಡಿಸಿವೆ. ರಿಷಿ ಅವರು ಪ್ರಧಾನಿ ಆಗಿರುವುದು ‘ಹೊಸ ಬೆಳಗು’ ಎಂದು ಕೆಲವು ಪತ್ರಿಕೆಗಳು ಅಭಿಪ್ರಾಯ ವ್ಯಕ್ತಪಡಿಸಿದ್ದರೆ, ಕೆಲವು ಪತ್ರಿಕೆಗಳು, ‘ಪ್ರಜಾಪ್ರಭುತ್ವದ ಸಾವು’ ಎಂದು ಹೇಳಿವೆ. ಇನ್ನೂ ಕೆಲವು ಪತ್ರಿಕೆಗಳು ‘ಈ ಜಯ ಎಷ್ಟು ದಿನಗಳದ್ದು’ ಎನ್ನುವ ಅಭಿಪ್ರಾಯವನ್ನೂ ವ್ಯಕ್ತಪಡಿಸಿವೆ.

ಒಟ್ಟಾರೆಯಾಗಿ ಪ್ರಮುಖ ಪತ್ರಿಕೆಗಳ ಮುಖಪುಟದಲ್ಲಿ ರಿಷಿ ಅವರು ಪ್ರಧಾನಿ ಆಗಿರುವುದು ಮುಖ್ಯ ಸುದ್ದಿಯಾಗಿ ಪ್ರಕಟವಾಗಿದೆ.

‘ಒಟ್ಟಾಗಿರಿ ಇಲ್ಲವೇ ಸಾಯಿರಿ– ಟೋರಿ ಸಂಸದರಿಗೆ ಸುನಕ್ ಎಚ್ಚರಿಕೆ’ ಎಂಬ ತಲೆಬರಹವನ್ನು ‘ಗಾರ್ಡಿಯನ್’ ಪ್ರಕಟ ಮಾಡಿದೆ. ‘ದಿ ಮೇಲ್’ ಪತ್ರಿಕೆಯು ಏಷ್ಯಾದವರಾದ ರಿಷಿ ಸುನಕ್ ಅವರು ನಮ್ಮ ಆಧುನಿಕ, ಕಿರಿಯ ಪ್ರಧಾನಿ ಎನ್ನುವ ಅಡಿಬರಹದೊಂದಿಗೆ ‘ಬ್ರಿಟನ್‌ನ ಹೊಸ ಬೆಳಗು’ ಎನ್ನುವ ತಲೆಬರಹ ನೀಡಿ ಸುದ್ದಿ ಪ್ರಕಟಿಸಿದೆ. ಇದಕ್ಕೆ ವ್ಯತಿರಿಕ್ತ ಎನ್ನುವಂತೆ ಹಲವು ಪತ್ರಿಕೆಗಳು ರಿಷಿ ಅವರ ಆಯ್ಕೆಯನ್ನು ವಿರೋಧಿಸಿ, ಕಟುವಾಗಿ ಟೀಕಿಸಿದ ತಲೆಬರಹ-ದೊಂದಿಗೆ ಸುದ್ದಿಗಳನ್ನು ಪ್ರಕಟಿಸಿವೆ.

‘ಪ್ರಜಾಪ್ರಭುತ್ವದ ಸಾವು’ ಎಂದು ಬರೆದಿರುವ ‘ಸ್ಕಾಟ್ಲೆಂಡ್ ಡೈಲಿ ರೆಕಾರ್ಡ್’ ಪತ್ರಿಕೆಯು ರಿಷಿ ಅವರ ಆಯ್ಕೆಯನ್ನು ತೀಕ್ಷ್ಣವಾಗಿ ಟೀಕಿಸಿದೆ.

ಲಂಡನ್‌ನ ಕೇಂದ್ರ ಭಾಗದಲ್ಲಿರುವ 10 ಡೌನಿಂಗ್ ಸ್ಟ್ರೀಟ್ ಹೊರಾಂಗಣದ ಪೋಡಿಯಂನಿಂದ ದೇಶದ ಜನತೆ ಉದ್ದೇಶಿಸಿ ಭಾಷಣ ಮಾಡಲು ಮಂಗಳವಾರ ಬ್ರಿಟನ್‌ನ ನೂತನ ಪ್ರಧಾನಿ ರಿಷಿ ಸುನಕ್ ಕಾರಿನಲ್ಲಿ ಬಂದಿಳಿದರು – ಎಎಫ್‌ಪಿ ಚಿತ್ರ

‘ದಿ ಮಿರರ್’ ಪತ್ರಿಕೆಯು ‘ನಮ್ಮ ಹೊಸ (ಆಯ್ಕೆಗೊಳ್ಳದ) ಪ್ರಧಾನಿಯೇ ನಿಮಗೆ ಮತ ನೀಡಿದವರು ಯಾರು?’ ಎಂದು ಬ್ಯಾನರ್ ತಲೆಬರಹ ನೀಡಿದೆ. ‘ಬ್ರಿಟನ್ ರಾಜನಿಗಿಂತ ಎರಡು ಪಟ್ಟು ಹೆಚ್ಚು ಶ್ರೀಮಂತ’, ‘ರಿಷಿ ಅವರು ಸರ್ಕಾರದ ವೆಚ್ಚವನ್ನು ನಿರ್ದಯವಾಗಿ ತಗ್ಗಿಸಲಿದ್ದಾರೆ’ ಎಂದೂ ಪತ್ರಿಕೆ ಬರೆದಿದೆ.

ಮಹತ್ವದ ಮೈಲಿಗಲ್ಲು- ಬೈಡನ್ : ಭಾರತ ಮೂಲದ ರಿಷಿ ಸುನಕ್ ಬ್ರಿಟನ್ ಪ್ರಧಾನಿಯಾಗಿರುವುದು ಬೆರಗಿನ ವಿಷಯ ಮತ್ತು ಇದೊಂದು ಮಹತ್ವದ ಮೈಲಿಗಲ್ಲು ಕೂಡ ಎಂದು ಅಮೆರಿಕ ಅಧ್ಯಕ್ಷ ಜೋ ಬೈಡನ್ ಹೇಳಿದರು.

ಶ್ವೇತಭವನದಲ್ಲಿ ಸೋಮವಾರ ದೀಪಾವಳಿ ಹಬ್ಬದ ಆಚರಣೆಯಲ್ಲಿ ಮಾತನಾಡಿದ ಅವರು, ಬ್ರಿಟನ್ ದೇಶವನ್ನು ಮುನ್ನಡೆಸುವ ಅವಕಾಶವನ್ನು ರಿಷಿ ಗಿಟ್ಟಿಸಿರುವುದು ವಲಸಿಗ ಭಾರತೀಯ ಸಮುದಾಯದ ಸಾಧನೆ ಎಂದು ಬಣ್ಣಿಸಿದರು.

ಸುನಕ್: ಸುದೀರ್ಘ ಭಾಷಣ ಮಾಡಿದ ಪ್ರಧಾನಿಗಳಲ್ಲಿ ಒಬ್ಬರು

ಲಂಡನ್ (ಪಿಟಿಐ): ಬ್ರಿಟನ್ ಪ್ರಧಾನಿಯಾಗಿ ಅಧಿಕಾರ ಸ್ವೀಕರಿಸಿದ ಬಳಿಕ ಇಲ್ಲಿಯ ಡೌನಿಂಗ್ ಸ್ಟ್ರೀಟ್ (ಪ್ರಧಾನಿ ಕಚೇರಿ) ಹೊರಗೆ ರಿಷಿ ಸುನಕ್ ಅವರು ಮಾಡಿದ ಭಾಷಣವು ನೂತನ ಪ್ರಧಾನಿಗಳ ‘ಸುದೀರ್ಘ ಮೊದಲ ಭಾಷಣ’ಗಳಲ್ಲಿ ಒಂದು ಎಂದು ಪರಿಗಣಿಸಲಾಗಿದೆ.

ರಿಷಿ ಅವರ ಪ್ರಥಮ ಭಾಷಣವು 5 ನಿಮಿಷ 56 ಸೆಕೆಂಡುಗಳಷ್ಟು ದೀರ್ಘವಾಗಿತ್ತು. 2019ರಲ್ಲಿ ಪ್ರಧಾನಿಯಾಗಿ ಅಧಿಕಾರ ಸ್ವೀಕರಿಸಿದ್ದ ಬೋರಿಸ್ ಜಾನ್ಸನ್ (11 ನಿಮಿಷ, 13 ಸೆಕೆಂಡುಗಳ ಭಾಷಣ) ಹೊರತುಪಡಿಸಿದರೆ ಹಿಂದಿನ ಯಾವ ಪ್ರಧಾನಿಯೂ ಇಷ್ಟು ಸುದೀರ್ಘ ಭಾಷಣ ಮಾಡಿಲ್ಲ ಎಂದು ದಿ ಇಂಡಿಪೆಂಡೆಂಟ್ ಸುದ್ದಿ ಪತ್ರಿಕೆ ವರದಿ ಮಾಡಿದೆ.

ಕಳೆದ ಸೆಪ್ಟೆಂಬರ್‌ನಲ್ಲಿ ಅಧಿಕಾರ ಸ್ವೀಕರಿಸಿದ್ದ ಲಿಜ್ ಟ್ರಸ್ ಅವರು 4 ನಿಮಿಷ, 4 ಸೆಕೆಂಡುಗಳಲ್ಲಿ ಭಾಷಣ ಮುಗಿಸಿದ್ದರು. ಅವರಿಗೆ ಹೋಲಿಸಿದರೆ ಸುನಕ್ ಅವರು ಭಾಷಣಕ್ಕೆ 2 ನಿಮಿಷ ಹೆಚ್ಚು ಸಮಯ ತೆಗೆದುಕೊಂಡಿದ್ದಾರೆ.

ಹಿಂದಿನ ಪ್ರಧಾನಿಗಳು ಭಾಷಣಕ್ಕೆ ತೆಗೆದುಕೊಂಡ ಸಮಯ:

- 2016– ತೆರೆಸಾ ಮೇ: 4 ನಿಮಿಷ, 42 ಸೆಕೆಂಡುಗಳು
- 2010– ಡೇವಿಡ್ ಕ್ಯಾಮರೂನ್: 4 ನಿಮಿಷ
- 2007– ಗೋರ್ಡಾನ್ ಬ್ರೌನ್: 2 ನಿಮಿಷ, 49 ಸೆಕೆಂಡುಗಳು
- 1997– ಟೋನಿ ಬ್ಲೇರ್: 5 ನಿಮಿಷ, 17 ಸೆಕೆಂಡುಗಳು
- 1990– ಜಾನ್ ಮೇಜರ್: 2 ನಿಮಿಷ, 49 ಸೆಕೆಂಡುಗಳು

‘ಬ್ರಿಟನ್‌ನ ಬರಾಕ್ ಒಬಾಮ’

ಲಂಡನ್ (ಪಿಟಿಐ): ರಿಷಿ ಸುನಕ್ ಅವರು ಬ್ರಿಟನ್‌ನ ಪ್ರಧಾನಿಯಾಗಿದ್ದು, ಅವರು ‘ನಮ್ಮ ಬರಾಕ್ ಒಬಾಮ’ ಎಂದು ರಿಷಿ ಅವರ ಅಜ್ಜ ನಿರ್ಮಿಸಿದ ಹಿಂದೂ ದೇಗುಲದ ಮುಖಂಡರೊಬ್ಬರು ಹೇಳಿದರು.

‘ರಿಷಿ ಅವರು ಬ್ರಿಟನ್‌ನಲ್ಲಿ ಬರಾಕ್ ಒಬಾಮರಂತೆ ಭಾಸವಾಗುತ್ತಿದ್ದಾರೆ. ಮೊಟ್ಟ ಮೊದಲ ಬಾರಿಗೆ ಬಿಳಿಯೇತರ, ಭಾರತ ಮೂಲದ ಮತ್ತು ಹಿಂದೂ ವ್ಯಕ್ತಿ ಬ್ರಿಟನ್ ಪ್ರಧಾನಿ ಹುದ್ದೆಗೆ ಏರಿರುವುದು ಅತ್ಯಂತ ಹೆಮ್ಮೆಯ ಸಂಗತಿ’ ಎಂದು ಸಂಜಯ್ ಚಂದರಣ ಅವರು ಹೇಳಿದ್ದಾರೆ.

ಸೌತ್‌ಹ್ಯಾಂಪ್ಟನ್‌ನಲ್ಲಿರುವ ವೇದಿಕ್ ಸಮಾಜದ ಹಿಂದೂ ದೇಗುಲವನ್ನು ರಿಷಿ ಸುನಕ್ ಅವರ ಅಜ್ಜ ರಾಮ್‌ದಾಸ್ ಸುನಕ್ ಅವರು 1971ರಲ್ಲಿ ನಿರ್ಮಿಸಿದ್ದರು. 1980ರಿಂದ ರಿಷಿ ಸುನಕ್ ಈ ದೇಗುಲದ ಟ್ರಸ್ಟಿಯಾಗಿದ್ದಾರೆ ಎಂದು ಮಾಧ್ಯಮವೊಂದು ವರದಿ ಮಾಡಿದೆ. ರಿಷಿ ಅವರು ಆಗಾಗ ಈ ದೇಗುಲಕ್ಕೆ ಭೇಟಿ ನೀಡುತ್ತಾರೆ.

ರಿಷಿ ಅಧಿಕಾರ ಸ್ವೀಕಾರ

ಒಂದನೇ ಪುಟದಿಂದ

ಕ್ಲಿಷ್ಟಕರವಾದ ಬಜೆಟ್ ಅನ್ನು ಮುಂದಿನ ದಿನಗಳಲ್ಲಿ ಮಂಡಿಸಬೇಕಾಗ ಬಹುದು ಎಂಬ ಎಚ್ಚರಿಕೆ ನೀಡಿದ ಅವರು, ಉಕ್ರೇನ್‌ಗೆ ನೀಡುತ್ತಿರುವ ಬೆಂಬಲ ನಿಲ್ಲದು ಎಂಬ ಭರವಸೆ ಕೊಟ್ಟರು.

‘ಟ್ರಸ್ ಅವರ ಅವಧಿಯಲ್ಲಿ ಭಾರಿ ನಷ್ಟಕ್ಕೆ ಕಾರಣವಾದ ಕಿರು-ಬಜೆಟ್‌ನ ಉದ್ದೇಶ ಒಳ್ಳೆಯದೇ ಇತ್ತು. ಪ್ರಗತಿಗೆ ಒತ್ತು ನೀಡುವ ಗುರಿಯನ್ನೂ ಅದು ಹೊಂದಿತ್ತು. ಆದರೆ, ತೆರಿಗೆ ಕಡಿತದ ನಿರ್ಧಾರವು ತಪ್ಪು ಆಗಿತ್ತು’ ಎಂದರು.

ಅವಧಿಗೆ ಮುನ್ನವೇ ಚುನಾವಣೆ ನಡೆಯಬೇಕು ಎಂಬ ಲೇಬರ್ ಪಕ್ಷದ ಬೇಡಿಕೆಯನ್ನು ರಿಷಿ ಅವರು ತಳ್ಳಿ ಹಾಕಿದ್ದಾರೆ. ಇಪ್ಸಾಸ್ ಎಂಬ ಸಮೀಕ್ಷಾ ಸಂಸ್ಥೆಯು ನಡೆಸಿದ ಸಮೀಕ್ಷೆಯು ಶೇ 62ರಷ್ಟು ಜನರು ಅವಧಿಪೂರ್ವ ಚುನಾವಣೆ ಬಯಸಿದ್ದಾರೆ ಎಂದಿದೆ.

ರಿಷಿ ಅವರ ಕನ್ಸರ್ವೇಟಿವ್ ಪಕ್ಷದಲ್ಲಿ ಬಿರುಕು ಮೂಡಿದೆ. ಒಳಜಗಳ ತೀವ್ರಗೊಂಡಿದೆ. ಹಾಗಾಗಿ, ಪಕ್ಷವನ್ನು ಸರಿದಾರಿಯಲ್ಲಿ ಒಯ್ಯುವ ಹೊಣೆಗಾರಿಕೆಯೂ ರಿಷಿ ಅವರ ಮುಂದಿದೆ

ಭಾರತಕ್ಕೆ ಅನುಕೂಲ?

ಭಾರತ ಮತ್ತು ಬ್ರಿಟನ್ ನಡುವಣ ಸಂಬಂಧವು ರಿಷಿ ಅವರ ಅವಧಿಯಲ್ಲಿ ಇನ್ನಷ್ಟು ಎತ್ತರಕ್ಕೆ ಏರಲಿದೆ ಎಂದು ಹೇಳಲಾಗಿದೆ.

‘ಭಾರತದಲ್ಲಿ ಅಪಾರ ಅವಕಾಶಗಳಿವೆ. ಈ ಸಜೀವ ಸೇತುವೆಯು ನಿಜವೇ ಆಗಬೇಕಿದ್ದರೆ ಬ್ರಿಟನ್‌ನ ಜನರು ಜಾಗತಿಕ ಮಟ್ಟದ ಸಂಸ್ಥೆಗಳಲ್ಲಿ ಕಲಿಯಲು ಮತ್ತು ಅದ್ಭುತವಾದ ನವೋದ್ಯಮಗಳಲ್ಲಿ ಕೆಲಸ ಮಾಡಲು ಭಾರತಕ್ಕೆ ಹೋಗುವುದನ್ನು ಸುಲಭಗೊಳಿಸಬೇಕು’ ಎಂದು ರಿಷಿ ಅವರು ಹಣಕಾಸು ಸಚಿವರಾಗಿದ್ದಾಗ ಹೇಳಿದ್ದರು.

ಆರೂವರೆ ಸಾವಿರ ಕೋಟಿ ಒಡೆಯ

ಬ್ರಿಟನ್ ನೂತನ ಪ್ರಧಾನಿ ರಿಷಿ ಸುನಕ್ ಅವರು ಸುಮಾರು ₹6,531 ಕೋಟಿ (700 ದಶಲಕ್ಷ ಪೌಂಡ್) ಮೊತ್ತದ ಆಸ್ತಿಯ ಒಡೆಯರಾಗಿದ್ದಾರೆ.

ಯಾರ್ಕ್‌ಶೈರ್‌ನಲ್ಲಿ ದೊಡ್ಡ ಬಂಗಲೆಯನ್ನು ಹೊಂದಿ ದ್ದಾರೆ. ಸುನಕ್ ಮತ್ತು ಅವರ ಪತ್ನಿ ಅಕ್ಷತಾ ಅವರು ಲಂಡನ್‌ನ ಕೇಂದ್ರ ಭಾಗದ ಕೆನ್‌ಸಿಂಗ್ಟನ್‌ನಲ್ಲೂ ಆಸ್ತಿಯನ್ನು ಹೊಂದಿದ್ದಾರೆ. ರಾಜಕಾರಣಕ್ಕೆ ಪ್ರವೇಶಿಸುವ ಮೊದಲು ಅವರು ಇನ್ವೆಸ್ಟ್‌ಮೆಂಟ್ ಬ್ಯಾಂಕರ್ ಆಗಿದ್ದರು.

ಹಳೆಯ ಪೋಡಿಯಂ ಬಳಸಿ ಭಾಷಣ

ಸುನಕ್ ಅವರು ಸಾರ್ವಜನಿಕರನ್ನು ಉದ್ದೇಶಿಸಿ ಭಾಷಣ ಮಾಡುವಾಗ ಈ ಹಿಂದಿನ ಆಡಳಿತದಲ್ಲಿ ಬಳಸಿದ್ದ ಪೋಡಿಯಂ ಅನ್ನೇ ಬಳಸಿದರು.

ನೂತನ ಪ್ರಧಾನಿಗಳು ಹೊಸ ಪೋಡಿಯಂ ಬಳಸಿಯೇ ಭಾಷಣ ಮಾಡುತ್ತಾರೆ. ಆದರೆ ಹೊಸ ಪೋಡಿಯಂ ವಿನ್ಯಾಸಕ್ಕೆ ಸಮಯ ಇರದ ಕಾರಣ ಹಳೆಯ ಪೋಡಿಯಂ ಬಳಸಿದರು.

ಶ್ವೇತ ಭವನದಲ್ಲಿ ದೀಪಾವಳಿ

ಅಮೆರಿಕದ ಶ್ವೇತಭವನದಲ್ಲಿ ಆಯೋಜಿಸಿದ್ದ ದೀಪಾವಳಿ ಸತ್ಕಾರಕೂಟದಲ್ಲಿ ಅಮೆರಿಕ ಅಧ್ಯಕ್ಷ ಜೋ ಬೈಡನ್ ದೀಪ ಬೆಳಗಿದರು. ಅಮೆರಿಕ ಪ್ರಥಮ ಮಹಿಳೆ ಜಿಲ್ ಬೈಡನ್ ಮತ್ತು ಅಮೆರಿಕ ಉಪಾಧ್ಯಕ್ಷೆ ಕಮಲಾ ಹ್ಯಾರಿಸ್ ಉಪಸ್ಥಿತರಿದ್ದರು. ದೀಪಾವಳಿಯನ್ನು ಅಮೆರಿಕ ಸಂಸ್ಕೃತಿಯ ಹರ್ಷದಾಯಕ ಭಾಗವಾಗಿಸಿದ್ದಕ್ಕೆ ಧನ್ಯವಾದಗಳು’ ಎಂದು ಬೈಡನ್ ಅವರು ಏಷ್ಯಾ-ಅಮೆರಿಕನ್ ಅತಿಥಿಗಳನ್ನು ಕುರಿತು ಹೇಳಿದರು. –ಪಿಟಿಐ ಚಿತ್ರ

ಕಾಂಗ್ರೆಸ್, ಬಿಜೆಪಿಯಲ್ಲಿ ಜಟಾಪಟಿ

ನವದೆಹಲಿ: ಭಾರತೀಯ ಮೂಲದ ರಿಷಿ ಸುನಕ್ ಬ್ರಿಟನ್ ಪ್ರಧಾನಿಯಾಗಿ ಆಯ್ಕೆಯಾಗಿರುವ ಸಂಬಂಧ ಬಿಜೆಪಿಯನ್ನು ಗುರಿಯಾಗಿಸಿ ‘ಉನ್ನತ ಸ್ಥಾನಕ್ಕೆ ಅಲ್ಪಸಂಖ್ಯಾತರನ್ನು ಆಯ್ಕೆ ಮಾಡಿರುವ ಬ್ರಿಟನ್‌ನಿಂದ ಭಾರತ ಮತ್ತುಬಹುಸಂಖ್ಯಾತವಾದದ ರಾಜಕಾರಣ ಪ್ರತಿಪಾದಿಸುವ ಪಕ್ಷಗಳು ಪಾಠ ಕಲಿಯಬೇಕು’ ಎಂದು ಕಾಂಗ್ರೆಸ್ ಹಿರಿಯ ನಾಯಕರಾದ ಪಿ.ಚಿದಂಬರಂ ಮತ್ತು ಶಶಿ ತರೂರ್ ನೀಡಿರುವ ಹೇಳಿಕೆಗಳಿಗೆ ಕಾಂಗ್ರೆಸ್ ಪಕ್ಷದಲ್ಲೇ ಆಕ್ಷೇಪ ವ್ಯಕ್ತವಾಗಿದೆ. ಜತೆಗೆ ಬಿಜೆಪಿ ಕೂಡ ಈ ಇಬ್ಬರ ಟ್ವಿಟರ್ ಹೇಳಿಕೆಗೆ ಮಂಗಳವಾರ ತಿರುಗೇಟು ನೀಡಿದೆ.

ಭಾರತದಲ್ಲಿ ಒಬ್ಬ ಸಿಖ್ ಮತ್ತು ಮೂವರು ಮುಸ್ಲಿಮರು ರಾಷ್ಟ್ರಪತಿಗ-ಳಾಗಿದ್ದಾರೆ. ಅಲ್ಲದೇ ಸಿಖ್‌ರೊಬ್ಬರು ಪ್ರ-ಧಾನಿಯಾಗಿದ್ದಾರೆ. ನ್ಯಾಯಾಂಗ ಮತ್ತು ಸಶಸ್ತ್ರ ಪಡೆಗಳ ಉನ್ನತ ಸ್ಥಾನಗಳನ್ನು ಅಲ್ಪಸಂಖ್ಯಾತರು ಅಲಂಕರಿಸಿದ್ದಾರೆ ಎಂದು ತಿರುಗೇಟು ನೀಡಿದೆ.

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್ ಅವರು ತಮ್ಮ ಪಕ್ಷದ ನಾಯಕರ ಹೇಳಿಕೆಗಳನ್ನು ಸಮರ್ಥಿಸಿಲ್ಲ. ಭಾರತವು ಇತರ ಯಾವುದೇ ರಾಷ್ಟ್ರಗಳಿಂದ ಪಾಠ ಕಲಿಯುವ ಅವಶ್ಯಕತೆಯೂ ಇಲ್ಲ ಎಂದು ಹೇಳಿದ್ದಾರೆ.

ಇದೇ ವೇಳೆ ಅವರು ‘ವಾಜಪೇಯಿ ಅವರ ಕಾಲಕ್ಕೂ ಮತ್ತು ಮೋದಿಯವರ ಕಾಲಕ್ಕೂ ವ್ಯತ್ಯಾಸವಿದೆ. ವಾಜಪೇಯಿ ಆಡಳಿತದಲ್ಲಿ ಕಲಾಂ ರಾಷ್ಟ್ರಪತಿಯಾ-ದರು. ವಾಜಪೇಯಿ ನೆಹರೂ ಕಾಲದ ಪ್ರಾಡಕ್ಟ್. ನೆಹರೂ ಚಿಂತನೆಗಳಿಂದ ವಾಜಪೇಯಿ ಪ್ರಭಾವಿತರಾಗಿದ್ದರು. ಮೋದಿ ಮಾತ್ರ ನೆಹರೂ ಪರಂಪರೆ ಹೇಗೆ ಅಳಿಸುವುದೆಂಬ ಒಂದು ವಿಷಯದಲ್ಲಿ ಮಾತ್ರ ನಿರತರಾಗಿದ್ದಾರೆ’ ಎಂದರು

ಸುದ್ದಿ 2 ನಿಮಿಷ

ಇರಾನ್‌ನಲ್ಲಿ ‘ವಿಶ್ವದ ಅತಿ ಕೊಳಕು ಮನುಷ್ಯ’ ಸಾವು

ಟೆಹರಾನ್ (ಇರಾನ್): ವಿಶ್ವದ ಅತಿ ಕೊಳಕು ಮನುಷ್ಯನೆಂದೇ ಕರೆಯಲಾಗುತ್ತಿದ್ದ ಇರಾನಿನ ಅಮೌ ಹಾಜಿ (94) ಸಾವಿಗೀಡಾಗಿದ್ದಾರೆ ಎಂದು ಮಾಧ್ಯಮಗಳು ಮಂಗಳವಾರ ವರದಿ ಮಾಡಿವೆ.

ಫಾರ್ಸ್‌ನ ದಕ್ಷಿಣ ಪ್ರಾಂತ್ಯದ ದೇಜ್‌ಗ ಗ್ರಾಮದಲ್ಲಿ ಇವರು ಮೃತಪಟ್ಟಿದ್ದಾರೆ.

ದಶಕಗಳಿಂದ ಸ್ನಾನ ಮಾಡದ ಕಾರಣ ‘ವಿಶ್ವದ ಅತಿ ಕೊಳಕು ಮನುಷ್ಯ’ ಎಂದೇ ಇವರು ಹೆಸರು ಪಡೆದಿದ್ದರು.

ರೋಗ ಬರುತ್ತದೆ ಎಂಬ ಹೆದರಿಕೆಯಿಂದ ಅಮೌ ಅವರು 50 ವರ್ಷಗಳಿಂದ ಸ್ನಾನ ಮಾಡುವುದನ್ನು ತಪ್ಪಿಸುತ್ತಿದ್ದರು ಎನ್ನಲಾಗಿದೆ. ಆದರೆ ಮೊದಲ ಬಾರಿಗೆ ಕೆಲವು ತಿಂಗಳ ಹಿಂದೆ ಗ್ರಾಮಸ್ಥರು ಸ್ನಾನಗೃಹಕ್ಕೆ ಕರೆದೊಯ್ದು ಸ್ನಾನ ಮಾಡಿಸಿದ್ದರು ಎಂದು ಇರ್ನಾ (ಐಆರ್‌ಎನ್‌ಎ) ವರದಿ ಮಾಡಿದೆ.

ಈ ವ್ಯಕ್ತಿಯ ಜೀವನ ಕುರಿತಂತೆ 2013ರಲ್ಲಿ ‘ಅಮೌ ಹಾಜಿಯ ವಿಚಿತ್ರ ಬದುಕು’ ಎಂಬ ಸಾಕ್ಷ್ಯಚಿತ್ರ ನಿರ್ಮಿಸಲಾಗಿತ್ತು ಎಂದು ಇರಾನ್‌ನ ಮಾಧ್ಯಮಗಳು ಹೇಳಿವೆ.

ನಾಳೆಯಿಂದ ಗೃಹ ಸಚಿವರ ಸಮ್ಮೇಳನ

ಬೆಂಗಳೂರು: ಇದೇ 27 ಮತ್ತು 28 ರಂದು ಹರಿಯಾಣದ ಸೂರಜ್‌ಕುಂಡ್‌ನಲ್ಲಿ ಅಖಿಲ ಭಾರತ ಗೃಹ ಸಚಿವರ ಸಮ್ಮೇಳನ ನಡೆಯಲಿದ್ದು, ರಾಜ್ಯದಲ್ಲಿ ಅಪರಾಧಗಳನ್ನು ಪತ್ತೆ ಹಚ್ಚಲು ಕೈಗೊಂಡಿರುವ ವೈಜ್ಞಾನಿಕ ಕ್ರಮಗಳು, ತನಿಖೆ ಕಾರ್ಯದಲ್ಲಿ ಆಧುನಿಕ ತಂತ್ರಜ್ಞಾನ ಅಳವಡಿಕೆ ವಿಷಯವನ್ನು ಅಧಿಕಾರಿಗಳು ಮಂಡಿಸಲಿದ್ದಾರೆ.

ಅಲ್ಲದೆ, ರಾಜ್ಯದಲ್ಲಿ ಶಾಂತಿ ಸುವ್ಯವಸ್ಥೆ, ಅಪರಾಧ ಚಟುವಟಿಕೆಗಳ ನಿಯಂತ್ರಣ, ಅಪರಾಧ ಪತ್ತೆ, ಸೈಬರ್ ಕ್ರೈಂ, ಆಧುನಿಕ ತಂತ್ರಜ್ಞಾನ-ಗಳ ಬಳಕೆ ಮುಂತಾದ ವಿಷಯಗಳ ಬಗ್ಗೆ ಮಾಹಿತಿ ನೀಡಲಾಗುವುದು. ದೇಶದಲ್ಲೇ ಮೊದಲ ಬಾರಿಗೆ ಅಪರಾಧ ಸ್ಥಳ ಪರಿವೀಕ್ಷಣಾ ಅಧಿಕಾರಿಗಳ ನೇಮಕ ಮಾಡಿಕೊಂಡಿರುವುದು, ವೈಜ್ಞಾನಿಕವಾಗಿ ಸಾಕ್ಷ್ಯ ಸಂಗ್ರಹ, ಸಾಕ್ಷ್ಯ ಸಂರಕ್ಷಣೆ ಮತ್ತು ನ್ಯಾಯಾಲಯಕ್ಕೆ ಸಲ್ಲಿಕೆ ಪ್ರಕ್ರಿಯೆ ನಡೆಸಲು ವಿಶೇಷ ತರಬೇತಿ ನೀಡಿರುವುದನ್ನು ಸಮ್ಮೇಳನದಲ್ಲಿ ವಿವರಿಸಲಾಗುತ್ತದೆ.

ಈ ಸಮ್ಮೇಳನದಲ್ಲಿ ರಾಜ್ಯದ ಗೃಹ ಸಚಿವ ಆರಗ ಜ್ಞಾನೇಂದ್ರ, ಗೃಹ ಇಲಾಖೆ ಹೆಚ್ಚುವರಿ ಮುಖ್ಯಕಾರ್ಯದರ್ಶಿ ರಜನೀಶ್ ಗೋಯಲ್, ಪೊಲೀಸ್ ಮಹಾನಿರ್ದೇಶಕ ಮುಖ್ಯಸ್ಥ ಪ್ರವೀಣ್ ಸೂದ್ ಭಾಗವಹಿಸಲಿದ್ದಾರೆ.

ಅಕ್ಷತಾ ಡಿವಿಡೆಂಡ್ ಆದಾಯ ₹ 126 ಕೋಟಿ

ನವದೆಹಲಿ (ಪಿಟಿಐ): ಬ್ರಿಟನ್ನಿನ ಪ್ರಧಾನಿಯಾಗಿ ಅಧಿಕಾರ ವಹಿಸಿಕೊಂಡಿರುವ ರಿಷಿ ಸುನಕ್ ಅವರ ಪತ್ನಿ ಅಕ್ಷತಾ ಮೂರ್ತಿ ಅವರು ಇನ್ಫೊಸಿಸ್ ಲಿಮಿಟೆಡ್‌ನಿಂದ ಪ್ರಸಕ್ತ ವರ್ಷದಲ್ಲಿ ಡಿವಿಡೆಂಡ್ ರೂಪದಲ್ಲಿ ₹ 126.61 ಕೋಟಿ ಆದಾಯ ಗಳಿಸಿದ್ದಾರೆ.

ಅಕ್ಷತಾ ಅವರು ದೇಶದ ಎರಡನೆಯ ಅತಿದೊಡ್ಡ ಐ.ಟಿ. ಸೇವಾ ಕಂಪನಿ ಇನ್ಫೊಸಿಸ್‌ನ ಸಂಸ್ಥಾಪಕ-ರಲ್ಲಿ ಒಬ್ಬರಾಗಿರುವ ಎನ್.ಆರ್. ನಾರಾಯಣಮೂರ್ತಿ ಅವರ ಮಗಳು. ಅಕ್ಷತಾ ಅವರು ಇನ್ಫೊಸಿಸ್ ಕಂಪನಿಯಲ್ಲಿ ಶೇಕಡ 0.93ರಷ್ಟು ಷೇರುಗಳನ್ನು ಹೊಂದಿದ್ದಾರೆ. ಅಂದರೆ ಅವರು ಒಟ್ಟು 3,89,57,096 ಷೇರುಗಳನ್ನು ಹೊಂದಿದ್ದಾರೆ.

ಮಂಗಳವಾರದ ವಹಿವಾಟಿನಲ್ಲಿ ಇನ್ಫೊಸಿಸ್ ಷೇರು ಮೌಲ್ಯವು ಮುಂಬೈ ಷೇರುಪೇಟೆಯಲ್ಲಿ ₹ 1,527.40ಕ್ಕೆ ತಲುಪಿದೆ. ಇದರ ಅನ್ವಯ ಅಕ್ಷತಾ ಅವರು ಹೊಂದಿರುವ ಷೇರುಗಳ ಒಟ್ಟು ಮೌಲ್ಯವು ₹ 5,956 ಕೋಟಿ ಆಗುತ್ತದೆ. ಇನ್ಫೊಸಿಸ್ ಕಂಪನಿಯು ಈ ವರ್ಷದ ಮೇ ತಿಂಗಳಲ್ಲಿ ಪ್ರತಿ ಷೇರಿಗೆ ₹ 16ರಷ್ಟು ಡಿವಿಡೆಂಡ್ ಪಾವತಿಸಿದೆ. ಹಾಲಿ ಹಣಕಾಸು ವರ್ಷಕ್ಕೆ ಮಧ್ಯಂತರ ಡಿವಿಡೆಂಡ್ ರೂಪದಲ್ಲಿ ಪ್ರತಿ ಷೇರಿಗೆ ₹ 16.5ರಷ್ಟನ್ನು ಕಂಪನಿ ನೀಡಲಿದೆ. ಅಂದರೆ, ಪ್ರತಿ ಷೇರಿಗೆ ಒಟ್ಟು ₹ 32.5ರಂತೆ ಅಕ್ಷತಾ ಅವರಿಗೆ ಒಟ್ಟು ₹ 126.61 ಕೋಟಿ ಸಿಗಲಿದೆ.

ದೇಶದಲ್ಲಿ ಅತ್ಯುತ್ತಮ ಪ್ರಮಾಣದಲ್ಲಿ ಡಿವಿಡೆಂಡ್ ನೀಡುವ ಕಂಪನಿಗಳಲ್ಲಿ ಇನ್ಫೊಸಿಸ್ ಕೂಡ ಒಂದು. ಕಂಪನಿಯು 2021ರಲ್ಲಿ ಪ್ರತಿ ಷೇರಿಗೆ ಒಟ್ಟು ₹ 30ರಷ್ಟು ಡಿವಿಡೆಂಡ್ ನೀಡಿತ್ತು. ಅಂದರೆ 2021ರಲ್ಲಿ ಅಕ್ಷತಾ ಅವರಿಗೆ ₹ 119.5 ಕೋಟಿ ಸಿಕ್ಕಿರಬಹುದು.

ಸುಯೆಲ್ಲಾಗೆ ಮತ್ತೆ ಒಲಿದ ಗೃಹ ಖಾತೆ

ಲಂಡನ್ (ಪಿಟಿಐ): ಬ್ರಿಟನ್ ವಲಸೆ ನೀತಿ ಸಂಬಂಧ ನಿರ್ಗಮಿತ ಪ್ರಧಾನಿ ಲಿಸ್ ಟ್ರಸ್ ಅವರ ನಿಲುವು ವಿರೋಧಿಸಿ ಗೃಹ ಕಾರ್ಯದರ್ಶಿ ಹುದ್ದೆಗೆ ರಾಜೀನಾಮೆ ನೀಡಿದ್ದ ಭಾರತೀಯ ಮೂಲದ ಸುಯೆಲ್ಲಾ ಬ್ರೇವರ್‌ಮನ್ ಅವರನ್ನು ನೂತನ ಪ್ರಧಾನಿ ರಿಷಿ ಸುನಕ್ ಅವರು ತಮ್ಮ ಸಂಪುಟದಲ್ಲಿ ಉಳಿಸಿಕೊಂಡಿದ್ದು, ಸುಯೆಲ್ಲಾ ಅವರನ್ನು ಗೃಹ ಕಾರ್ಯದರ್ಶಿಯಾಗಿ ಮುಂದುವರಿಸಿದ್ದಾರೆ.

ಸುನಕ್ ತಮ್ಮ ನಂಬಿಕಸ್ಥ ಜೇಮ್ಸ್ ಕ್ಲೆವರ್‌ಲಿ ಅವರನ್ನೂ ವಿದೇಶಾಂಗ ಕಾರ್ಯದರ್ಶಿಯಾಗಿ ಮತ್ತು ಬೆನ್ ವ್ಯಾಲೆಸ್ ಅವರನ್ನು ರಕ್ಷಣಾ ಕಾರ್ಯದರ್ಶಿಯಾಗಿ ಮುಂದುವರಿಸಿದ್ದಾರೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಭವಿಷ್ಯ
Astrology
“ಕೆಲಸಆದ ನಂತರ ಕಾಣಿಕೆ” ಎಲ್ಲಿಯೂ ಪರಿಹಾರವಾಗದ ಕಠಿಣ,ನಿಗೂಢ ಗುಪ್ತಸಮಸ್ಯೆಗಳಿಗೆ ಬ್ರಹ್ಮತಂತ್ರ ವಿದ್ಯೆಯಿಂದ, ಶ್ರೀರಾಘವೇಂದ್ರಶರ್ಮರವರಿಂದ 2ದಿನದಲ್ಲಿ ಗ್ಯಾರಂಟಿ ಪರಿಹಾರ. ಶ್ರೀಬಂಡೆಮಹಾಕಾಳಿ ದೇವಸ್ಥಾನದ ಪಕ್ಕದಲ್ಲಿ, ಗವೀಪುರಂ,ಗುಟ್ಟಹಳ್ಳಿ. ಬೆಂ.9620201188

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

ಉದ್ಯೋಗಾವಕಾಶ
Part-Time Jobs
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ 15,000-20,000/- ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 8884777502, 8884777503.

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ, ಮನೆಯಲ್ಲೆ ಕುಳಿತು,ಬುಕ್ ಬರೆಯುವ ಮೂಲಕ ತಿಂಗಳಿಗೆ 14,000-16,000/- ರವರೆಗೆ ಸಂಪಾದಿಸಿ.(ಕೊರಿಯರ್ ಇದೆ).8884686861, 8884686860.

Multiple Vacancy
WANTED SALES executives for Chalo Mobility. Interested candidates must speak Kannada. Please visit office no:77, Private bus stand near high school field, AVK college road, Davanagere between 10:30 AM- 01:00 PM during Monday- Saturday. Education: 10th Pass. Age: 18+. Salary: 17256 per month. Call: 9606818611

Accounts & Finance
ಎಂಎನ್ಸಿಗೆ ಅಕೌಂಟೆಂಟ್ಸ್, ರಿಸೆಪ್ಷನಿಸ್ಟ್, ಆಫೀಸ್ ಅಸಿಸ್ಟೆಂಟ್ಸ್, ಕಂಪ್ಯೂಟರ್ ಆಪರೇಟರ್ಸ್, ಕ್ಲಾರ್ಕ್ಸ್ ಟೆಲಿಕಾಲರ್ಸ್ ಫೀಲ್ಡರ್ಸ್/ ಸ್ಟೋರ್ಕೀಪರ್ಸ್ ಎಲೆಕ್ಟ್ರಿಷಿಯನ್ಸ್, ರಮ್ಯ: 7204367465/ 8050107101

General
ಉತ್ತಮ ಅನುಭವವುಳ್ಳ ಇಸ್ತ್ರಿ ಮಾಡುವ ಕೆಲಸಗಾರರು ಬೇಕಾಗಿದ್ದಾರೆ ಸಂಬಳ ದಿನಕ್ಕೆ 800/-ಹಾಗೂ ಆಫೀಸ್ ಹೆಲ್ಪರ್ಸ್ ಬೇಕಾಗಿದ್ದಾರೆ. ಕೆಲಸ ಬೆಳಿಗ್ಗೆ 9.30 ರಿಂದ ರಾತ್ರಿ 9.00. 18 ವರ್ಷದಿಂದ 40 ವರ್ಷದೊಳಗಿರಬೇಕು. ಜಯನಗರ, ಜೆ.ಪಿ.ನಗರ ಸುತ್ತಮುತ್ತಲಿನವರಿಗೆ ಆದ್ಯತೆ. (ಬೆಂಗಳೂರಿನವರಿಗೆ ಮಾತ್ರ ಕೆಲಸ) ಮೊಬೈಲ್: 9880266007, 9663668007

ಪ್ರವಾಸ
Travel
ಶ್ರೀರಾಜರಾಜೇಶ್ವರಿ ಟೂರ್ಸ್ 9739618243, 9743895346 10.11.2022 8 ದಿನಗಳ ದೆಹಲಿ, ಮಥುರ, ಬೃಂದಾವನ ಆಗ್ರಾ ವಾಘಾಗಡಿ ವೈಷ್ಣೋದೇವಿ, ಶಿವಕೋರಿ ಇತ್ಯಾದಿ.

ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್ 14.11.2022, ಗುಜರಾತ್,ದ್ವಾರಕ,ನಾಗನಾಥ್, ಸೋಮನಾಥ. 03.11.2022, ಕಾಶಿ,ಗಯಾ, ಬುದ್ಧಗಯಾ, ಪ್ರಯಾಗ್ ರಾಜ್, ಅಯೋಧ್ಯ: 9591017782, 9964527782

ಸುಸಜ್ಜಿತ ವ್ಯವಸ್ಥೆಗಳೊಂದಿಗೆ: 30.11.2022 18.01.2023 ರಿಂದ 8/11 ದಿನಗಳ ಗುಜರಾತ್,ರಾಜಸ್ಥಾನ್. 24.12.2022 ರಿಂದ 8 ದಿನಗಳ ಶಿಮ್ಲಾ,ಮನಾಲಿ. 24.12.2022 05.01.2023 ರಿಂದ 5 ದಿನಗಳ ದಕ್ಷಿಣ ಭಾರತ 08.01.2023 22.01.2023 ರಿಂದ 14 ದಿನಗಳ ಅಷ್ಟ ಜ್ಯೋತಿರ್ಲಿಂಗ 19.01.2023 06.02.2023 ರಿಂದ 8 ದಿನಗಳ ನೈಮಿಶಾರಣ್ಯ ಕಾಶಿ,ಗಯಾ ಪ್ರವಾಸಗಳು. 08.01.2023 22.01.2023 ರಿಂದ 5 ದಿನಗಳ ದುಬೈ,ಅಬುಧಾಬಿ. 18.01.2023 22.02.2023 ರಿಂದ 11 ದಿನಗಳ ಸಿಂಗಾಪುರ್,ಮಲೇಶಿಯಾ 16.01.2023 01.02.2023 ರಿಂದ 8 ದಿನಗಳ ವಿಯಟ್ನಂ ಕಾಂಬೋಡಿಯಾ ಪ್ರವಾಸಗಳಿಗೆ ಸಂಪರ್ಕಿಸಿ: ಆನಂದ್ ವಿಹಾರಿ ಬೆಂಗಳೂರು23. 8088887677 080-23385837

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ

ಕ್ಲಾಸಿಫೈಡ್ಸ್ ಜಾಹೀರಾತು ನೀಡಿಕೆಗಾಗಿ ಸಂಪರ್ಕಿಸಿರಿ: 98862 13331 / 98451 14560

ಪ್ರಜಾವಾಣಿ@75 ಅಮೃತ ಮಹೋತ್ಸವ

ಓದುಗರ ಪ್ರತಿಕ್ರಿಯೆಗಳು

ನಿಮ್ಮ ಅನಿಸಿಕೆಗಳನ್ನು pvat75@prajavani.co.in ಗೆ ಕಳುಹಿಸಿ ಪೂರ್ಣ ಪ್ರತಿಕ್ರಿಯೆಗಳನ್ನು prajavani.net ನಲ್ಲಿ ನೋಡಬಹುದು

‘ನಂಬಿಕೆ ಉಳಿಸಿಕೊಂಡಿದೆ..’

ಅಮೃತ ಮಹೋತ್ಸವ ವರ್ಷದಲ್ಲಿರುವ ‘ಪ್ರಜಾವಾಣಿ’ ಪತ್ರಿಕೆಯು ಮಾಧ್ಯಮ ಕ್ಷೇತ್ರದಲ್ಲಿ ಮೇರುಮಟ್ಟವನ್ನು ಕಾಯ್ದುಕೊಂಡಿದೆ. ಒಳ್ಳೆಯ ಸುದ್ದಿಗಳನ್ನು ಕೊಡುತ್ತಿದೆ. ‘ಪ್ರಜಾವಾಣಿ’ಯಲ್ಲಿ ಬಂದಿದೆ ಎಂದರೆ ಆ ಸುದ್ದಿ ಸತ್ಯ ಎಂಬ ನಂಬಿಕೆಯನ್ನು ಉಳಿಸಿಕೊಂಡಿದೆ. ಅನೇಕ ಬದಲಾವಣೆಗಳನ್ನು ತಂದಿದೆ. ಸರ್ಕಾರ ಮತ್ತು ಜನತೆಯ ನಡುವಿನ ಸೇತುವೆಯಾಗಿ ತನ್ನ ಕಾರ್ಯವನ್ನು ಬಹಳ ಪ್ರಭಾವಿಯಾಗಿ ನಿರ್ವಹಿಸಿದೆ. 75 ವರ್ಷದ ಅಮೃತ ಮಹೋತ್ಸವದ ಸಂದರ್ಭದಲ್ಲಿ ಅದರ ಎಲ್ಲ ಓದುಗರಿಗೆ, ಸಿಬ್ಬಂದಿಗೆ ಹಾಗೂ ಮಾಲೀಕರಿಗೆ ಶುಭಾಶಯಗಳು.

ಆರಗ ಜ್ಞಾನೇಂದ್ರ, ಗೃಹ ಸಚಿವರು, ಕರ್ನಾಟಕ ಸರ್ಕಾರ.

‘ನನ್ನನ್ನು ಬೆಳೆಸಿದ, ರೂಪಿಸಿದ ಪತ್ರಿಕೆ’

ನಾನು ‘ಪ್ರಜಾವಾಣಿ’ ಓದುಗನಾಗಲು ಕಾರಣ ನನ್ನ ತಾಯಿ ಲೂಸಿಬಾಯಿ. ಬಡತನ-ದಲ್ಲಿದ್ದರೂ ಪತ್ರಿಕೆಯನ್ನು ಕೊಂಡು ಮನೆಗೆ ತರುತ್ತಿದ್ದ ನನ್ನ ತಾಯಿ, ‘ಅದನ್ನು ಓದಿ ಚೆನ್ನಾಗಿ ಕಲಿ ಮಗನೆ’ ಎಂದು ಹೇಳುತ್ತಿದ್ದರು. ನರಸಿಂಹರಾ-ಜಪುರದ ಸರ್ಕಾರಿ ಶಾಲೆಯಲ್ಲಿ 6ನೇ ತರಗತಿಯಲ್ಲಿದ್ದಾಗ ಶಿಕ್ಷ-ಕರಾಗಿದ್ದ ಶ್ರೀಕಂಠಯ್ಯ ಅವರು ಪತ್ರಿಕೆಯ ಸುದ್ದಿ, ಶೀರ್ಷಿಕೆಗ-ಳನ್ನು ಬೆಳಗಿನ ಪ್ರಾರ್ಥನೆ ವೇಳೆ ಓದಲು ಹೇಳುತ್ತಿದ್ದರು. ಅದು ಹಾಗೆಯೇ ಪತ್ರಿಕೆ ಓದುವ ಅಭ್ಯಾಸವಾಗಿ ಬೆಳೆಯಿತು. ಪತ್ರಿಕೆ ಜತೆಗಿನ ನನ್ನ ನಂಟು ಕಳೆದ 62 ವರ್ಷಗಳಿಂದ ಮುಂದುವ-ರಿಯುತ್ತಿದೆ . ಛೂ ಬಾಣ, ಮೊದ್ದುಮಣಿ, ವಾಚಕರವಾಣಿ, ಸಂಪಾದಕೀಯಗಳು ನನಗೆ ಇಷ್ಟವಾಗುತ್ತಿದ್ದ ಅಂಕಣಗಳು. ಶಿಕ್ಷಣ ಇಲಾಖೆ ನಿರ್ದೇಶಕನಾಗಿ ನಿವೃತ್ತನಾ-ಗಿರುವ ನನಗೀಗ 76 ವರ್ಷ. ಮೆಚ್ಚಿನ ಪತ್ರಿಕೆ 75ನೇ ವರ್ಷಕ್ಕೆ ಕಾಲಿಟ್ಟಿರುವುದು ಸಂತಸ ತಂದಿದೆ. ನನ್ನನ್ನು ಬೆಳೆಸಿದ ಪತ್ರಿಕೆಗೆ ಅಭಿನಂದನೆಗಳು.

ಕೆ.ಜೋಸೆಫ್, ನಿವೃತ್ತ ಡಿಪಿಐ, ಬೆಂಗಳೂರು.

‘ಸಮತೋಲನದ ಪತ್ರಿಕೆ’

ನನ್ನ ಬೆಳವಣಿಗೆಯಲ್ಲಿ ಪ್ರಜಾವಾಣಿಯ ಪಾತ್ರ ಹಿರಿದು. ನನಗೆ ತಿಳಿವು ಮೂಡಿದಾಗಿನಿಂದ, ಅಂದರೆ ಐದನೆಯ ತರಗತಿಯಿಂದ ನಮ್ಮ ಮನೆಗೆ ಪ್ರಜಾವಾಣಿ ಬರುತ್ತಿತ್ತು. ತಂದೆ ಪ್ರತಿದಿನ ಪತ್ರಿಕೆ ಓದಿಸುತ್ತಿದ್ದರು. ಗಟ್ಟಿಯಾಗಿ ಓದಿ ಹೇಳಬೇಕಿತ್ತು. ಅಂದಿನಿಂದ ಆರಂಭವಾದ ಪ್ರಜಾವಾಣಿ ಜೊತಗಿನ ನನ್ನ ಪಯಣ ಇಲ್ಲಿನವರೆಗೂ ಸಾಗಿ ಬಂದಿದೆ. ಪ್ರತಿದಿನ ಓದಿದರೆ ಮನಸ್ಸಿಗೆ ಸಮಾಧಾನ. ಕೊರೊನಾ ಸಮಯದಲ್ಲಿ ಪತ್ರಿಕೆಗಳ ಮೂಲಕ ಸೋಂಕು ಹರಡುವುದು ಎಂದು ಸಾಹಿತಿಗಳು ಸೇರಿದಂತೆ ಅನೇಕರು ಪತ್ರಿಕೆ ತರಿಸುವುದನ್ನು ನಿಲ್ಲಿಸಿದ್ದರು. ಆ ಸಂದರ್ಭದಲ್ಲಿಯೂ ನಾವು ಪತ್ರಿಕೆ ತರಿಸುವುದು, ಓದುವುದನ್ನು ನಿಲ್ಲಿಸಲಿಲ್ಲ. ಪ್ರಜಾವಾಣಿಯಲ್ಲಿ ಪ್ರಕಟವಾಗುವ ರಾಜಕೀಯ, ಸಾಂಸ್ಕೃತಿಕ ವಿಷಯಗಳು, ವಿಶೇಷ ಲೇಖನಗಳು, ಸಂಗತ ಮತ್ತು ಸಂಪಾದಕೀಯ ಪುಟದ ಲೇಖನಗಳು ಮಹತ್ವವಾದವು. ಭೂಮಿಕಾ, ಕ್ರೀಡಾ, ಸಾಪ್ತಾಹಿಕ ಸೇರಿ ವಿಶೇಷ ಪುರವಣಿಗಳು ಚೆನ್ನಾಗಿ ಬರುತ್ತಿವೆ. ವಾಚಕರ ವಾಣಿ ಪತ್ರಗಳು ಓದುಗರ ಗಮನ ಸೆಳೆಯುತ್ತವೆ.

ಡಾ.ವಸುಂಧರಾ ಭೂಪತಿ, ಲೇಖಕಿ

‘ನಿಷ್ಪಕ್ಷ ನಿಲುವು, ಉತ್ತರದಾಯಿತ್ವ’

ನಮ್ಮ ಮನೆಯಲ್ಲಿ ಬೆಳಗಾಗುವುದೇ ‘ಪ್ರಜಾ-ವಾಣಿ’ಯೊಂದಿಗೆ. ಅನೇಕ ಪತ್ರಿಕೆಗಳಿದ್ದರೂ ಪ್ರಜಾವಾಣಿಯೇ ಮೊದಲ ಆಯ್ಕೆ. ಅದಕ್ಕಾಗಿ ಗಂಡ ಹೆಂಡತಿ ನಡುವೆ ಕಿತ್ತಾಟವಾಗುವುದು ಸರ್ವೇಸಾಮಾನ್ಯ.

ಸಾರ್ವಜನಿಕ ಮಹತ್ವದ ವಿಷಯಗಳನ್ನು ಸಮಯೋಚಿತವಾಗಿ ತಿಳಿಸುವುದು, ಪ್ರಭುತ್ವ ಹಾಗೂ ಜನರ ದೈನಂದಿನ ಅಗತ್ಯಗಳಿಗೆ ಸ್ಪಂದಿಸಬೇಕಾದ ಇಲಾಖೆಗಳ ಮೇಲೆ ಪರಿಣಾಮಕಾರಿಯಾಗಿ ವಾಚ್ ಡಾಗ್ ಪಾತ್ರ, ಕೇಂದ್ರ ಸರ್ಕಾರದ ಜಾಹಿರಾತುಗಳಿಂದ ವಂಚಿತರಾ-ಗಿದ್ದರೂ ಪ್ರಜಾವಾಣಿಯ ನಿರ್ದೇಶಕರೆಲ್ಲರ ಮನಃಪೂರ್ವಕ ಬೆಂಬಲದಿಂದ ಪತ್ರಿಕೆ ಸ್ವಂತಿಕೆ ರಕ್ಷಿಸಿಕೊಂಡಿರುವುದು ಮೆಚ್ಚುವಂತದ್ದು. ಸ್ಥಾಪಕ ಕೆ.ಎನ್. ಗುರುಸ್ವಾಮಿಯವರಿಂದ ಈವರೆಗೂ ನಿರ್ದೇಶಕರೆಲ್ಲರಿಗೂ ಪತ್ರಿಕಾ ಧರ್ಮದ ಪ್ರಮುಖ ಮೌಲ್ಯಗಳಾದ ವರದಿಗಳ ಸತ್ಯತೆ, ಪ್ರಾಮಾಣಿಕತೆ, ವೃತ್ತಿಪರ ಸ್ವಾತಂತ್ರ್ಯ, ನಿಷ್ಪಕ್ಷ ನಿಲುವು ಮತ್ತು ಓದುಗರಿಗೆ ಹಾಗೂ ಸಮಾಜಕ್ಕೆ ಉತ್ತರ-ದಾಯಿತ್ವ, ಈ ಎಲ್ಲದರ ಬಗ್ಗೆ ಇರುವ ಬದ್ಧತೆ ತೀರಾ ವಿರಳ. ಜೊತೆಗೆ ಅಲ್ಪಸಂ-ಖ್ಯಾತರು, ಮಹಿಳೆಯರ ಸಮಸ್ಯೆಗಳ ಮುಕ್ತ ಅಭಿವ್ಯಕ್ತಿ, ಪ್ರಸ್ತುತ ವಿಷಯಗಳ ಪರ, ವಿರೋಧಿ ಅಭಿಪ್ರಾಯಗಳಿಗೆ ಸಮಾನ ಅವಕಾಶ ಕಲ್ಪಿಸುವುದು ಪ್ರಜಾವಾಣಿಯ ಜನಪ್ರಿಯತೆಯ ಮುಖ್ಯ ಕಾರಣ.

ಪ್ರೊ.ಬಿ.ಕೆ.ಚಂದ್ರಶೇಖರ್, ಕಾಂಗ್ರೆಸ್ ಮುಖಂಡರು

ಷೇರುಪೇಟೆ ವಹಿವಾಟು



ಎನ್ಎಸ್ಇ ನಿಫ್ಟಿ

ಹಿಂದಿನ ಅಂತ್ಯ	17,730
ಇಂದಿನ ಅಂತ್ಯ	17,656
▼	74
ದಿನದ ಕನಿಷ್ಠ	17,811

ವಿನಿಮಯ ದರ

$ ಡಾಲರ್	82.81
£ ಪೌಂಡ್	93.42
€ ಯುರೊ	81.71
¥ ಯೆನ್ (100ಕ್ಕೆ)	55.8

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
59,543	17,656	₹52,242 (ಬೆಂಗಳೂರು)	₹59,100 (ಬೆಂಗಳೂರು)	82.81

ಎನ್ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹505
12 ಮೊಟ್ಟೆಗೆ	₹66

ಮೈಸೂರು

100 ಮೊಟ್ಟೆಗೆ	₹510

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1600
ಸೋಯಾ (ರಿಫೈನ್ಡ್)	₹1335
ಸೂರ್ಯಕಾಂತಿ (ರಿಫೈನ್ಡ್)	₹1565
ಪಾಮೋಲಿನ್	₹1000

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ) ₹400-630

ದ್ವಿತಳಿ (ಬಿ.ವಿ) ₹400-777

ಮುಸ್ಲಿಂ ಮೀಸಲಾತಿ ಶೇ 8ಕ್ಕೆ ಹೆಚ್ಚಿಸಲು ಒತ್ತಾಯ

ಬೆಂಗಳೂರು: ಸಾಮಾಜಿಕ, ಶೈಕ್ಷಣಿಕವಾಗಿ ಹಿಂದುಳಿದಿರುವ ಮುಸ್ಲಿಂ ಸಮುದಾಯದ ಮೀಸಲಾತಿಯನ್ನು ಈಗಿರುವ ಶೇ 4ರಿಂದ ಶೇ 8ಕ್ಕೆ ಹೆಚ್ಚಿಸಲು ಸರ್ಕಾರಕ್ಕೆ ಶಿಫಾರಸು ಮಾಡಬೇಕು ಎಂದು ಕರ್ನಾಟಕ ಮುಸ್ಲಿಂ ಯುನಿಟಿ ಸಂಘಟನೆ ಒತ್ತಾಯಿಸಿದೆ.

ಸಂಘಟನೆಯ ಸಂಚಾಲಕ ಜಬ್ಬಾರ್‌ಕಲ್ಬುರ್ಗಿ, ಪತ್ರಕರ್ತ ಬಿ.ಎಂ.ಹನೀಫ್ ನೇತೃತ್ವದ ನಿಯೋಗವು ಕರ್ನಾಟಕ ರಾಜ್ಯಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಜಯಪ್ರಕಾಶ ಹೆಗ್ಡೆ ಅವರನ್ನು ಭೇಟಿ ಮಾಡಿ ಈ ಕುರಿತ ಮನವಿ ಸಲ್ಲಿಸಿತು.

'ರಾಜ್ಯ ಸರ್ಕಾರ ಹಿಂದೆ ನೇಮಿಸಿದ ಹಿಂದುಳಿದ ವರ್ಗಗಳ ಎಲ್ಲ ಆಯೋಗಗಳೂ ಮುಸ್ಲಿಮರನ್ನು ತೀವ್ರ ಹಿಂದುಳಿದ ಸಮುದಾಯ ಎಂದು ಗುರುತಿಸಿವೆ. ಕಾಂತರಾಜು ಅಧ್ಯಕ್ಷತೆಯ ಆಯೋಗ ರಾಜ್ಯದಲ್ಲಿ ಮುಸ್ಲಿಮರ ಜನಸಂಖ್ಯೆ ಶೇ 16ರಷ್ಟಿದೆ ಎಂದು ಗುರುತಿಸಿದೆ. ಜನಸಂಖ್ಯೆ ಮತ್ತು ಹಿಂದುಳಿದಿರುವಿಕೆಗೆ ಅನುಗುಣವಾಗಿ 2 'ಬಿ' ಪ್ರವರ್ಗದ ಮೀಸಲಾತಿಯನ್ನು ಈಗ ನೀಡುತ್ತಿರುವ ಶೇ 4ರಿಂದ ಶೇ 8ಕ್ಕೆ ಹೆಚ್ಚಿಸಬೇಕಿದೆ. ಮುಸ್ಲಿಂ ಸಮುದಾಯದ ಸದ್ಯದ ಸ್ಥಿತಿಗತಿ ತಿಳಿದುಕೊಳ್ಳಲು ಪ್ರತ್ಯೇಕ ಸಮೀಕ್ಷೆಯನ್ನೂ ನಡೆಸಬೇಕು' ಎಂದು ನಿಯೋಗದ ಸದಸ್ಯರು ಕೋರಿದರು.

ಮನವಿ ಸ್ವೀಕರಿಸಿ ಮಾತನಾಡಿದ ಜಯಪ್ರಕಾಶ್ ಹೆಗ್ಡೆ, 'ನಾನು ಅಧ್ಯಕ್ಷರಾದ ಬಳಿಕ ಇದೇ ಮೊದಲ ಬಾರಿಗೆ ಮುಸ್ಲಿಂ ಸಮುದಾಯದ ನಿಯೋಗ ಅಧಿಕೃತವಾಗಿ ಮನವಿ ಸಲ್ಲಿಸಿದೆ. ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು' ಎಂದು ಭರವಸೆ ನೀಡಿದರು.

ಆಯೋಗದ ಸದಸ್ಯೆ ಶಾರದಾ ನಾಯಕ್, ಮುಸ್ಲಿಂ ಸಮುದಾಯದ ಮುಖಂಡರಾದ ರಿಯಾಜ್ ಮುಲ್ಲಾ, ಮೌಲಾನಾ ಮೊಹಮ್ಮದ್ ಯೂನುಸ್, ಎಂ.ಎಲ್.ಸರ್ಕಾವಸ್, ನಜೀರ್ ಹರ್ಕಾರಿ, ಅಲ್ತಾಫ್ ಕಲ್ಬುರ್ಗಿ, ಚಿಕ್ಕಮಗಳೂರಿನ ಕೆ.ಎ.ಇಮ್ದಾದ್ ಇದ್ದರು.

ತಳ್ಳುವ ಸರ್ಕಾರ ನಿಮ್ಮದು– ಸಿ.ಎಂಗೆ ಕುಟುಕು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹುದ್ದೆ ಮಾರಾಟದ ಸರ್ಕಾರ ಕೆಎಎಸ್ ಹುದ್ದೆಗಳಿಂದ ಹಿಡಿದು ಗ್ರೂಪ್ 'ಡಿ'ವರೆಗೂ ಹುದ್ದೆಗಳನ್ನು ಭರ್ತಿ ಮಾಡದೆ ಕುಳಿತಿರುವಾಗ ಆಡಳಿತ ಯಂತ್ರ ಕಾರ್ಯನಿರ್ವಹಿಸುವುದಾದರೂ ಹೇಗೆ' ಎಂದು ಕಾಂಗ್ರೆಸ್ ಪಕ್ಷದ ರಾಜ್ಯ ಘಟಕ ಪ್ರಶ್ನಿಸಿದೆ.

'ಪ್ರಜಾವಾಣಿ'ಯ ಅ. 24ರ ಸಂಚಿಕೆಯಲ್ಲಿ ಪ್ರಕಟಗೊಂಡ 'ಕೆಎಎಸ್ ಹುದ್ದೆ ಭರ್ತಿಗೆ ಗ್ರಹಣ' ವಿಶೇಷ ವರದಿಯನ್ನು ಟ್ಯಾಗ್ ಮಾಡಿ ಟ್ವೀಟ್ ಮಾಡಿರುವ ಕಾಂಗ್ರೆಸ್, 'ಸಚಿವ ಮಾಧುಸ್ವಾಮಿಯವರು ಹೇಳಿದಂತೆ ಮ್ಯಾನೇಜ್ ಮಾಡುತ್ತಿರುವ ತಳ್ಳುವ ಸರ್ಕಾರ ಅಲ್ಲವೇ ನಿಮ್ಮದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಪ್ರಶ್ನಿಸಿದೆ.

'ಡಬಲ್ ಎಂಜಿನ್ ತಳ್ಳುವ ಎಂಜಿನ್ ಆಗಿದೆಯಲ್ಲವೇ' ಎಂದೂ ಗೇಲಿ ಮಾಡಿದೆ.

ವಾಟ್ಸ್‌ಆ್ಯಪ್ ಸೇವೆ ಎರಡು ತಾಸು ಸ್ಥಗಿತ

ನವದೆಹಲಿ (ಪಿಟಿಐ): ವಾಟ್ಸ್‌ಆ್ಯಪ್ ಸೇವೆಗಳು ಮಂಗಳವಾರ ಸರಿಸುಮಾರು ಎರಡು ತಾಸಿನವರೆಗೆ ಲಭ್ಯವಿರಲಿಲ್ಲ. ಬಳಕೆದಾರರಿಗೆ ಸಂದೇಶ ಕಳುಹಿಸಲು ಹಾಗೂ ಸ್ವೀಕರಿಸಲು ಸಾಧ್ಯವಾಗಲಿಲ್ಲ. ಭಾರತ, ಬ್ರಿಟನ್ ಸೇರಿದಂತೆ ಹಲವೆಡೆ ಈ ರೀತಿ ಆಯಿತು.

ವಾಟ್ಸ್‌ಆ್ಯಪ್‌ನ ಮಾಲೀಕತ್ವ ಹೊಂದಿರುವ ಮೆಟಾ ಕಂಪನಿಯು ತಾಂತ್ರಿಕ ದೋಷವನ್ನು ಸರಿಪಡಿಸಿ, ಸೇವೆಗಳು ಲಭ್ಯವಾಗುವಂತೆ ಮಾಡಿತು. ಆದರೆ ಸೇವೆ ಅಲಭ್ಯವಾಗಿದ್ದಕ್ಕೆ ಕಾರಣ ಏನು ಎಂಬುದನ್ನು ಕಂಪನಿ ತಿಳಿಸಿಲ್ಲ.

ಲ್ಯಾಪ್‌ಟಾಪ್ ಹಾಗೂ ಡೆಸ್ಕ್‌ಟಾಪ್ ಮೂಲಕ ವಾಟ್ಸ್‌ಆ್ಯಪ್ ಬಳಸಲು ಅನುವು ಮಾಡಿಕೊಡುವ ವಾಟ್ಸ್‌ಆ್ಯಪ್ ವೆಬ್ ಆವೃತ್ತಿಯಲ್ಲಿ ಕೂಡ ಸೇವೆಗಳು ಲಭ್ಯವಿರಲಿಲ್ಲ. 'ತಾಂತ್ರಿಕ ತೊಂದರೆಯನ್ನು ಸರಿಪಡಿಸಲಾಗಿದೆ. ಅನಾನುಕೂಲಕ್ಕೆ ಕ್ಷಮೆ ಯಾಚಿಸುತ್ತೇವೆ' ಎಂದು ಮೆಟಾ ವಕ್ತಾರರು ತಿಳಿಸಿದ್ದಾರೆ.

ಡೌನ್‌ಡಿಟೆಕ್ಟರ್ ವೆಬ್‌ಸೈಟ್ ಮಾಹಿತಿ ಪ್ರಕಾರ ಮಂಗಳವಾರ ಮಧ್ಯಾಹ್ನ 12.47ರಿಂದ ಸೇವೆಗಳು ಲಭ್ಯವಾಗುತ್ತಿರಲಿಲ್ಲ. ಏಷ್ಯಾ, ಬ್ರಿಟನ್, ದಕ್ಷಿಣ ಆಫ್ರಿಕಾ ಮತ್ತು ಯುರೋಪಿನ ಹಲವೆಡೆ ಈ ಸಮಸ್ಯೆ ಎದುರಾಗಿತ್ತು. ಅಕ್ಟೋಬರ್ 5ರ ನಂತರ ಸೇವೆಗಳು ಇಷ್ಟು ವ್ಯಾಪಕವಾಗಿ ಸ್ಥಗಿತಗೊಂಡಿದ್ದು ಇದೇ ಮೊದಲು.

ಸ್ಪ್ರೈಟ್ ಈಗ ಬಿಲಿಯನ್ ಡಾಲರ್ ಬ್ರ್ಯಾಂಡ್

ನವದೆಹಲಿ (ಪಿಟಿಐ): ಭಾರತದ ಮಾರುಕಟ್ಟೆಯಲ್ಲಿ ಸ್ಪ್ರೈಟ್ ತಂಪು ಪಾನೀಯವು ಬಿಲಿಯನ್ ಡಾಲರ್ (₹ 8,243 ಕೋಟಿ) ಮೌಲ್ಯದ ಬ್ರ್ಯಾಂಡ್ ಆಗಿ ಬೆಳೆದಿದೆ ಎಂದು ಕೋಕಾ ಕೋಲಾ ಕಂಪನಿ ಮಂಗಳವಾರ ತಿಳಿಸಿದೆ.

ಥಮ್ಸ್‌ಅಪ್ ಬ್ರ್ಯಾಂಡ್ ಕೂಡ ಇಷ್ಟೇ ಮೌಲ್ಯವನ್ನು ಸಂಪಾದಿಸಿದೆ ಎಂದು ಕಂಪನಿಯು ಈ ವರ್ಷದ ಆರಂಭದಲ್ಲಿ ತಿಳಿಸಿತ್ತು. ಕೋಕಾ ಕೋಲಾ ಕಂಪನಿಗೆ ಭಾರತವು ಜಾಗತಿಕ ಮಟ್ಟದಲ್ಲಿ ಐದನೆಯ ಅತಿದೊಡ್ಡ ಮಾರುಕಟ್ಟೆ.

ಅಡಿಕೆ

ಬಂಟ್ವಾಳ

ಕೋಕ	12500-25000
ಹೊಸತು	27500-38000
ಹಳತು	48000-56000

ಚನ್ನಗಿರಿ

ರಾಶಿ	5500-50009

ಮುಂಬೈ ಧಾರಣೆ

ಶೇಂಗಾ

25-10-2022

ಜಾವಾ 70/80(ಹೊಸ)	11250-11300
ಜಾವಾ 80/90(ಹೊಸ)	10550-10700
ದಪ್ಪ ಮಧ್ಯಪ್ರದೇಶ(ಹೊಸ)	10200-10300
ದಪ್ಪ ಗುಜರಾತ್(ಹೊಸ)	10100-10800

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1610
ಒಂದು ವಾರದ ಡೆಲಿವರಿ	1605)
ಸೋಯಾ ಕಚ್ಚಾ	1265
ಪಾಮ್ ವಾರದ ಡೆಲಿವರಿ	998
ಸೂರ್ಯಕಾಂತಿ ಎಣ್ಣೆ ಕಚ್ಚಾ	1470

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ 50,350

ಬೆಳ್ಳಿ ಕೆ.ಜಿ 56,700

ಪ್ರಶ್ನೋತ್ತರ

ಪ್ರಮೋದ ಶ್ರೀಕಾಂತ ದೈತೋಟ

ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಪುರುಷೋತ್ತಮ ಭಟ್ ಪಿ., ಬೆಂಗಳೂರು

- **ಪ್ರಶ್ನೆ:** ನನ್ನ ಮಗ ಒಂದು ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದು ಹೊಸದೊಂದು ಕಂಪನಿ ಅದನ್ನು ಖರೀದಿಸುತ್ತಿದೆ. ಎಲ್ಲ ಉದ್ಯೋಗಿಗಳು ಹೊಸ ಕಂಪನಿಗೆ ವರ್ಗಾವಣೆಯಾಗುತ್ತಿದ್ದು, ಕಂಪನಿಯ ಉದ್ಯೋಗಿಗಳಿಗೆ ಕಾರ್ಪೊರೇಟ್ ಎನ್‌ಪಿಎಸ್ ಸೇರುವ ಅವಕಾಶ ಇದೆ. ಇದಕ್ಕೂ ತಾವಾಗಿಯೇ ಎನ್‌ಪಿಎಸ್‌ನಲ್ಲಿ ಹೂಡಿಕೆ ಮಾಡುವುದಕ್ಕೂ ಏನು ವ್ಯತ್ಯಾಸ? ಯಾವುದು ಲಾಭದಾಯಕ?

ಉತ್ತರ: ಯಾವುದೇ ವ್ಯಕ್ತಿ ತನ್ನ ವೃತ್ತಿ ಜೀವನದ ಬಳಿಕ ನಿವೃತ್ತಿ ಬದುಕು ಆರಂಭಿಸಬೇಕಿರುವುದು ಸಹಜ. ಇಂತಹ ಸಂದರ್ಭದಲ್ಲಿ ಬದುಕನ್ನು ಅರ್ಥಪೂರ್ಣವಾಗಿ ಸಾಗಿಸಲು ಒಂದಷ್ಟು ಮೊತ್ತ ಇದ್ದರೆ ಚೆನ್ನ. ಈ ಆಶಯದಿಂದ ಕೇಂದ್ರ ಸರ್ಕಾರವು ಇಪಿಎಫ್ ಯೋಜನೆಯಲ್ಲದೆ, ಕಾರ್ಪೊರೇಟ್ ಎನ್‌ಪಿಎಸ್ ಯೋಜನೆಯನ್ನೂ ಜಾರಿಗೆ ತಂದಿದೆ. ಇದರ ಅಡಿ, ಉದ್ಯೋಗಿಗಳ ಖಾತೆಯಲ್ಲಿ ಕಂಪನಿ ನಿಗದಿತ ಮೊತ್ತವನ್ನು ತೊಡಗಿಸುತ್ತದೆ. ಇಂತಹ ಪಾವತಿಗಳಿಗೆ, ಕಂಪನಿಗಳಿಗೆ ಮಾತ್ರವಲ್ಲದೆ, ಉದ್ಯೋಗಿಗಳಿಗೂ ತೆರಿಗೆ ಲಾಭವಿದೆ.

ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 80 ಸಿಸಿಡಿ(2) ಅಡಿ, ಯಾವುದೇ ಮೊತ್ತವನ್ನು ಕೇಂದ್ರ ಸರ್ಕಾರದ ಪಿಂಚಣಿ ಯೋಜನೆಯಲ್ಲಿ ಕಂಪನಿಯು ಉದ್ಯೋಗಿಗಳ ಖಾತೆಯಲ್ಲಿ ತೊಡಗಿಸಿದಾಗ ಆ ಮೊತ್ತಕ್ಕೆ ಆದಾಯ ತೆರಿಗೆ ವಿನಾಯಿತಿ ಸಿಗುತ್ತದೆ. ಈ ಯೋಜನೆಯ ಪ್ರಯೋಜನ ಸರ್ಕಾರಿ ಉದ್ಯೋಗಿಗಳಿಗಷ್ಟೇ ಅಲ್ಲದೆ ಖಾಸಗಿ ವಲಯದ ನೌಕರರಿಗೂ, ಇತರ ತೆರಿಗೆದಾರರಿಗೂ ಲಭ್ಯವಿದೆ. ಖಾಸಗಿ ಕಂಪನಿ ಉದ್ಯೋಗಿಗಳಾಗಿದ್ದರೆ, ಇಂತಹ ಯೋಜನೆಯಲ್ಲಿ ತೊಡಗಿಸಿಕೊಂಡಾಗ ಅವರ ಮೂಲ ವೇತನ ಹಾಗೂ ತುಟ್ಟಿ ಭತ್ಯೆಯ ಶೇಕಡಾ 10ರಷ್ಟು ಮೊತ್ತವನ್ನು ವಿನಾಯಿತಿಗೆ ಪರಿಗಣಿಸಲಾಗುತ್ತದೆ. ಇದಕ್ಕೆ ಯಾವುದೇ ಮಿತಿ ಇಲ್ಲ. ಮೂಲ ವೇತನ ಹಾಗೂ ತುಟ್ಟಿ ಭತ್ಯೆ ವರ್ಧಿಸಿದಂತೆ, ಗರಿಷ್ಠ ವಿನಾಯಿತಿ ಮೊತ್ತವೂ ಹೆಚ್ಚುತ್ತ ಹೋಗುತ್ತದೆ.

ಸ್ವಇಚ್ಛೆಯಿಂದ ಎನ್‌ಪಿಎಸ್ ಖಾತೆ ಆರಂಭಿಸಿದ ಹೂಡಿಕೆದಾರರು ತಮ್ಮ ಬ್ಯಾಂಕ್ ಖಾತೆಯಿಂದ ನೇರ ಪಾವತಿ ಮಾಡುತ್ತಾರೆ. ಕಾರ್ಪೊರೇಟ್ ಎನ್‌ಪಿಎಸ್ ಯೋಜನೆಯಲ್ಲಾದರೆ ಕಂಪನಿಯು ಪಿಂಚಣಿ ನಿಧಿ ವ್ಯವಸ್ಥಾಪಕ ಪಾಲುದಾರ ಸಂಸ್ಥೆಗಳೊಡನೆ ನೇರವಾಗಿ ವ್ಯವಹರಿಸುತ್ತದೆ. ಸ್ವಂತವಾಗಿ ಮಾಡಿದ್ದರೂ, ಕಾರ್ಪೊರೇಟ್ ಎನ್‌ಪಿಎಸ್ ಹೂಡಿಕೆ ಆಗಿದ್ದರೂ, ಹಣವು ತಮ್ಮ ಆಯ್ಕೆಗೆ ಅನುಗುಣವಾಗಿ ವಿನಿಯೋಗ ಆಗುತ್ತದೆ. ನಿಮ್ಮ ಖಾತೆಯನ್ನು ಸಕ್ರಿಯವಾಗಿ ನಿರ್ವಹಿಸಲು ನೀವು ಬಯಸಿದರೆ, ಸಕ್ರಿಯ ಆಯ್ಕೆ ವರ್ಗವನ್ನು ಆಯ್ಕೆ ಮಾಡಬಹುದು. ಇಲ್ಲಿ ವೃತ್ತಿಪರ ನಿಧಿ ವ್ಯವಸ್ಥಾಪಕರು ನೆರವಾಗುತ್ತಾರೆ. ಇದಕ್ಕಾಗಿ ಈಕ್ವಿಟಿ, ಕಾರ್ಪೊರೇಟ್ ಅಥವಾ ಸರ್ಕಾರಿ ಸಾಲಪತ್ರಗಳಲ್ಲಿ ಹಣ ಎಷ್ಟು ಹಂಚಿಕೆ ಮಾಡಬೇಕು ಎನ್ನುವುದನ್ನು ಮೊದಲೇ ನಿರ್ಧರಿಸಿ. ಈಕ್ವಿಟಿ ವಿಭಾಗದಲ್ಲಿ ಹೆಚ್ಚಿನ ಪಾಲನ್ನು ವರ್ಗೀಕರಿಸುವ ಮೂಲಕ ಉತ್ತಮ ಲಾಭವನ್ನು ಎನ್‌ಪಿಎಸ್ ಯೋಜನೆಯಲ್ಲಿ ಪಡೆಯಬಹುದು. ದೀರ್ಘಾವಧಿಯಲ್ಲಿ ಎನ್‌ಪಿಎಸ್ ವಾರ್ಷಿಕವಾಗಿ ಶೇ 9ರಿಂದ ಶೇ 11ರವರೆಗೆ ಲಾಭಾಂಶ ನೀಡಬಲ್ಲದು.

ಎಂ.ಷಡಕ್ಷರ ಸ್ವಾಮಿ, ಕನಕಪುರ

- **ಪ್ರಶ್ನೆ:** ನಾನು ಸರ್ಕಾರಿ ಪದವಿಪೂರ್ವ ಕಾಲೇಜಿನ ನಿವೃತ್ತ ಪ್ರಾಂಶುಪಾಲ. ನಿವೃತ್ತಿ ವೇತನ ಪಡೆಯುತ್ತಿದ್ದೇನೆ, ಆದಾಯ ತೆರಿಗೆ ಪಾವತಿಸುತ್ತಿದ್ದೇನೆ ಹಾಗೂ ತೆರಿಗೆ ವಿವರ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ನಾನು ನನ್ನ ತಂದೆಯವರಿಂದ ಬಂದ ಹೊಲವೊಂದನ್ನು ಮಾರಾಟ ಮಾಡಿದ್ದೇನೆ. ಮಾರಾಟದಿಂದ ಬಂದ ಹಣ ನನ್ನ ಬ್ಯಾಂಕ್ ಖಾತೆಗೆ ಜಮಾ ಆಗಿರುತ್ತದೆ. ನಾನು ಮುಂದಿನ ವರ್ಷ ವಾಸಕ್ಕೆ ಮನೆ ನಿರ್ಮಿಸಲು ಆ ಹಣ ಬಳಸುತ್ತೇನೆ. ಈ ಹಣವನ್ನು ತೆರಿಗೆ ಉಳಿಸುವ ದೃಷ್ಟಿಯಿಂದ 'ಕ್ಯಾಪಿಟಲ್ ಗೈನ್ಸ್ ಅಕೌಂಟ್ ಸ್ಕೀಂ'ನಲ್ಲಿ ಹೂಡಿಕೆ ಮಾಡಬೇಕು ಎಂದು ಲೆಕ್ಕಪರಿಶೋಧಕರು ಹೇಳಿರುತ್ತಾರೆ. ಈ ಬಗ್ಗೆ ಬ್ಯಾಂಕ್‌ನಲ್ಲಿ ವಿಚಾರಿಸಿದಾಗ ಸೂಕ್ತ ಮಾಹಿತಿ ದೊರೆಯಲಿಲ್ಲ. ಹೀಗಾಗಿ ತೆರಿಗೆ, ಹೂಡಿಕೆ, ಸಿಗಬಹುದಾದ ತೆರಿಗೆ ವಿನಾಯಿತಿ ಬಗ್ಗೆ ತಿಳಿಸಿಕೊಡಿ.

ಉತ್ತರ: ನೀವು ಯಾವುದೇ ಜಮೀನು ಮಾರಾಟ ಮಾಡಿದಾಗ ಬಂಡವಾಳ ಲಾಭ ತೆರಿಗೆ ಅನ್ವಯವಾಗುತ್ತದೆ. ಕೃಷಿ ಜಮೀನಿಗೆ ಕೆಲವೊಮ್ಮೆ ತೆರಿಗೆ ಅನ್ವಯಿಸದೆಯೂ ಇರಬಹುದು. ಇದನ್ನು ಮೊದಲು ಖಚಿತಪಡಿಸಿಕೊಳ್ಳಿ. ಬಂಡವಾಳ ಲಾಭ ಖಾತೆ ಯೋಜನೆ 1988ರ ಅಡಿಯಲ್ಲಿ ಖಾತೆ ತೆರೆಯಲು ನಿಗದಿತ ನಮೂನೆಯಲ್ಲಿ ಅರ್ಜಿಯನ್ನು ಬ್ಯಾಂಕಿಗೆ ಸಲ್ಲಿಸಬೇಕು. ಈ ಖಾತೆ ತೆರೆಯುವ ಸೌಲಭ್ಯ ಎಲ್ಲ ಬ್ಯಾಂಕ್‌ಗಳ ಶಾಖೆಗಳಲ್ಲಿ ಇಲ್ಲದಿರಬಹುದು. ಆದರೆ ನಿಮ್ಮ ಸಮೀಪದ ಯಾವುದೇ ದೊಡ್ಡ ಬ್ಯಾಂಕ್ ಶಾಖೆಗಳಲ್ಲಿ ಮತ್ತೆ ಈ ಬಗ್ಗೆ ವಿಚಾರಿಸಿ ಅಥವಾ ನಿಮ್ಮ ಅಗತ್ಯವನ್ನು ಬ್ಯಾಂಕಿನ ಗ್ರಾಹಕ ಸೇವಾ ಕೇಂದ್ರಕ್ಕೆ ಮನದಟ್ಟುಮಾಡಿಸಿ ಸೂಕ್ತ ಮಾಹಿತಿ ಪಡೆದುಕೊಳ್ಳಿ.

ತೆರಿಗೆ ವಿಚಾರ: ನೀವು ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 54 ಎಫ್ ಅಡಿ ವಿನಾಯಿತಿ ಪಡೆಯಬಹುದು. ಸೆಕ್ಷನ್ 139(1) ಅಡಿಯಲ್ಲಿ ಆದಾಯ ತೆರಿಗೆ ವಿವರ ಸಲ್ಲಿಸುವ ದಿನಾಂಕಕ್ಕೆ ಮುಂಚಿತವಾಗಿ ಅಥವಾ ಮಾರಾಟವಾದ 6 ತಿಂಗಳೊಳಗಾಗಿ, ಬಂದ ಮೊತ್ತವನ್ನು ಬಂಡವಾಳ ಲಾಭ ಯೋಜನೆ ಅಡಿಯಲ್ಲಿ ಠೇವಣಿ ಮಾಡುವ ಮೂಲಕ ವಿನಾಯಿತಿ ಪಡೆಯಬಹುದು. ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 54 ಎಫ್ ಅಡಿಯಲ್ಲಿ ವಿನಾಯಿತಿ ಪಡೆಯಲು, ಅರ್ಹ ಬಂಡವಾಳ ಆಸ್ತಿಗಳ ಮಾರಾಟದಿಂದ ಬರುವ ಆದಾಯವನ್ನು ಈ ಕೆಳಗಿನ ಯಾವುದೇ ವಿಧಾನಗಳಲ್ಲಿ ಬಳಸಬಹುದು - ಅ) ಮಾರಾಟದ ಮೊದಲು ಒಂದು ವರ್ಷದೊಳಗೆ ಹೊಸ ಮನೆಯನ್ನು ಖರೀದಿಸುವುದು ಆ) ಮಾರಾಟದ ನಂತರ ಎರಡು ವರ್ಷಗಳಲ್ಲಿ ಹೊಸ ಮನೆಯನ್ನು ಖರೀದಿಸುವುದು ಇ) ಮಾರಾಟದ ನಂತರ ಮೂರು ವರ್ಷಗಳಲ್ಲಿ ಹೊಸ ಮನೆಯನ್ನು ನಿರ್ಮಿಸುವುದು.

ನೀವು ಮೂರು ವರ್ಷಗಳೊಳಗೆ, ಖಾತೆಯಲ್ಲಿ ಇರಿಸಿದ ಹಣವನ್ನು ಮನೆ ನಿರ್ಮಿಸಲು ಉಪಯೋಗಿಸಿಕೊಳ್ಳಿ. ನಿಮ್ಮ ನಿರ್ಮಾಣದ ಖರ್ಚನ್ನು ನೇರವಾಗಿ ಗುತ್ತಿಗೆದಾರನ ಖಾತೆಗೆ ಜಮಾ ಮಾಡುವ ಅಗತ್ಯ ಕರಾರನ್ನೂ ಮಾಡಿಕೊಳ್ಳಿ. ಅದರಲ್ಲಿ ನಿಮ್ಮ ಮನೆ ನಿರ್ಮಾಣದ ಮೊತ್ತವನ್ನು ಸಮರ್ಪಕವಾಗಿ ದಾಖಲಿಸಿ. ಕೊಟ್ಟ ಹಣವನ್ನು ಬ್ಯಾಂಕ್ ಖಾತೆಯ ಮೂಲಕವೇ ಜಮಾ ಮಾಡಿ. ನೀವು ಈ ಖಾತೆಯನ್ನು ಮುಚ್ಚುವ ಸಂದರ್ಭದಲ್ಲಿ, ಆದಾಯ ತೆರಿಗೆ ಇಲಾಖೆಯಿಂದ ನಿರಾಕ್ಷೇಪಣಾ ಪತ್ರವನ್ನು ಬ್ಯಾಂಕಿಗೆ ನೀಡಬೇಕಾಗುತ್ತದೆ. ಇದಕ್ಕೆ ಪೂರಕವಾಗಿ ವೆಚ್ಚ, ಪಾವತಿ ದಾಖಲೆಗಳನ್ನು ಇಟ್ಟುಕೊಳ್ಳಿ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ. ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001 ಇ-ಮೇಲ್: businessdesk@prajavani.co.in

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಬ್ರಿಟ್ನಿ ಗ್ರೀನರ್ ಮನವಿ ತಿರಸ್ಕಾರ

ಕ್ರಾಸ್ನೊಗೊಸ್ಕ್, ರಷ್ಯಾ (ಎಎಫ್‌ಪಿ): ಜೈಲುಶಿಕ್ಷೆಯನ್ನು ಕಡಿತಗೊಳಿಸುವಂತೆ ರಷ್ಯಾ ಮಹಿಳಾ ಬ್ಯಾಸ್ಕೆಟ್‌ಬಾಲ್ ತಾರೆ ಬ್ರಿಟ್ನಿ ಗ್ರೀನರ್ ಸಲ್ಲಿಸಿದ್ದ ಮನವಿಯನ್ನು ರಷ್ಯಾದ ನ್ಯಾಯಾಲಯ ತಳ್ಳಿ ಹಾಕಿದೆ.

ಮಾದಕವಸ್ತು ಸಾಗಿಸುತ್ತಿದ್ದ ಆರೋಪದ ಮೇಲೆ ಬ್ರಿಟ್ನಿ ಅವರಿಗೆ ಒಂಬತ್ತು ವರ್ಷಗಳ ಜೈಲು ಶಿಕ್ಷೆ ವಿಧಿಸಲಾಗಿದೆ. ಈ 'ಆಘಾತಕಾರಿ' ಶಿಕ್ಷೆಯ ಅವಧಿಯನ್ನು ಕಡಿಮೆ ಮಾಡುವಂತೆ ಬ್ರಿಟ್ನಿ ಮನವಿ ಮಾಡಿದ್ದರು.

ಈ ವರ್ಷದ ಫೆಬ್ರುವರಿಯಲ್ಲಿ ಗಾಂಜಾ ಸೇರಿದಂತೆ ಮಾದಕವಸ್ತು ಸಾಗಿಸುತ್ತಿದ್ದ 32 ವರ್ಷದ ಬ್ರಿಟ್ನಿ ಅವರನ್ನು ಮಾಸ್ಕೊ ವಿಮಾನ-ನಿಲ್ದಾಣದಲ್ಲಿ ಬಂಧಿಸಲಾಗಿತ್ತು. ಆಗಸ್ಟ್‌ನಲ್ಲಿ ಶಿಕ್ಷೆಯ ಅವಧಿಯನ್ನು ಪ್ರಕಟಿಸಲಾಗಿತ್ತು. ಆಗ ಪ್ರಕಟಿಸಿರುವ ತೀರ್ಪಿನಲ್ಲಿ ಯಾವುದೇ ಬದಲಾವಣೆ ಮಾಡುವುದಿಲ್ಲ ಎಂದು ಕೋರ್ಟ್ ಹೇಳಿದೆ.

National Health Mission
Karnataka Health & Family Welfare Society
1st Floor, DH&FW Services, Arogya Soudha, Bengaluru – 560 023
Landline No: 080-25113588

No: NHM/SPMU/HR/Recruitment-State/Notification/42/2019-20 Date: 25.10.2022

Walk-in Interview for the post of Consultants for RBSK and CPHC-UHC under NHM

The Karnataka State Health & Family Welfare Society invites eligible candidates for Walk-in Interview for the post of **RBSK Consultant and CPHC-UHC Consultant** under National Health Mission. **The post is temporary and purely on contract basis.** Eligible candidates can walk-in with their updated Application along with original documents and one set of Xerox. **The document verification for the below post is from 10.00 AM**, only Eligible Candidates will be allowed to attend the Interview. Interview for this post will be on **02/11/2022 at 11.00 AM onwards**. Venue for the walk-in interview is National Health Mission, Directorate of Health and Family Welfare, 1st Floor, West Wing, Arogya Soudha, Bengaluru. The format of the application can be downloaded from the department website i.e **karunadu.karnataka.gov.in/hfw**

Sl. No.	Designation	No. of Posts
1	Consultants for RBSK	2
2	Consultant CPHC-UHC	1

Sd/- Chief Administrative Officer
National Health Mission
DIPR/CP/BCPL/2784/2022-23

ಲೋಕೋಪಯೋಗಿ ಇಲಾಖೆ ವಿಭಾಗ ಮಧುಗಿರಿ
ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಮಧುಗಿರಿ
ಸಂಖ್ಯೆ:ಕಾಇಂ/ಲೋಇವಿ/ಮಧು:ಸಇಂ–2/ಟೆಂಡರ್/2022–23 ದಿ: 19.10.2022

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ:34/2022–23 (ಇ–ಪ್ರೊಕ್ಯೂರ್‌ಮೆಂಟ್) ದ್ವಿ ಲಕೋಟೆ ಟೆಂಡರ್

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಐಟಂವಾರು ಟೆಂಡರ್‌ಗಳನ್ನು KW-4 (ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್) ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು KTPP Act 1999 and KTPP Rule 2000 ರಲ್ಲಿ ಅರ್ಹ (ಸಿವಿಲ್) ಗುತ್ತಿಗೆದಾರರುಗಳಿಂದ ಲೋಕೋಪಯೋಗಿ ಇಲಾಖೆ, ಕೊರಟಗೆರೆ, ಉಪ–ವಿಭಾಗ ವ್ಯಾಪ್ತಿಯಲ್ಲಿನ ಕಾಮಗಾರಿಗಳಿಗೆ ಟೆಂಡರ್‌ನ್ನು ಇ–ಪ್ರಕ್ಯೂರ್‌ಮೆಂಟ್ ಮೂಲಕ ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗೆ www.eproc.karnataka.gov.in ಹಾಗೂ ಕೆಳ ಸಹಿದಾರರ ಕಛೇರಿ ಕೆಲಸ ವೇಳೆಯಲ್ಲಿ ಪಡೆಯಬಹುದಾಗಿದೆ. ದೂರವಾಣಿ ಸಂ: 08137– 283336.

ಟೆಂಡರ್‌ಗಿಟ್ಟ ಸರಿಸುಮಾರು ಮೊಬಲಗು ರೂ.300.00 ಲಕ್ಷ ಗಳವರೆಗೆ. ಇ ಪ್ರಕ್ಯೂರ್‌ಮೆಂಟ್ ಮೂಲಕ ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ: **04.11.2022** ಸಂಜೆ 4.00 ಗಂಟೆಯವರೆಗೆ. ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **05.11.2022** ರ ಸಂಜೆ 4.00 ಗಂಟೆ ನಂತರ. ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **09.11.2022** ರ ಸಂಜೆ 4.00 ಗಂಟೆ ನಂತರ. ವಿಚಾರಣೆ: ಸ್ಪಷ್ಟೀಕರಣಕ್ಕೆ ಕೊನೆಯ ದಿನಾಂಕ: **02.11.2022** ಸಂಜೆ 4.00 ಗಂಟೆಗೆ ವರೆಗೆ

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಲೋಕೋಪಯೋಗಿ ಇಲಾಖೆ ವಿಭಾಗ, ಮಧುಗಿರಿ.
DIPR/TUM/623/MCA/2022-23

ಜಲ ಸಂಪನ್ಮೂಲ ಇಲಾಖೆ
ಜಲ ಮತ್ತು ನೆಲ ನಿರ್ವಹಣೆ ಸಂಸ್ಥೆ (ವಾಲ್ಮಿ)
ಬೇಲೂರು ಕೈಗಾರಿಕಾ ವಸಾಹತು, ಧಾರವಾಡ – 580011. ಫೋನ: 0836–2486893/889
ಮೋ: 9448386889 ಈ–ಮೇಲ್: directorwalmidharwad@gmail.com

ಅಲ್ಪಾವಧಿ ಟೆಂಡರ ಪ್ರಕಟಣೆ (ವಿದ್ಯುನ್ಮಾನ ಸಂಗ್ರಹಣಾ ವೇದಿಕೆ ಮೂಲಕ)

ನಿರ್ದೇಶಕರು, ಜಲ ಮತ್ತು ನೆಲ ನಿರ್ವಹಣೆ ಸಂಸ್ಥೆ, ಬೇಲೂರು ಕೈಗಾರಿಕಾ ವಸಾಹತು, ಧಾರವಾಡ– 580011 ಕಚೇರಿ ಅಡಿಯಲ್ಲಿ ಕೆಳಗಿನ ಕಾಮಗಾರಿಗೆ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಪ್ರತಿಶತ ದರದ ಟೆಂಡರನ್ನು ವಿದ್ಯುನ್ಮಾನ ಸಂಗ್ರಹಣಾ ವೇದಿಕೆ ಮುಖಾಂತರ ಆಹ್ವಾನಿಸಲಾಗಿದೆ.

Name of Work	Estimate Amt Rs. in Lakhs	EMD Rs.	Stipulated period of Completion	Category / Class of Contractors
Improvements to 3/5, 4/5 blocks of Type-6 Buildings, Strengthening and improvements to existing CC compound wall & Improvements to office toilet blocks in WALMI, Dharwad	49.89	85,000/-	4 Months including Monsoon	Class-III and above (KPWD)

ವಿದ್ಯುನ್ಮಾನ ಸಂಗ್ರಹಣಾ ವೇದಿಕೆ ಮುಖಾಂತರ ನಿಗದಿತ ಇ.ಎಮ್.ಡಿ ಶುಲ್ಕದೊಂದಿಗೆ **www.eproc.karnataka.gov.in** ಪೋರ್ಟಲ್‌ನಲ್ಲಿ, ಅರ್ಜಿಯನ್ನು ದಿನಾಂಕ: **20–10–2022 ರಿಂದ 29–10–2022** ರವರೆಗೆ ಡೌನಲೋಡ ಮಾಡಿಕೊಳ್ಳಬಹುದು. ಭರ್ತಿ ಮಾಡಿದ ಟೆಂಡರಗಳನ್ನು ಸಲ್ಲಿಸುವ ಕೊನೆಯ ದಿನಾಂಕ: **29–10–2022 ರಂದು ಸಂಜೆ 5.30 ಗಂಟೆಯ ವರೆಗೆ.** ಬಿಡ್ ತೆರೆಯುವ ದಿನಾಂಕ: **31–10–2022 ರ ಬೆಳಿಗ್ಗೆ 11.00 ಗಂಟೆಯ ನಂತರ.** ಇ.ಎಂ.ಡಿ. ವಿವರ, ಪೂರ್ವಾರ್ಹತೆ ಷರತ್ತುಗಳು, ಟೆಂಡರ ಷರತ್ತುಗಳು ಹಾಗೂ ಇತರೆ ವಿವರಗಳನ್ನು ವಿದ್ಯುನ್ಮಾನ ಸಂಗ್ರಹಣಾ ವೇದಿಕೆ ಮುಖಾಂತರ **(www.eproc.karnataka.gov.in)** ಪಡೆಯಬಹುದು. ಹೆಚ್ಚಿನ ಮಾಹಿತಿಗಾಗಿ **ಈ ಕಚೇರಿ ದೂರವಾಣಿ ಸಂಖ್ಯೆ 0836–2486889 ಸಂಪರ್ಕಿಸುವದು.** ಟೆಂಡರ್ ಪ್ರಕಟಣೆಯಲ್ಲಿ ಯಾವುದೇ ತಿದ್ದುಪಡಿ ಅಥವಾ ಮಾರ್ಪಾಡುಗಳಾದಲ್ಲಿ ವಿದ್ಯುನ್ಮಾನ ಸಂಗ್ರಹಣಾ ವೇದಿಕೆ ಮೂಲಕ ಮಾತ್ರ ಪ್ರಕಟಿಸಲಾಗುವುದು.

ನಿರ್ದೇಶಕರು,
ಜಲ ಮತ್ತು ನೆಲ ನಿರ್ವಹಣೆ ಸಂಸ್ಥೆ.
ಬೇಲೂರು ಕೈಗಾರಿಕಾ ವಸಾಹತು, ಧಾರವಾಡ
ಹಿಸನಿಕ/ವಾಸಾಸಂಇ/ಧಾ/ದಿಶಾ/697/2022–23

ಕರ್ನಾಟಕ ಸರ್ಕಾರ
ಜಿಲ್ಲಾಧಿಕಾರಿಗಳ ಕಾರ್ಯಾಲಯ, ಜಿಲ್ಲಾ ನಗರಾಭಿವೃದ್ಧಿ ಕೋಶ ಕೊಪ್ಪಳ. ಕಛೇರಿ ದೂರವಾಣಿ : 08539–221895
ಫ್ಯಾಕ್ಸ್ ನಂ.:08539–221235 e-mail : itstaff_dudc_koppal@yahoo.com
ಕಂ.ಸಂ: 83179/(KOP-DC-11/57/2022-PD(DUDC)_KOPDC-KOPPAL DC) ದಿನಾಂಕ : 20–10–2022

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್)

ನೋಂದಾಯಿಸಲ್ಪಟ್ಟ ಎಲೆಕ್ಟ್ರಿಕಲ್ ಗುತ್ತಿಗೆದಾರರಿಂದ ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ (ಮುನಿಸಿಪಾಲಿಟಿ) ಹಂತ–4ರ ಯೋಜನೆಯಡಿ ಕೊಪ್ಪಳ ಜಿಲ್ಲೆಯ ನಗರಸಭೆ ಕೊಪ್ಪಳ ನಗರ ಸ್ಥಳೀಯ ಸಂಸ್ಥೆಯ ವ್ಯಾಪ್ತಿಯ ಕಾಮಗಾರಿಗಳ ಕುರಿತು ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಸ್ಟ್ಯಾಂಡರ್ಡ್ ಟೆಂಡರ್ ಡಾಕುಮೆಂಟ್ ಅನ್ವಯ ಟೆಂಡರ್‌ಗಳನ್ನು ಕರೆಯಲಾಗಿದೆ. ಇಚ್ಛೆವುಳ್ಳ ಗುತ್ತಿಗೆದಾರರು ತಮ್ಮ ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಆನ್‌ಲೈನ್ ಮೂಲಕ ವೆಬ್‌ಸೈಟ್ www.eproc.karnataka.gov.inನಲ್ಲಿ ಸಂಪರ್ಕಿಸಬಹುದಾಗಿದೆ.

Brief Description: CMC Koppal Indent No: DMA/2022-23/EL/WORK_INDENT139989. **Approximate value of work (Rs. In Lakhs):** 400.00. **EMD (in Lakhs):** 6.00. **Period of Completion (Months):** 9.

ಟೆಂಡರ್ ಫಾರಂ ಪಡೆಯುವ ದಿನಾಂಕ (ಆನ್‌ಲೈನ್ ಮೂಲಕ): **21–10–2022 ಬೆಳಿಗ್ಗೆ 10.00ಗಂಟೆಯ** ನಂತರ. ಟೆಂಡರ್ ಪೂರ್ವಭಾವಿ ಸಭೆ ದಿನಾಂಕ: **27–10–2022 ಬೆಳಿಗ್ಗೆ 10:30 ಗಂಟೆಗೆ.** ಟೆಂಡರ್ ಪ್ರಶ್ನೆಗಳಿಗಾಗಿ ದಿನಾಂಕ: **27–10–2022 ಸಂಜೆ 5:30 ಗಂಟೆಗೆ.** ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **21–11–2022 ಸಂಜೆ 5:30 ಗಂಟೆಗೆ.** ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **23–11–2022 ಬೆಳಿಗ್ಗೆ 10:00 ಗಂಟೆಗೆ.**

ಸಹಿ/–ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಕೊಪ್ಪಳ ಜಿಲ್ಲೆ.
ಡಿಐಪಿಆರ್/ಕೊಪ್ಪಳ/397/ಎಂಸಿಎ/2022–23

ಕರ್ನಾಟಕ ಸರಕಾರ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಚೇರಿ ಆವರಣ, ಹಾವೇರಿ ಜಿಲ್ಲೆ
Ph : 08375-297218 Email : ncdhaveri@gmail.com
No:DHOHVR/CPHC-UHC/CHO Recruitment/01/2022-23 ದಿ:25-10-2022

ಪ್ರಕಟಣೆ

ಗುತ್ತಿಗೆ ಆಧಾರದ ಮೇಲೆ ಸಮುದಾಯ ಆರೋಗ್ಯ ಅಧಿಕಾರಿಗಳ (ಸಿ.ಹೆಚ್.ಓ) ಹುದ್ದೆಯ ನೇಮಕಾತಿಗಾಗಿ ಅರ್ಜಿ ಆಹ್ವಾನ

ರಾಷ್ಟ್ರೀಯ ಆರೋಗ್ಯ ಅಭಿಯಾನದಡಿಯಲ್ಲಿ, ಹಾವೇರಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ, ಆನ್‌ಲೈನ್ ಮೂಲಕ **04** ಸಮುದಾಯ ಆರೋಗ್ಯ ಅಧಿಕಾರಿಗಳ (ಸಿ.ಹೆಚ್.ಓ) ಹುದ್ದೆಗಳಿಗೆ ಗುತ್ತಿಗೆ ಆಧಾರದ ಮೇಲೆ ನೇಮಕಾತಿಗಾಗಿ ಆನ್‌ಲೈನ್ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, ಬಿ.ಎಸ್ ಸಿ ಮತ್ತು ಪೋಸ್ಟ್ ಬಿ.ಎಸ್ ಸಿ ವಿದ್ಯಾರ್ಹತೆ ಹೊಂದಿರುವ ಇಚ್ಛೆಯುಳ್ಳ ಅಭ್ಯರ್ಥಿಗಳು ಅರ್ಜಿಯನ್ನು ಸಲ್ಲಿಸಬಹುದಾಗಿದೆ.

ಮಾಸಿಕ ಸಂಭಾವನೆ : ರೂ. **24,200/–** ಹೆಚ್ಚಿನ ಆದ್ಯತೆವುಳ್ಳ ಜಿಲ್ಲೆಗಳು ಹಾಗೂ ರೂ. **22000/–** ಆದ್ಯತೆ ಹೊರತುಪಡಿಸಿದ ಇತರೆ ಜಿಲ್ಲೆಗಳಲ್ಲಿ ನೇಮಕಾತಿ ಬಯಸುವವರಿಗೆ ನೀಡಲಾಗುವುದು. ಜೊತೆಗೆ ಹೆಚ್ಚುವರಿಯಾಗಿ ಕಾರ್ಯಕ್ಷಮತೆ ಆಧಾರಿತ ಪ್ರೋತ್ಸಾಹ ಧನ ರೂ. **8000/–** ವರೆಗೆ ನೀಡಲಾಗುವುದು.

ಅರ್ಜಿಯನ್ನುಕೇವಲ ಆನ್‌ಲೈನ್ ಮುಖಾಂತರ ಸಂಬಂಧಪಟ್ಟ ದಾಖಲಾತಿಗಳೊಂದಿಗೆ ಸಲ್ಲಿಸಬೇಕು. ಹಾಗೂ ಪರೀಕ್ಷೆಯನ್ನು ಆನ್‌ಲೈನ್ ಮುಖಾಂತರ ನಡೆಸಲಾಗುವುದು (ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್ ಸಂಪರ್ಕಿಸಬಹುದು).

ಆನ್‌ಲೈನ್‌ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ : **27/10/2022,** ಆನ್ ಲೈನ್ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : **08/11/2022** (ಸಾಯಂಕಾಲ 5.00 ಗಂಟೆವರೆಗೆ), ಆನ್‌ಲೈನ್ ಪರೀಕ್ಷೆ ದಿನಾಂಕ : **19/11/2022**

ಹೆಚ್ಚಿನ ಮಾಹಿತಿಗಾಗಿ : **http://karunadu.karnataka.gov.in/hfw** ಸಂಪರ್ಕಿಸಬಹುದು.

ಸೂಚನೆ : ನೇಮಕಾತಿ ಸಂಬಂಧಿಸಿದ ತಿದ್ದೋಲೆಗಳನ್ನು ಮೇಲೆ ಸೂಚಿಸಿರುವ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು.

ಸಹಿ/– ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ಹಾವೇರಿ
ವಾಸಾಸಂಇ/ಹಾವೇರಿ/ಎಂಸಿಎ/335/2022–23

ಕರ್ನಾಟಕ ಸರಕಾರ
ಕಾರ್ಯನಿರ್ವಾಹಕ ಇಂಜನೀಯರರು ಲೋಕೋಪಯೋಗಿ ಇಲಾಖೆ ವಿಭಾಗ ಗದಗ
Phone No: 08372-238782 Fax No. 08372-237268 E.Mail : eepwdgad@gmail.com
ನಂ:ಕಾನಿಇಂಗಃಲೋಇ:ಪಿಬಿ– :ವಿವಿಧ: 2022–23/3559 ದಿನಾಂಕಃ– 25–10–2022

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯಪಾಲರ ಪರವಾಗಿ ಈ ಕೆಳಗೆ ಸಹಿ ಮಾಡಿದ ಅಧಿಕಾರಿಯವರಿಂದ ಲೋಕೋಪಯೋಗಿ ಇಲಾಖೆ ಗದಗ ವಿಭಾಗದಡಿ ವಿವಿಧ ಲೆಕ್ಕ ಶೀರ್ಷಿಕೆ ಅನುದಾನದ ಅಡಿಯಲ್ಲಿಯ ಒಟ್ಟು **1990.00** ಲಕ್ಷ ಮೊತ್ತದಲ್ಲಿ ಒಟ್ಟು **8 ಕಾಮಗಾರಿಗಳಿಗೆ** (ಕನಿಷ್ಠ ಮೊತ್ತ ರೂ: **30.00** ಲಕ್ಷ ಗರಿಷ್ಠ ಮೊತ್ತ ರೂ: **500.00** ಲಕ್ಷ) ಇ–ಪ್ರಕ್ಯೂರ್‌ಮೆಂಟ್‌ನಲ್ಲಿ ನೊಂದಣಿ ಮಾಡಿಸಿದ ಲೋಕೋಪಯೋಗಿ ಇಲಾಖೆಯ ಅರ್ಹ ಗುತ್ತಿಗೆದಾರರಿಂದ ಇ–ಪ್ರೊಕ್ಯೂರಮೆಂಟ್ (E- Procurement) ಸ್ಟಾಂಡರ್ಡ ಬಿಡ್ ಡಾಕುಮೆಂಟ್ ಕೆ ಡಬ್ಲ್ಯೂ– 2, 3 ಮತ್ತು 4 ರ ಪ್ರಕಾರ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಸಂಪೂರ್ಣ ವಿವರಗಳಿಗಾಗಿ ಅಂತರ್ ಜಾಲ ವಿಳಾಸ http:// www. eproc. Karnataka. gov.in/ ದಲ್ಲಿ ನೋಡಿಕೊಳ್ಳಬಹುದು.

Work Indent No:-157926 159057 159563 158685 142324 159269 159281 153423

ಮೇಲಿನ ಕಾಮಗಾರಿಯ ಟೆಂಡರ ವಿವರ ಪಶ್ನೋತ್ತರ ದಿನಾಂಕಃ– **14–11–2022,** ಟೆಂಡರ್ ಸಲ್ಲಿಸುವ ದಿನಾಂಕಃ– **19–11–2022** ತಾಂತ್ರಿಕ /ಆರ್ಥಿಕ ಬಿಡ್ ತೆರೆಯುವ ದಿನಾಂಕಃ– **21–11–2022** ಆರ್ಥಿಕ ಬಿಡ್ ತೆರೆಯುವ ದಿನಾಂಕಃ– **22–11–2022**

ಜಿ ಎಸ್ ಟಿ ಮೊತ್ತವನ್ನು ಚಾಲ್ತಿಯಲ್ಲಿರುವ ಸರ್ಕಾರದ ಅದೇಶದಂತೆ ಪಾವತಿಸಲಾಗುವದು. ಗುತ್ತಿಗೆ ಅವಧಿಯನ್ನು ಗುತ್ತಿಗೆದಾರರ ವಿಳಂಬದಿಂದ ವಿಸ್ತರಿಸಿದಲ್ಲಿ ವಿಸ್ತೃತ ಗುತ್ತಿಗೆ ಅವಧಿಯಲ್ಲಿ ಆಗುವ ಜಿಎಸ್‌ಟಿ ಹೆಚ್ಚಳವನ್ನು ಗುತ್ತಿಗೆದಾರರಲೇ ಭರಿಸತಕ್ಕದ್ದು.

ಸಹಿ/–
ಕಾರ್ಯಪಾಲಕ ಅಭಿಯಂತರರು
ಲೋಕೋಪಯೋಗಿ ಇಲಾಖೆ ಗದಗ, ವಿಭಾಗ ಗದಗ
ವಾ.ಸಾ.ಇ/ಗದಗ/391/2022–23/ದೇಶಪಾಂಡೆಪಬ್ಲಿಸಿಟಿ

ಕಾರ್ಯನಿರ್ವಾಹಕ ನಿರ್ದೇಶಕರು, ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ ಶ್ರೀ ಅಟಲ್ ಬಿಹಾರಿ ವಾಜಪೇಯಿ ಜೂಲಾಜಿಕಲ್ ಪಾರ್ಕ್, ಕಮಲಾಪುರ, ಹೊಸಪೇಟೆ ತಾಲ್ಲೂಕು, ವಿಜಯನಗರ ಜಿಲ್ಲೆ.
ಸಂಖ್ಯೆ:ಅಬಿವಾಮೃ/ಟೆ.ಕಾ.ಓಹೆಚ್‌ಟಿ/&ಅ.ಕೊ/102/2022–23 ದಿನಾಂಕ: 21–10–2022

ಇ–ಟೆಂಡರ್ ಪ್ರಕಟಣೆ

2022–23ನೇ ಸಾಲಿನಲ್ಲಿ ಕಾರ್ಯನಿರ್ವಾಹಕ ನಿರ್ದೇಶಕರು, ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಶ್ರೀ ಅಟಲ್ ಬಿಹಾರಿ ವಾಜಪೇಯಿ ಜೂಲಾಜಿಕಲ್ ಪಾರ್ಕ್, ಕಮಲಾಪುರ ಮೃಗಾಲಯದಲ್ಲಿ (1) **ಅಡುಗೆ ಮತ್ತು ಆಹಾರ ದಾಸ್ತಾನು ಸಂಗ್ರಹಣೆ ಕೊಠಡಿಯನ್ನು** ಮತ್ತು (2) **2.50 ಲಕ್ಷ ಲೀಟರಿನ ಓವರ್ ಹೆಡ್ ಟ್ಯಾಂಕ್** ನಿರ್ಮಾಣ ಮಾಡುವ ಸಂಬಂಧ ಕಾಮಗಾರಿಗಳಿಗೆ ಕರ್ನಾಟಕ ಅರಣ್ಯ ಇಲಾಖೆ/ಕೆ.ಪಿ.ಡಬ್ಲ್ಯು.ಡಿ/ಸಿ.ಪಿ.ಡಬ್ಲ್ಯು.ಡಿ/ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ನಿಯಮ 2000 ಮತ್ತು ಕಾಯ್ದೆ 1999ರ ಇ–ಪೋರ್ಟಲ್ ಪ್ರಕಾರ ಟೆಂಡರ್ ಕರೆಯಲಾಗಿದೆ.

ಇಂಡೆಂಟ್ ಸಂಖ್ಯೆ: 1.ZAK/2022-23/OW/WORK_INDENT477/Call--2. ಅಂದಾಜು ಮೊತ್ತ (ರೂ. ಗಳಲ್ಲಿ): Rs. 54,00,000.00. **ಇ.ಎಂ.ಡಿ ಮೊತ್ತ (ರೂ.):** Rs.1,10,000.00. **ಇಂಡೆಂಟ್ ಸಂಖ್ಯೆ: 2.ZAK/2022-23/OW/WORK_INDENT478/Call-2. ಅಂದಾಜು ಮೊತ್ತ (ರೂ. ಗಳಲ್ಲಿ):** Rs. 86,00,000.00. **ಇ.ಎಂ.ಡಿ ಮೊತ್ತ (ರೂ.):** Rs.1,72,000.00

ಈ ಟೆಂಡರ್ ಪ್ರಕಟಣೆ ಪ್ರತಿಯು www.eproc.karnataka.gov.in ಇಲ್ಲಿ ಲಭ್ಯವಿರುತ್ತದೆ. ಟೆಂಡರ್ ವಿವರಗಳು ಇ–ಪ್ರಕ್ಯೂರಮೆಂಟ್‌ನಲ್ಲಿ ಲಭ್ಯವಾಗುವ ದಿನಾಂಕ: 21.10.2022, ಕೊನೆಯ ದಿನಾಂಕ: 03.11.2022 ಸಾಯಂಕಾಲ 5.30 ಗಂಟೆಯವರೆಗೆ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 05.11.2022 ಬೆಳಿಗ್ಗೆ 11.30 ಗಂಟೆಗೆ ಮತ್ತು ಆರ್ಥಿಕ ಬಿಡ್ ತೆರೆಯುವ ದಿನಾಂಕ: 07.11.2022 ಬೆಳಿಗ್ಗೆ 11.30 ಗಂಟೆಯ ನಂತರ. ಹೆಚ್ಚಿನ ವಿವರಗಳನ್ನು ಕಾರ್ಯನಿರ್ವಾಹಕ ನಿರ್ದೇಶಕರು, ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಶ್ರೀ ಅಟಲ್ ಬಿಹಾರಿ ವಾಜಪೇಯಿ ಜೂಲಾಜಿಕಲ್ ಪಾರ್ಕ್, ಕಮಲಾಪುರ–ಪಾಪಿನಾಯಕನಹಳ್ಳಿ ಮುಖ್ಯರಸ್ತೆ (ಜಂಗಲ್ ರೆಸಾರ್ಟ್ ಹತ್ತಿರ) ಕಮಲಾಪುರ ಇವರ ಕಛೇರಿಯಿಂದ ಅಥವಾ ದೂರವಾಣಿ ಸಂಖ್ಯೆ : 08394–295289 ಕಛೇರಿ ವೇಳೆಯಲ್ಲಿ ಪಡೆಯಬಹುದು.

ಸಹಿ/–ಕಾರ್ಯನಿರ್ವಾಹಕ ನಿರ್ದೇಶಕರು, ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಶ್ರೀ ಅಟಲ್ ಬಿಹಾರಿ ವಾಜಪೇಯಿ ಜೂಲಾಜಿಕಲ್ ಪಾರ್ಕ್, ಕಮಲಾಪುರ ಹೊಸಪೇಟೆ ತಾಲ್ಲೂಕು ವಿಜಯನಗರ ಜಿಲ್ಲೆ
ಡಿಐಪಿಆರ್/ವಿಜಯನಗರ/202/ಎಂಸಿಎ/2022–23

NAVODAYA VIDYALAYA SAMITI : HYDERABAD REGION
NOTIFICATION

Online Applications are invited for engagement of Counselors on Contractual basis, against purely temporary vacancies at the Jawahar Navodaya vidyalayas located in the States of Karnataka, Kerala and UTs of Puducherry, Andaman & Nicobar Islands and Lakshadweep. The last date for submission of Application through online is 04-11-2022

For further details visit NVS, R.O., Hyderabad Website: https://navodaya.gov.in/nvs/ro/Hyderabad/en/home/

Deputy Commissioner

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ನಂ. 16–ಡಿ, 3ನೇ ಮಹಡಿ, ಡಿ. ದೇವರಾಜ ಅರಸು ಭವನ, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು–560 052.
ದೂರವಾಣಿ : 080–29505520, 29505530 ಇ–ಮೇಲ್: bcdbng@kar.nic.in
ಸಂಖ್ಯೆ: BCWD/EST-9/CR-33-2022-23 ದಿನಾಂಕ: 21.10.2022

ಟೆಂಡರ್ ಪ್ರಕಟಣೆ
(ಇ–ಟೆಂಡರ್ ಮೂಲಕ ಮಾತ್ರ)

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಹೊರ ಸಂಪನ್ಮೂಲ ಏಜೆನ್ಸಿಯಿಂದ ಕಛೇರಿಗೆ ಸಿಬ್ಬಂದಿಯನ್ನು ಭರ್ತಿ ಮಾಡಲು ಟೆಂಡರ್ ಆಹ್ವಾನಿಸಿದೆ. ವಿವರಗಳಿಗೆ https://eproc.karnataka.gov.in ವೆಬ್‌ಸೈಟ್ ವಿಳಾಸವನ್ನು ನೋಡಬಹುದಾಗಿದೆ. ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ 22.11.2022 ರಂದು ಸಂಜೆ 4.30 ಗಂಟೆಯವರೆಗೆ.

ಸಹಿ/–
(ಟೆಂಡರ್ ಹೊರಡಿಸುವ ಪ್ರಾಧಿಕಾರಿಗಳು)
ಜಂಟಿ ನಿರ್ದೇಶಕರು (ಆಡಳಿತ)
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ವಾಸಾಸಂಇ/ವಾಪ್ರ/ಜಿಎ/2782/2022–23

ಕರ್ನಾಟಕ ಸರಕಾರ
(ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ)
ಕರ್ನಾಟಕ ಜಲಸಾರಿಗೆ ಮಂಡಳಿ
ಕಾರ್ಯನಿರ್ವಾಹಕ ಇಂಜಿನಿಯರವರ ಕಛೇರಿ, ಬಂದರು ಮತ್ತು ಮೀನುಗಾರಿಕಾ ವಿಭಾಗ, 'ಶ್ಯಾಮಿಲಿ ಹಾಲ್', 2ನೇ ಮಹಡಿ, ಅಂಬಲಪಾಡಿ, ಉಡುಪಿ –576103
Tel No: 0820-2532961, Fax No: 0820-2532961, Email: pfdudupi@gmail.com
ಸಂ:ಕಾನಿಇಂ:ಬಂಮೀವಿ:ಉಡುಪಿ:ಎಇ:ಟೆಂಡರ್‌ಪ್ರಕಟಣೆ–21/2022–23 ದಿ: 21–10–2022

ಅಲ್ಪಾವಧಿ ಟೆಂಡರು ಮುಂದೂಡಿಕಾ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ) (ದ್ವಿ ದಾಖಲೆ ಪದ್ಧತಿ)

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಈ ಕೆಳಗೆ ನಮೂದಿಸಿದ ಕಾಮಗಾರಿಗಳನ್ನು ಕೈಗೊಳ್ಳಲು ಇ–ಪ್ರೊಕ್ಯೂರ್‌ಮೆಂಟ್ ಪದ್ಧತಿಯಲ್ಲಿ ಟೆಂಡರ್ ಕರೆಯಲಾಗಿದ್ದು www.eproc.karnataka.gov.in ನಲ್ಲಿ ಹೆಚ್ಚಿನ ಮಾಹಿತಿ ಪಡೆದು ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಪಾಲ್ಗೊಳ್ಳಬಹುದಾಗಿದೆ. ಸದರಿ ಟೆಂಡರಿನ ಅವಧಿ ವಿಸ್ತರಣೆಯ ಮಾಹಿತಿಯನ್ನು ಮೇಲೆ ತಿಳಿಸಿರುವ ವೆಬ್‌ಸೈಟ್‌ನಿಂದ ಪಡೆಯತಕ್ಕದ್ದು. ಈ ಕುರಿತು ಪ್ರತ್ಯೇಕವಾಗಿ ದಿನಪತ್ರಿಕೆಗಳಲ್ಲಿ ಪ್ರಕಟಣೆ ಮಾಡಲಾಗುವುದಿಲ್ಲ.

ಕಾಮಗಾರಿಯ ಹೆಸರು ಮತ್ತು ಟೆಂಡರ್ ನಂಬರ್: (1) ಉಡುಪಿ ಜಿಲ್ಲೆ ಬೈಂದೂರು ತಾಲೂಕು ಗಂಗೊಳ್ಳಿ ಮೀನುಗಾರಿಕಾ ಬಂದರಿನ ಹಾಗೂ ಕೋಡಿ ಜೆಟ್ಟಿಯ ನ್ಯಾವಿಗೇಷನ್ ಚಾನಲ್‌ನಲ್ಲಿ ಹೂಳೆತ್ತುವ ಕಾಮಗಾರಿ. ಅಂದಾಜು ಮೊತ್ತ ರೂ. **4,60,00,000.00, ಇಎಂಡಿ ಮೊತ್ತ:** Rs.6.90 lakhs (Rs.1.00 lakh e-payment + Rs.5.90 lakh as mentioned in bid document.) (2) ಉಡುಪಿ ತಾಲೂಕು ಮಲ್ಪೆ ಮೀನುಗಾರಿಕೆ ಬಂದರಿನ ಬೇಸಿನ್ ಮತ್ತು ನ್ಯಾವಿಗೇಷನ್ ಚಾನಲ್‌ನಲ್ಲಿ ಹೂಳೆತ್ತುವ ಕಾಮಗಾರಿ. ಅಂದಾಜು ಮೊತ್ತ ರೂ. **3,00,00,000.00, ಇಎಂಡಿ ಮೊತ್ತ:** Rs.4.50lakhs (Rs.1.00 lakh e-payment + Rs.3.50 lakh as mentioned in bid document.) (3) ಮಂಗಳೂರು ಮೀನುಗಾರಿಕಾ ಬಂದರಿನಲ್ಲಿ ಸಮಗ್ರ ಹೂಳೆತ್ತುವ ಕಾಮಗಾರಿ. ಅಂದಾಜು ಮೊತ್ತ ರೂ. **4,00,00,000.00 ಇಎಂಡಿ ಮೊತ್ತ:** Rs.6.00lakhs (Rs.1.00 lakh e-payment + Rs.5.00 lakh as mentioned in bid document.)

ಮೇಲಿನ ಎಲ್ಲಾ ಕಾಮಗಾರಿಗಳಿಗೆ ಟೆಂಡರ್ ಬಗ್ಗೆ ಆಕ್ಷೇಪಣೆ ಮತ್ತು ಸ್ಪಷ್ಟೀಕರಣಕ್ಕೆ ಕೊನೆಯ ದಿನಾಂಕ ಹಾಗೂ ವೇಳೆ: **05.11.2022** ರಂದು **16.00** ಗಂಟೆಯವರೆಗೆ, ಟೆಂಡರ್ ಪಡೆಯುವ ದಿನಾಂಕ ಮತ್ತು ವೇಳೆ: **07.11.2022** ರಂದು **17.00** ಗಂಟೆಯವರೆಗೆ

ಸಹಿ/– ಕಾರ್ಯನಿರ್ವಾಹಕ ಇಂಜಿನಿಯರ್
ಬಂದರು ಮತ್ತು ಮೀನುಗಾರಿಕಾ ವಿಭಾಗ, ಉಡುಪಿ
ವಾಸಾಇ/ಸನಿಉ/ಎಂಸಿಎ/534/22–23 ದಿ: 25.10.2022

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಅಭಿಯಂತರರು, ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ ಕೊಪ್ಪಳ
eepredkpl@gmail.com,
ಸಂ.ಪಂರಾಇಂ/ ವಿಕೊ/ತಾ.ಶಾ/ಟೆಂಡರ/2022–23/1469 ದಿನಾಂಕ:21.10.2022

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯಪಾಲರ ಪರವಾಗಿ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆದೇಶ 1999–2000 ರ ಪ್ರಕಾರ ಪಾರದರ್ಶಕತೆ ಆ್ಯಕ್ಟ್ 2000 ನಿಯಮದಂತೆ ಸ್ಟ್ಯಾಂಡರ್ಡ ಬಿಡ್ ಡಾಕ್ಯೂಮೆಂಟ್ KW– 1, 2, 3 ಮತ್ತು 4ರ ಪ್ರಕಾರ ನಿಯಮಗಳನ್ವಯ ಪಂಚಾಯತ್ ರಾಜ್ ಇಂಜಿನೀಯರಿಂಗ್ ಇಲಾಖೆಯಲ್ಲಿ ನೊಂದಾಯಿಸಿದ ಅರ್ಹ ಗುತ್ತಿಗೆದಾ & ಸರಬರಾಜುದಾರರು "ಇ–ಪೋಕ್ಯೂರ್‌ಮೆಂಟ್ ಪೋರ್ಟಲ್" ಮುಖಾಂತರ ಈ ಕೆಳಗೆ ನಮೂಧಿಸಿದ ಅನುಬಂಧದಲ್ಲಿಯ 2021–22 ಮತ್ತು 2022–23 ನೇ ಸಾಲಿನ 5054 ಮಾನ್ಯ ಮುಖ್ಯಮಂತ್ರಿಗಳ ವಿಶೇಷ ಅನುದಾನ ಹಾಗೂ ಲಿಂಕ್ ಡಾಕ್ಯುಮೆಂಟ್ ಕೊಪ್ಪಳ ಜಿಲ್ಲೆಯ ಕುಷ್ಟಗಿ, ಗಂಗಾವತಿ ಮತ್ತು ಕನಕಗಿರಿ ತಾಲೂಕಿನ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ, ಅರ್ಹ ಗುತ್ತಿಗೆದಾರರು ಇ–ಪೋೀಕ್ಯೂರ್‌ಮೆಂಟ್ ಪೋರ್ಟಲ್ http://eproc.karnataka.gov.in ಮುಖಾಂತರ ಭಾಗವಹಿಸಬಹುದು.

ಸಾಮಾನ್ಯ ಸೂಚನೆಗಳು: 1) ಗುತ್ತಿಗೆದಾರರು ಗುತ್ತಿಗೆಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬೇಕು. 2) ಪೂರ್ವಾರ್ಹತೆಗೆ ಬೇಕಾಗುವ ಎಲ್ಲಾ ಪ್ರಮಾಣ ಪತ್ರ ಹಾಗೂ ದಾಖಲೆಗಳನ್ನು ಸ್ಕ್ಯಾನ್ ಮಾಡಿ, ಆನ್‌ಲೈನ್‌ನಲ್ಲಿ ಟೆಂಡರ್ ಭರ್ತಿ ಸಮಯದಲ್ಲಿ ಲಗತ್ತಿಸಬೇಕು. 3) ನಿಗಧಿತ ಇ.ಎಮ್.ಡಿ. ಹಣವನ್ನು ಆನ್‌ಲೈನ್ ಮೂಲಕ ನಿಗಧಿಪಡಿಸಿದಂತೆ ಸಂದಾಯ ಮಾಡಬೇಕು.

ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದು ಅಥವಾ ದೂರವಾಣಿ ಸಂಖ್ಯೆ: 08539–220845 ರಿಂದ ಮಾಹಿತಿ ಪಡೆಯುವುದು ಮತ್ತು ಅಂತರ್ಜಾಲದ ಮೂಲಕ ವೆಬ್‌ಸೈಟ್ http://eproc.karnataka.gov.in ರಲ್ಲಿ ಪಡೆಯಬಹುದು.ಟೆಂಡರ್ ಹಾಗೂ ಮಾಹಿತಿಯನ್ನು ಸದರಿ ವೆಬ್‌ಸೈಟ್‌ನಲ್ಲಿ ದಿನಾಂಕ: 25.10.2022 ರ ನಂತರ ದಿಂದ Download ಮಾಡಿಕೊಳ್ಳಬಹುದಾಗಿದೆ.

ಟೆಂಡರ್ ಪೋಸೆಸಿಂಗ್ ಶುಲ್ಕ : ಇ–ಪ್ರೋಕ್ಯೂರ್‌ಮೆಂಟ್‌ನಲ್ಲಿರುವಂತೆ. ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗಧಿತ ಕಾಲಾವಧಿ : **03/05** ತಿಂಗಳು. ಟೆಂಡರ್ ಆಕ್ಷೇಪಣೆ/ಸ್ಪಷ್ಟೀಕರಣಗಳಿಗಾಗಿ ನಿಗಧಿಪಡಿಸಿದ ಅಂತಿಮ ದಿನಾಂಕ ಹಾಗೂ ಸಮಯದ ನಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು : **25.10.2022 ಸಮಯ 10.00 ಗಂಟೆ ನಂತರ ದಿಂದ 05.11.2022 ಸಮಯ 16.00 ಗಂಟೆವರೆಗೆ.** ಟೆಂಡರ್‌ಗಳನ್ನು ಸ್ವೀಕರಿಸುವ ಅಂತಿಮ ದಿನಾಂಕ ಹಾಗೂ ಸಮಯ : **25.10.2022 ಸಮಯ 11.00 ಗಂಟೆಯಿಂದ 05.11.2022 ಸಮಯ 16:30 ಗಂಟೆವರೆಗೆ.** ಟೆಂಡರ್ ತೆರೆಯುವ ದಿನಾಂಕ : **07.11.2022 ಕಚೇರಿ ಸಮಯದಲ್ಲಿ.** ಕೆಡಬ್ಲೂ 4 ರ ಆರ್ಥಿಕ ಬಿಡ್ ತೆರೆಯುವ ದಿನಾಂಕ : **ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಗೊಂಡ ನಂತರ ತೆರೆಯಲಾಗುವುದು**

ಟಿಪ್ಪಣಿ: ಬಿಡ್‌ಗಳನ್ನು ತೆರೆಯುವ ವೇಳೆಯಲ್ಲಿ ಟೆಂಡರ್‌ನಲ್ಲಿ ಬಾಗವಹಿಸಿದ ಗುತ್ತಿಗೆದಾರರು ಇ.ಎಮ್.ಡಿ. ಮೂಲ ದಾಖಲೆಗಳನ್ನು ಪರಿಶೀಲನೆಗಾಗಿ ಒದಗಿಸತಕ್ಕದ್ದು.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು, ಪಂ.ರಾ.ಇಂ.ವಿಭಾಗ,ಕೊಪ್ಪಳ
ಡಿಐಪಿಆರ್/ಕೊಪ್ಪಳ/403/ಎಂಸಿಎ/2022–23

ಮಾರ್ಕಸ್ ಮಿಂಚಿನ ಅರ್ಧಶತಕ

ಆತಿಥೇಯ ಆಸ್ಟ್ರೇಲಿಯಾಕ್ಕೆ ಮೊದಲ ಜಯ; ಶ್ರೀಲಂಕಾ ತಂಡಕ್ಕೆ ಆಘಾತ

ಆಸ್ಟ್ರೇಲಿಯಾದ ಮಾರ್ಕಸ್ ಸ್ಟೊಯಿನಿಸ್ ಬ್ಯಾಟಿಂಗ್–ಎಎಫ್‌ಪಿ ಚಿತ್ರ

ಪರ್ತ್ (ಪಿಟಿಐ): ಮಿಂಚಿನ ವೇಗದ ಅರ್ಧಶತಕ ಬಾರಿಸಿದ ಮಾರ್ಕಸ್ ಸ್ಟೋಯಿನಿಸ್ ಆಟದ ಬಲದಿಂದ ಹಾಲಿ ಚಾಂಪಿಯನ್ ಆಸ್ಟ್ರೇಲಿಯಾ ತಂಡವು ಟಿ20 ವಿಶ್ವಕಪ್ ಟೂರ್ನಿಯಲ್ಲಿ ಮೊದಲ ಜಯದ ರುಚಿ ಕಂಡಿತು.

ಆತಿಥೇಯ ಆಸ್ಟ್ರೇಲಿಯಾ ತಂಡವು ಉದ್ಘಾಟನೆ ಪಂದ್ಯದಲ್ಲಿ ನ್ಯೂಜಿಲೆಂಡ್ ವಿರುದ್ಧ ಸೋತಿತ್ತು. ಮಂಗಳವಾರ ನಡೆದ ಎರಡನೇ ಪಂದ್ಯದಲ್ಲಿ ಶ್ರೀಲಂಕಾ ತಂಡದ ಎದುರು 7 ವಿಕೆಟ್‌ಗಳಿಂದ ಜಯಿಸಿತು. 18 ಎಸೆತಗಳಲ್ಲಿ 59 ರನ್‌ಗಳನ್ನು ಗಳಿಸಿದ ಮಾರ್ಕಸ್ ತಂಡದ ಗೆಲುವನ್ನು ಸುಲಭಗೊಳಿಸಿದರು.

ಟಾಸ್ ಗೆದ್ದ ಆಸ್ಟ್ರೇಲಿಯಾ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಪಥುಮ್ ನಿಸಾಂಕ (40; 45ಎ) ಹಾಗೂ ಅಸಲಂಕಾ (ಔಟಾಗದೆ 38; 25ಎ) ಅವರ ಬ್ಯಾಟಿಂಗ್‌ನಿಂದ ಶ್ರೀಲಂಕಾ ತಂಡವು 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 157 ರನ್ ಗಳಿಸಿತು. ಗುರಿ ಬೆನ್ನಟ್ಟಿದ ಆ್ಯರನ್ ಫಿಂಚ್ ಬಳಗವು 16.3 ಓವರ್‌ಗಳಲ್ಲಿ 3 ವಿಕೆಟ್‌ಗೆ 158 ರನ್ ಗಳಿಸಿತು.

ಶ್ರೀಲಂಕಾ ತಂಡದ ವೇಗದ ಬೌಲರ್ ಬಿನುರಾ ಫರ್ನಾಂಡೊ ಅವರು ಇನಿಂಗ್ಸ್‌ನ ಮೊದಲ ಓವರ್‌ನಲ್ಲಿ ಗಾಯಗೊಂಡು ಪೆವಿಲಿಯನ್ ಸೇರಿದರು. ಆದರೂ ಉಳಿದ ಬೌಲರ್‌ಗಳು ದಿಟ್ಟ ಹೋರಾಟ ನಡೆಸಿದರು. ಧನಂಜಯ ಡಿಸಿಲ್ವಾ, ಚಾಮಿಕಾ ಕರುಣರತ್ನೆ ಮತ್ತು ಮಹೀಷ್ ತೀಕ್ಷಣ ಉತ್ತಮ ಬೌಲಿಂಗ್ ಮಾಡಿದರು. ಆದರಿಂದಾಗಿ ಆಸ್ಟ್ರೇಲಿಯಾ ತಂಡವು 12.2 ಓವರ್‌ಗಳಲ್ಲಿ ಮೂರು ವಿಕೆಟ್ ಕಳೆದುಕೊಂಡಿತ್ತು. 100 ರನ್‌ಗಳ ಗಡಿಯನ್ನೂ ದಾಟಿರಲಿಲ್ಲ.

ಈ ಹಂತದಲ್ಲಿ ಕ್ರೀಸ್‌ಗೆ ಬಂದ ಮಾರ್ಕಸ್ ಸ್ಟೋಯಿನಿಸ್ ಬೌಲರ್‌ಗಳನ್ನು ದಂಡಿಸಿದರು. 17 ಎಸೆತಗಳಲ್ಲಿ ಅವರು ಅರ್ಧಶತಕ ಗಳಿಸಿದರು. ಅದರಲ್ಲಿ ಅರ್ಧಡಜನ್ ಸಿಕ್ಸರ್‌ಗಳು ಹಾಗೂ ನಾಲ್ಕು ಬೌಂಡರಿಗಳು ಇದ್ದವು.

ಆಸ್ಟ್ರೇಲಿಯಾದ ಆ್ಯರನ್ ಫಿಂಚ್ (31; 42ಎ) ರನ್ ಗಳಿಸಲು ತುಸು ಪರದಾಡಿದರು. ಡೇವಿಡ್ ವಾರ್ನರ್ ಹಾಗೂ ಮಿಚೆಲ್ ಮಾರ್ಷ್ ಮತ್ತೆ ವೈಫಲ್ಯ ಅನುಭವಿಸಿದರು. ಮ್ಯಾಕ್ಸ್‌ವೆಲ್ 12 ಎಸೆತಗಳಲ್ಲಿ 23 ರನ್ ಗಳಿಸಿದರು. ಅವರಿಗೆ ಒಂದು 'ಜೀವದಾನ'ವೂ ಲಭಿಸಿತು. ಲಂಕಾದ ಸ್ಪಿನ್ನರ್ ವಣಿಂದು ಹಸರಂಗಾ ಮೂರು ಓವರ್‌ಗಳಲ್ಲಿ 53 ರನ್‌ಗಳನ್ನು ಕೊಟ್ಟರು.

ಸಂಕ್ಷಿಪ್ತ ಸ್ಕೋರು: ಶ್ರೀಲಂಕಾ: 20 ಓವರ್‌ಗಳಲ್ಲಿ 6ಕ್ಕೆ157 (ಪಥುಮ್ ನಿಸಾಂಕ 40, ಧನಂಜಯ್ ಡಿಸಿಲ್ವಾ 26, ಅಸಲಂಕಾ 26, ಚಾಮಿರಾ ಕರುಣಾರತ್ನೆ ಔಟಾಗದೆ 14, ಜೋಶ್ ಹ್ಯಾಜಲ್‌ವುಡ್ 26ಕ್ಕೆ1, ಪ್ಯಾಟ್ ಕಮಿನ್ಸ್ 36ಕ್ಕೆ1, ಮಿಚೆಲ್ ಸ್ಟಾರ್ಕ್ 23ಕ್ಕೆ1, ಆಷ್ಟನ್ ಅಗರ್ 25ಕ್ಕೆ1) ಆಸ್ಟ್ರೇಲಿಯಾ: 16.3 ಓವರ್‌ಗಳಲ್ಲಿ 3ಕ್ಕೆ158 (ಡೇವಿಡ್ ವಾರ್ನರ್ 11, ಆ್ಯರನ್ ಫಿಂಚ್ ಔಟಾಗದೆ 31, ಮಿಚೆಲ್ ಮಾರ್ಷ್ 17, ಗ್ಲೆನ್ ಮ್ಯಾಕ್ಸ್‌ವೆಲ್ 23, ಮಾರ್ಕಸ್ ಸ್ಟೊಯಿನಿಸ್ ಔಟಾಗದೆ 59, ಧನಂಜಯ್ ಡಿಸಿಲ್ವಾ 18ಕ್ಕೆ1, ಚಾಮಿಕಾ ಕರುಣಾರತ್ನೆ 20ಕ್ಕೆ1, ಮಹೀಷ ತೀಕ್ಷಣ 23ಕ್ಕೆ1) ಫಲಿತಾಂಶ: ಆಸ್ಟ್ರೇಲಿಯಾಕ್ಕೆ 7 ವಿಕೆಟ್‌ಗಳ ಜಯ.

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ಫಲಿತಾಂಶವಿಲ್ಲ	ಪಾಯಿಂಟ್ಸ್	ರನ್ ರೇಟ್
ಗುಂಪು 1						
ನ್ಯೂಜಿಲೆಂಡ್	1	1	0	0	2	4.450
ಇಂಗ್ಲೆಂಡ್	1	1	0	0	2	0.620
ಶ್ರೀಲಂಕಾ	2	1	1	0	2	0.450
ಆಸ್ಟ್ರೇಲಿಯಾ	2	1	1	0	2	-1.555
ಅಫ್ಗಾನಿಸ್ತಾನ	1	0	1	0	0	-0.620
ಐರ್ಲೆಂಡ್	1	0	1	0	0	-2.467
ಗುಂಪು 2						
ಬಾಂಗ್ಲಾದೇಶ	1	1	0	0	2	0.450
ಭಾರತ	1	1	0	0	2	0.050
ದಕ್ಷಿಣ ಆಫ್ರಿಕಾ	1	0	0	1	1	-
ಜಿಂಬಾಬ್ವೆ	1	0	0	1	1	-
ಪಾಕಿಸ್ತಾನ	1	0	1	0	0	-0.050
ನೆದರ್ಲೆಂಡ್ಸ್	1	0	1	0	0	-0.450

ಸಿಡ್ನಿಯಲ್ಲಿ ನಾಳೆ ಭಾರತ–ನೆದರ್ಲೆಂಡ್ಸ್ ಹಣಾಹಣಿ; ಪಾಂಡ್ಯಗೆ ವಿಶ್ರಾಂತಿ ಸಾಧ್ಯತೆ

ಪ್ರಯೋಗದತ್ತ ರೋಹಿತ್ ಚಿತ್ತ

ಸಿಡ್ನಿ (ಪಿಟಿಐ): ಪಾಕಿಸ್ತಾನ ತಂಡದ ಎದುರು ರೋಚಕ ಜಯಿಸುವ ಮೂಲಕ ಈ ಬಾರಿಯ ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಭರ್ಜರಿ ಆರಂಭ ಮಾಡಿರುವ ಭಾರತ ತಂಡವು ಗುರುವಾರ ನಡೆಯಲಿರುವ ಪಂದ್ಯದಲ್ಲಿ ಪ್ರಯೋಗಕ್ಕೆ ಸಿದ್ಧವಾಗಿದೆ.

ಸಿಡ್ನಿ ಕ್ರಿಕೆಟ್ ಮೈದಾನದಲ್ಲಿ ನೆದರ್ಲೆಂಡ್ಸ್ ವಿರುದ್ಧ ರೋಹಿತ್ ಶರ್ಮಾ ಬಳಗವು ಕಣಕ್ಕಿಳಿಯಲಿದೆ. ಈ ಪಂದ್ಯದಲ್ಲಿ ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ ಅವರಿಗೆ ವಿಶ್ರಾಂತಿ ನೀಡಿ ದೀಪಕ್ ಹೂಡಾಗೆ ಅವಕಾಶ ನೀಡುವ ಸಾಧ್ಯತೆ ಇದೆ. ಸ್ಫೋಟಕ ಶೈಲಿಯ ಬ್ಯಾಟರ್ ಹೂಡಾ, ಆಫ್‌ಬ್ರೇಕ್ ಬೌಲರ್ ಕೂಡ ಆಗಿದ್ದಾರೆ.

ಪಾಂಡ್ಯ ಜೊತೆಗೆ ಇನ್ನುಳಿದ ಬೌಲರ್‌ಗಳಿಗೂ ಈ ಪಂದ್ಯದಲ್ಲಿ ವಿಶ್ರಾಂತಿ ನೀಡುವ ಸಾಧ್ಯತೆ ಇದೆ. ಅನುಭವದ ಕೊರತೆಯಿರುವ ನೆದರ್ಲೆಂಡ್ಸ್ ವಿರುದ್ಧ ಸುಲಭ ಜಯದ ನಿರೀಕ್ಷೆಯಲ್ಲಿರುವ ಭಾರತ ತಂಡವು ಬೆಂಚ್ ಶಕ್ತಿಯ ಸಾಮರ್ಥ್ಯ ಪರೀಕ್ಷೆ ಮಾಡಲು ಯೋಚಿಸಿದೆ.

ಭಾನುವಾರದ ಪಂದ್ಯದಲ್ಲಿ ಹಾರ್ದಿಕ್ ಅವರು ವಿರಾಟ್ ಕೊಹ್ಲಿಯೊಂದಿಗೆ ಐದನೇ ವಿಕೆಟ್ ಜೊತೆಯಾಟದಲ್ಲಿ 113 ರನ್ ಸೇರಿಸಿದ್ದರು. ಹಾರ್ದಿಕ್ 40 ರನ್ ಹಾಗೂ ಮೂರು ವಿಕೆಟ್ ಗಳಿಸಿದ್ದರು. ಆದರೆ ಒತ್ತಡ ಅಪಾರವಾಗಿದ್ದ ಪಂದ್ಯದಲ್ಲಿ ಅವರು ಸ್ನಾಯುಸೆಳೆತದ ತೊಂದರೆಯನ್ನೂ ಅನುಭವಿಸಿದ್ದರು.

ರಾಹುಲ್ ಮೇಲೆ ಕಣ್ಣು: ಪದೇ ಪದೇ ವೈಫಲ್ಯ ಅನುಭವಿಸುತ್ತಿರುವ ಆರಂಭಿಕ ಬ್ಯಾಟರ್ ಕೆ.ಎಲ್. ರಾಹುಲ್ ಅವರ ಮೇಲೂ ತಂಡದ ಮ್ಯಾನೇಜ್‌ಮೆಂಟ್ ನಿಗಾವಹಿಸಿದೆ. ಹೊಸಚೆಂಡು ಎದುರಿಸುವಾಗ ಪದಚಲನೆಯಲ್ಲಿ ಲೋಪವೆಸಗುತ್ತಿದ್ದಾರೆ. ಇದರಿಂದಾಗಿ ಸುಲಭವಾಗಿ ಔಟಾಗುತ್ತಿದ್ದಾರೆ.

ಆದ್ದರಿಂದ ಅವರು ಮಂಗಳವಾರದ ನೆಟ್ಸ್‌ನಲ್ಲಿ ತಮ್ಮ ಫುಟ್‌ವರ್ಕ್ ಸರಿಪಡಿಸುವತ್ತ ಹೆಚ್ಚು ಗಮನವಿಟ್ಟು ಅಭ್ಯಾಸ ನಡೆಸಿದರು. ಪ್ರಮುಖವಾದ ಪಂದ್ಯಗಳಲ್ಲಿ ಅವರು ಗೆಲುವಿನ ಕಾಣಿಕೆ ನೀಡುವುದಿಲ್ಲವೆಂಬ ಆರೋಪ ಅವರ ಮೇಲಿದೆ.

ಕೆ.ಎಲ್. ರಾಹುಲ್

ನಾಯಕ ರೋಹಿತ್ ಶರ್ಮಾ ಕೂಡ ತಮ್ಮ ಬ್ಯಾಟಿಂಗ್ ಲಯಕ್ಕೆ ಮರಳಲು ಬಹಳಷ್ಟು ಎಸೆತಗಳನ್ನು ಎದುರಿಸಿದರು. ಮೊಹಮ್ಮದ್ ಸಿರಾಜ್, ಶಾರ್ದೂಲ್ ಠಾಕೂರ್ ಹಾಗೂ ಹರ್ಷಲ್ ಪಟೇಲ್ ಅವರು ನಿರಂತರವಾಗಿ ಆಫ್‌ಸ್ಟಂಪ್ ಹೊರಗೆ ಎಸೆತಗಳನ್ನು ಹೆಚ್ಚು ಹಾಕಿ ರೋಹಿತ್ ಅಭ್ಯಾಸಕ್ಕೆ ನೆರವಾದರು.

ಆರಂಭಿಕ ಜೋಡಿಯು ವೈಫಲ್ಯ ಅನುಭವಿಸಿದರೆ ನಂತರ ಕ್ರಮಾಂಕದ ಬ್ಯಾಟರ್‌ಗಳ ಮೇಲೆ ಹೆಚ್ಚು ಒತ್ತಡ ಬೀಳುತ್ತದೆ. ಆದ್ದರಿಂದ ಇವರಿಬ್ಬರೂ ಲಯಕ್ಕೆ ಮರಳಿದರೆ ತಂಡಕ್ಕೆ ಉತ್ತಮ ಆರಂಭ ದೊರೆಯುತ್ತದೆ.

ಇದೇ ಸಂದರ್ಭದಲ್ಲಿ ದಿನೇಶ್ ಕಾರ್ತಿಕ್, ರಿಷಭ್ ಪಂತ್ ಹಾಗೂ ಹೂಡಾ ಅವರು ಕೂಡ ಹೆಚ್ಚು ಹೊತ್ತು ಬ್ಯಾಟಿಂಗ್ ಅಭ್ಯಾಸ ನಡೆಸಿದರು.

ಎ ಗುಂಪಿನಿಂದ ಅರ್ಹತೆ ಗಳಿಸಿ ಸೂಪರ್ 12ಕ್ಕೆ ಪ್ರವೇಶಿಸಿರುವ ನೆದರ್ಲೆಂಡ್ಸ್ ತಂಡವು ತನ್ನ ಮೊದಲ ಪಂದ್ಯದಲ್ಲಿ ಬಾಂಗ್ಲಾದೇಶ ವಿರುದ್ಧ ಸೋತಿದೆ. ಸ್ಕಾಟ್ ಎಡ್ವರ್ಡ್ಸ್ ನಾಯಕತ್ವದ ತಂಡದಲ್ಲಿ ಬೌಲಿಂಗ್ ವಿಭಾಗ ಉತ್ತಮವಾಗಿದೆ. ಬ್ಯಾಟಿಂಗ್‌ನಲ್ಲಿ ಕಾಲಿನ್ ಅಕೆಮನ್ ಬಾಂಗ್ಲಾ ವಿರುದ್ಧ ಅರ್ಧಶತಕವನ್ನು ಗಳಿಸಿದ್ದರು.

ಬುಧವಾರದ ಪಂದ್ಯಗಳು

ಇಂಗ್ಲೆಂಡ್–ಐರ್ಲೆಂಡ್ (ಬೆಳಿಗ್ಗೆ 9.30)
ನ್ಯೂಜಿಲೆಂಡ್–ಅಫ್ಗಾನಿಸ್ತಾನ (ಮಧ್ಯಾಹ್ನ 1.30)
ಸ್ಥಳ: ಮೆಲ್ಬರ್ನ್

ಗುರುವಾರದ ಪಂದ್ಯಗಳು

ದಕ್ಷಿಣ ಆಫ್ರಿಕಾ–ಬಾಂಗ್ಲಾದೇಶ (ಬೆಳಿಗ್ಗೆ 8.30ರಿಂದ. ಸ್ಥಳ: ಸಿಡ್ನಿ)
ಭಾರತ–ನೆದರ್ಲೆಂಡ್ಸ್ (ಮಧ್ಯಾಹ್ನ 12.30ರಿಂದ. ಸ್ಥಳ: ಸಿಡ್ನಿ)
ಪಾಕಿಸ್ತಾನ–ಜಿಂಬಾಬ್ವೆ (ಸಂಜೆ 4.30ರಿಂದ. ಸ್ಥಳ: ಪರ್ತ್)
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್. ಹಾಟ್‌ಸ್ಟಾರ್ ಆ್ಯಪ್.

ನಾನ್‌ಸ್ಟ್ರೈಕರ್ ರನೌಟ್: ಪಾಂಡ್ಯ ಪ್ರತಿಕ್ರಿಯೆ

ದುಬೈ (ಪಿಟಿಐ): 'ಕ್ರೀಡಾಸ್ಫೂರ್ತಿ ಎಂಬುದೇನಿಲ್ಲ. ಈ ಬಗ್ಗೆ ಚರ್ಚಿಸುವುದನ್ನು ನಿಲ್ಲಿಸಬೇಕು'–

ಭಾರತ ಕ್ರಿಕೆಟ್ ತಂಡದ ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ ಅವರು 'ನಾನ್‌ಸ್ಟ್ರೈಕರ್ ರನ್‌ಔಟ್ ' ನಿಯಮದ ಕುರಿತು ನೀಡಿದ ಪ್ರತಿಕ್ರಿಯೆ ಇದು.

ಈ ಹಿಂದೆ ನಾನ್‌ಸ್ಟ್ರೈಕರ್ ಬ್ಯಾಟರ್ ಕ್ರೀಸ್ ಬಿಟ್ಟಾಗ, ಬೌಲರ್ ಎಸೆತ ಹಾಕುವ ಮುನ್ನವೇ ಔಟ್ ಮಾಡಿದರೆ ಅದನ್ನು 'ನಿಯಮಬಾಹಿರ', 'ಕ್ರೀಡಾಸ್ಫೂರ್ತಿಗೆ ವಿರುದ್ಧ' ಎನ್ನಲಾಗುತ್ತಿತ್ತು. ಆದರೆ ಎಂಸಿಸಿಯು ಈಚೆಗೆ ನಿಯಮ ತಿದ್ದುಪಡಿ ಮಾಡಿದೆ. ಆ ಪ್ರಕಾರ ಈ ರೀತಿ ಔಟ್ ಮಾಡುವುದು ನಿಯಮಬದ್ಧ ಹಾಗೂ ರನೌಟ್ ಎಂದು ಪರಿಗಣಿಸಲಾಗುತ್ತಿದೆ. ಅ. 1ರಿಂದ ಇದು ಜಾರಿಯಾಗಿದೆ.

ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಇಂತಹೊಂದು ರನ್‌ಔಟ್ ಅನ್ನು ಭಾರತದ ವಿನೂ ಮಂಕಡ್ ಮಾಡಿದ್ದರು. ಆದ್ದರಿಂದ ಅದನ್ನು 'ಮಂಕಡಿಂಗ್' ಎಂದೂ ಕರೆಯಲಾಗುತ್ತಿತ್ತು. 'ನಾನು ನಾನ್‌ಸ್ಟ್ರೈಕರ್‌ನಲ್ಲಿದ್ದು ಕ್ರೀಸ್‌ನಿಂದ ಹೊರಗಿದ್ದಾಗ ಬೌಲರ್ ಔಟ್ ಮಾಡಿದರೆ ತಪ್ಪು ನನ್ನದೇ. ಅವರು ನಿಯಮವನ್ನು ಬಳಸಿಕೊಂಡಿದ್ದರಲ್ಲಿ ತಪ್ಪೇನಿಲ್ಲ' ಎಂದು ಪಾಂಡ್ಯ ಹೇಳಿದ್ದಾರೆ.

ಹಾರ್ದಿಕ್ ಪಾಂಡ್ಯ

ಚನ್ನಮ್ಮನ ಕಿತ್ತೂರಿನಲ್ಲಿ ಮಂಗಳವಾರ ನಡೆದ ಕುಸ್ತಿ ಪಂದ್ಯಗಳನ್ನು ನೋಡಲು ಅಪಾರ ಸಂಖ್ಯೆಯ ಜನ ಸೇರಿದ್ದರು

ಗಾಯತ್ರಿ 'ರಾಣಿ ಚನ್ನಮ್ಮ ಕಿಶೋರಿ'

ಪ್ರಜಾವಾಣಿ ವಾರ್ತೆ

ಚನ್ನಮ್ಮನ ಕಿತ್ತೂರು: ಕಿತ್ತೂರು ಉತ್ಸವ ಅಂಗವಾಗಿ ಎರಡನೇ ದಿನವಾದ ಮಂಗಳವಾರ ಇಲ್ಲಿ ನಡೆದ ಮಹಿಳಾ ಕುಸ್ತಿ ಪಂದ್ಯದ 55 ಕೆ.ಜಿ ವಿಭಾಗದಲ್ಲಿ ಧಾರವಾಡ ಜಿಲ್ಲೆಯ ಹಳಿಯಾಳದ ಗಾಯತ್ರಿ ಸುತಾರ ಅವರು 5–3 ಅಂಕಗಳಿಂದ ಬಳ್ಳಾರಿಯ ಶ್ವೇತಾ ಅಣ್ಣಿಗೇರಿ ಅವರನ್ನು ಸೋಲಿಸಿ 'ರಾಣಿ ಚನ್ನಮ್ಮ ಕಿಶೋರಿ' ಪ್ರಶಸ್ತಿ ಮುಡಿಗೇರಿಸಿಕೊಂಡರು.

ಇದಕ್ಕೂ ಮುನ್ನ 50 ಕೆ.ಜಿ ವಿಭಾಗದಲ್ಲಿ ಹಳಿಯಾಳದ ಗೋಪವ್ವ ಕೊಡಕಿ 10-0 ಅಂಕಗಳಿಂದ ಗದುಗಿನ ಸೋನಿಯಾ ಜಾಧವ ಅವರನ್ನು ಸೋಲಿಸಿದರು. ಪುರುಷರ ವಿಭಾಗದ 57 ಕೆ.ಜಿ ವಿಭಾಗದಲ್ಲಿ ಹಳಿಯಾಳದ ರೋಹನ್ ದೊಡಮನಿ 3-1 ಅಂಕಗಳಿಂದ ದಾವಣಗೆರೆಯ ಶ್ರೀನಿವಾಸ್ ಅವರನ್ನು ಪರಾಭವಗೊಳಿಸಿದರು. 61 ಕೆ.ಜಿ ವಿಭಾಗದಲ್ಲಿ ಬೆಳಗಾವಿಯ ಪೈಲ್ವಾನ್ ಶೈಲೇಶ ಸುತಾರ ಅವರು ಅಜಿತ ಚೌಗುಲೆ ಅವರನ್ನು 8-4 ಅಂಕಗಳಿಂದ ಚಿತ್ ಮಾಡಿದರು.

ಸೈಕ್ಲಿಂಗ್: ಲಾಯಪ್ಪ, ಪ್ರೀತಿ ಪ್ರಥಮ

ಚನ್ನಮ್ಮನ ಕಿತ್ತೂರು: ಲಾಯಪ್ಪ ಮುಧೋಳ ಅವರು ಕಿತ್ತೂರು ಉತ್ಸವದ ಅಂಗವಾಗಿ ಮಂಗಳವಾರ ನಡೆದ ರಾಜ್ಯಮಟ್ಟದ ಸೈಕ್ಲಿಂಗ್‌ನ ಪುರುಷರ ವಿಭಾಗದಲ್ಲಿ (24 ಕಿ.ಮೀ.) ಪ್ರಥಮ ಸ್ಥಾನ ಗಳಿಸಿದರು.

ಪ್ರಭು ಕಾಲತಿಪ್ಪಿ, ಯಲ್ಲೇಶ ಹುಡೇದ ಕ್ರಮವಾಗಿ ದ್ವಿತೀಯ, ತೃತೀಯ ಸ್ಥಾನ ಗಳಿಸಿದರು. ಮಹಿಳೆಯರ ವಿಭಾಗದ (14 ಕಿ.ಮೀ.) ಸ್ಪರ್ಧೆಯಲ್ಲಿ ಪ್ರೀತಿ ಹಳಬರ ಮೊದಲ ಸ್ಥಾನ ಗಳಿಸಿದರೆ, ಅಮೂಲ್ಯ ಪೂಜೇರಿ ದ್ವಿತೀಯ ಸ್ಥಾನಕ್ಕೆ ತೃಪ್ತಿಪಟ್ಟರು. ಕಾವೇರಿ ಕಾರಡಗಿ ತೃತೀಯ ಸ್ಥಾನ ಪಡೆದುಕೊಂಡರು. ಪುರುಷರ ಇಂಡಿಯನ್ ಮೇಡ್ ಸೈಕ್ಲಿಂಗ್ ಸ್ಪರ್ಧೆಯಲ್ಲಿ ಶೆಟ್ಟೆಪ್ಪ ಗಸ್ತಿ, ರಮೇಶ ಸುಣಧೋಳಿ ಹಾಗೂ ಈರಗೌಡ ಚಿಕ್ಕಾಣಿ ಕ್ರಮವಾಗಿ ಮೊದಲ ಮೂರು ಸ್ಥಾನ ಗಳಿಸಿದರು.

ಪ್ರೊ ಕಬಡ್ಡಿ: ಪುಣೇರಿಗೆ ಅಮೋಘ ಗೆಲುವು

ಬೆಂಗಳೂರು: ಮಿಂಚಿನ ದಾಳಿ ನಡೆಸಿದ ಅಸ್ಲಂ ಇನಾಮದಾರ್ ಅವರ ಆಟದ ನೆರವಿನಿಂದ ಪುಣೇರಿ ಪಲ್ಟನ್ ತಂಡವು ಪ್ರೊ ಕಬಡ್ಡಿ ಟೂರ್ನಿಯಲ್ಲಿ ಜೈಪುರ್ ಪಿಂಕ್ ಪ್ಯಾಂಥರ್ಸ್ ವಿರುದ್ಧ ಜಯಿಸಿತು.

ಕಂಠೀರವ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ಪುಣೇರಿ ತಂಡವು 32–24ರಿಂದ ಜೈಪುರ ಪಿಂಕ್ ಪ್ಯಾಂಥರ್ಸ್ ವಿರುದ್ಧ ಗೆದ್ದಿತು.

ಅಸ್ಲಂ ರೇಡಿಂಗ್‌ನಲ್ಲಿ 13 ಅಂಕಗಳನ್ನು ಗಳಿಸಿ ಪುಣೇರಿಗೆ ಜಯದ ಕಾಣಿಕೆ ನೀಡಿದರು. ಮೋಹಿತ್ ಗೋಯತ್ (6) ಕೂಡ ಮಹತ್ವದ ಕಾಣಿಕೆ ನೀಡಿದರು.

ಮೊದಲಾರ್ಧದ ವಿರಾಮದ ವೇಳೆಗೆ ಪುಣೇರಿ ತಂಡವು 17–11ರಿಂದ ಮುನ್ನಡೆ ಗಳಿಸಿತು. ಪುಣೇರಿ ಆಟಗಾರರು ಎರಡನೇ ಹಂತದಲ್ಲಿಯೂ ಕಠಿಣ ಸವಾಲೊಡ್ಡಿದರು.

ಜೈಪುರ ತಂಡದ ಅರ್ಜುನ್ ದೇಶ್ವಾಲ್ (7), ರಾಹುಲ್ ಚೌಧರಿ (5) ರೇಡಿಂಗ್‌ನಲ್ಲಿ ಮಿಂಚಿದರು.

ಇನ್ನೊಂದು ಪಂದ್ಯದಲ್ಲಿ ಮೀತು ಶರ್ಮಾ (13) ಅವರ ಅಮೋಘ ರೇಡಿಂಗ್ ಬಲದಿಂದ ಹರಿಯಾಣ ಸ್ಟೀಲರ್ಸ್ ತಂಡವು 43–24ರಿಂದ ತೆಲುಗು ಟೈಟನ್ಸ್ ವಿರುದ್ಧ ಪಾರಮ್ಯ ಮೆರೆಯಿತು. ಹರಿಯಾಣ ತಂಡವು ಮೊದಲಾರ್ಧದಲ್ಲಿಯೇ 24–11ರಿಂದ ದೊಡ್ಡ ಅಂತರದ ಮುನ್ನಡೆ ಸಾಧಿಸಿತು. ಹರಿಯಾಣದ ನಿತಿನ್ ರಾವ್ ಹಾಗೂ ಜಯದೀಪ್ ದಹಿಯಾ ಕೂಡ ತಲಾ ನಾಲ್ಕು ಅಂಕಗಳನ್ನು ಗಳಿಸಿದರು.

ಟೈಟನ್ಸ್ ಪರವಾಗಿ ಸಿದ್ಧಾರ್ಥ್ ದೇಸಾಯಿ ಐದು ಅಂಕ ಗಳಿಸಿದರು.

ಪಾಯಿಂಟ್ಸ್ ಪಟ್ಟಿ (ಅಗ್ರ ಆರು ತಂಡಗಳು)

ತಂಡ	ಪಂದ್ಯ	ಜಯ	ಸೋಲು	ಟೈ	ಪಾಯಿಂಟ್
ಡೆಲ್ಲಿ	6	5	1	0	26
ಜೈಪುರ	7	5	2	0	26
ಬೆಂಗಳೂರು	7	4	2	1	24
ಪುಣೇರಿ	7	4	2	1	24
ಗುಜರಾತ್	6	3	2	1	19
ಹರಿಯಾಣ	7	3	4	0	18

ಗಾಲ್ಫ್: ಮಗನಿಗೆ ನೆರವಾಗಲು ವಿಶ್ವಕಪ್ ಕಮೆಂಟ್ರಿ ತೊರೆದ ತಂದೆ

ಚೊನ್ ಬುರಿ, ಥಾಯ್ಲೆಂಡ್ (ಪಿಟಿಐ): ಏಷ್ಯಾ–ಪೆಸಿಫಿಕ್ ಅಮೆಚೂರ್ ಚಾಂಪಿಯನ್‌ಷಿಪ್ (ಎಎಸಿ), ಯುವ ಅಮೆಚೂರ್ ಗಾಲ್ಫರ್‌ಗಳಿಗೆ ಪ್ರಮುಖ ಟೂರ್ನಿಯಾಗಿದೆ.

ಈ ಟೂರ್ನಿಯಲ್ಲಿ ಆಡುವ ಅವಕಾಶ ಪಡೆದಿರುವ ಮಗ ಕ್ರಿಶ್ನವ್‌ಗೆ ಕ್ಯಾಡಿಯಾಗಿ ನೆರವಾಗಲು ತಂದೆ, ಮಾಜಿ ಕ್ರಿಕೆಟರ್ ನಿಖಿಲ್ ಚೋಪ್ರಾ, ಟಿ20 ವಿಶ್ವಕಪ್ ಕ್ರಿಕೆಟ್ ವೀಕ್ಷಕ ವಿವರಣೆಯನ್ನೇ ತ್ಯಜಿಸಿದ್ದಾರೆ. ಸದ್ಯ ಅವರು ಆಸ್ಟ್ರೇಲಿಯಾದಲ್ಲಿ ಇರಬೇಕಿತ್ತು. ಆದರೆ ಒಂದು ವಾರ ಕಾಲ ಕಮೆಂಟ್ರಿಯಿಂದ ದೂರವುಳಿದಿದ್ದಾರೆ.

'ಇದು ಮಗನಿಗೆ ಪ್ರಮುಖ ಕ್ಷಣ. ಎಎಸಿ ಪ್ರಮುಖ ಟೂರ್ನಿಯಾಗಿದ್ದು, ಇದನ್ನು ಗೆದ್ದವರಿಗೆ ಭಾರೀ ಪ್ರೋತ್ಸಾಹವಿದೆ' ಎಂದು ನಿಖಿಲ್ ಹೇಳಿದ್ದಾರೆ.

ಸುಲಭ ಜಯದ ನಿರೀಕ್ಷೆಯಲ್ಲಿ ಕಿವೀಸ್, ಇಂಗ್ಲೆಂಡ್ ತಂಡಗಳು

ಮೆಲ್ಬರ್ನ್: ಮೊದಲ ಪಂದ್ಯದಲ್ಲಿ ಹಾಲಿ ಚಾಂಪಿಯನ್ ಆಸ್ಟ್ರೇಲಿಯಾ ಎದುರು ಜಯಭೇರಿ ಬಾರಿಸಿರುವ ನ್ಯೂಜಿಲೆಂಡ್ ತಂಡವು ಬುಧವಾರ ಅಫ್ಗಾನಿಸ್ತಾನದ ವಿರುದ್ಧ ಸೆಣಸಲಿದೆ.

ಮೆಲ್ಬರ್ನ್ ಕ್ರಿಕೆಟ್ ಮೈದಾನದಲ್ಲಿ ಒಂದನೇ ಗುಂಪಿನ ಪಂದ್ಯದಲ್ಲಿ ಕೇನ್ ವಿಲಿಯಮ್ಸನ್ ನಾಯಕತ್ವದ ನ್ಯೂಜಿಲೆಂಡ್ ತಂಡವು ಸುಲಭ ಜಯದ ನಿರೀಕ್ಷೆಯಲ್ಲಿದೆ.

ಅಫ್ಗಾನಿಸ್ತಾನ ತಂಡವು ತನ್ನ ಮೊದಲ ಪಂದ್ಯದಲ್ಲಿ ಇಂಗ್ಲೆಂಡ್ ಎದುರು ಸೋತಿದೆ. ಚುರುಕಿನ ಫೀಲ್ಡಿಂಗ್‌ಗೆ ಹೆಸರಾಗಿರುವ ನ್ಯೂಜಿಲೆಂಡ್ ತಂಡದ ಎದುರು ಅಫ್ಗಾನಿಸ್ತಾನ ಬ್ಯಾಟರ್‌ಗಳು ರನ್ ಗಳಿಸಲು ವಿಭಿನ್ನ ತಂತ್ರಗಾರಿಕೆ ಅನುಸರಿಸುವುದು ಅನಿವಾರ್ಯ. ರೆಹಮಾನುಲ್ಲಾ ಗುರ್ಬಾಜ್, ಇಬ್ರಾಹಿಂ ಜದ್ರಾನ್, ಉಸ್ಮಾನ್ ಗಣಿ ಹಾಗೂ ಹಜರತ್ ಉಲ್ಲಾ ಝಝೈ ಅವರು ಅಫ್ಗನ್ ತಂಡದ ಬ್ಯಾಟಿಂಗ್‌ನ ಪ್ರಮುಖರಾಗಿದ್ದಾರೆ. ಕಿವೀಸ್ ಬಳಗದ ಅನುಭವಿ ಬೌಲರ್‌ಗಳಾದ ಟ್ರೆಂಟ್ ಬೌಲ್ಟ್, ಟಿಮ್ ಸೌಥಿ ಹಾಗೂ ಸ್ಪಿನ್ನರ್ ಮಿಚೆಲ್ ಸ್ಯಾಂಟನರ್ ಅವರ ದಾಳಿಯನ್ನು ಎದುರಿಸುವ ಸವಾಲು ಅಫ್ಗನ್ ಬ್ಯಾಟರ್‌ಗಳಿಗಿದೆ.

ಆದರೆ, ಕಿವೀಸ್ ಬ್ಯಾಟರ್‌ಗಳಾದ ಫಿನ್ ಅಲೆನ್, ಡೆವೊನ್ ಕಾನ್ವೆ, ಗ್ಲೆನ್ ಫಿಲಿಪ್ಸ್, ನಾಯಕ ಕೇನ್ ಹಾಗೂ ಜಿಮ್ಮಿ ನಿಶಾಮ್ ಅವರನ್ನು ಕಟ್ಟಿಹಾಕುವ ಕಠಿಣ ಸವಾಲು ಅನುಭವಿ ಸ್ಪಿನ್ನರ್ ರಶೀದ್ ಖಾನ್, ಫಜಲ್‌ಹಕ್ ಫಾರೂಖಿ ಅವರ ಮುಂದಿದೆ.

ಇಂಗ್ಲೆಂಡ್–ಐರ್ಲೆಂಡ್ ಹಣಾಹಣಿ: ವಿಕೆಟ್‌ಕೀಪರ್ ಬ್ಯಾಟರ್ ಜೋಸ್ ಬಟ್ಲರ್ ನಾಯಕತ್ವದ ಇಂಗ್ಲೆಂಡ್ ತಂಡವು ಮಂಗಳವಾರ ಎಂಸಿಜಿಯಲ್ಲಿ ಐರ್ಲೆಂಡ್ ಎದುರು ಕಣಕ್ಕಿಳಿಯಲಿದೆ.

ಸಂಕ್ಷಿಪ್ತ ಸುದ್ದಿ

ನೀಮನ್ ಆರೋಪ ಆಧಾರರಹಿತ: ಕಾರ್ಲ್‌ಸನ್

ಕಾರ್ಲ್‌ಸನ್

ಒಸ್ಲೊ (ಎಎಫ್‌ಪಿ): ಅಮೆರಿಕ ಗ್ರ್ಯಾಂಡ್‌ಮಾಸ್ಟರ್ ಹ್ಯಾನ್ಸ್ ನೀಮನ್ ಅವರು ತಮ್ಮ ವಿರುದ್ಧ ದಾಖಲಿಸಿರುವ ಮಾನನಷ್ಟ ಮೊಕದ್ದಮೆ ಆಧಾರರಹಿತ ಎಂದು ವಿಶ್ವ ಚೆಸ್ ಚಾಂಪಿಯನ್, ನಾರ್ವೆಯ ಮ್ಯಾಗ್ನಸ್ ಕಾರ್ಲ್‌ಸನ್ ಹೇಳಿದ್ದಾರೆ.

'ನೀಮನ್ ಮೋಸದ ಆಟ ಆಡುತ್ತಿದ್ದಾರೆ' ಎಂದು ಕಾರ್ಲ್‌ಸನ್ ಇತ್ತೀಚೆಗೆ ಆರೋಪಿಸಿದ್ದರು. ಇದು ದೊಡ್ಡ ವಿವಾದಕ್ಕೆ ಕಾರಣವಾಗಿತ್ತು. 'ನೀಮನ್ ಅವರು ಬಹಿರಂಗವಾಗಿ ಏನು ತಪ್ಪು ಒಪ್ಪಿಕೊಂಡಿದ್ದಾರೋ, ಅದಕ್ಕಿಂತಲೂ ಹೆಚ್ಚು ಮೋಸದಾಟದಲ್ಲಿ ತೊಡಗಿದ್ದಾರೆ' ಎಂದು ದೂರಿದ್ದರು.

ಈ ಕಾರಣಕ್ಕಾಗಿ ನೀಮನ್ ಅವರು ಕಾರ್ಲ್‌ಸನ್ ಅಲ್ಲದೆ ಅವರು ನಡೆಸುವ ಆನ್‌ಲೈನ್ ಚೆಸ್ ವೇದಿಕೆ ಪ್ಲೇ ಮ್ಯಾಗ್ನಸ್, ಚೆಸ್ ಡಾಟ್ ಕಾಂನ ಕಾರ್ಯನಿರ್ವಾಹಕ ಡ್ಯಾನಿ ರೆನಿಶ್ ಮತ್ತು ಅಮೆರಿಕದ ಗ್ರ್ಯಾಂಡ್‌ಮಾಸ್ಟರ್ ಹಿಕರು ನಕಮುರ ಅವರ ಹೆಸರನ್ನೂ ₹ 828 ಕೋಟಿ ಮೊತ್ತದ ಮಾನನಷ್ಟ ಮೊಕದ್ದಮೆ ದಾವೆಯಲ್ಲಿ ಸೇರಿಸಿದ್ದರು.

'ನೀಮನ್ ಅವರ ಮೊಕದ್ದಮೆಯು ಅಚ್ಚರಿ ತರಿಸಿದೆ. ಅವರ ಆರೋಪದಲ್ಲಿ ಯಾವುದೇ ಹುರುಳಿಲ್ಲ. ಈ ಕುರಿತು ಕಾನೂನು ತಜ್ಞರೊಂದಿಗೆ ಚರ್ಚಿಸಿ ಅಗತ್ಯ ಕ್ರಮ ಕೈಗೊಳ್ಳುವ ಕುರಿತು ಯೋಚಿಸಲಾಗುವುದು' ಎಂದು ಪ್ಲೇ ಮ್ಯಾಗ್ನಸ್ ಕಂಪನಿ ಮಂಗಳವಾರ ತಿಳಿಸಿದೆ.

ಟೆನಿಸ್‌ನಿಂದ ನಿವೃತ್ತಿಯಾಗಿಲ್ಲ: ಸೆರೆನಾ

ನ್ಯೂಯಾರ್ಕ್ (ರಾಯಿಟರ್ಸ್): ಅಮೆರಿಕದ ಆಟಗಾರ್ತಿ ಸೆರೆನಾ ವಿಲಿಯಮ್ಸ್ ಅವರ ತಾನು ಟೆನಿಸ್‌ನಿಂದ ಇನ್ನೂ ನಿವೃತ್ತಿಯಾಗಿಲ್ಲ ಎಂದಿದ್ದಾರೆ.

ಕಳೆದ ತಿಂಗಳು ನಡೆದಿದ್ದ ಅಮೆರಿಕನ್ ಓಪನ್ ಗ್ರ್ಯಾನ್‌ಸ್ಲಾಮ್ ಟೆನಿಸ್ ಟೂರ್ನಿಯ ನಂತರ ಸೆರೆನಾ ಕ್ರೀಡೆಗೆ ವಿದಾಯ ಹೇಳುವ ಸೂಚನೆ ನೀಡಿದ್ದರು.

ಸ್ಯಾನ್ ಫ್ರಾನ್ಸಿಸ್ಕೋದಲ್ಲಿ ನಡೆದ ಸಮ್ಮೇಳನವೊಂದರಲ್ಲಿ ತಮ್ಮ ಸಂಸ್ಥೆ 'ಸೆರೆನಾ ವೆಂಚರ್ಸ್' ಅನ್ನು ಪ್ರಚಾರ ಮಾಡುವ ವೇಳೆ ಮಾತನಾಡಿರುವ ಸೆರೆನಾ, 'ನಾನು ನಿವೃತ್ತಿಯಾಗಿಲ್ಲ' ಎಂದಿದ್ದಾರೆ.

'ಹಿಂತಿರುಗುವ ಸಾಧ್ಯತೆಗಳು ತುಂಬಾ ಹೆಚ್ಚಿವೆ. ನನ್ನ ಮನೆಯ ಆವರಣದಲ್ಲಿ ಟೆನಿಸ್ ಕೋರ್ಟ್ ಇದೆ. ನೀವು ಬಂದು ನೋಡಬಹುದು' ಎಂದು ಮಾರ್ಮಿಕವಾಗಿ ಮಾತನಾಡಿದ್ದಾರೆ.

ಟೆನಿಸ್‌ನಿಂದ ದೂರವಾಗುತ್ತಿರುವುದಾಗಿ 41 ವರ್ಷದ ಸೆರೆನಾ ಆಗಸ್ಟ್‌ನಲ್ಲಿ ಹೇಳಿದ್ದರು. ಆದರೆ ಅಮೆರಿಕ ಓಪನ್ ಟೂರ್ನಿ ತನ್ನ ವಿದಾಯದ ಟೂರ್ನಿ ಎಂದು ಅವರು ದೃಢಪಡಿಸಿರಲಿಲ್ಲ. ಟೂರ್ನಿಯ ಮೂರನೇ ಸುತ್ತಿನಲ್ಲಿ ಸೆರೆನಾ ಸೋತಿದ್ದರು.

'ನಾನು ಇನ್ನೂ ನಿವೃತ್ತಿ ಬಗ್ಗೆ ನಿಜವಾಗಿಯೂ ಯೋಚಿಸಿಲ್ಲ' ಎಂದಿದ್ದಾರೆ.

ಪ್ರೀಕ್ವಾರ್ಟರ್‌ಗೆ ಚಿರಾಗ್–ಸಾತ್ವಿಕ್

ಪ್ಯಾರಿಸ್ (ಪಿಟಿಐ): ಭಾರತದ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಜೋಡಿಯು ಇಲ್ಲಿ ನಡೆಯುತ್ತಿರುವ ಫ್ರೆಂಚ್ ಓಪನ್ ಬ್ಯಾಡ್ಮಿಂಟನ್ ಟೂರ್ನಿಯ ಪ್ರೀಕ್ವಾರ್ಟರ್‌ಫೈನಲ್ ಪ್ರವೇಶಿಸಿದೆ.

ಮಂಗಳವಾರ ನಡೆದ ಮೊದಲ ಸುತ್ತಿನ ಪಂದ್ಯದಲ್ಲಿ ಭಾರತದ ಆಟಗಾರರು 21-9, 21-13ರಿಂದ ಫ್ರಾನ್ಸ್‌ನ ಕ್ರಿಸ್ಟೊ ಪೊಪೊವ್- ತೋಮಾ ಜೂನಿಯರ್ ಪೊಪೊವ್ ಎದುರು ಗೆದ್ದರು.

ಮಹಿಳಾ ಡಬಲ್ಸ್‌ನಲ್ಲಿ ಭಾರತದ ಗಾಯತ್ರಿ ಗೋಪಿಚಂದ್–ತ್ರಿಶಾ ಜೋಲಿ ಮೊದಲ ಸುತ್ತಿನಲ್ಲಿ ಹೋರಾಡಿ ಸೋತರು. ಭಾರತದ ಆಟಗಾರ್ತಿಯರು 21–23, 20–22ರಿಂದ ಥಾಯ್ಲೆಂಡ್‌ನ ಜಾಂಗ್‌ಕೊಲ್ಪನ್ ಕಿತಿತಾರಕುಲ್–ರವಿಂದಾ ಪ್ರಜೊಂಗ್‌ಜಾಯ್ ಎದುರು ಮಣಿದರು.

ಮಿಶ್ರ ಡಬಲ್ಸ್ ವಿಭಾಗದ ಮೊದಲ ಸುತ್ತಿನಲ್ಲಿ ಇಶಾನ್ ಭಟ್ನಾಗರ್–ತನಿಶಾ ಕ್ರಾಸ್ಟೊ 13–21, 16–21ರಿಂದ ಜಪಾನ್‌ನ ಕಿಹೊಯಿ ಯಮಶಿಟಾ–ನರು ಶಿನೊಯಾ ಎದುರು ಎಡವಿದರು.

ರ‍್ಯಾಂಕಿಂಗ್: 5ನೇ ಸ್ಥಾನಕ್ಕೆ ಸಿಂಧು

ನವದೆಹಲಿ (ಪಿಟಿಐ): ಭಾರತದ ಪಿ.ವಿ. ಸಿಂಧು ಮತ್ತು ಎಚ್.ಎಸ್. ಪ್ರಣಯ್ ಅವರು ಕ್ರಮವಾಗಿ ಮಹಿಳಾ ಮತ್ತು ಪುರುಷರ ವಿಭಾಗದ ವಿಶ್ವ ಬ್ಯಾಡ್ಮಿಂಟನ್ ರ‍್ಯಾಂಕಿಂಗ್‌ನಲ್ಲಿ ಐದು ಮತ್ತು 12ನೇ ಸ್ಥಾನಕ್ಕೇರಿದ್ದಾರೆ.

ಆಗಸ್ಟ್‌ನಲ್ಲಿ ನಡೆದ ಬರ್ಮಿಂಗ್‌ಹ್ಯಾಮ್ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಚಿನ್ನದ ಪದಕ ಗೆದ್ದ ಬಳಿಕ ಸಿಂಧು ಯಾವುದೇ ಟೂರ್ನಿಯಲ್ಲೂ ಕಣಕ್ಕಿಳಿದಿರಲಿಲ್ಲ. ಪಾದದ ಗಾಯದ ಕಾರಣ ಅವರು ವಿಶ್ರಾಂತಿ ಪಡೆದಿದ್ದರು. ಸದ್ಯ ಚೇತರಿಸಿಕೊಂಡಿರುವ ಸಿಂಧು ಸೋಮವಾರ ಅಭ್ಯಾಸ ನಡೆಸಿದ್ದಾರೆ.

ಅರ್ನೆಸ್ಟ್ ಐದು ಗೋಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅರ್ನೆಸ್ಟ್ ಅಡ್ಡೊ ಗಳಿಸಿದ ಐದು ಗೋಲುಗಳ ಬಲದಿಂದ ರೆಬೆಲ್ಸ್ ಎಫ್‌ಸಿ ತಂಡವು ಬಿಡಿಎಫ್‌ಎ ಸೂಪರ್ ಡಿವಿಷನ್ ಲೀಗ್ ಫುಟ್‌ಬಾಲ್ ಟೂರ್ನಿಯಲ್ಲಿ ಭರ್ಜರಿ ಜಯ ಗಳಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ರೆಬೆಲ್ಸ್ 8–1ರಿಂದ ಎಡಿಇ ಎಫ್‌ಸಿ ತಂಡವನ್ನು ಪರಾಭವಗೊಳಿಸಿತು. ಅರ್ನೆಸ್ಟ್ 8, 9, 20, 41 ಮತ್ತು 58ನೇ ನಿಮಿಷಗಳಲ್ಲಿ ಕಾಲ್ಚಳಕ ತೋರಿದರು. ಕೆ.ಎಚ್. ತಾಜುದ್ದೀನ್ (4 ಮತ್ತು 35ನೇ ನಿ.), ಮುಹೀಬ್ (28ನೇ ನಿ.) ವಿಜೇತ ತಂಡದ ಪರ ಗೋಲು ಗಳಿಸಿದರು. ಎಡಿಇ ತಂಡಕ್ಕಾಗಿ ಆರ್. ಸಂದೀಪ್ (47ನೇ ನಿ.) ಗೋಲು ಹೊಡೆದರು.

ಇನ್ನೊಂದು ಪಂದ್ಯದಲ್ಲಿ ಸ್ಪೋರ್ಟಿಂಗ್ ಕ್ಲಬ್ ಬೆಂಗಳೂರು 2–1ರಿಂದ ಎಎಸ್‌ಸಿ ಸೆಂಟರ್ ತಂಡವನ್ನು ಪರಾಭವಗೊಳಿಸಿತು. ವಿಜೇತ ತಂಡಕ್ಕಾಗಿ ಅಪ್ಪು (20ನೇ ನಿಮಿಷ) ಮತ್ತು ಕೌವಾಸ್ಸಿ ಬರ್ನಾರ್ಡ್ ಯಾವೊ (50ನೇ ನಿಮಿಷ) ಗೋಲು ಗಳಿಸಿದರು. ಎಎಸ್‌ಸಿ ತಂಡದ ಏಕೈಕ ಗೋಲನ್ನು ವಹೆಂಗ್‌ಬಮ್ ನೀರಜ್ ಸಿಂಗ್ (90 + 3ನೇ ನಿಮಿಷ) ದಾಖಲಿಸಿದರು.

ಹಾಕಿ: ಭಾರತ ತಂಡ ಜಯಭೇರಿ

ಜೊಹರ್, ಮಲೇಷ್ಯಾ (ಪಿಟಿಐ): ಭಾರತ ಜೂನಿಯರ್ ಪುರುಷರ ಹಾಕಿ ತಂಡವು ಜೊಹರ್ ಕಪ್ ಹಾಕಿ ಟೂರ್ನಿಯಲ್ಲಿ ಗೆಲುವಿನ ಲಯಕ್ಕೆ ಮರಳಿದೆ.

ಇಲ್ಲಿ ನಡೆಯುತ್ತಿರುವ ಟೂರ್ನಿಯಲ್ಲಿ ಮಂಗಳವಾರ ಭಾರತ 5–1ರಿಂದ ಜಪಾನ್ ತಂಡವನ್ನು ಮಣಿಸಿತು. ಭಾರತ ತಂಡಕ್ಕಾಗಿ ಉತ್ತಮ್ ಸಿಂಗ್ ಮೂರನೇ ನಿಮಿಷದಲ್ಲಿ ಗೋಲು ಗಳಿಸಿ ಮುನ್ನಡೆ ತಂದುಕೊಟ್ಟರು. 12ನೇ ನಿಮಿಷದಲ್ಲಿ ಕೈಚಳಕ ತೋರಿದ ರೋಹಿತ್ ಮುನ್ನಡೆ ಹೆಚ್ಚಿಸಿದರು. ಜಪಾನ್‌ನ ಇಕುಮಿ ಸಯಿಕಿ 15ನೇ ನಿಮಿಷದಲ್ಲಿ ಚೆಂಡನ್ನು ಗೋಲುಪೆಟ್ಟಿಗೆಗೆ ಸೇರಿಸಿ ತಂಡದ ಹಿನ್ನಡೆಯನ್ನು ತಗ್ಗಿಸಿದರು. ಆದರೆ ಬಳಿಕ ಜಾನ್ಸನ್ ಪೂರ್ತಿ (21ನೇ ನಿ.), ಬಾಬಿ ಸಿಂಗ್ ಧಾಮಿ (31ನೇ ನಿ.) ಮತ್ತು ಅಮನ್‌ದೀಪ್ ಲಾಕ್ರಾ (51ನೇ ನಿ.) ಗಳಿಸಿದ ಗೋಲುಗಳು ಭಾರತದ ಗೆಲುವನ್ನು ಖಚಿತಪಡಿಸಿದವು.

'ದಕ್ಷಿಣ ಆಫ್ರಿಕಾ ಆಟಗಾರರಿಂದ ಚೆಂಡು ವಿರೂಪ'

ಸಿಡ್ನಿ (ಪಿಟಿಐ): 2018ರಲ್ಲಿ ನಡೆದ ಟೆಸ್ಟ್ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ಆಟಗಾರರು ಚೆಂಡು ವಿರೂಪದಲ್ಲಿ ತೊಡಗಿದ್ದರು ಎಂದು ಆಸ್ಟ್ರೇಲಿಯಾ ಕ್ರಿಕೆಟ್ ತಂಡದ ಮಾಜಿ ನಾಯಕ ಟಿಮ್ ಪೇನ್ ಆರೋಪಿಸಿದ್ದಾರೆ. ತಮ್ಮ ಆತ್ಮ ಚರಿತ್ರೆ 'ದ ಪೇಡ್ ಪ್ರೈಸ್'ನಲ್ಲಿ ಪೇನ್ ಈ ಕುರಿತು ಉಲ್ಲೇಖಿಸಿದ್ದಾರೆ ಎಂದು ಆಸ್ಟ್ರೇಲಿಯಾ ಮಾಧ್ಯಮ ವರದಿ ಮಾಡಿವೆ.

ಕುಖ್ಯಾತ ಸ್ಯಾಂಡ್‌ಪೇಪರ್ ಗೇಟ್ ವಿವಾದ ಉಂಟಾಗಿದ್ದ ಸರಣಿಯ 4ನೇ ಟೆಸ್ಟ್ ಪಂದ್ಯದಲ್ಲಿ ಈ ಘಟನೆ ನಡೆದಿತ್ತು ಎಂದು ಪೇನ್ ಬರೆದುಕೊಂಡಿದ್ದಾರೆ.